ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ
ಲೇ: ಕೆ. ವೀರಪ್ಪ
ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.
Scan

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಮುನ್ನುಡಿ

ಈಗಿನ ಯುವಜನಾಂಗವು ಸ್ವಾತಂತ್ರ್ಯ ಚಳುವಳಿಯ ಇತಿಹಾಸವನ್ನು ...ಯುವುದು, ಸ್ವಾತಂತ್ರ್ಯಕ್ಕಾಗಿ ಹೇಗೆ ಸಾವಿರಾರು ಜನರು ತ್ಯಾಗ ...ಿರುತ್ತಾರೆಯೆಂಬುದನ್ನು ತಿಳಿಯುವುದು ಆಗತ್ಯವೆಂದು ಬೇರೆ ಹೇಳ ...ಕಾಗಿಲ್ಲ. ಮೈಸೂರು ಸಂಸ್ಥಾನದ ಜನತೆಯು ತಮ್ಮದೇ ರೀತಿಯಲ್ಲಿ ...ತಂತ್ರ್ಯ ಚಳುವಳಿಯಲ್ಲಿ ಬಾಗವಹಿಸಿರುತ್ತಾರೆ. ಸ್ವಾತಂತ್ರ್ಯ ಬಂದು ಮೂರು ದಶಕಗಳಾದರೂ ಕೂಡ, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದ ಬಗ್ಗೆ ಇದೂವರೆಗೂ ಒಂದು ಸರಿಯಾದ ಗ್ರಂಥವಿಲ್ಲ. ಆ ಕೊರತೆಯನ್ನು ನೀಗುವ ದೃಷ್ಟಿಯಿಂದ ಈ ಅದ್ಯಯನ ಮಾಡಲಾಗಿದೆ. ಇದು ಪೂರ್ಣವಾಗಿ ಚಾರಿತ್ರಕ ದಾಖಲೆ ಆಧಾರದ ಮೇಲೆ ರಚಿತವಾಗಿರುತ್ತೆ. ಇದಕ್ಕಾಗಿ ಕಾಂಗ್ರೆಸ್ ಪಕ್ಷದ ಪ್ರಕಟಣೆಗಳನ್ನು ಅಧ್ಯಯನ ಮಾಡಿರುತ್ತೇನೆ. ಜೊತೆಗೆ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಕೆಲವು ಪ್ರಮುಖರ ಆತ್ಮ ಚರಿತ್ರೆ ...ಗಳನ್ನು ನೋಡಿರುತ್ತೇನೆ. ಅನೇಕ ಸ್ವಾತಂತ್ರ್ಯ ಯೋಧರನ್ನು ಭೇಟಿ ...ಮಾಡಿರುತ್ತೇನೆ. ಕೆಲವು ವೃತ್ತ ಪತ್ರಿಕೆಗಳನ್ನು ಅದರಲ್ಲೂ **ಮೈಸೂರು ಸ್ಟಾರ್** ಮತ್ತು ಮದ್ರಾಸಿನ **ಹಿಂದೂ** ಪತ್ರಿಕೆಯ ಕೆಲವು ಸಂಚಿಕೆಗಳನ್ನು ನೋಡಿರುತ್ತೇನೆ.

ನನ್ನ ಈ ಅಧ್ಯಯನದಲ್ಲಿ ಅನೇಕ ಮಹನೀಯರು ಸಹಾಯ ಹಾಗೂ ಸಹಕಾರ ನೀಡಿರುತ್ತಾರೆ. ಕೆಲವರು ತಮ್ಮಲ್ಲಿದ್ದ ಐತಿಹಾಸಿಕ ದಾಖಲೆ ...ಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಿರುತ್ತಾರೆ. ದಿವಂಗತ ಬಿ.ಎಸ್. ...ಗುಪ್ತಾರವರು ತಮ್ಮಲ್ಲಿದ್ದ ಕಾಂಗ್ರೆಸ್ ಪಕ್ಷದ ಕೆಲವು ಪ್ರಕಟಣೆಗಳನ್ನು ...ಲವು ದಿನಗಳು ಕೊಟ್ಟು [illegible] ...ತ್ಯಾಗಿಗಳಾದ ...ಶ್ರೀ ಕೆ. ಟಿ. ರಾಮಸ್ವಾ[illegible] ...ಖ್ಯ ದಾಖಲೆ ...ಗಳನ್ನು ನನಗೆ ಕೊಟ್ಟು [illegible] ...ಟಗಾರರೂ, ಪತ್ರಿಕೋದ್ಯಮಿಗಳೂ [illegible] ...ಎನ್. ಶಾಸ್ತ್ರಿ ... ತಮ್ಮಲ್ಲಿದ್ದ ಕಾ[illegible] ...ಪತ್ರಗಳನ್ನೂ ...ಟ್ಟು ಸಹಾಯ ಮಾಡಿದರು. ಅವುಗಳನ್ನು ನನಗೆ ದೊರಕಿಸಿಕೊಡಲು ...ಂಗಲದ ಜೂನಿಯರ್ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿರುವ

AKSHARA GRANTHALAYA
ACC.NO. 028252

[illegible] ಆಗಿದೆ.

ಶ್ರೀ ಕೆ. ಟಿ. ಗಂಗಯ್ಯನವರು ಶ್ರಮವಹಿಸಿದರು. ಮೈಸೂರು ಸ್ಟಾರ್ ಪತ್ರಿಕೆಯ ಫೈಲುಗಳನ್ನು ಬಿ. ಶಿವಮೂರ್ತಿ ಶಾಸ್ತ್ರಿಯವರ ಪುತ್ರ ಬಿ. ಎಸ್. ಪ್ರಕಾಶ್‌ರವರು ದೊರಕಿಸಿಕೊಟ್ಟರು. ಅದನ್ನು ಆಗಾಗ್ಗೆ ನನಗೆ ತಂದುಕೊಟ್ಟವರು, ರೇಣುಕಾಚಾರ್ಯ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿರುವ ಶ್ರೀ ಮಲ್ಲಿಕಾರ್ಜುನರವರು. ಕಟಕ ಅಡ್ವರ್ಟೈಸಿಂಗ್‌ನ ಶ್ರೀ ಎಸ್. ಎನ್. ಗುಪ್ತಾರವರು ಕೆಲವು ವಿಷಯಗಳನ್ನು ತಿಳಿಸಿ, ಕೆಲವು ದಾಖಲೆಗಳನ್ನು ತೋರಿಸಿದರು. ಮೈಸೂರಿನ ಬಾಳೆಹಣ್ಣಿನ ಅಂಗಡಿ ಶಿವಣ್ಣನವರು ಕೆಲವು ಪತ್ರಗಳನ್ನು ತೋರಿಸಿದರು. ತೋಟದ ಮನೆಯ ನಾಗೇಶ ಮತ್ತು ಭಾಗ್ಯಲತಾರವರು ಸಹಾಯ ಮಾಡಿರುತ್ತಾರೆ. ಇವರೆಲ್ಲರಿಗೂ ನನ್ನ ಸವಿನಯ ವಂದನೆಗಳು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮುಖ್ಯಪಾತ್ರವಹಿಸಿದ್ದ ಅನೇಕರನ್ನು ಭೇಟಿ ಮಾಡಿ ವಿಷಯ ಸಂಗ್ರಹಿಸಿರುತ್ತೇನೆ. ಅವರಲ್ಲಿ ಮುಖ್ಯರಾದವರು ಶ್ರೀಯುತರಾದ, ಎಸ್. ನಿಜಲಿಂಗಪ್ಪ, ಕೆ. ಹನುಮಂತಯ್ಯ, ಟಿ. ಸಿದ್ಧಲಿಂಗಯ್ಯ, ಎಂ. ಎನ್. ಜೋಯಿಸ್, ಕಡಿದಾಳ ಮಂಜಪ್ಪ, ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್, ಎಂ. ಎನ್. ಶ್ರೀಕಂಠಯ್ಯ, ವಿ. ಕೆ. ಗೋವಿಂದರಾಜುಲು, ತಿರುಮಲೇಗೌಡರ ಮಗ ಕೃಷ್ಣಪ್ಪನವರು, ಮದ್ದೂರಿನ ಎಂ.ಟಿ. ಶ್ರೀನಿವಾಸ ಅಯ್ಯಂಗಾರರು, ಇವರೆಲ್ಲರಿಗೂ ನನ್ನ ವಂದನೆಗಳು.

ಈ ಅಧ್ಯಯನದಲ್ಲಿ ಉತ್ತೇಜನವಿತ್ತವರು, ಡಾ|| ಎಂ.ಎಸ್. ರಾಜನ್ ಡಾ|| ಎಂ. ಷಡಕ್ಷರಸ್ವಾಮಿ, ಡಾ|| ಕೆ. ನರಸಯ್ಯ, ಶ್ರೀ ಕೆ.ಟಿ. ರಾಮಸ್ವಾಮಿ ಮತ್ತು ಎಸ್. ಯು. ಕಾಮತ್‌ರವರು ಇವರಿಗೆಲ್ಲಾ ನಾನು ಕೃತಜ್ಞನಾಗಿದ್ದೇನೆ. ಹಾಗೂ ಹಸ್ತಪ್ರತಿಯನ್ನು ಓದಿ ಸಲಹೆ ನೀಡಿದ ಡಾ|| ವಿದ್ಯಾಶಂಕರ್, ಶ್ರೀ ಬಿ.ಸಿ. ಮಂಗಲದಯ್ಯ, ಶ್ರೀ ಬಸವರಾಜ ಕಲ್ಗುಡಿ ಮತ್ತು ಎಸ್. ಶಿವಣ್ಣನವರಿಗೂ ನನ್ನ ವಂದನೆಗಳು. ಈ ಗ್ರಂಥವನ್ನು ಜಾಗ್ರತೆಯಾಗಿ ಮುದ್ರಿಸಿಕೊಟ್ಟ ಲೋಟಸ್ ಪ್ರಿಂಟರ್ಸ್‌ರವರಿಗೂ ನನ್ನ ವಂದನೆಗಳು.

ಬೆಂಗಳೂರು ಕೆ. ವೀರತಪ್ಪ.

25-11-1977

ವಿಷಯ ಸೂಚಿ

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ

ಅಖಿಲ ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ, ಭಾರತದಲ್ಲಿನ ಸುಮಾರು 600 ಸಂಸ್ಥಾನಗಳು (Princely States) ತಮ್ಮದೇ ರೀತಿಯಲ್ಲಿ ಭಾಗವಹಿಸಿದವು. ಸಂಸ್ಥಾನಗಳ ರಾಜಕೀಯವು ಬಹುಮಟ್ಟಿಗೆ ಅಕ್ಕ ಪಕ್ಕದಲ್ಲಿನ ಆಂಗ್ಲ ಭಾರತ (British India) ಪ್ರದೇಶಗಳ ರಾಜಕೀಯ ಬೆಳವಣಿಗೆಗಳಿಂದ ಸ್ಫೂರ್ತಿಪಡೆದವು. ಹೀಗೆ ಸ್ಫೂರ್ತಿಪಡೆಯಲು ಸಂಸ್ಥಾನದಲ್ಲಿನ ವಿದ್ಯಾಭ್ಯಾಸ ಮಟ್ಟ, ಜನರ ರಾಜಕೀಯ ಜಾಗೃತಿ, ವೃತ್ತಪತ್ರಿಕೆಗಳು ಮತ್ತು ಅವುಗಳ ಪ್ರಸಾರ, ಪ್ರಭಾವ ಎಲ್ಲವೂ ಕಾರಣವಾಗುತ್ತವೆ. ಎಲ್ಲಾ ದೃಷ್ಟಿಯಿಂದಲೂ, ಮೈಸೂರು ಸಂಸ್ಥಾನವು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿ, ಇತರ ಸಂಸ್ಥಾನಗಳಿಗೆ ಮಾದರಿಯಾಯಿತು. ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ, ರಾಜಕೀಯ ಬೆಳವಣಿಗೆ, ಮೈಸೂರು ಕಾಂಗ್ರೆಸ್ ಸ್ಥಾಪನೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಅದರ ಪಾತ್ರ ಇವುಗಳನ್ನು ವಿವೇಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಹಿನ್ನೆಲೆ

ಸ್ವಾತಂತ್ರ್ಯ ಪೂರ್ವ ಭಾರತ ಆಂಗ್ಲರ ದಬ್ಬಾಳಿಕೆಗೆ ಒಳಗಾಗಿದ್ದುದು ಮಾತ್ರವಲ್ಲ, ಅವರ ಒಡೆದು ಆಳುವ ನೀತಿಯಿಂದಾಗಿ ಇಡೀ ರಾಷ್ಟ್ರವು ಛಿದ್ರ ಛಿದ್ರವಾಗಿದ್ದಿತು. ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದ ಭಾರತದೇಶವು ಇಬ್ಭಾಗವಾಗಿ ಪ್ರಾಂತ್ಯಗಳು—ಆಶ್ರಿತ ಸಂಸ್ಥಾನಗಳು ಎಂದು ವಿಭಾಗಿಸಲ್ಪಟ್ಟಿತು. ಒಟ್ಟನಲ್ಲಿ 11 ಪ್ರಾಂತ್ಯಗಳೂ, ಸುಮಾರು 600 ಸಂಸ್ಥಾನಗಳೂ ಇದ್ದವು. ಪ್ರಾಂತ್ಯಗಳ ಆಡಳಿತವು ನೇರವಾಗಿ ಬ್ರಿಟಿಷರ ಅಧೀನದಲ್ಲಿಯೇ ಇದ್ದು ಅವುಗಳ ಮೇಲ್ವಿಚಾರಣೆಯನ್ನು ಅವರ ಪ್ರತಿನಿಧಿಗಳಾದ ರಾಜ್ಯಪಾಲರು (ಗೌರ್‍ನರುಗಳು) ನೋಡಿಕೊಳ್ಳುತ್ತಿದ್ದರು. ಸಂಸ್ಥಾನಗಳಲ್ಲಿ ಸಾರ್ವಭೌಮರ ಆಶ್ರಿತರಾಗಿ ದೇಶೀಯ ರಾಜರುಗಳು ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸೌರ್ವಭೌಮರ ಪ್ರತಿನಿಧಿಯಾಗಿ ರೆಸಿಡೆಂಟ್ ಎಂಬ ಅಧಿಕಾರಿಯು

ಪ್ರತಿಯೊಂದು ಸಂಸ್ಥಾನದಲ್ಲಿಯೂ ಇದ್ದನು, ಇವುಗಳಲ್ಲಿ ಮೂವತ್ತು ಸಂಸ್ಥಾನಗಳು ಮಾತ್ರ, ಸಾಕಷ್ಟು ವಿಸ್ತೀರ್ಣ, ಜನಸಂಖ್ಯೆ ಹಾಗೂ ಸಾಧನ ಸಂಪನ್ಮೂಲಗಳನ್ನು ಹೊಂದಿದ್ದ ರಾಜ್ಯಗಳಾಗಿದ್ದವು. ಇವುಗಳಲ್ಲಿ ಮೈಸೂರು ಸಂಸ್ಥಾನವೂ ಒಂದು.

ಭೌಗೋಳಿಕವಾಗಿ ಅಂದಿನ ಮೈಸೂರು ಬ್ರಿಟಿಷ್ ಆಡಳಿತ ಪ್ರದೇಶಗಳಿಂದ ಸುತ್ತುವರಿದ ರಾಜ್ಯವಾಗಿದ್ದಿತು. ಉತ್ತರದಲ್ಲಿ ಮುಂಬೈ ಆಧಿಪತ್ಯಕ್ಕೆ ಸೇರಿದ ಧಾರವಾಡ, ಮದರಾಸ್ ಪ್ರಾಂತ್ಯದ ಬಳ್ಳಾರಿ, ದಕ್ಷಿಣಕ್ಕೆ ಮದರಾಸಿಗೆ ಸೇರಿದ ಸೇಲಂ—ಕೊಯಮತ್ತೂರು, ಪೂರ್ವಕ್ಕೆ ಮದರಾಸಿನ ಅನಂತಪುರ, ಕಡಪ ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳು, ಪಶ್ಚಿಮಕ್ಕೆ ಕೊಡಗು, ಮಲಬಾರ್ ಮತ್ತು ಕನ್ನಡ ಜಿಲ್ಲೆಗಳು, ಮೈಸೂರನ್ನು ಬೇರ್ಪಡಿಸುವ ಪಶ್ಚಿಮಘಟ್ಟಗಳೂ ಇದ್ದವು.

1831 ರಿಂದ 1881 ರವರೆಗೆ, ಮೈಸೂರು ಸಂಸ್ಥಾನವು, ದೇಶೀಯ ರಾಜರ ಆಳ್ವಿಕೆ ತಪ್ಪಿ, ಬ್ರಿಟಿಷ್ ಕಮಿಷನರ ನೇರ ಆಡಳಿತದಲ್ಲಿದ್ದಿತು. ಹೀಗೆ ಐವತ್ತು ವರ್ಷಗಳ ಬ್ರಿಟಿಷರ ನೇರ ಆಡಳಿತದ ಬಿಸಿ ಅಂದಿನ ಜನತೆಗೆ ಅರಿವಾಗಿದ್ದಿತು. ಹೀಗೆ ಐವತ್ತು ವರ್ಷಗಳ ಬ್ರಿಟಿಷರ ನೇರ ಆಡಳಿತದ ಬಿಸಿ ಅಂದಿನ ಜನತೆಗೆ ಅರಿವಾಗಿದ್ದಿತು. ಆಡಳಿತದ ನಿಯತ ರೂಪರೇಖೆಗಳು ನಿರ್ಧರಿಸಲ್ಪಟ್ಟು ಒಂದು ವ್ಯವಸ್ಥೆಯಾಯಿತು.

ಬ್ರಿಟಿಷ್ ಕಮಿಷನ್ನರ ನೇರ ಆಡಳಿತ 1881 ರಲ್ಲಿ ಕೊನೆಗೊಂಡು ಆಂಗ್ಲ ಸರ್ಕಾರ ಮತ್ತು ಮೈಸೂರು ಮಹಾರಾಜರ ನಡುವೆ ಆದ ಒಪ್ಪಂದದ ಮೇರೆಗೆ, ಮೈಸೂರು ಮಹಾರಾಜರಿಗೇ ಸಂಸ್ಥಾನದ ಸರ್ವಾಧಿಕಾರತ್ವ ಮತ್ತೆ ಲಭಿಸಿತು. ಆದರೂ ಮಹಾರಾಜರು ಬ್ರಿಟಿಷ್ ಸರ್ಕಾರದ ಅಧೀನರೇ ಎಂಬುದು ಇಲ್ಲಿ ಬಹು ಮುಖ್ಯ. ಈ ಒಪ್ಪಂದಕ್ಕನುಗುಣವಾಗಿ, ಮಹಾರಾಜರ ಅಧೀನದಲ್ಲಿ ಹಾಗೂ ಅವರ ನಿರ್ದೇಶನಕ್ಕನುಗುಣವಾಗಿ, ಆಡಳಿತ ನಡೆಸಲು ಕಾರ್ಯಾಂಗ ಸಮಿತಿ (Executive Council) ರಚಿತವಾಯಿತು. ಈ ಸಮಿತಿಯ ಮುಖ್ಯಸ್ಥರೇ ದಿವಾನರು. ಅವರ ನೆರವಿಗೆ ಕೌನ್ಸಿಲರುಗಳೆಂಬ ಇಬ್ಬರು ಸದಸ್ಯರಿರುತ್ತಿದ್ದರು.

ಬೇರೆ ಯಾವ ಸಂಸ್ಥಾನದಲ್ಲಿಯೂ ಕಂಡುಬರದಂತಹ ರಾಜ್ಯಾಂಗ ನೀತಿಯು ಮೈಸೂರು ಸಂಸ್ಥಾನದಲ್ಲಿ ಕಂಡುಬರುತ್ತಿತ್ತು. ಮೈಸೂರು ಸಂಸ್ಥಾನವು ಪ್ರಜಾಸತ್ತಾತ್ಮಕವಾದ ಮಾದರಿ ರಾಜ್ಯವಾಗಲೆಂದೇ ಹಿಂದಿನ ಆಡಳಿತಗಾರರು ಪ್ರತಿನಿಧಿ ಸಭೆಗಳನ್ನೇರ್ಪಡಿಸಿದರು. ಜನಾಭಿಪ್ರಾಯ ಪ್ರತಿಬಿಂಬಿಸಿ, ಆಡಳಿತ ವಿಷಯಗಳಲ್ಲಿ ಸಲಹೆ ನೀಡಲು ಅನುಕೂಲವಾಗುವಂತೆ, ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆಗಳು ಅಸ್ತಿತ್ವಕ್ಕೆ ಬಂದವು. ಪ್ರಜಾಪ್ರತಿನಿಧಿಸಭೆ 1881 ರಲ್ಲೇ ಆರಂಭವಾಯಿತು. ಪ್ರಜಾಭಿಪ್ರಾಯ ವ್ಯಕ್ತಪಡಿಸಲು ಸಂಸ್ಥಾನಗಳಲ್ಲೆಲ್ಲಾ ಪ್ರಥಮವಾಗಿ, ಮೈಸೂರಿನಲ್ಲಿಯೇ ಆರಂಭಿಸಲ್ಪಟ್ಟ ಸಭೆ ಇದು. ವಿ.ಪಿ. ಮಾಧವರಾಯರು ದಿವಾನರಾಗಿದ್ದಾಗ (1906–1909) 1907 ರಲ್ಲಿ ನ್ಯಾಯವಿಧಾಯಕ ಸಭೆಯು ಆರಂಭವಾಯಿತು. ಜೊತೆಗೆ ಹಾಗೆಯೇ ಸ್ಥಳೀಯ ಸಾರ್ವಜನಿಕ ಸಭೆಗಳೂ ಏರ್ಪಾಡಾದವು. ಆದರೆ ಅವು ಕಾರ್ಯಾರಂಭಮಾಡಿದಾಗ ಸ್ವತಂತ್ರವಾಗಿ ಯಾವಕಾರ್ಯವನ್ನೂ ಮಾಡಲಾಗದೆ ಬರೀ ತೋರಿಕೆಯ ಸಂಸ್ಥೆಗಳಾದವು.

ಆಂಗ್ಲ ಭಾರತದಲ್ಲಿ 1919ರಲ್ಲಿ ಮಾಂಟೆಗೊ–ಛೆಲ್ಮ್ಸ್‌ಫರ್ಡ್ (Montagu-Chelmsford) ಸುಧಾರಣೆಗಳ ಮೂಲಕ, ದ್ವಿಮುಖ ಸರ್ಕಾರ (Dyarchy) ಪದ್ಧತಿಯುಜಾರಿಗೆ ಬಂದು ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರಕಾರದ ಅಂಕುರವಾಯಿತು. ಮೈಸೂರು ಸಂಸ್ಥಾನದಲ್ಲಿಯೂ ರಾಜಕೀಯ ಸುಧಾರಣೆಯಾಗಬೇಕೆಂದು ಆಗ ಕೂಗೆಬ್ಬಿಸಿದರು. ಭ್ರಜೇಂದ್ರನಾಥಸೀಲ್‌ರವರ ಅಧ್ಯಕ್ಷತೆಯಲ್ಲಿ, 9 ಜನ ಸದಸ್ಯರುಗಳನ್ನೊಳಗೊಂಡ ರಾಜಕೀಯ ಸುಧಾರಣಾ ಸಮಿತಿಯೊಂದನ್ನು 1922ರಲ್ಲಿ ರಚಿಸಿದರು. ಅದು 1923ರ ಮಾರ್ಚಿ 13ರಂದು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿತು. 1923ರಲ್ಲಿ ಜಾರಿಗೆ ಬಂದ ರಾಜ್ಯಾಂಗ ಸುಧಾರಣೆಗಳಿಗೆ ಅನುಗುಣವಾಗಿ ಪ್ರಜಾಪ್ರತಿನಿಧಿ ಸಭೆಗೆ ನ್ಯಾಯಬದ್ಧ ಸ್ಥಿರೀಕರಣ ಲಭ್ಯವಾಯಿತು. ಅದರ ಅಂಗರಚನೆ; ಅಧಿಕಾರ ಹಾಗೂ ಕರ್ತವ್ಯಗಳು ನಿರ್ಧರಿಸಲ್ಪಟ್ಟವು. ಈ ಸಭೆಯ ಸದಸ್ಯತ್ವ 250 ಇದ್ದು, ಇವರುಗಳ ಆಯ್ಕೆ ಅಂದು ಜಾರಿಯಲ್ಲಿದ್ದ ವಿಧಾನದ ಚುನಾವಣೆಯ ಮೂಲಕ ನಡೆಯುತ್ತಿತ್ತು. ಆದರೆ ಸಭೆಯ ಅಧ್ಯಕ್ಷಸ್ಥಾನ ಕಾರ್ಯಾಂಗ ಸಮಿತಿಯ ಅಧ್ಯಕ್ಷರಾಗಿರುತ್ತಿದ್ದ ದಿವಾನರಿಗೇ ಮೀಸಲು. ಸಮಿತಿಯ ಉಳಿದ ಇಬ್ಬರು

ಸದಸ್ಯರು ಈ ಸಭೆಯ ಉಪಾಧ್ಯಕ್ಷರಾಗಿರುತ್ತಿದ್ದರು. ಪ್ರಜಾಪ್ರತಿನಿಧಿ ಸಭೆ 1916ರ ವರಿಗೆ ವರ್ಷಕ್ಕೊಮ್ಮೆ ಸಮಾವೇಶಗೊಳ್ಳುತ್ತಿತ್ತು, ಅದೇ ವರ್ಷ. ಅಕ್ಟೋಬರ್‌ನಿಂದ ಬಜೆಟ್ ಹಾಗೂ ದಸರಾ ಅಧಿವೇಶನಗಳಾಗಿ, ವರ್ಷಕ್ಕೆರಡು ಬಾರಿ ಸಭೆ ಸೇರಲಾರಂಭವಾಯಿತು. ಬಜೆಟ್ ಅಧಿವೇಶನ 5 ದಿನಗಳು; ದಸರಾ ಅಧಿವೇಶನ ಒಂದು ವಾರ ಅಥವಾ 10 ದಿನಗಳ ಕಾಲ ನಡೆಯುತ್ತಿತ್ತು.

1923ರ ರಾಜ್ಯಾಂಗ ಸುಧಾರಣೆಗಳಿಗನುಗುಣವಾಗಿ, ನ್ಯಾಯವಿಧಾಯಕ ಸಭೆಯ ಸದಸ್ಯಸಂಖ್ಯೆಯು ಕಾರ್ಯಾಂಗ ಸಮಿತಿಸದಸ್ಯರ ಹೊರತು, 40ರಿಂದ 50ರ ವರೆಗೆ ಇರಬೇಕೆಂದು ಸೂಚಿಸಲಾಗಿದ್ದಿತು. ಅದರಲ್ಲಿ ಅಧಿಕಾರಿ ಸದಸ್ಯರ ಸಂಖ್ಯೆ 20, ಖಾಸಗೀ ಸದಸ್ಯರ ಸಂಖ್ಯೆ 30; ಹೀಗೆ ಖಾಸಗೀ ಸದಸ್ಯರ ಸಂಖ್ಯೆಯೇ ಮೇಲುಗೈ ಆಗಿತ್ತು.

ಅಂದಿನ ಭಾರತದ ವೈಸ್ರಾಯ್ ಲಾರ್ಡ್ ರೀಡಿಂಗ್ 1923ರಲ್ಲಿ ಮೈಸೂರಿಗೆ ಭೇಟಿ ನೀಡಿದಾಗ ಏರ್ಪಡಿಸಿದ್ದ ಔತಣ ಕೂಟ ಸಮಾರಂಭದಲ್ಲಿ ಈ ರಾಜಕೀಯ ಸುಧಾರಣೆಗಳ ಪ್ರಾಮುಖ್ಯತೆಯನ್ನು ಕುರಿತು ಮಹಾರಾಜರು ಮಾತನಾಡಿ "ಅನೇಕಾನೇಕ ಪ್ರಜಾಪ್ರತಿನಿಧಿಗಳು ಸರ್ಕಾರಿ ಅಧಿಕಾರಿಗಳೊಂದಿಗೆ ಕಲೆತು, ರಾಜ್ಯಾಡಳಿತದ ಏರ್ಪಾಡುಗಳಲ್ಲಿ ಭಾಗಿಗಳಾಗುವಂತೆ ಮಾಡಬೇಕೆಂಬುದೇ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ಉದ್ದೇಶ...ಈಚಿಗೆ ನಡೆದ ಬದಲಾವಣೆಗಳು ರಾಜಕೀಯ ಸುಧಾರಣೆಗಳ ದೃಷ್ಟಿಯಿಂದ ಬಹುಗಣ್ಯವಾದವುಗಳಾಗಿವೆ. ಅವುಗಳು ಆಚರಣೆಗೆ ಬಂದರೆ, ಹೆಚ್ಚು ಹೆಚ್ಚಾಗಿ ಪ್ರಜೆಗಳ ಆಕಾಂಕ್ಷೆಗಳಿಗನುಸಾರವಾಗಿಯೇ ಸರಕಾರದ ಆಡಳಿತವು ನಡೆಯುವಂತಾಗುತ್ತದೆ. ಈ ಸುಧಾರಣೆಗಳ ಫಲಿತಾಂಶವಾಗಿ ರಾಜ್ಯಾಡಳಿತದಲ್ಲಿ ದಕ್ಷತೆ ಹೆಚ್ಚಿ, ನಮ್ಮ ಪ್ರಜೆಗಳಲ್ಲಿ ಇತೋಪ್ಯತಿಶಯವಾದ ತೃಪ್ತಿಯೂ, ಅಭ್ಯುದಯವೂ ಉಂಟಾಗುವುದೆಂದು ನಾವು ಧೃಡವಾಗಿ ನಂಬುತ್ತೇವೆ" ಎಂದು ವಿವರಿಸಿದರು.

ಈ ಸುಧಾರಣೆಗಳಿಂದ, ಪ್ರಜಾಪ್ರತಿನಿದಿ ಸಭೆ, ನ್ಯಾಯವಿಧಾಯಕ ಸಭೆಗಳಿಗೆ ಶಾಸನ ಬದ್ಧಸ್ಥಾನಮಾನ ದೊರೆತು, ಅವುಗಳ ಅಧಿಕಾರವ್ಯಾಪ್ತಿ ಸ್ವಲ್ಪ ಹೆಚ್ಚಿದರೂ ಕೂಡ, ಜನತೆಯು ತೃಪ್ತರಾಗಲಿಲ್ಲ. ಮಂತ್ರಿ ಮಂಡಲಕ್ಕೆ ಖಾಸಗೀ ಸದಸ್ಯರೊಬ್ಬರನ್ನು ಆರಿಸಿಕೊಂಡಿದ್ದರೂ, ಜನರು ಹೆಚ್ಚು ತೃಪ್ತರಾಗುತ್ತಿದ್ದರು.

ಆದರೆ ಜನರ ಆಶೋತ್ತರಗಳನ್ನು ಈಡೇರಿಸುವುದಾಗಲೀ ಅಥವಾ ಅವರ ಅಭಿಪ್ರಾಯಕ್ಕೆ ಬೆಲೆಕೊಡುವುದಾಗಲಿ ಸರಕಾರದ ಇಚ್ಛೆಯಾಗಿರಲಿಲ್ಲ.

ಜಾತಿ ಪಂಗಡಗಳ ಕಲಹ

ಆಂಗ್ಲ ಭಾರತದ ಆಡಳಿತದ ಅನುಕರಣೆಯನ್ನು ಹೋಲುವಂತೆ, ದೇಶೀ ರಾಜರ ವಶವಲ್ಲಿದ್ದ ಕೆಲ ಸಂಸ್ಥಾನಗಳು ಆಡಳಿತ ನಡೆಸುತ್ತಿದ್ದವು. ಅಂತೆಯೇ ಮೈಸೂರು ಸಂಸ್ಥಾನವು ಪಕ್ಕದ ಮದರಾಸ್ ಆಡಳಿತದ ಮಾದರಿಯನ್ನು ಮುಂದಿಟ್ಟುಕೊಂಡು ಆಡಳಿತ ನಡೆಸುತ್ತಿತ್ತು. ಮದರಾಸಿನ ಬುದ್ಧಿಶಾಲಿ ಐಯ್ಯರ್ ವರ್ಗ ಮೈಸೂರು ಸಂಸ್ಥಾನದ ಆಡಳಿತಾಧಿಕಾರದಲ್ಲಿ ನುಸುಳಿದುದೇ ಈ ಬಗೆಯ ಆಡಳಿತಾನುಸರಣೆಗೆ ಕಾರಣವಾಗಿದ್ದಿತು. ಅಂದಿನ ಮೈಸೂರು ಸಂಸ್ಥಾನದ ಆಡಳಿತವರ್ಗದ ಪ್ರಮುಖ ಹುದ್ದೆಗಳಲ್ಲಿ ಮದರಾಸಿನ ಅಯ್ಯರ್ ಹಾಗೂ ಆಂಧ್ರದ ಸ್ಮಾರ್ಥ ಬ್ರಾಹ್ಮಣರ ಪ್ರಾಬಲ್ಯವೇ ಅತಿಯಾಗಿದ್ದಿತು.

ಕಾಲ ಕ್ರಮೇಣ ಮೈಸೂರಿನ ಬ್ರಾಹ್ಮಣ ಕೋಮಿನವರೂ ಆಡಳಿತ ವರ್ಗದಲ್ಲಿ ಸೇರಿದರು. ಇದರಿಂದಾಗಿ ಆಡಳಿತ ವರ್ಗ ಬ್ರಾಹ್ಮಣ ಕೋಮಿನವರಿಂದ ತುಂಬಿ ಹೋಗಿದ್ದರೂ ಮದರಾಸ್ ಬ್ರಾಹ್ಮಣ-ಮೈಸೂರು ಬ್ರಾಹ್ಮಣ ಎಂಬ ಭೇದಭಾವನೆ ಅವರವರಲ್ಲೇ ತಲೆದೋರಲು ಕಾರಣವಾಯಿತು. ಆಡಳಿತಾಂಗದ ಹುದ್ದೆಗಳಲ್ಲಿ ಅಲಂಕರಿಸಿದ್ದ ಬ್ರಾಹ್ಮಣ ಜನಾಂಗದಲ್ಲಿ ಉಪ ಪಂಗಡಗಳ ಭೇಧಭಾವನೆ ತಲೆದೋರಿದ್ದ ಕಾಲದಲ್ಲಿ, ಕೆ. ಶೇಷಾದ್ರಿಐಯ್ಯರ್ ಅವರು ಮೈಸೂರು ಸಂಸ್ಥಾನದ ದಿವಾನರಾಗಿದ್ದರು (1883-1900). ಆಗ ಮೈಸೂರು ಬ್ರಾಹ್ಮಣರ ಗುಂಪಿಗೆ ವೆಂಕಟಕೃಷ್ಣಯ್ಯನವರು ಮುಂದಾಳಾಗಿದ್ದರು. ಆ ಕಾಲಕ್ಕೆ ಬ್ರಾಹ್ಮಣರಲ್ಲದೆ ಬ್ರಾಹ್ಮಣೇತರ ಅಥವಾ ಹಿಂದುಳಿದ ಜನಾಂಗದಲ್ಲಿ ವಿದ್ಯಾವಂತರ ಸಂಖ್ಯೆ ಶೂನ್ಯವಾಗಿದ್ದಿತು. ಆದ್ದರಿಂದ ಆಡಳಿತಾಂಗದಲ್ಲೆಲ್ಲಾ ಬ್ರಾಹ್ಮಣರೇ ಹರಡಿದ್ದರು. ಆದರೂ ಈ ಒಂದೇ ಕೋಮಿಗೆ ಸೇರಿದ ಉಪಜಾತಿಗಳ ನಡುವೆ ಸೌಹಾರ್ದವಿರಲಿಲ್ಲ. ಹೀಗೆ ರಾಜ್ಯದ ಆಡಳಿತಾಂಗ ಬ್ರಾಹ್ಮಣರ ಹಿಡಿತದಲ್ಲೇ ಇದ್ದರೂ ಈ ಕೋಮಿನ ಉಪಪಂಗಡಗಳ ನಡುವಣ ಉಪಟಳ ದಿನೇ ದಿನೇ ವೃದ್ಧಿಯಾಗುತ್ತಿತ್ತು.

ಈ ರೀತಿಯ ಒಂದೇ ಕೋಮಿನ ಉಪಪಂಗಡಗಳ ನಡುವಣ ಕಲಹ, ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಪಿ. ಎನ್. ಕೃಷ್ಣಮೂರ್ತಿ (1901–1906) ಮತ್ತು ವಿ. ಪಿ. ಮಾಧವರಾಯರು ದಿವಾನರಾಗಿದ್ದ (1906–1909) ಕಾಲಕ್ಕೂ ಮುಂದುವರಿಯಿತು. ಮೈಸೂರು ರಾಜ್ಯದ ಆಡಳಿತದಲ್ಲಿ ಹಾಸು ಹೊಕ್ಕಂತೆ ಬೆಳೆದಿದ್ದ ಬ್ರಾಹ್ಮಣ ಕೋಮಿಗೆ ಸೇರಿದ್ದ ಜನರು ಪರಸ್ಪರ ತಮ್ಮ ತಮ್ಮ ಕೋಮುಗಳ ನಡುವೆ ಸೌಹಾರ್ಧ ಭಾವನೆಯನ್ನು ತರುವಲ್ಲಿ ವಿಫಲರಾಗಿದ್ದರು. ಸಮಾಜದಲ್ಲಿ ಬೆಳೆದಿದ್ದ ಈ ರೀತಿಯ ಕಲಹ, ಸಮಾಜವಲ್ಲಿ ಹೊಸ ತಿರುವನ್ನು ಮೂಡಿಸಲು ಸಜ್ಜಾಗುತ್ತಿತ್ತು. ಅದಕ್ಕೆ ಪರಿಪಕ್ವವಾದ ವಾತಾವರಣ ಸಮಾಜದಲ್ಲಿ ಮೂಡಿ, ರಾಜಕೀಯ ರಂಗ ಅದಕ್ಕೆ ತೆರವಾಗಿದ್ದಿತು. ಹೀಗೆ ಒಂದೇ ಕೋಮಿನ ಅಂತರ ಜಾತಿಯ ಕಲಹದ ವಿಷಬೀಜವನ್ನು ಸಮಾಜದ ಎಲ್ಲ ವರ್ಗಗಳ ಮೇಲೆ ಬಿತ್ತಲು ಈ ಜಾತಿವಾದಗಳು ಹವಣಿಸುತ್ತಿದ್ದರು. ಇದರ ಪರಿಣಾಮವಾಗಿ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ವೇಳೆಯಲ್ಲಿ (1912–1918) ಅದು "ಬ್ರಾಹ್ಮಣ–ಬ್ರಾಹ್ಮಣೇತರ ಅಥವಾ ಹಿಂದುಳಿದವ" ಎಂಬ ಹೊಸ ತಿರುವಿಗೆ ಅವಕಾಶ ಮಾಡಿಕೊಟ್ಟಿತು.

1881 ರಿಂದ 1918 ರ ವರೆವಿಗೆ ಮೈಸೂರು ಸಂಸ್ಥಾನದದ ಆಡಳಿತ ನಡೆಸಿದ ದಿವಾನರುಗಳೆಲ್ಲರೂ ಬ್ರಾಹ್ಮಣ ಕೋಮಿಗೆ ಸೇರಿದವರಾಗಿದ್ದರು. ಆಡಳಿತ ಹುದ್ದೆಗಳೆಲ್ಲಾ ಈ ಜಾತಿಯವರಲ್ಲೇ ಹಂಚಿಕೆಯಾಗಿದ್ದವು. ಇದರ ಪರಿಣಾಮವಾಗಿ ಹಿಂದುಳಿದ (ಬ್ರಾಹ್ಮಣೇತರ) ವರ್ಗಗಳಲ್ಲಿ ಜಾಗೃತಿ ಮೂಡುವಂತಾಯಿತು. 1916–17ರಲ್ಲಿ ಹಿಂದುಳಿದ ವರ್ಗಗಳಲ್ಲೂ ಸಂಘಟನೆಯ ಪ್ರಯತ್ನ ನಡೆಯಿತು.

ಪ್ರಜಾಮಿತ್ರ ಮಂಡಲಿ

ಆ ಕಾಲಕ್ಕೆ ಎಂ. ಬಸವಯ್ಯನವರು ಅಂದಿನ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿದ್ದರು. ಹಿಂದುಳಿದವರ ಐಕ್ಯತೆ ಹಾಗೂ ಏಳ್ಗೆಗಾಗಿ ಶ್ರಮಿಸುತ್ತಿದ್ದರು. ಹಿಂದುಳಿದವರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಸವಲತ್ತುಗಳು ಬೇಕೆಂದು ಹಾಗೂ ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿಡಬೇಕೆಂದೂ ಮೊದಲ ಬಾರಿಗೆ 1916ರಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿ ತಮ್ಮ ವಾದವನ್ನು ಮುಂದಿಟ್ಟರು. ಬಸವಯ್ಯನವರ

ನಿರ್ಣಯದ ಪರ ಮತ್ತಾರೂ ಹೋರಾಡುವ ಸದಸ್ಯರಿರಲಿಲ್ಲ. ಪರಿಣಾಮವಾಗಿ ಹಿಂದುಳಿದವರ ಪ್ರಗತಿ ಕುರಿತಾದ ನಿರ್ಣಯ ಬಿದ್ದುಹೋಯಿತು. ಆದರೆ ಅಂದು ಮಹಾರಾಜರಾಗಿದ್ದ ನಾಲ್ಮಡಿ ಕೃಷ್ಣರಾಜ ಒಡೆಯರವರು, ಸಮಾಜ ದಲ್ಲಿ ಉದ್ಭವಿಸಿದ್ದ ಈ ಹೊಸ ಬೇಡಿಕೆಯ ಅಂತರಾರ್ಥವನ್ನು ಅರಿತು ಹಿಂದು ಳಿದವರ ವಿದ್ಯಾಭ್ಯಾಸಕ್ಕಾಗಿ ಒಂದು ಲಕ್ಷ ರೂಗಳನ್ನು ಮೀಸಲಾಗಿಟ್ಟರು.

ನ್ಯಾಯವಿಧಾಯಕ ಸಭೆಯಲ್ಲಿ ತಮ್ಮ ನಿರ್ಣಯ ಬಿದ್ದುಹೋಯಿತೆಂದು ಬಸವಯ್ಯನವರು ಧೃತಿಗೆಡಲಿಲ್ಲ. ಹಿಂದುಳಿದವರ ಪ್ರಗತಿಗಾಗಿ ಕಂಕಣ ಬದ್ಧರಾಗಿ ನಿಂತರು. ಇವರಿಗೆ ಸಹಾಯಕರಾಗಿ, ಕೊಡಗು ಪ್ರಾಂತ್ಯದ ಆಡಳಿತ ಸೇವೆಯಲ್ಲಿ ಸಬ್‌ಜಡ್ಜ್ ಆಗಿ ನಿವೃತ್ತರಾಗಿದ್ದ ಹೆಚ್. ಚನ್ನಯ್ಯ ನವರು, ಬಸವಯ್ಯನವರಿಗೆ ತಮ್ಮ ಆತ್ಮೀಯ ಬೆಂಬಲ ನೀಡಿದರು. ನಂತರ ಗುಲಾಮ್ ಮಹಮದ್ ಮೇಕ್ರಿ ಅವರು ಈ ಪ್ರಗತಿಪರ ಹೋರಾಟಕ್ಕೆ ಸೇರಿದರು.

ಹಿಂದುಳಿದ ವರ್ಗದ ಮುಖಂಡರ ಚಿಂತನೆಯಿಂದಾಗಿ, ಈ ವರ್ಗದವರ ಐಕ್ಯತೆಗಾಗಿ ಹೊಸ ಪಕ್ಷದ ಅಗತ್ಯತೆ ಕಾಣಬಂದಿತು. ಪರಿಣಾಮವಾಗಿ 1917ರ ಡಿಸೆಂಬರ್ 6 ರಂದು, ಎಂ. ಬಸವಯ್ಯನವರ ನಾಯಕತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮ ರಾಜಕೀಯ ಪಕ್ಷವಾದ '**ಪ್ರಜಾ ಮಿತ್ರಮಂಡಲಿ**'ಯ ಸ್ಥಾಪನೆಯಾಯಿತು. ಹಿಂದುಳಿದವರಿಗೆ ರಾಜಕೀಯ, ಸಾಂಘಿಕ, ವಾಣಿಜ್ಯ, ವಿದ್ಯಾವಿಷಯಕ ಸಮುನ್ನತಿಯನ್ನು ಸಾಧಿಸುವ ಉದ್ದೇಶದಿಂದಲೇ ಈ ಪಕ್ಷವು ಸ್ಥಾಪಿತವಾಯಿತು. ಈ ಮಂಡಲಿಯವರು ಮಹಾರಾಜರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಲು ತೀರ್ಮಾನಿಸಿದರು. ಈ ಬಿನ್ನವತ್ತಳೆಗೆ ಮಹಮ್ಮದ್ ಕಲಾಮಿ, ಹೆಚ್. ಚನ್ನಯ್ಯ ಮಹಮ್ಮದ್ ಜಾಫರ್, ಎಂ, ಸುಬ್ಬಯ್ಯ, ಮಹಮ್ಮದ್ ಅಬ್ಬಾಸ್‌ಖಾನ್, ಎ.ವಿ.ಎಂ. ನಂಜುಂಡಶೆಟ್ಟಿ, ಮೊಗಣ್ಣ, ಡಿ. ಬಸುಮಯ್ಯ, ಎಂ. ನಾರಾಯಣಯ್ಯ, ಧನಕೋಟಿಶೆಟ್ಟಿ, ನಂಜಪ್ಪ, ತಿಮ್ಮಯ್ಯ, ಮಹಮ್ಮದ್ ಸೇಟ್, ಎಂ. ಬಸವಯ್ಯ ಇವರೆಲ್ಲರೂ ಸೇರಿದ್ದರು. ಪ್ರಜಾಮಿತ್ರಮಂಡಲಿಯ ಶಾಖೆಯನ್ನು ಮೈಸೂರಿನಲ್ಲಿಯೂ 1918ರ ಪೆಬ್ರವರಿ 10 ರಂದು ಆರಂಭಿ ಸಿದರು.

ಅಂದಿನ ಸಂಸ್ಥಾನ ಆಡಳಿತದಲ್ಲಿ ಕೆಲವರು ಈ ಪಕ್ಷಕ್ಕೆ ರಹಸ್ಯವಾಗಿ ಸಹಾಯ ಮಾಡುತ್ತಿದ್ದರು. ಇವಲ್ಲದೆ ಅಂದಿನ ಶ್ರೀಮದ್ ಯುವರಾಜರೂ ಮತ್ತು ಸಂಸ್ಥಾನದ ವಿದ್ಯಾಧಿಕಾರಿಯಾಗಿದ್ದ ಸಿ. ರಾಮಲಿಂಗರೆಡ್ಡಿಯವರೂ ಈ ಪಕ್ಷದ ಬಗೆಗೆ ಸಹಾನುಭೂತಿ ತೋರುತ್ತಿದ್ದರು. ಪಕ್ಷ ಉದಯವಾದ ನಂತರ ಅದರ ಧ್ಯೇಯ ಧೋರಣೆಗಳ ಪ್ರಚಾರಕ್ಕಾಗಿ, ಮೈಸೂರು ನಗರದಿಂದ ಪ್ರಕಟವಾಗುತ್ತಿದ್ದ, ಯಜಮಾನ್ ವಿರೂಪಾಕ್ಷಯ್ಯನವರ ಸಂಪಾದಕತ್ವದ 'ಮೈಸೂರು ಸ್ಟಾರ್' ಪತ್ರಿಕೆ ನಿಷ್ಪಕ್ಷಪಾತವಾಗಿ ವರದಿಗಳನ್ನು ಪ್ರಕಟಿಸುತ್ತಾ ಬಂದಿತು.

ಹೀಗೆ ಹಿಂದುಳಿದ ವರ್ಗದವರ ಚಳುವಳಿಯು ಒಂದು ಘಟ್ಟ ಮುಟ್ಟಿತು ಎಂಬುದಕ್ಕೆ, ಬ್ರಾಹ್ಮಣರು ನಿರಂತರವಾಗಿ ದಿವಾನರಾಗುತ್ತಿದ್ದುದು ನಿಲುಗಡೆ ಯಾಗಿ, 1918ರಲ್ಲಿ ಹಿಂದುಳಿದವರಾದ ಎಂ. ಕಾಂತರಾಜ ಅರಸ್‌ರವರು ದಿವಾನರಾಗಿ ನೇಮಕಗೊಂಡದ್ದು ಒಂದು ಮಹತ್ತರ ಬದಲಾವಣೆ, ಒಂದು ಮೈಲಿಗಲ್ಲು ಎಂದೇ ಹೇಳಬಹುದು. ಪ್ರಜಾ ಮಿತ್ರಮಂಡಳಿಯ ಸ್ಥಾಪಕ ಸದಸ್ಯ ಎಂ. ಬಸವಯ್ಯನವರ ನಿಧನಾನಂತರ, ತಿಪಟೂರಿನ ಡಿ.ಎಸ್. ಮಲ್ಲಪ್ಪನವರು, ಕೆ. ಚೆಂಗಲರಾಯರೆಡ್ಡಿ, ಎಸ್.ಎಲ್. ಮನ್ನಾಜಿರಾವ್, ಪಾಪಡಿ ಸುಬ್ಬರಾಮಶೆಟ್ಟಿ ಪಕ್ಷದ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತರು.

ಪ್ರಜಾ ಮಿತ್ರಮಂಡಳಿಯ ಚಳುವಳಿ ಹಾಗೂ ಸತತ ಪ್ರಯತ್ನದ ಫಲ ವಾಗಿ, ಸರ್ಕಾರಿ ಹುದ್ದೆಗಳಲ್ಲಿ ಹಿಂದುಳಿದವರಿಗೆ ಹೆಚ್ಚಿನ ಪ್ರಾತಿನಿಧ್ಯತೆ ಕೊಡುವ ಬಗೆಗೆ ಪರಿಶೀಲಿಸಲು ಸರಕಾರ "ಜಸ್ಟಿಸ್ ಮಿಲ್ಲರ್ ಸಮಿತಿ"ಯನ್ನು ನೇಮಿಸಿತು. ಈ ಸಮಿತಿಯು ಹಿಂದುಳಿದ ಪಂಗಡಗಳ ಹಿಂದುಳಿದಿರುವಿಕೆಯ ಬಗೆಗೆ ಐತಿಹಾಸಿಕ ದಾಖಲಾತಿಗಳನ್ನು ಗುರುತಿಸಿ ತನ್ನ ವರದಿಯನ್ನು ಸಲ್ಲಿಸಿತು. ಈ ಸಮಿತಿಯ ಕೆಲ ಸಲಹೆಗಳನ್ನು ಅಂದಿನ ಸರಕಾರ ಜಾರಿಗೆ ತಂದಿತು. ಆದರೆ ಸಲಹೆಗಳೆಲ್ಲಾ ಪೂರ್ಣವಾಗಿ ಜಾರಿಗೆ ಬರಲಿಲ್ಲ. ಅವಕ್ಕೆ ಹಲವಾರು ಕಾರಣಗಳಿದ್ದುವು. ಈ ಹಲವು ಕಾರಣಗಳಲ್ಲಿ ವಿದ್ಯಾವಂತ ಹಿಂದುಳಿದವರ ಕೊರತೆಯೂ ಒಂದು.

ರಾಜಕೀಯ ಜಾಗೃತಿಯ ಬೆಳವಣಿಗೆ

ಭೌಗೋಳಿಕವಾಗಿ ಮೈಸೂರು ಸಂಸ್ಥಾನವು ಎಲ್ಲಾ ಕಡೆಯೂ ಆಂಗ್ಲ ಭಾರತದ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದ್ದರಿಂದ, ಆಂಗ್ಲ ಭಾರತ ದಲ್ಲುಂಟಾದ ರಾಜಕೀಯ ಜಾಗೃತಿಯು ಸಂಸ್ಥಾನದ ಮೇಲೆ ಪ್ರಭಾವ ಬೀರಿತು. ಆಂಗ್ಲ ಭಾರತದಲ್ಲಿ ಸುಧಾರಣೆಗಳನ್ನು ಜಾರಿಗೆ ತಂದ ಪ್ರತಿಯೊಂದು ಸಂದರ್ಭ ದಲ್ಲಿಯೂ, ಆಂಗ್ಲ ಸರಕಾರದ ರಾಜಕೀಯ ವಿಭಾಗವು (Political Department), ಚಕ್ರಾಧಿಪತ್ಯದ ಪರವಾಗಿ ಸೂಚನೆಗಳನ್ನು ನೀಡಿ, ಸಂಸ್ಥಾನಗಳೂ ಕೂಡಾ ತಮ್ಮ ಆಡಳಿತದಲ್ಲಿ ಸುಧಾರಣೆಗಳನ್ನು ಜಾರಿಗೆ ತರಲು ಆಗಾಗ್ಗೆ ಸೂಚನೆಗಳನ್ನು ನೀಡುತ್ತಿತ್ತು.

1885 ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ (All India National Congress) ಶುರುವಾದಂದಿನಿಂದ ಭಾರತದ ರಾಜಕೀಯದಲ್ಲಿ ಒಂದು ಹೊಸಯುಗ ಆರಂಭವಾಯಿತು. ಮುಂದಿನ ಇಪ್ಪತ್ತು ವರ್ಷಗಳ ಕಾಲ ಅದು ದೇಶದ ರಾಜಕೀಯ ಜೀವನದಲ್ಲಿ ಪ್ರಬಲವಾಗಿ ಆಡಳಿತ ಮತ್ತು ಶಾಸನ ಸುಧಾರಣೆಗಳಿಗೆ ಒಂದು ರೂಪ ಕೊಟ್ಟಿತು. ರಾಷ್ಟ್ರೀಯ ಕಾಂಗ್ರೆಸ್ ಮೈಸೂರು ರಾಜ್ಯದ ರಾಜಕೀಯ ಜಾಗೃತಿ ಬೆಳವಣಿಗೆಯಲ್ಲಿಯೂ ಪ್ರಭಾವ ಬೀರಿತು. 1905ರಲ್ಲಿ ಬಂಗಾಳದ ವಿಭಜನೆಯಿಂದುಂಟಾದ ಚಳುವಳಿ, ನಂತರ ಸ್ವದೇಶೀ ಚಳುವಳಿ ಸಂಸ್ಥಾನಗಳ ಪ್ರಜೆಗಳ ಮೇಲೂ ಪ್ರಭಾವ ಬೀರಿತು. ಸಂಸ್ಥಾನದ ವೃತ್ತಪತ್ರಿಕೆಗಳು, ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿ, ಸ್ವಾತಂತ್ರದ ಅಪೇಕ್ಷೆಯನ್ನು ಬೆಳೆಸಿದವು. ಭಾರತದ ಉಗ್ರಗಾಮಿ ನಾಯಕರು ಗಳಾದ ಪಂಜಾಬಿನ ಲಾಲಾ ಲಜಪತ್‌ರಾಯ್, ಮಹಾರಾಷ್ಟ್ರದ ಬಾಲಗಂಗಾಧರ ತಿಲಕ್, ಬಂಗಾಳದ ಬಿಪಿನ್ ಚಂದ್ರಪಾಲ್ ಇವರೆಲ್ಲ ಮೈಸೂರು ಸಂಸ್ಥಾನದಲ್ಲಿಯೂ ರಾಷ್ಟ್ರ ಸ್ವಾತಂತ್ರದ ಸಂಕೇತಗಳೆನಿಸಿ ಕ್ರಾಂತಿ ಹರಡಲು ಕಾರಣರಾದರು.

ಮೈಸೂರಿನ ಆಡಳಿತ ವ್ಯವಸ್ಥೆಯು ಸುಧಾರಿತವಾಗಿದ್ದು, ಕೆಲವು ನ್ಯೂನತೆಗಳಿದ್ದರೂ ಕೂಡ, ಪ್ರಜಾಪ್ರಭುತ್ವ ಲಕ್ಷಣಗಳನ್ನು ಹೊಂದಿತ್ತು. ಎರಡು ಸಭೆಗಳ ಒಂದು ಶಾಸಕಾಂಗ, ಒಂದು ಉಚ್ಚತಮ ನ್ಯಾಯಾಲಯ, ಮಂತ್ರಿಗಳು, ವೃತ್ತಪತ್ರಿಕೆಗಳು ಹೀಗೆ ಪ್ರಜಾಪ್ರಭುತ್ವದ ಲಕ್ಷಣಗಳೆಲ್ಲ

ಇದ್ದವು, ಇದರ ಫಲವಾಗಿ ರಾಜಕೀಯ ಜಾಗೃತಿಯ ಬೆಳವಣಿಗೆಯಲ್ಲಿ ಮೈಸೂರು ಸಂಸ್ಥಾನವೇ ಇತರ ಸಂಸ್ಥಾನಗಳಿಗೆಲ್ಲಾ ಮಾದರಿಯಾಯಿತು.

ಮೊದಲ ಪ್ರಪಂಚ ಯುದ್ಧದಲ್ಲಿ ಭಾರತೀಯರು ಬ್ರಿಟಿಷರು ಮತ್ತು ಮಿತ್ರ ರಾಷ್ಟ್ರಗಳಿಗೆ ಧನ ಮತ್ತು ಜನಸಹಾಯ ಮಾಡಿದರು. ಸಣ್ಣ ರಾಷ್ಟ್ರಗಳಿಗೆ ರಕ್ಷಣೆಯೊದಗಿಸುವುದು ಮತ್ತು ಜನಾಭಿಪ್ರಾಯದಂತೆ ಸರಕಾರ ವ್ಯವಸ್ಥೆಗೊಳಿಸುವುದು ಇವೇ ಮೊದಲ ಪ್ರಪಂಚ ಯುದ್ಧದ ಗುರಿಗಳೆಂದು ಅಮೆರಿಕಾದ ಅಧ್ಯಕ್ಷ ವುಡ್‌ರೋ ವಿಲ್ಸನ್ ಘೋಷಿಸಿದುದರಿಂದ, ಸಂಸ್ಥಾನಗಳ ಜನರು ಅದರಲ್ಲೂ, ಮೈಸೂರಿನ ಜನತೆಯೂ ಪ್ರಭಾವಿತರಾಗಿ ಜಾಗೃತರಾದರು. ಯುದ್ಧ ಮುಗಿದ ನಂತರ, ಬ್ರಿಟಿಷ್ ಆಳರಸರು ಸುಧಾರಣೆಗಳನ್ನು ಜಾರಿಗೆ ತಂದು ಉದಾರನೀತಿ ಅನುಸರಿಸುತ್ತಾರೆಂದು ಭಾವಿಸಿದ್ದರು. ಬದಲಾಗಿ ಬ್ರಿಟಿಷರು ರೌಲಟ್ ಕರಾಳ ಶಾಸನ ಮಾಡಿದರು. ಅದನ್ನು ವಿರೋಧಿಸಿ ಗಾಂಧೀಜಿಯವರು ಅಹಿಂಸಾತ್ಮಕ ಅಸಹಕಾರ ಚಳುವಳಿ ಆರಂಬಿಸಿದರು. ಜಲಿಯನ್ ವಾಲ್‌ಭಾಗ್ ಹತ್ಯೆಯ ಸಂಬಂಧದ ಚಳುವಳಿ ಆಂಗ್ಲ ಭಾರತದಲ್ಲಿ ನಡೆದರೂ ಅದರ ಪ್ರಭಾವ ಮೈಸೂರು ಸಂಸ್ಥಾನದ ಮೇಲೂ ಆಯಿತು.

ಡಿ. ವಿ. ಗುಂಡಪ್ಪನವರು ಸಂಪಾದಕರಾಗಿದ್ದ 'ಕರ್ನಾಟಕ', ಕೆ. ರಂಗೈಯ್ಯಂಗಾರ್ ಸಂಪಾದಕತ್ವದಲ್ಲಿ 'ಮೈಸೂರು ಕ್ರಾನಿಕಲ್' ವಾರ ಪತ್ರಿಕೆಗಳೂ, ವೈ. ವಿರೂಪಾಕ್ಷಯ್ಯನವರ ಸಂಪಾದಕತ್ವದಲ್ಲಿ 'ಮೈಸೂರು ಸ್ಟಾರ್' ಎಂಬ ಪತ್ರಿಕೆಯೂ, ಎಂ. ವೆಂಕಟಕೃಷ್ಣಯ್ಯನವರ ಸಂಪಾದಕತ್ವದಲ್ಲಿ 'ವೆಲ್ತ್ ಆಫ್ ಮೈಸೂರು' ಎಂಬುದೂ ಸಾರ್ವಜನಿಕರ ಮೇಲೆ ಪ್ರಭಾವ ಬೀರಿ, ಸಂಸ್ಥಾನದ ಅಭಿವೃದ್ಧಿಯು ಪ್ರತಿನಿಧಿ ಸಭೆಗಳ ಅಧಿಕಾರ ಮತ್ತು ಪ್ರಭಾವವನ್ನು ಅವಲಂಬಿಸಿದೆಯೆಂಬುದನ್ನು ಸ್ಪಷ್ಟಪಡಿಸಿದವು. ವೃತ್ತ ಪತ್ರಿಕೆಗಳು ದೇಶದ ಸಮಸ್ಯೆಗಳ ಪರಿಚಯವನ್ನು ಮೈಸೂರು ಜನತೆಗೆ ಮಾಡಿ ಕೊಟ್ಟು ಪ್ರಥಮಬಾರಿಗೆ ಮೈಸೂರಿನಲ್ಲಿ ಚಳುವಳಿಯನ್ನು ವ್ಯವಸ್ಥೆಗೊಳಿಸಿ ಅದು ಯಾವ ರೂಪ ತಾಳಬೇಕೆಂಬುದನ್ನು ತೋರಿಸಿದವು. ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಜಾಗೃತಿ ಬೆಳೆಯಿತು ಮತ್ತು ರಾಷ್ಟ್ರೀಯ ಚಳುವಳಿಗೆ ತಳಹದಿ ಹಾಕಲ್ಪಟ್ಟಿತು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಸಂಸ್ಥಾನಗಳು

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಚಟುವಟಿಕೆ ಆಂಗ್ಲ ಭಾರತಕ್ಕೆ ಮಾತ್ರ ಸೀಮಿತವಾಗಿದ್ದಿತು. ದೇಶೀಯ ಸಂಸ್ಥಾನ ರಾಜರುಗಳು ಭಾರತೀಯರೇ ಆಗಿದ್ದುದರಿಂದ ಆಯಾ ರಾಜ್ಯಗಳ ಜನರ ಯೋಗಕ್ಷೇಮದ ಹೊಣೆಗಾರಿಕೆ ಅವರಿಗೇ ಸೇರಿದ್ದೆಂದು, ಕಾಂಗ್ರೆಸ್ ಧುರೀಣರ ಭಾವನೆಯಾಗಿದ್ದುದರಿಂದ, ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯ ಚಟುವಟಿಕೆ ಆಂಗ್ಲ ಭಾರತಕ್ಕೆ ಸೀಮಿತವಾಗಿದ್ದಿತು. ಪರಿಣಾಮವಾಗಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಶಾಖೆಗಳನ್ನು ದೇಶೀಯ ಸಂಸ್ಥಾನಗಳಲ್ಲಿ ಆರಂಭಿಸಿರಲಿಲ್ಲ. ದೇಶೀಯ ರಾಜರುಗಳನ್ನು ಗೌರವಿಸುವ ಭಾವನೆ ಕಾಂಗ್ರೆಸ್‌ನಲ್ಲಿ ಕಾಣಬಂದಿದ್ದಿತು.

1894 ರಲ್ಲಿ ಮೈಸೂರಿನ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರ್‌ರವರು ನಿಧನರಾದರು. ರಾಷ್ಟ್ರೀಯ ಕಾಂಗ್ರೆಸ್ ಇವರ ನಿಧನದ ಬಗೆಗೆ ದುಃಖ ಸೂಚನೆಯ ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಶ್ರದ್ಧಾಂಜಲಿಯನ್ನರ್ಪಿಸಿತು. ದೇಶೀಯ ಸಂಸ್ಥಾನಗಳ ರಾಜ್ಯಭಾರದಲ್ಲಿ ತೊಡಗಿರುವ ಯಾವ ರಾಜರನ್ನೇ ಆಗಲಿ, ವಿನಾಕಾರಣ ಆಂಗ್ಲ ಸರ್ಕಾರ ತೆಗೆಯಬಾರದೆಂದು ನಂತರದ ಎರಡು ವರ್ಷಗಳಲ್ಲಿ ಒಂದು ನಿರ್ಣಯವನ್ನು ಮಾಡಿತು. ಹೀಗೆ ರಾಷ್ಟ್ರೀಯ ಕಾಂಗ್ರೆಸ್ ದೇಶೀಯ ರಾಜರುಗಳ ಹಕ್ಕು ಬಾಧ್ಯತೆ ರಕ್ಷಣೆಯ ಹಿನ್ನಲೆಯಲ್ಲಿ ಅವರುಗಳ ಗೌರವಾದರ ಸಂಪಾದಿಸಿಕೊಂಡಿತು.

ಆಂಗ್ಲ ಭಾರತದಲ್ಲಿ ಕಾಂಗ್ರೆಸ್ಸಿನ ಕಾರ್ಯ ಚಟುವಟಿಕೆಯಿಂದಾಗಿ, ಜನರಲ್ಲಿ ತಮ್ಮ ಹಕ್ಕುಗಳನ್ನು ಅರಿಯುವಂತಹ ಜಾಗೃತಿ ಮೂಡುತ್ತಿದ್ದು, ದೇಶೀಯ ರಾಜರ ಆಡಳಿತಕ್ಕೊಳಪಟ್ಟ ಸಂಸ್ಥಾನಗಳಲ್ಲಿ ಜನಜಾಗೃತಿ ಮೂಡಿರಲಿಲ್ಲ. 1918 ರಲ್ಲಿ ನಾಗಪುರದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಅಧಿವೇಶನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಭಾಷೆಯ ಆಧಾರದ ಮೇಲೆ ಇಪ್ಪತ್ತೊಂದು ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳನ್ನಾಗಿ ಪುನರ್ರಚಿಸಿದರು. ದೇಶೀಯ ಸಂಸ್ಥಾನಗಳಲ್ಲೂ ಕಾಂಗ್ರೆಸ್ ಪ್ರಚಾರವನ್ನು ವಿಸ್ತರಿಸಲು ಅನುಕೂಲವಾಗುವಂತೆ, ಕಾಂಗ್ರೆಸ್ ಪ್ರಾಂತ್ಯದ

ಪಕ್ಕದ ಸಂಸ್ಥಾನದ ಕಾಂಗ್ರೆಸ್ಸನ್ನು ಆಯಾ ಪ್ರಾಂತ್ಯದ "**ಜಿಲ್ಲಾ ಕಾಂಗ್ರೆಸ್ ಸಮಿತಿ**" ಎಂದು ಪರಿಗಣಿಸುವುದರ ಮೂಲಕ ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗರೂ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎ.ಐ.ಸಿ.ಸಿ.)ಯ ಸದಸ್ಯರಾಗುವ ಅವಕಾಶ ಮಾಡಿಕೊಡಲಾಯಿತು. ಹಾಗೂ ಕಾಂಗ್ರೆಸ್ ಸದಸ್ಯರು ಇಂತಹ ಅಧಿವೇಶನಗಳಲ್ಲಿ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸಲು ಅವಕಾಶವಾಯಿತು. ಹೀಗೆ ಕಾಂಗ್ರೆಸ್ ದೇಶೀಯ ಸಂಸ್ಥಾನಗಳಿಗೂ, ತನ್ನ ಕಾರ್ಯ ಚಟುವಟಿಕೆಯನ್ನು ವಿಸ್ತರಿಸಿಕೊಂಡಿತಾದರೂ, ಸಂಸ್ಥಾನದ ರಾಜಕೀಯದಲ್ಲಿ ಕಾಂಗ್ರೆಸ್ ಪ್ರವೇಶಿಸುವುದಿಲ್ಲವೆಂದು ಒಂದು ಗೊತ್ತುವಳಿಯನ್ನು ಮಾಡಿತು. ಸಂಸ್ಥಾನಗಳ ಜನರಿಗೆ ಕಾಂಗ್ರೆಸ್ ಸದಸ್ಯತ್ವ ಲಭ್ಯವಾದರೂ, ಸಂಸ್ಥಾನದ ಆಂತರಿಕ ವ್ಯವಹಾರಗಳಲ್ಲಿ ಕೈ ಹಾಕಲು ರಾಷ್ಟ್ರೀಯ ಕಾಂಗ್ರೆಸ್ ಇಚ್ಛಿಸದೇ ಸುಮಾರು ಹತ್ತು ವರ್ಷಗಳ ಕಾಲ ಮುಂದುವರಿಯಿತು.

1927–28 ರಲ್ಲಿ **ಸೈಮನ್ ಸಮಿತಿ** ನೇಮಕಗೊಂಡು ಭಾರತಕ್ಕೆ ಭೇಟಿ ನೀಡಿತು. ಸೈಮನ್ ಸಮಿತಿ ನೇಮಕದ ಪರಿಣಾಮವಾಗಿ, ಭಾರತದಲ್ಲಿ ರಾಜ್ಯಾಂಗವನ್ನು ನಿರೂಪಿಸಲು ಸರ್ವಪಕ್ಷಗಳ ಸಮ್ಮೇಳನ ಸಭೆ ಸೇರಿ ನೆಹರು ವರದಿ (Nehru Report) ಯನ್ನು ತಯಾರಿಸಿತು. ನೆಹರು ವರದಿ ಬ್ರಿಟನ್ನಿನ ರಾಜ–ಬ್ರಿಟಿಷ್ ಪಾರ್ಲಿಮೆಂಟ್ – ಮತ್ತು ಭಾರತದ ಸಂಸ್ಥಾನಗಳು ಹಾಗೂ ಆಂಗ್ಲ ಭಾರತದ ನಡುವಣ ಸಂಬಂಧವೇನೆಂಬುದನ್ನು ಪ್ರಥಮ ಬಾರಿಗೆ ವಿಶದೀಕರಿಸುವ ಪ್ರಯತ್ನ ನಡೆಸಿತು.

ದೇಶೀಯ ಸಂಸ್ಥಾನಗಳೂ ಭಾರತ ರಾಷ್ಟ್ರದ ಒಂದು ಅಂಗವೆಂದೂ, ಅಲ್ಲಿನ ಜನರ ಇರುವಿಕೆ ಹಾಗೂ ಅಲ್ಲಿನ ಪರಿಸ್ಥಿತಿಯನ್ನು ಮರೆಯಬಾರದೆಂಬ ಅರಿವನ್ನು ಕಾಂಗ್ರೆಸ್ ಸ್ಪಷ್ಟವಾಗಿ ಗುರುತಿಸಿತು. ಈ ಹಿನ್ನೆಲೆಯಲ್ಲಿ 1928ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ, "ಸಂಸ್ಥಾನಗಳ ಆಂತರಿಕ ವ್ಯವಹಾರದಲ್ಲಿ ಪ್ರವೇಶಿಸಬಾರದೆಂಬ ನಿರ್ಬಂಧವನ್ನು ತೆಗೆದುಹಾಕಿತು, ಮತ್ತು ಸಂಸ್ಥಾನದ ಪ್ರಜೆಗಳಿಗೆ ಲಭ್ಯವಾಗಬೇಕಾದ ಮೂಲಭೂತ ಹಕ್ಕುಗಳನ್ನು ದೊರಕಿಸಿಕೊಡಬೇಕೆಂದು, ದೇಶೀಯ ರಾಜರುಗಳನ್ನು ಕಾಂಗ್ರೆಸ್ ಕೋರಿತಲ್ಲದೆ, ಈ ಧ್ಯೇಯ ಧೋರಣೆಗಳ ಈಡೇರಿಕೆಗಾಗಿ ನಡೆಸುವ ಚಳುವಳಿಯಲ್ಲಿ ಕಾಂಗ್ರೆಸ್ ತನ್ನ ಸಹಾನುಭೂತಿ ಮತ್ತು ಸಹಾಯದ ಭರವಸೆಯನ್ನು ನೀಡಿತು."

ಹೀಗೆ ಕಾಂಗ್ರೆಸ್ ದೇಶೀಯ ಸಂಸ್ಥಾನಗಳಲ್ಲಿನ ಜನರ ಮೇಲೆ ಪ್ರಭಾವ ಬೀರಿದ ಕಾರಣ, 1927 ರಲ್ಲಿ **ಸಂಸ್ಥಾನಗಳ ಜನರ ಪ್ರಾತಿನಿಧಿಕ ಸಮ್ಮೇಳನ** ಪ್ರಥಮ ಬಾರಿಗೆ ಮುಂಬೈನಲ್ಲಿ ಜರುಗಿತು. ನಂತರ ಪ್ರತಿವರ್ಷವೂ ಕಾಂಗ್ರೆಸ್ ಅಧಿವೇಶನದ ಸಮಯದಲ್ಲೇ ಅಖಿಲಭಾರತ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನವೂ ಸಮಾವೇಶಗೊಳ್ಳುತ್ತಿತ್ತು.

ರಾಷ್ಟ್ರೀಯ ಕಾಂಗ್ರೆಸ್ ದೇಶದಾದ್ಯಂತ ಅಸಹಕಾರ ಚಳುವಳಿ ಆರಂಭಿಸಿತು. ಈ ಚಳುವಳಿಯಲ್ಲಿ ಆಂಗ್ಲ ಭಾರತದ ಹಾಗೂ ಸಂಸ್ಥಾನದ ಜನರೂ ಜತೆಗೂಡಿ ಭಾಗವಹಿಸಿದರು. 1920ರ ನಂತರದ ರಾಷ್ಟ್ರೀಯ ಕಾಂಗ್ರೆಸ್ ಚಳವಳಿಗಳಲ್ಲೆಲ್ಲಾ ಸಂಸ್ಥಾನದ ಪ್ರಜೆಗಳೂ ಭಾಗವಹಿಸುತ್ತಿದ್ದರಾದರೂ, 1930-31ರ ಸತ್ಯಾಗ್ರಹ ಚಳುವಳಿಯ ನಂತರವೇ, ಅದರ ಹಿರಿಮೆ, ಹುಮ್ಮಸ್ಸು ಹಾಗೂ ಗಾತ್ರ ಹಿರಿದಾಯಿತು. ಪ್ರಾಂತ್ಯಗಳ ಜನರ ಜತೆಗೆ ಸಂಸ್ಥಾನದ ಪ್ರಜೆಗಳೂ ಸಾವಿರಾರು ಸಂಖ್ಯೆಯಲ್ಲಿ ಕಾರಾಗೃಹದ ಶಿಕ್ಷೆಗೊಳಗಾದರು.

ಎಷ್ಟೇ ಅನುಕೂಲಕರವಾದರೂ ಸ್ವಯಂಪ್ರಭುತ್ವ (Autocracy) ಮತ್ತು ಪ್ರಜಾಪ್ರಭುತ್ವಗಳೆರಡೂ ಸೇರಿ ಅಸಂಬದ್ಧ ಮಿಶ್ರಣವಾಗಿ ಸ್ಫೋಟದಲ್ಲಿ ಪರಿಣಮಿಸುವುದೆಂದು, ಗಾಂಧೀ-ಇರ್ವಿನ್ ಒಪ್ಪಂದದ ನಂತರ ಆಂಗ್ಲ ಸರ್ಕಾರ ಹಾಗೂ ಸಂಸ್ಥಾನದ ಸರ್ಕಾರಗಳಿಗೆ, ಗಾಂಧೀಜಿಯವರು ಮಾಡಿಕೊಂಡ ಮನವಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಂಸ್ಥಾನಗಳ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸಿ ಅವುಗಳ ಸೂಕ್ಷ್ಮತೆಯನ್ನು ಘಾಸಿಗೊಳಿಸಲು ಕಾಂಗ್ರೆಸ್ ಇಚ್ಛಿಸದೆ, ಸರಿಯಾದ ವೇಳೆಯಲ್ಲಿ ತನ್ನ ಅಭಿಪ್ರಾಯ ಕೇಳುವಂತೆ ಮಾಡುವ ಉದ್ದೇಶದಿಂದ ಅದು ಕೂಡಿತ್ತೆಂದು ಸಂಸ್ಥಾನಗಳಿಗೆ ಗಾಂಧೀಜಿ ಜ್ಞಾಪಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ
(Mysore District Congress Committee)

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಂಸ್ಥೆಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ಸನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಎಂದು ಪರಿಗಣಿಸುವುದರ ಮೂಲಕ ಸಮಿತಿಯನ್ನು ಆರಂಭಿಸಲಾಯಿತು. 1920ರಲ್ಲಿ

ಎ.ಐ.ಸಿ.ಸಿ ಸದಸ್ಯರೊಬ್ಬರು ಸಂಸ್ಥಾನದಲ್ಲಿ ಸಂಚರಿಸಿದಾಗ ಅನೇಕರು ಎ.ಐ.ಸಿ.ಸಿ. ಸದಸ್ಯರಾದರು.

1921ರ ಆಗಸ್ಟ್‌ನಲ್ಲಿ ರಾಷ್ಟ್ರಾದ್ಯಂತ ತಿಲಕರ ದಿನಾಚರಣೆ ನಡೆಯಿತು. ಮೈಸೂರು ಸಂಸ್ಥಾನದಲ್ಲೂ ತಿಲಕರ ದಿನಾಚರಣೆ ನಡೆಸುವುದರ ಮೂಲಕ ತಿಲಕರ ಜೀವನ-ಅವರ ಧ್ಯೇಯ ಹಾಗೂ ತ್ಯಾಗಮಯ ಹೋರಾಟದ ಬಗೆಗೆ ಜನತೆ ಪ್ರಭಾವಿತರಾದರು. ಈ ವೇಳೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ, ಎಸ್. ನಿಜಲಿಂಗಪ್ಪ, ಎಸ್.ಡಿ. ಗಣೇಶರಾವ್ ಮತ್ತು ನಿಟ್ಟೂರು ಶ್ರೀನಿವಾಸರಾವ್ ಮುಂತಾದ ವಿದ್ಯಾರ್ಥಿಗಳೆಲ್ಲಾ ಸೆಂಟ್ರಲ್ ಕಾಲೇಜಿನಲ್ಲೂ "ತಿಲಕ್ ದಿನಾಚರಣೆ" ಆಚರಿಸಿದರು. ಇದೇ ಸಂದರ್ಭದಲ್ಲಿ ಮೈಸೂರಿನಲ್ಲೂ ತಿಲಕ್ ದಿನಾಚರಣೆ ಆಚರಿಸಲಾಯಿತು. ಅರಮನೆ ಮುಂದೆ ಹೊರಟ ಭಾರಿ ಮೆರವಣಿಗೆ ಕಾಸ್ಮೋ ಪಾಲಿಟನ್ ಕ್ಲಬ್ ಬಳಿ ಸಭೆ ನಡೆಸಿತು. ಮೈಸೂರು ಸಂಸ್ಥಾನದಾದ್ಯಂತ 1921ರಲ್ಲಿ ತಿಲಕರ ದಿನಾಚರಣೆ ಆಚರಿಸಿದ ನಂತರ ಜನಜಾಗೃತಿ ಮೂಡಿದುದು ಮಾತ್ರವಲ್ಲ, ಕಾಂಗ್ರೆಸ್ ಸಂಸ್ಥೆಯು ಜನರನ್ನು ಆಕರ್ಷಿಸಿತು.

ಮೈಸೂರು ಶ್ರೇಷ್ಠ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನಿವೃತ್ತರಾದ ನಂತರ, ಕೆಲಕಾಲ ತಿಲಕರ ಸಂಗಡ ಕೆಲಸಮಾಡಿದ್ದ, ಎಸ್. ಎಸ್. ಸೆಟ್ಲೂರ್‌ರವರು ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದರು. ಅದೇ ಕಾಲಕ್ಕೆ ಎಸ್. ಎನ್. ಎಂ. ರಜ್ವಿಯವರು ಕಾರ್ಯದರ್ಶಿಗಳಾದರು. ತುಮಕೂರಿನಲ್ಲಿ ಕೆ. ರಂಗಯ್ಯಂಗಾರ್, ಮೈಸೂರಿನಲ್ಲಿ ಎಂ.ವೆಂಕಟಕೃಷ್ಣಯ್ಯ, ಕಡೂರಿನಲ್ಲಿ ಹೊಸಕೊಪ್ಪದ ಕೃಷ್ಣರಾಯ ಇವರುಗಳ ನೇತೃತ್ವದಲ್ಲಿ ಕಾಂಗ್ರೆಸ್ ಸಂಘಟನೆ ಮುಂತಾದ ಕೆಲಸಕಾರ್ಯಗಳು ಆರಂಭವಾದವು. ಮೈಸೂರಿನಲ್ಲಿ ಕಾಂಗ್ರೆಸ್ ಶಾಖೆಯನ್ನು ಆರಂಭಿಸಿದ ಎಂ. ವೆಂಕಟಕೃಷ್ಣಯ್ಯನವರು "ಮೈಸೂರು ಸಂಸ್ಥಾನದಲ್ಲಿ ದಿವಾನರ ಅಧಿಕಾರವನ್ನು ಮೊಟಕುಮಾಡಿ ಪ್ರಜಾಪ್ರತಿನಿಧಿ ಸಭೆಗೆ ಹೆಚ್ಚಿನ ಅಧಿಕಾರ ಬೇಕೆಂದು" ಕೇಳಿದರು.

ಪ್ರಿನ್ಸ್ ಆಫ್ ವೆಲ್ಸ್‌ರ ಭೇಟಿಯನ್ನು ರಾಷ್ಟ್ರದಾದ್ಯಂತ ವಿರೋಧಿಸಿದಾಗ, ಮೈಸೂರಿನಲ್ಲೂ 1922ರಲ್ಲಿ ಸಭೆ-ಮೆರವಣಿಗೆ ನಡೆಸಿದಾಗ, ಪೊಲೀಸರು ಅನೇಕ ಕಡೆ ಲಾಠಿಪ್ರಹಾರ ನಡೆಸಿದರು.

ಸೆಟ್ಲೂರ್ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ ಬೆಂಗಳೂರಿನಲ್ಲಿ ಸೇರಿತು. ಈ ಸಭೆಗೆ ಭಾರತದ ಅನೇಕ ನಾಯಕರು ಆಹ್ವಾನಿತರಾಗಿದ್ದರು. ಸಭೆಯಲ್ಲಿ ಮಧ್ಯಪಾನ ನಿಷೇಧ, ಹಿಂದೀ ಪ್ರಚಾರ, ಹಿಂದೂ-ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ ಮತ್ತು ಸ್ವದೇಶೀ ಭಾವನೆಯನ್ನು ಬೆಳಸಿಕೊಳ್ಳುವ ಬಗೆಗೆ ಹಾಗೂ ಸಂಸ್ಥಾನದ ಜನತೆಯಲ್ಲೂ, ರಾಷ್ಟ್ರೀಯ ಭಾವನೆ ಪ್ರಚೋದಿಸುವಂತ ಕಾರ್ಯಕ್ರಮಗಳ ಪ್ರಚಾರ ಕಾರ್ಯದಲ್ಲಿ ತೊಡಗಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಮತ್ತೆ ಕೆಲವರು ಸಂಸ್ಥಾನದಲ್ಲಿ ರಾಜಕೀಯ ಕಾರ್ಯಕ್ರಮ ಬಿಟ್ಟು ಕೇವಲ ರಚನಾತ್ಮಕ ಕಾರ್ಯಗಳಲ್ಲಿಯೇ ತೊಡಗಬೇಕೆಂಬ ರಾಷ್ಟ್ರೀಯ ಕಾಂಗ್ರೆಸ್‌ನ ಆಜ್ಞೆಯು ಸರಿಯಲ್ಲವೆಂದ ಕಾರಣ ಭಿನ್ನಾಭಿಪ್ರಾಯ ತಲೆದೋರಿದಂತಾಯಿತು.

1922ರಲ್ಲಿ ಗಾಂಧೀಜಿಯನ್ನು ಬಂಧಿಸಿ, ವಿಚಾರಣೆ ನಡೆಸಿ ಸರ್ಕಾರ ಜೈಲುಶಿಕ್ಷೆಯನ್ನು ವಿಧಿಸಿತು. ನಂತರದ ಪ್ರತಿತಿಂಗಳ 18ನೇ ದಿನಾಂಕವನ್ನು ಕರ್ನಾಟಕದಲೆಲ್ಲಾ 'ರಾಷ್ಟ್ರೀಯ ದಿನ'ವಾಗಿ ಆಚರಿಸಲಾಯಿತು. ಆದರೆ ಸಂಸ್ಥಾನದ ಸರ್ಕಾರ ಸಾರ್ವಜನಿಕ ಸಭೆ ಮೆರವಣಿಗೆಗಳನ್ನು ನಿಷೇದಿಸಿತು. ಆದರೆ ಖಾಸಗೀ ಗೃಹಗಳಲ್ಲೇ ಸಭೆ ನಡೆಸುವುದರ ಮೂಲಕ ಕಾಂಗ್ರೆಸ್ ನಾಯಕರು ಹೋರಾಟದ ನಿಷ್ಠೆಗೆ ಬದ್ಧರಾಗಿರುತ್ತಿದ್ದರು. ಕಾಂಗ್ರೆಸ್ ಖಾದಿ-ಗ್ರಾಮೋದ್ಯೋಗ ಚಳವಳಿಗೆ ಪ್ರೋತ್ಸಾಹ ನೀಡುವಂತೆ, ಸಂಸ್ಥಾನದ ಸರ್ಕಾರ ಕಾಂಗ್ರೆಸ್ಸಿಗರೊಡನೆ ಸಹಕರಿಸಿತು. ಅಂತೆಯೇ ಕಾಂಗ್ರೆಸ್‌ನ ರಚನಾತ್ಮಕ ನೀತಿಗೂ ಪ್ರೋತ್ಸಾಹ ನೀಡಿತು.

"ಮೈಸೂರು ರಾಷ್ಟ್ರೀಯ ಮಹಾಸಭಾ" ಎಂಬ ಒಂದು ಕೇಂದ್ರ ರಾಜಕೀಯ ಸಂಸ್ಥೆಯನ್ನು ಆರಂಭಿಸುವ ಉದ್ದೇಶದಿಂದ ಕಡೂರು (ಈಗಿನ ಚಿಕ್ಕಮಗಳೂರು) ಜಿಲ್ಲೆಯ ಕೊಪ್ಪ ತಾಲ್ಲೋಕಿನ ಹರಿಹರಪುರ್ ಮಠದಲ್ಲಿ 1926ನೇ ಜನವರಿ 30ರಂದು ರಾಜಕೀಯ ಸಮ್ಮೇಳನ ನಡೆಯಿತು. ಮೈಸೂರು ಸಂಸ್ಥಾನದಲ್ಲಿ ಸುಧಾರಣೆಗಳನ್ನು ತರುವುದು, ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವುದು, ಸ್ವಾತಂತ್ರ್ಯಕ್ಕಾಗಿ ಹೋರಾಡಲು ರಾಜಕೀಯ ಚಳುವಳಿ ಹೂಡುವುದು-ಇವುಗಳ ಪೂರೈಕೆಯೇ ಈ ಸಮ್ಮೇಳನದ

ಮೂಲ ಉದ್ದೇಶವೆಂದು ಹೊಸಕೊಪ್ಪದ ಕೃಷ್ಣರಾಯರು ಈ ಸಂದರ್ಭದಲ್ಲಿ ತಿಳಿಸಿದರು.

ಬೆಳಗಾಂ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ 1924

1924ರಲ್ಲಿ ಬೆಳಗಾಂನಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನ ಕರ್ನಾಟಕದಲ್ಲಿ ಪ್ರಥಮಬಾರಿಗೆ ಜರುಗಿತು. ಈ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿದ್ದರು. ಈ ಅಧಿವೇಶನ ಕರ್ನಾಟಕದ ಜನಮನದಲ್ಲಿ ಜಾಗೃತಿಯನ್ನುಂಟುಮಾಡಿತು. ಕಾಂಗ್ರೆಸ್ ನಾಯಕರಿಂದ ಸ್ಫೂರ್ತಿಗೊಂಡು, ಕರ್ನಾಟಕದ ಜನತೆ ಕಾಂಗ್ರೆಸ್ ಧ್ಯೇಯ ಧೋರಣೆಗಳನ್ನು ಈಡೇರಿಸಲು ಪ್ರತಿಜ್ಞೆ ಮಾಡಿತು. ಅನೇಕ ಯುವಕರು ಸೇವಾದಳಕ್ಕೆ ಸೇರಿ ಸೇವೆ ಸಲ್ಲಿಸಿದರು. ಬೆಳಗಾಂ ಅಧಿವೇಶನದ ನಂತರ ಮೈಸೂರು ಸಂಸ್ಥಾನದ ಅನೇಕ ಕಡೆ ಕಾಂಗ್ರೆಸ್ ಸಮಿತಿಗಳು ಹಾಗೂ ಸೇವಾದಳಗಳನ್ನು ಸ್ಥಾಪಿಸಲಾಯಿತು. ಕಾಂಗ್ರೆಸ್ ನಾಯಕರು ಸಂಸ್ಥಾನದಲ್ಲಿ ಸಂಚರಿಸಿ ರಚನಾತ್ಮಕ ಕಾರ್ಯಕ್ರಮಗಳ ಬೀಜ ಬಿತ್ತಿದರು.

ಖಾದಿ ಪ್ರಚಾರಕ್ಕೆ ದಿವಾನ್ ಮಿರ್ಜಾರವರು ಉತ್ತೇಜನವಿತ್ತರು. ನಂಜನಗೂಡು ತಾಲ್ಲೂಕು ಬದನವಾಳುವಿನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು 1926ರಲ್ಲಿ ಸರ್ಕಾರ ಆರಂಭಿಸಿತು. ಹರಿಜನ ಶಿಕ್ಷಣದ ಬಗ್ಗೆ, ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ರಾಮಲಿಂಗ ರೆಡ್ಡಿಯವರು ಪ್ರೋತ್ಸಾಹಕರ ಕೆಲಸಗಳನ್ನು ಮಾಡಿದರು. ಹೀಗೆ ಗಾಂಧೀಜಿಯವರ "ವಿಧಾಯಕ ಕಾರ್ಯಕ್ರಮಗಳಲ್ಲಿ ಕೆಲವನ್ನು ಮೈಸೂರು ಸಂಸ್ಥಾನ ಸರ್ಕಾರ ಜಾರಿಗೆ ತಂದ ಕಾರಣ ಮಹಾತ್ಮ ಗಾಂಧೀಜಿಯವರು ದಿವಾನ್ ಮಿರ್ಜಾ ಮತ್ತು ಅಂದಿನ ಮಹಾರಾಜರು ನಾಲ್ಮಡಿ ಕೃಷ್ಣರಾಜ ಒಡೆಯರ್‌ರವರ ವಿಚಾರದಲ್ಲಿ ಗೌರವವನ್ನು ಇಟ್ಟುಕೊಂಡಿದ್ದರು."

ದಿವಾನ್ ಮಿರ್ಜಾರವರು ಗಾಂಧೀಜಿಯವರ ಬಗೆಗೆ ಅಪಾರ ಗೌರವವನ್ನಿರಿಸಿಕೊಂಡಿದ್ದರೂ, ಸಂಸ್ಥಾನದಲ್ಲಿ ಕಾಂಗ್ರೆಸ್ ಚಳುವಳಿಯನ್ನು ಸದೆಬಡಿಯುವುದರ ಮೂಲಕ ಬ್ರಿಟಿಷರ ಮೆಚ್ಚಿಗೆಯನ್ನೂ ಪಡೆದುಕೊಂಡಿದ್ದರು. ಇದೂ

ಅಲ್ಲದೆ ಗಾಂಧೀಜಿಯವರನ್ನು ವಿಶ್ರಾಂತಿಗಾಗಿ ಸಂಸ್ಥಾನಕ್ಕೆ ಸರ್ಕಾರ ಆಹ್ವಾನಿಸಿದ್ದುದರಿಂದ ಒಂದು ಐತಿಹಾಸಿಕ ದಾಖಲೆಯಾಯಿತು.

1927ರಲ್ಲಿ ಗಾಂಧೀಜಿಯವರು ಮೈಸೂರಿಗೆ ಭೇಟಿಯಿತ್ತರು. ಇದೇ ಕಾಲಕ್ಕೆ ಮೈಸೂರಿನಲ್ಲಿ ತಗಡೂರು ರಾಮಚಂದ್ರರಾಯರು ಕಣಿಯರ (ಹರಿಜನರ) ಸತ್ಯಾಗ್ರಹ ಆರಂಭಿಸಿದರು. ಈ ಸತ್ಯಾಗ್ರಹ ಮೈಸೂರಿನ ಜನತೆಯನ್ನು ರಾಜಕೀಯದ ಕಡೆಗೆ ಆಕರ್ಷಿಸಿತು.

ರೈತರ ಕರನಿರಾಕರಣೆಯ ಚಳುವಳಿ

ಮೈಸೂರು ಸಂಸ್ಥಾನದ ಹಲವಾರು ಕಡೆಗಳಲ್ಲಿ ಮಳೆ ಬೀಳದೆ ಬೆಳೆ ಸಂಪೂರ್ಣವಾಗಿ ಹಾಳಾಗಿದ್ದಿತು. ಇದರಿಂದಾಗಿ ರೈತರು ಕಂದಾಯ ಕಟ್ಟುವ ಪರಿಸ್ಥಿತಿಯಲ್ಲಿರಲಿಲ್ಲ. ಆದರೆ ಸರ್ಕಾರ ರೈತರ ಬವಣೆ ಏನೆಂಬುದನ್ನು ತಿಳಿದು ಪರಿಹಾರ ಸೌಲಭ್ಯ ನೀಡುವ ಬದಲು, ರೈತರ ವಿರುದ್ಧ ದಬ್ಬಾಳಿಕೆ ಕ್ರಮ ಕೈಗೊಂಡಿತು. ಪರಿಣಾಮವಾಗಿ ಶಿವಮೊಗ್ಗದ ಶಿರಾಳಕೊಪ್ಪ ಮತ್ತು ಮಂಡ್ಯದ ರೈತರು ಕರನಿರಾಕರಣೆಯ ಚಳವಳಿ ಆರಂಭಿಸಿದರು.

ಶಿಕಾರಿಪುರದಲ್ಲಿ ಮರಿಸ್ವಾಮಿ ಹಿರೇಮಠ ಅವರ ನೇತೃತ್ವದಲ್ಲಿ ಕಂದಾಯ ವಿರೋಧಿ ಚಳುವಳಿ ಆರಂಭವಾಯಿತು. ಅಂತೆಯೇ ಮಂಡ್ಯದ ಇರ್ವಿನ್ ನಾಲಾ ರೈತರು ಹೆಚ್. ಕೆ. ವೀರಣ್ಣಗೌಡರ ನೇತೃತ್ವದಲ್ಲಿ ಕರನಿರಾಕರಣ ಚಳುವಳಿಯನ್ನು ಆರಂಭಿಸಿದರು.

ಕಂದಾಯ ಮನ್ನಾ ಆಗಬೇಕೆಂಬ ಚಳುವಳಿಯ ಅಂಗವಾಗಿ ರೈತ ಸಮೂಹ 60 ಮೈಲಿಗಳ ದೂರ ಮಂಡ್ಯದಿಂದ ಕಾಲುನಡಿಗೆಯಿಂದ ನಡೆದು ಬೆಂಗಳೂರಿಗೆ ಬಂದು ಬೃಹತ್ ಪ್ರದರ್ಶನ ನಡೆಸಿದರು. ಬೆಂಗಳೂರಿಗೆ ದೂರದ ಸ್ಥಳಗಳಿಂದ ನಡೆದು ಬಂದ ದೃಶ್ಯ ನಿಜಕ್ಕೂ ಜನಜಾಗೃತಿಯನ್ನುಂಟು ಮಾಡಿತು. ಹೀಗೆ ಮಿರ್ಜಾರವರು ದಿವಾನರಾಗಿದ್ದ ಕಾಲದಲ್ಲಿ ಮೈಸೂರಿನಲ್ಲಿ ರಾಜಕೀಯ ಜಾಗೃತಿ ಮೂಡಿಬಂದಿತು.

ಗಾಂಧೀಜಿ ಅಪೆಂಡಿಸೈಟಿಸ್ ಆಪರೇಷನ್ ನಂತರ, ಮಿರ್ಜಾರವರ ಆಹ್ವಾನದ ಮೇರೆಗೆ ನಂದಿ ಬೆಟ್ಟದಲ್ಲಿ ತಂಗಿದ್ದರು. ಅವರನ್ನು ಭೇಟಿಮಾಡಲು ದೇಶದ ನಾನಾಕಡೆಗಳಿಂದ ಪ್ರಮುಖ ಕಾಂಗ್ರೆಸ್ ನಾಯಕರು ಮೈಸೂರು

ಸಂಸ್ಥಾನಕ್ಕೆ ಭೇಟಿ ಇತ್ತಾಗಲೆಲ್ಲಾ, ಕಾಂಗ್ರೆಸ್ ಪ್ರಚಾರ ಸಂದೇಶವನ್ನು ಸಾರಿ ಹೋಗುತ್ತಿದ್ದರು. ಹೀಗೆ ಮೈಸೂರು ಸ್ವಾತಂತ್ರ್ಯಸಂಗ್ರಾಮ ಬಲಗೊಳ್ಳಲು ಗಾಂಧೀಜಿಯವರ ಭೇಟಿ ಮುಖ್ಯ ಕಾರಣವಾಯಿತು.

ಡಾ|| ನಾ. ಸು. ಹರ್ಡೀಕರ್ ಅವರು ಹಿಂದೂಸ್ಥಾನೀ ಸೇವಾದಳದ ಮುಖಾಂತರ ಯುವಕರನ್ನು ಸಂಘಟಿಸಿ ಕಾಂಗ್ರೆಸ್ ಧ್ಯೇಯ ಧೋರಣೆಗಳ ಪ್ರಚಾರ ನಡೆಸಿದರು. 1927ರಲ್ಲಿ ತುಮಕೂರಿನಲ್ಲಿ ಸೇವಾದಳದ ಶಿಬಿರ ಆರಂಭವಾಯಿತು.

ಲಾಹೋರಿನ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

1929ನೇ ವರ್ಷದ ಅಂತ್ಯ ಭಾಗದಲ್ಲಿ, ಲಾಹೋರಿನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಮಹತ್ವಪೂರ್ಣವಾದುದು. ಗಾಂಧೀಜಿಯವರ ಸಲಹೆಯಂತೆ ಜವಹರಲಾಲ್ ನೆಹರು ಅಧ್ಯಕ್ಷರಾಗಿ ಆಯ್ಕೆಯಾದರು. ಇದಕ್ಕೆ ಹಿಂದಿನ ವರ್ಷ ಜವಹರಲಾಲ್ ನೆಹರು ಅವರ ತಂದೆ ಮೋತಿಲಾಲ್ ನೆಹರು ಅವರೇ ಅಧ್ಯಕ್ಷರಾಗಿದ್ದುದರಿಂದ ತಂದೆಯಿಂದಲೇ ಮಗ ಅಧಿಕಾರ ವಹಿಸಿಕೊಂಡರು. ನೆಹರು ಅವರ ಅಧ್ಯಕ್ಷತೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಘೋಷಣೆಯಾಯಿತು. ಈ ಗುರಿ ಸಾಧನೆಯಾಗುವವರೆವಿಗೆ ಪ್ರತಿವರ್ಷ ಜನವರಿ 26ರಂದು "ಸ್ವಾತಂತ್ರ್ಯ ಪ್ರತಿಜ್ಞೆ" ಕೈಗೊಳ್ಳಬೇಕೆಂದೂ ತೀರ್ಮಾನಿಸಲಾಯಿತು. ಲಂಡನ್ನಿನಲ್ಲಿ ನಡೆಯುವ ದುಂಡುಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ ಭಾಗವಹಿಸದಿರಲೂ ಹಾಗೂ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಗಾಂಧೀಜಿಯವರ ನಾಯಕತ್ವದಲ್ಲಿ ಅಸಹಕಾರ ಚಳುವಳಿಯನ್ನು ಆರಂಬಿಸಲೂ ತೀರ್ಮಾನಿಸಿದರು. 1930ರ ಜನವರಿ 26ರಂದು "ಸ್ವಾತಂತ್ರ್ಯ ಪ್ರತಿಜ್ಞೆ"ಯನ್ನು ದೇಶದೆಲ್ಲೆಡೆ ಕೈಗೊಂಡರು. ಅಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ಜನವರಿ 26ರಂದು ಕಾಂಗ್ರೆಸ್ ಸದಸ್ಯರೆಲ್ಲರೂ "ಸ್ವಾತಂತ್ರ್ಯ ಪ್ರತಿಜ್ಞೆ"ಯನ್ನು ಕೈಗೊಂಡರು.

ಮೈಸೂರಿನ ಕಾಂಗ್ರೆಸ್ ನಾಯಕರು 1931ರಲ್ಲಿ ಕರಾಚಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ತೆರಳಿದ್ದರು. ಅಲ್ಲಿ ನಿರ್ಮಿಸಲಾಗಿದ್ದ ಉತ್ತಮ ಧ್ವಜಸ್ತಂಭದಿಂದ ಆಕರ್ಶಿತರಾಗಿ, ಬೆಂಗಳೂರಿನಲ್ಲಿಯೂ ಅದೇ

ರೀತಿಯ ಧ್ವಜ ಸ್ತಂಭವನ್ನು ಬೆಂಗಳೂರು ನಗರದ ರೈಲ್ವೆ ನಿಲ್ದಾಣದ ಎದುರು ಸ್ಥಾಪಿಸಿದರು. 1931ರ ಜೂನ್ 2 ರಂದು ಜವಹರಲಾಲ್ ನೆಹರೂರವರು ಇಲ್ಲಿ ತ್ರಿವರ್ಣ ಧ್ವಜವನ್ನು ಪ್ರಥಮ ಬಾರಿಗೆ ಹಾರಿಸಿದರು. ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಅದೊಂದು ಮರೆಯಲಾಗದ ದಿನ. ಏತಕ್ಕೆಂದರೆ ತ್ರಿವರ್ಣ ಧ್ವಜಾರೋಹಣವು ಅಧಿಕಾರ ವರ್ಗವು ತಿಳಿದಂತೆ "ನೂತನ ಅಧಿಕಾರ ಮತ್ತು ಬಲದ ಸಂಕೇತ"ವೆಂದು ಅವಿದ್ಯಾವಂತ ಜನಸಾಮಾನ್ಯರೆಲ್ಲರೂ ತಿಳಿದರು.

ಗಣಪತಿ ಗಲಾಟೆ

ಹೀಗೆ ಕಾಂಗ್ರೆಸ್ ಸಂಘಟನೆಯಾಗುತ್ತಿದ್ದ ಕಾಲದಲ್ಲಿ ಜನತೆಯ ಐಕ್ಯತೆಯನ್ನು ಕದಡಲು ಜಾತೀಯ ವಿಷಜಂತು ಸಮಯ ಕಾಯುತ್ತಲಿತ್ತು. ಪರಿಣಾಮವಾಗಿ ಬೆಂಗಳೂರಿನಲ್ಲಿ ಗಣಪತಿ ಗಲಾಟೆ ಹಿಂದೂ-ಮುಸ್ಲಿಂ ಮೈತ್ರಿಗೆ ಭಂಗ ತಂದಿತು. ಹಿಂದುಳಿದ ವರ್ಗಗಳ ನಾಯಕರಲ್ಲೊಬ್ಬರಾಗಿದ್ದ ಅಬ್ಬಾಸ್ ಖಾನರ ವಿರುದ್ಧ ಚಳುವಳಿ ನಡದೇಹೋಯಿತು. ಅಂತೆಯೇ ಮಿರ್ಜಾರವರೂ ಜಾತಿ ಪಕ್ಷಪಾತಿಯೆಂಬ ಆರೋಪಕ್ಕೊಳಗಾಗಿ, ಅವರ ವಿರುದ್ಧ ಚಳುವಳಿ ನಡೆಯಿತು. ಆದರೆ ಅಂದಿನ ಮಹಾರಾಜ ನಾಲ್ಮಡಿ ಕೃಷ್ಣರಾಜ ಒಡೆಯರವರಿಗೆ ಮಿರ್ಜಾರವರ ಮೇಲೆ ತುಂಬಾ ವಿಶ್ವಾಸವಿದ್ದುದರಿಂದ ಮಿರ್ಜಾರವರು ದಿವಾನರಾಗಿಯೇ ಮುಂದುವರಿದರು.

ಗಣಪತಿ ಗಲಾಟೆಗೆ ಸಂಬಂಧಿಸಿದಂತೆ ವಿಚಾರಣೆಯನ್ನು ಭಾರತ ಸರ್ಕಾರ ನಡೆಸಬೇಕೆಂದು ಜನತೆ ಕೂಗೆಬ್ಬಿಸಿತು. ಭಾರತ ಸರ್ಕಾರ ತನಿಖೆ ನಡೆಸುವ ಸೂಚನೆಯೂ ಕಂಡು ಬಂದಿದ್ದಿತು. ಆದರೆ ಮಿರ್ಜಾರವರು ಇದಕ್ಕೆ ಮುಂಚೆಯೇ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ 6 ಜನರ ವಿಚಾರಣಾ ಸಮಿತಿಯನ್ನು 1929ರ ಆಗಸ್ಟ್‌ನಲ್ಲಿ ನೇಮಿಸಿದರು.

ಡ್ಯಾಲಿ ಮೆಮೊರಿಯಲ್ ಹಾಲಿನಲ್ಲಿ (ಈಗ ಮಿಥಿಕ್ ಸೊಸೈಟಿ ಇರುವ ಸ್ಥಳ) ಸೆಪ್ಟೆಂಬರ್ 12 ರಿಂದ 30 ದಿನಗಳ ಕಾಲ ವಿಚಾರಣೆ ನಡೆದ 156 ಸಾಕ್ಷಿಗಳನ್ನು ವಿಚಾರಿಸಿತು. ಈ ಗಲಭೆ ಸಂಬಂಧದಲ್ಲಿ ಯಾರಾದರೂ ಸತ್ತ ಬಗೆಗೆ ಯಾರೂ ಸಾಕ್ಷಿ ನೀಡಲಿಲ್ಲ. ನಂತರ ಸಮಿತಿಯು ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿತು.

ಆದರಲ್ಲಿ ಸಂಸ್ಥಾನಕ್ಕೆ ಜವಾಬ್ದಾರಿ ಸರ್ಕಾರ ನೀಡಬೇಕೆಂದೂ ಸಲಹೆ ಮಾಡಿತು. ಗಣಪತಿ ಗಲಾಟೆ ಜಾತೀಯ ಗಲಭೆಯಾಗಿ ಸಮಾಜವನ್ನು ಛಿದ್ರಗೊಳಿಸಲು ಕಾರಣವಾಗಿದ್ದು, ಸಮಿತಿ ವರದಿ ಸಲ್ಲಿಸಿದ ನಂತರ ಸತ್ಯಾಸತ್ಯತೆಯನ್ನು ಜನರು ಅರಿತು ಸ್ವಾತಂತ್ರ ಚಳುವಳಿ ಬಗೆಗೆ ಜನತೆ ತನ್ನ ಎಂದಿನ ಹುರುಪನ್ನೇ ಮತ್ತೆ ತೋರಿಸಲು ಸ್ವಲ್ಪ ಸಮಯ ಬೇಕಾಯಿತು.

ಸಂಯುಕ್ತ ಪ್ರಜಾ ಪಕ್ಷ

1927ರಲ್ಲಿ ಸಂಸ್ಥಾನದ ಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ಚುನಾವಣೆಗಳು ನಡೆದವು. ಚುನಾವಣೆಗಳಲ್ಲಿ ಯುವಕ ಸದಸ್ಯರೇ ಹೆಚ್ಚಾಗಿ ಆರಿಸಿ ಬಂದರು. ಪ್ರಜಾ ಪ್ರತಿನಿಧಿಗಳಿಗೆ ಅಧಿಕಾರ ವರ್ಗಾವಣೆ ಆಗಬೇಕೆಂಬುದೇ ಅವರ ಬೇಡಿಕೆ ಆಗಿದ್ದಿತು. ಅವರು ಸರ್ಕಾರಿ ನೌಕರಿಗೆ ಹಾತೊರೆಯಲಿಲ್ಲ. ಅವರು ಸರ್ಕಾರದ ನೀತಿಯನ್ನು ಕಟುವಾಗಿ ಟೀಕಿಸುತ್ತಿದ್ದರೇ ಹೊರತು ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಸಂಪ್ರದಾಯಕ್ಕೆ ಹೊರತಾಗಿದ್ದರು. ಈ ಹೊಸ ಭಾವನೆಯನ್ನು ಹೊತ್ತ ಚುನಾಯಿತ ಪ್ರತಿನಿಧಿಗಳ ಹೊಸ ಭಾವನೆಗೆ ಸರಕಾರ ಹೊಂದಿಕೊಳ್ಳಬೇಕಾಗಿತ್ತು.

ಚುನಾವಣಾ ನಂತರದ ಪ್ರಥಮ ಅಧಿವೇಶನದಲ್ಲೇ ಸರ್ಕಾರದ ನಡವಳಿಕೆಯ ಮೇಲೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಜನತೆಯ ಹಕ್ಕಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಇವರು ಪ್ರಸ್ತಾಪಿಸಿದರು. ಪರಿಣಾಮ ವಾಗಿ ಪ್ರಾರಂಭದಿಂದ ಸಮಾಜದಲ್ಲಿ ಬೆಳೆದುಬಂದಿದ್ದ "ಮುಂದುವರಿದವ-ಹಿಂದುಳಿದವ" ಎಂಬ ಭಿನ್ನಾಭಿಪ್ರಾಯದ ಭಾವನೆ ಶಮನವಾಗಲು ಪ್ರಾರಂಭ ವಾಯಿತು. ಹೀಗೆ ಚುನಾಯಿತ ಪ್ರತಿನಿಧಿಗಳು ಐಕ್ಯತೆಯಿಂದ ಕೆಲಸ ಮಾಡಲು ಉಪಕ್ರಮಿಸಿದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಡಿ.ಎಸ್. ಮಲ್ಲಪ್ಪನವರು ಹಕ್ಕುಬಾಧ್ಯತೆ ಗಳಿಗಾಗಿ ಹೋರಾಡುತ್ತಿದ್ದರು. 1928ರ ಜೂನ್ ಮಾಹೆಯಲ್ಲಿ ನಡೆದ ಅಧಿವೇಶನದಲ್ಲಿ ಸರ್ಕಾರ ಇವರ ಉಪ ಪ್ರಶ್ನೆಗಳಿಗೆ ಉತ್ತರ ನೀಡಲು ನಿರಾಕರಿಸಿತು. ಸರ್ಕಾರದಿಂದ ಉತ್ತರ ಪಡೆಯುವುದು ಸದಸ್ಯರ ಹಕ್ಕೆಂದು ಮಲ್ಲಪ್ಪನವರು ವಾದಿಸಿದರು. ಸರ್ಕಾರ ಅದಕ್ಕೆ ಒಪ್ಪದ ಕಾರಣ

ಡಿ.ಎಸ್. ಮಲ್ಲಪ್ಪನವರು ಮತ್ತು ಅವರ ಬೆಂಬಲಿಗರು ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಪ್ರಪ್ರಥಮ ಬಾರಿ ಸಭಾ ತ್ಯಾಗ ಮಾಡಿದರು. ಸಂಸ್ಥಾನದ ರಾಜಕೀಯದ ಬೆಳವಣಿಗೆಗೆ ಇದೊಂದು ಐತಿಹಾಸಿಕ ಘಟನೆಯಾಗಿ ಪರಿಣಮಿಸಿತು.

ಪ್ರಜಾಪಕ್ಷ

ಡಿ.ಎಸ್. ಮಲ್ಲಪ್ಪ ಮತ್ತು ಅವರ ಸ್ನೇಹಿತರು ಹಾಕಿದ ವಿಶಾಲ ತಳಹದಿಯಮೇಲೆ 'ಪ್ರಜಾಪಕ್ಷ' ಎಂಬ ಹೊಸ ಪಕ್ಷ ಉದಯವಾಯಿತು. 1930 ರಲ್ಲಿ ನಡೆದ ಚುನಾವಣೆಗಳ ನಂತರ ಪ್ರಜಾಮಿತ್ರಮಂಡಲಿಯ ಸದಸ್ಯರಲ್ಲಿ ಕೆಲವರು ಹೊಸ ಹುರುಪನ್ನು ತೋರುವ ಬಿಕ್ಕಟ್ಟಾದ ಕಾರ್ಯಕ್ರಮವನ್ನು ಗುರಿಯಾಗಿಟ್ಟುಕೊಂಡು 'ಪ್ರಜಾಪಕ್ಷ'ವೆಂಬ ಮತ್ತೊಂದು ಹೊಸ ಸಂಸ್ಥೆಯನ್ನು ಕವಲೊಡಿಸಿದರು. ಈ ಪಕ್ಷದ ರಾಜಕೀಯ ಧೋರಣೆ ಬದಲಾಯಿತು, ಹಾಗೂ ಸದಸ್ಯತ್ವ ವಿಸ್ತರಿಸಲ್ಪಟ್ಟಿತು. ಜನತೆಯ ಭಾವನೆಗೆ ಪೂರಕವಾದ ಧೋರಣೆ ತಾಳಿದ್ದರಿಂದ ಈ ಪ್ರಜಾಪಕ್ಷ ಪ್ರಬಲವಾಯಿತು. ಪ್ರಾರಂಭದಲ್ಲಿ ಪ್ರಜಾಪಕ್ಷದ ಕಾರ್ಯಕ್ರಮಗಳು ಸರ್ಕಾರಕ್ಕೆ ಮನದಟ್ಟಾಗಿ, ಈ ಪಕ್ಷದ ಕಾರ್ಯಕ್ರಮಗಳ ಬಗೆಗೆ ಸರಕಾರ ಸಹಾನುಭೂತಿ ತೋರಿತು. ಆದರೆ ಕಾಲಕ್ರಮೇಣ ಸರ್ಕಾರ ತನ್ನ ನೀತಿಯನ್ನು ಬದಲಾಯಿಸಿತು. ಜನ ಸಾಮಾನ್ಯರ ಹಿತರಕ್ಷಣೆಗೆ ಸಂಬಂಧಿಸಿದ ವಿಷಯಗಳಿಗೆ ಗಮನ ಕೊಡದೆ ಕೇವಲ ಪ್ರದರ್ಶನಾತ್ಮಕ ವಿಷಯಗಳಿಗೆ ಸರಕಾರ ಹೆಚ್ಚು ಗಮನ ಕೊಡುತ್ತಿತ್ತು. ಜನತೆ ಇದನ್ನು ಎಚ್ಚರಿಕೆಯಿಂದ ಗಮನಿಸುತ್ತಿತ್ತು.

ಬಿ.ಎನ್. ಗುಪ್ತಾರವರು 'ಪ್ರಜಾ ಪಕ್ಷದ'ದ ಧ್ಯೇಯ ಧೋರಣೆಗಳ ಪ್ರಚಾರಕ್ಕೆಂದೇ 'ಪ್ರಜಾಮತ" ಪತ್ರಿಕೆ ಆರಂಭಿಸಲು ಸರಕಾರದ ಅನುಮತಿ ಕೇಳಿದರು. ಆದರೆ ಸರಕಾರ ಅನುಮತಿ ನೀಡದ ಕಾರಣ 1929ರ ಆಗಸ್ಟ್ 15ರಂದು ಮದರಾಸಿನಿಂದ ಪ್ರಜಾಮತದ ಪ್ರಪ್ರಥಮ ಸಂಚಿಕೆಯನ್ನು ಹೊರ ತಂದರು. ಇದರ ಜೊತೆಗೆ 'ಜನವಾಣಿ' ದಿನಪತ್ರಿಕೆಯೂ ಮದರಾಸಿನಿಂದ ಪ್ರಕಟವಾಯಿತು. ಈ ಎರಡು ಪತ್ರಿಕೆಗಳ ಧ್ಯೇಯ ಧೋರಣೆಗಳಿಗೆ ಮೈಸೂರಿನ ಜನತೆ ಹಾಗೂ ಪ್ರಜಾಪಕ್ಷಕ್ಕೆ ಸೇರಿದ ಜಿಲ್ಲಾ ಬೋರ್ಡುಗಳ ಅಧ್ಯಕ್ಷರುಗಳು ಉತ್ತೇಜನ ನೀಡಿದರು.

1930-1935ರ ಕಾಲಾವಧಿಯಲ್ಲಿ ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರ ಕುಸಿದಾಗ, ಇತರೇ ಪ್ರಾಂತ್ಯಗಳು ಜನರಿಗೆ ಪರಿಹಾರ ದೊರಕಿಸಿದಂತೆ, ಮೈಸೂರು ಸಂಸ್ಥಾನ ಸರಕಾರ ಯಾವುದೇ ಪರಿಹಾರವನ್ನು ದೊರಕಿಸಿ ಕೊಡಲಿಲ್ಲ. ಕಂದಾಯದ ಭಾರವನ್ನು ಹೊರಲಾರದ ರೈತರು ಕುಪಿತರಾದರು. ಜನತೆಯ ಆಶೋತ್ತರಕ್ಕೆ ಹಾಲೆರೆಯದೆ ಸರಕಾರ ವಿರೋಧವಾಗಿ ವರ್ತಿಸಿದ ಕಾರಣ ಜನತೆ ಸರಕಾರದ ಬಗೆಗೆ ಗೌರವಾದರಗಳನ್ನು ಕಳೆದುಕೊಂಡಿತು.

1930-32 ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ (Round Table Conference) ಸಮ್ಮೇಳನದಲ್ಲಿ ಭಾಗವಹಿಸಿದ್ದ, ಮಿರ್ಜಾರವರು ಸಂಸ್ಥಾನಕ್ಕೆ ಹಿಂದಿರುಗಿದರು. ಅವರು ಅಲ್ಲಿಂದ ಬ್ರಿಟಿಷ್ ಸರಕಾರದಿಂದ ಎರವಲಾಗಿ ತಂದಿದ್ದ ಅಭಿಪ್ರಾಯವನ್ನು ತಿಳಿಸಿದರು. ಅದೆಂದರೆ "ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾಪ್ರಭುತ್ವ ನಾಶವಾಗುತ್ತಿರುವ ಕಾಲದಲ್ಲಿ ಮೈಸೂರು ಜನತೆಯ ರಾಜಕೀಯ ಸುಧಾರಣೆಗಳ ಕೇಳಿಕೆ ಆಶ್ಚರ್ಯವನ್ನುಂಟು ಮಾಡುತ್ತಿದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸುವುದರ ಮೂಲಕ ಜನತೆಯ ಬೇಡಿಕೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ಸರಕಾರ ರಾಜಕೀಯ ಪಕ್ಷಗಳ ಬಗ್ಗೆ ವಿರೋಧ ನೀತಿ ಅನುಸರಿಸಲಾರಂಭಿಸಿತು. ಸಾರ್ವಜನಿಕ ಸೇವಾಕಾಂಕ್ಷೆಯನ್ನು ಹೊಂದಿದ್ದ ರಾಜಕೀಯ ಪಕ್ಷಗಳು ಸರಕಾರದ ಈ ತೆರನಾದ ಬಗೆಗೆ ಅತೃಪ್ತಿ ಹೊಂದಿದವು. ಸರಕಾರದ ಯಾವುದೇ ಚಿತಾವಣೆಗೆ ಕಿವಿಗೊಡದೆ ಸರಕಾರದ ಬಾಲ ಬಡುಕ ನೀತಿಯಿಂದ ಚುನಾಯಿತ ಸದಸ್ಯರು ದೂರ ಸರಿದು ಜನತೆಯ ಹಕ್ಕು ಬಾಧ್ಯತೆಗಳ ಬೇಡಿಕೆಗಳನ್ನು ಶಾಸನಸಭೆಗಳಲ್ಲಿ ಧೈರ್ಯವಾಗಿ ಎತ್ತುತ್ತಿದ್ದರು. 1934ರ ಸುಮಾರಿನಲ್ಲಿ ಪ್ರಜಾ ಮಿತ್ರಮಂಡಲಿ ಮತ್ತು ಪ್ರಜಾ ಪಕ್ಷಗಳ ಭಿನ್ನತೆಯು ಉಭಯತ್ರರಿಗೂ ಲಾಭದಾಯಕವಾಗದೆ, ಮೂರನೆಯವರಿಗೆ ಫಲಕಾರಿಯಾದುದನ್ನು ತಿಳಿದು, ಅವೆರಡೂ ಒಂದುಗೂಡಿ 'ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆ' ಎಂಬ ಹೊಸ ಹೆಸರಿನಲ್ಲಿ ಪುನಃ ಒಂದಾದವು. ಜವಾಬ್ದಾರಿ ಸರಕಾರದ ಸ್ಥಾಪನೆ, ಆಡಳಿತದಲ್ಲಿ ಎಲ್ಲ ವರ್ಗಗಳಿಗೂ ಪ್ರಾತಿನಿಧ್ಯ ಕೊಡುವುದು, ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕ್ರಮ ಜಾರಿಗೆ ತರುವುದು, ಇವೇ ಮೊದಲಾದ ಉದ್ದೇಶಗಳಿಂದ ಕೂಡಿದ ಈ ಪ್ರಜಾ ಸಂಯುಕ್ತ

ಸಂಸ್ಥೆಯ ಆಶ್ರಯದಲ್ಲಿ, ಮೊದಲನೆಯ ರಾಜಕೀಯ ಅಧಿವೇಶನವು 1935ನೇ ಜನವರಿಯಲ್ಲಿ ಹಾಸನದಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಅಂಗೀಕಾರವಾದ ಸೂಚನೆಗಳ ಪೈಕಿ ಜವಾಬ್ದಾರಿ ಸರಕಾರದ ಸ್ಥಾಪನೆ, ಭಾರತ ದೇಶದ ರಾಜಕೀಯ ಸುಧಾರಣೆಗಳ ಸಂಬಂಧವಾಗಿ ಬ್ರಿಟಿಷ್ ಜಾಯಿಂಟ್ ಪಾರ್ಲಿಮೆಂಟರಿ ಸಮಿತಿಯ ವರದಿಯ ಖಂಡನೆಯ ವಿಷಯಗಳು ಮುಖ್ಯವಾದುವು.

ಈ ಹೊಸ "ಸಂಯುಕ್ತ ಪ್ರಜಾ ಪಕ್ಷ"ದಲ್ಲಿ ಕೆ. ಚೆಂಗಲರಾಯರೆಡ್ಡೀ ವಿ. ವೆಂಕಟಪ್ಪ, ಹೆಚ್.ಸಿ. ದಾಸಪ್ಪ, ಹೆಚ್. ಸಿದ್ದಯ್ಯ ಮತ್ತು ಹೆಚ್.ಬಿ. ಗುಂಡಪ್ಪಗೌಡರು ಇದ್ದು ಎಲ್ಲಾ ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳ ಬೆಂಬಲವೂ ಈ ಪಕ್ಷಕ್ಕಿದ್ದುದರಿಂದ ಪಕ್ಷದ ಬೆಳವಣಿಗೆಗೆ ಸಹಾಯಕವಾಯಿತು.

ಮೈಸೂರು ಸಂಸ್ಥಾನದ ಕಾಂಗ್ರೆಸ್ ಮತ್ತು ಚುನಾವಣೆಗಳು

ಕರನಿರಾಕರಣ ಚಳುವಳಿ

ಆಂಗ್ಲ ಭಾರತದ ಭಾಗವಾಗಿದ್ದ ಕರ್ನಾಟಕದಲ್ಲಿ ಬಹಳ ದೊಡ್ಡ ಆಂದೋಲನವೇ ಆಯಿತು. ಸಿರಸಿ, ಸಿದ್ಧಾಪುರ, ಅಂಕೋಲಗಳ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧೀರಪಾತ್ರ ವಹಿಸಿದರು. ಬ್ರಿಟಿಷ್ ಅಡಳಿತದ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮ ಶಾಂತಿಯುತ ಸಂಗ್ರಾಮವೆ, ಆಗಿದ್ದಿತು. ಆದ್ದರಿಂದ ಸರಕಾರಕ್ಕೆ ತೆರಬೇಕಾಗಿದ್ದ ತೆರಿಗೆಯನ್ನು ಕೊಡಲು ನಿರಾಕರಿಸಿ 'ಕರನಿರಾಕರಣ ಚಳುವಳಿ'ಯನ್ನು ಜನರು ಆರಂಭಿಸಿದರು. ಇವರ ಪರಿಣಾಮವಾಗಿ ಸರ್ಕಾರ ಆಸ್ತಿ-ಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಿಸುತ್ತಿತ್ತು. ವಂಶಪಾರಂಪರ್ಯವಾಗಿ ಗಳಿಸಿಟ್ಟ ಆಸ್ತಿಯನ್ನು ಕಳೆದುಕೊಳ್ಳಬೇಕಾಯಿತು.

ತಲೆ ತಲಾಂತರದಿಂದ ಹಿರಿಯರು ಗಳಿಸಿಟ್ಟ ಆಸ್ತಿಯನ್ನು ಕಳೆದುಕೊಳ್ಳಲು ಯಾರೂ ತಯಾರಿರುವುದಿಲ್ಲ. ಆದರೆ ಬ್ರಿಟಿಷ್ ಆಡಳಿತದ ವಿರುದ್ಧ ಹೂಡಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಭಾರತೀಯರು, ದೇಶಭಕ್ತಿಯ ಸಲುವಾಗಿ ಆಸ್ತಿ - ಪಾಸ್ತಿಯನ್ನೂ ಕಳೆದುಕೊಳ್ಳಲು ಹಿಂಜರಿಯಲಿಲ್ಲ. ಆಸ್ತಿಯನ್ನು ಕಳೆದುಕೊಳ್ಳುವುದು ತ್ಯಾಗದ ಪರಮಾವಧಿ. ಅಂತಹ

ತ್ಯಾಗಕ್ಕೂ ಕರ್ನಾಟಕ ಪ್ರದೇಶದ ಜನತೆ ಸಜ್ಜಾಗಿಯೇ ನಿಂತಿತು. ಅಂತೆಯೇ ಅನೇಕರು ಆಸ್ತಿ – ಪಾಸ್ತಿ ಕಳೆದುಕೊಂಡರು.

ಮೈಸೂರು ಸಂಸ್ಥಾನದಲ್ಲಿ ಆಳರಸರ ಆಡಳಿತವಿದ್ದುದರಿಂದ, ಕರ್ನಾಟಕದಲ್ಲಿ ನಡೆದಂತೆ ಸತ್ಯಾಗ್ರಹದ ಬಗೆಗಿನ ನೇರ ಕಾರ್ಯಕ್ರಮ ಸಂಸ್ಥಾನದಲ್ಲಿ ನಡೆಯಲಿಲ್ಲ. ಆದರೆ ಕರ್ನಾಟಕ ಪ್ರದೇಶದಲ್ಲಿ ನಡೆದ ಸತ್ಯಾಗ್ರಹ ಚಳುವಳಿ ಶಿಬಿರಗಳಲ್ಲಿ ಮೈಸೂರಿನ ನೂರಾರು ಮಂದಿ ಭಾಗವಹಿಸಿದ್ದರು. ಕರ್ನಾಟಕ ಪ್ರದೇಶದ ಸತ್ಯಾಗ್ರಹ ಚಳುವಳಿಗೆ ಜನ – ಧನ ಬೆಂಬಲ ನೀಡಲು ಮೈಸೂರು ಸಂಸ್ಥಾನದಲ್ಲಿ ಗುಪ್ತ ಸಮಿತಿಯೊಂದು ರಚನೆಯಾಯಿತು. ಇದರಲ್ಲಿ ಸರದಾರ್ ವೆಂಕಟರಾಮಯ್ಯನವರು ಪ್ರಮುಖ ಪಾತ್ರವಹಿಸಿದ್ದರು.

ಈ ವೇಳೆಗೆ ಭಾರತದಲ್ಲಿನ ಆಂಗ್ಲ ಸರ್ಕಾರ ತನ್ನ ರೆಸಿಡೆಂಟರ ಮೂಲಕ ಮೈಸೂರು ಸರ್ಕಾರಕ್ಕೆ ನಿರ್ದೇಶನವೊಂದನ್ನು ನೀಡಿ "ಮೈಸೂರಿನಿಂದ ಕರ್ನಾಟಕ ಪ್ರದೇಶದ ಚಳುವಳಿಯಲ್ಲಿ ಭಾಗವಹಿಸುವ ಜನತೆಯನ್ನು ತಡೆಗಟ್ಟಲು ಕೋರಿತು." 1931ರ ಮಾರ್ಚಿ 5ರಲ್ಲಿ ಗಾಂಧಿ – ಇರ್ವಿನ್ ಒಪ್ಪಂದವಾಯಿತು. ಪರಿಣಾಮವಾಗಿ ಬಂಧಿತ ಸತ್ಯಾಗ್ರಹಿಗಳೆಲ್ಲರ ಬಿಡುಗಡೆಯಾಯಿತು. ಆಗ ಕರ್ನಾಟಕ ಪ್ರದೇಶದಲ್ಲಿ ಬಂಧಿತರಾಗಿದ್ದ ಮೈಸೂರಿನ ಜನರೂ ಬಿಡುಗಡೆಯಾಗಿ ಮೈಸೂರಿಗೆ ಮರಳಿದರು. ಸತ್ಯಾಗ್ರಹದ ಸ್ವಂತ ಅನುಭವವನ್ನು ಮನಸಾರೆ ಕಂಡು ಬಂದಿದ್ದ ಮೈಸೂರಿನವರಿಂದ ಒಂದು ಹೊಸ ವಾತಾವರಣ ಸೃಷ್ಟಿಯಾಯಿತು. ಜನತೆಯ ಆಶೆಗೆ ಇದರಿಂದ ಉತ್ಸಾಹವೇರಿತು.

ಭಾರತೀಯರ ಸ್ವಾತಂತ್ರ್ಯ ಸಂಗ್ರಾಮವನ್ನು ತಡೆಗಟ್ಟುವ ಏಕೈಕ ಗುರಿ ಅಂದಿನ ಬ್ರಿಟಿಷ್ ಸರ್ಕಾರದ ಧೋರಣೆಯಾಗಿತ್ತು. ಪರಿಣಾಮವಾಗಿ ಜನತೆಯ ಆಶೋತ್ತರಗಳೇನೆಂಬುದನ್ನು ಮರೆತ ಈ ಪರಕೀಯ ಪ್ರಭುತ್ವ ಪರಕಾಷ್ಠತೆಯ ಪರಿಧಿಯನ್ನು ಮುಟ್ಟಿತ್ತು.

ರಾಷ್ಟ್ರೀಯ ಕಾಂಗ್ರೆಸ್

ಭಾರತವು ಪರಕೀಯರ ಕೈಯಲ್ಲಿ ದುರವಸ್ಥೆಯ ತುದಿಮುಟ್ಟಿತ್ತು. ಜನತೆ ಇದರ ವಿರುದ್ಧ ನಿರಂತರ ಹೋರಾಟಕ್ಕೆ ಸಜ್ಜಾಯಿತು. ದೇಶೋದ್ಧಾರದ

ಪ್ರೇರಕ ಶಕ್ತಿ ಜನಮನದಲ್ಲಿ ಮಿಡಿಯಿತು. ಆ ಭಾವನೆಯು ಮೂರ್ತಿ ಸ್ವರೂಪವಾಗಿ ರಾಷ್ಟ್ರೀಯ ಕಾಂಗ್ರೆಸ್ ಉದಯವಾಯಿತು.

'ಸ್ವಾತಂತ್ರ್ಯವು ನಮ್ಮ ಹಕ್ಕು'. ಬ್ರಿಟಿಷರಿಂದ ಅದು ಸುಲಭವಾಗಿ ದಕ್ಕತಕ್ಕಂತಹುದಲ್ಲ ಎಂಬ ಭಾವನೆ ರಾಷ್ಟ್ರ ಮುಖಂಡರಲ್ಲಿ ಸಿದ್ಧಾಂತವಾಗಿ ಬೆಳೆಯಿತು. ಗಾಂಧೀಜಿಯವರು ಚಳವಳಿಯ ಮುಖಂಡತ್ವವನ್ನು ವಹಿಸಿಕೊಂಡರು. ಸ್ವಾತಂತ್ರ್ಯ ಗಳಿಕೆಗೆ ಅವರ "ಸತ್ಯಾಗ್ರಹ" ಪ್ರತಿಪಾದನಾ ಅಸ್ತ್ರವಾಯಿತು. ಈ ಸತ್ಯಾಗ್ರಹ ಸಮರದ ಬಿಸಿತಟ್ಟಿ ಆಂಗ್ಲ ಸರ್ಕಾರ ಸತ್ಯಾಗ್ರಹಕ್ಕೆ ತಲೆಬಾಗಿತು. ಆದರೂ ಭಾರತೀಯರಿಗೆ ಪೂರ್ಣ ಸ್ವರಾಜ್ಯವನ್ನು ನೀಡಲಿಲ್ಲ. ಆದರೆ 1937 ರಲ್ಲಿ ಆಂಗ್ಲ ಭಾರತದಲ್ಲಿ 1935 ರ ಶಾಸನದಂತೆ ಪ್ರಾಂತೀಯ ಸ್ವರಾಜ್ಯ ಪದ್ಧತಿ (Provincial autonomy) ಯನ್ನು ಜಾರಿಗೆ ತಂದಿತು. ಭಾರತದ ಎಂಟು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ವಹಿಸಿಕೊಂಡು ಮಂತ್ರಿಮಂಡಳ ರಚಿಸಿತು.

ಆಂಗ್ಲ ಭಾರತವಲ್ಲಿ ಜಾರಿಗೆ ಬಂದ ಪ್ರಾಂತೀಯ ಸ್ವರಾಜ್ಯ ಪದ್ಧತಿಯ ಪರಿಣಾಮವಾಗಿ, ದೇಶೀಯ ರಾಜರ ಆಡಳಿತದಲ್ಲಿನ ಸಣ್ಣ ಪುಟ್ಟ ರಾಜ್ಯಗಳಲ್ಲೂ, ಜವಾಬ್ದಾರೀ ಸರ್ಕಾರ ಕೇಳಿಕೆಗೆ ಅಂಕುರಾರ್ಪಣೆ ಹಾಕಿದಂತಾಯಿತು. ಈ ಕೇಳಿಕೆ ದೇಶಾದ್ಯಂತ ವ್ಯಾಪಿಸಿತು. ಇದಕ್ಕೆ ಅಖಿಲ ಭಾರತ ಕಾಂಗ್ರೆಸ್‌ನ ಪೂರ್ಣ ಬೆಂಬಲವೂ ದೊರಕಿತು.

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಗ್ರಂಥಾಲಯ.

ಚುನಾವಣೆಗಳು

1936 ರಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮ್ಮೇಳನಕ್ಕೆ ಸಂಸ್ಥಾನದಿಂದ ಅನೇಕ ಪ್ರತಿನಿಧಿಗಳು ಹೋಗಿದ್ದರು. ಹೀಗೆ ಸಮ್ಮೇಳನಕ್ಕೆ ಹೋಗಿದ್ದ ಸಂಸ್ಥಾನದ ಪ್ರತಿನಿಧಿಗಳೆಲ್ಲ ಸೇರಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಆರಂಭಿಸಿದರು. ಇವರಲ್ಲಿ ಕೆಲವರು ಫೈಜ್‌ಪುರದಲ್ಲಿ 1936ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಜವಹರಲಾಲ್ ನೆಹರೂ, ರಾಜೇಂದ್ರಪ್ರಸಾದ್ ಮುಂತಾದ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ, ಸಂಸ್ಥಾನದಲ್ಲಿ ನಡೆಯುವ ಚುನಾವಣೆಗಳಲ್ಲಿ, ಮೈಸೂರು ಸಂಸ್ಥಾನದ ಕಾಂಗ್ರೆಸ್ ಕೂಡ ಸ್ಪರ್ಧಿಸಲು

ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಅನುಮತಿ ಕೋರಿದರು. ಸಂಸ್ಥಾನಗಳ ರಾಜಕೀಯದಲ್ಲಿ ನೇರವಾಗಿ ಪ್ರವೇಶಿಸದಿರುವುದು ರಾಷ್ಟ್ರೀಯ ಕಾಂಗ್ರೆಸ್‌ನ ಧೋರಣೆಯಾಗಿದ್ದುದರಿಂದ ಪಾರ್ಲಿಮೆಂಟರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರು ಕಾಂಗ್ರೆಸ್ ನಾಯಕರು ಅನುಮತಿ ಕೋರಿದರು. ಅಂದಿನ ರಾಷ್ಟ್ರೀಯ ಕಾಂಗ್ರೆಸ್‌ನ್ನು ಯಾವುದಕ್ಕೂ ಗುರಿಮಾಡದೆ ದೇಶೀಯ ಸಂಸ್ಥಾನಗಳ (ಕಾಂಗ್ರೆಸ್ ಕೆಲಸಗಾರರು ನಡೆಸುವ) ಸ್ವಾತಂತ್ರ್ಯ ಚಳುವಳಿಗೆ ತಮ್ಮ "ಸಹಾನುಭೂತಿ ಮತ್ತು ಬೆಂಬಲ" ವಿದೆಯೆಂದು ಕಾಂಗ್ರೆಸ್ ಅಧ್ಯಕ್ಷರಾದ ನೆಹರೂ ತಿಳಿಸಿದರು. ಇದರ ಫಲವಾಗಿ 1937 ನೇ ಇಸವಿ ಮಾರ್ಚ್ ತಿಂಗಳಲ್ಲಿ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಸಂಸ್ಥಾನದ ಕಾಂಗ್ರೆಸ್ ಪ್ರಪ್ರಥಮ ಬಾರಿಗೆ ಭಾಗವಹಿಸಿತು. ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ನಿಲ್ಲಿಸುವುದರ ಮೂಲಕ ಕಾಂಗ್ರೆಸ್ ಕಾರ್ಯಕರ್ತರು ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಪಾತ್ರವಹಿಸಿದರು. ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ್ನು ರಚಿಸಿ ಅದರ ಪರವಾಗಿ ಪ್ರಜಾಪ್ರತಿನಿಧಿ ಸಭೆಗೆ ಉಮೇದುವಾರರನ್ನು ನಿಲ್ಲಿಸಲಾಯಿತು.

ಮೈಸೂರು ಸಂಸ್ಥಾನದ ರಾಜಕೀಯದಲ್ಲಿ ಸಂಯುಕ್ತ ಪ್ರಜಾಪಕ್ಷ ಮತ್ತು ಮೈಸೂರು ಸಂಸ್ಥಾನ ಕಾಂಗ್ರೆಸ್ ಪ್ರಮುಖ ಪಕ್ಷಗಳಾಗಿದ್ದವು. ಚುನಾವಣೆಗಳಿಗಿಂತ ಮುಂಚೆಯೇ ಮುಂದಿನ ಮಾರ್ಗ ಯೋಚಿಸಲು ಸಂಯುಕ್ತ ಪ್ರಜಾಪಕ್ಷವು 1937 ರ ಜನವರಿಯಲ್ಲಿ ಸಭೆ ಸೇರಿತು. ಏಕೈಕ ಉದ್ದೇಶಗಳನ್ನೊಳಗೊಂಡ ಪಕ್ಷಗಳೆಲ್ಲ ಒಟ್ಟುಗೂಡಿ ರಾಜಕೀಯ ಸಂಘಟನೆಯನ್ನು ಸಾಧಿಸುವುದು ಉತ್ತಮವೆಂದು ಭಾವಿಸಿತು. ಹಾಗೆಯೇ ಪಕ್ಷದ ಕೆಲವು ಮಂದಿ ಸದಸ್ಯರು ತಮ್ಮ ಪಕ್ಷ ಕಾಂಗ್ರೆಸ್‌ನೊಡನೆ ವಿಲೀನಗೊಳ್ಳುವುದು ಉತ್ತಮವೆಂದು ತಿಳಿದರು. ಈಗಾಗಲೇ ಚುನಾವಣೆಗಳಿಗೆ ಸಿದ್ಧತೆ ನಡೆದಿದ್ದುದರಿಂದ, ಪಕ್ಷಗಳ ವಿಲೀನ ಪ್ರಯತ್ನವು ಚುನಾವಣೆಗಳು ಮುಗಿಯುವವರೆಗೆ ಮುಂದೂಡಲ್ಪಟ್ಟಿತು. ಈ ಮಧ್ಯೆ ದಿವಾನ್ ಮಿರ್ಜಾರವರು ಪ್ರಜಾ ನಾಯಕರನ್ನು ಅವಹೇಳನ ಮಾಡಿ ಅಸಂಬದ್ಧ ಭಾಷಣ ಮಾಡಿದರು. ಇದು ಸಂಯುಕ್ತ ಪ್ರಜಾಪಕ್ಷ ಮತ್ತು ಕಾಂಗ್ರೆಸ್ ಒಟ್ಟುಗೂಡಲು ಉತ್ತೇಜನ

ವಿಶ್ರಾಂತಿ ಆಯಿತು. ಸದ್ಯದಲ್ಲಿ ಎಲ್ಲರ ಗಮನವು ಚುನಾವಣೆಗಳ ಮೇಲೆ ಹರಿಯಿತು.

ಹೀಗೆ ರಾಷ್ಟ್ರೀಯ ಕಾಂಗ್ರೆಸ್ಸಿನವರ ಅನುಮತಿ ಪಡೆದು ಸಂಸ್ಥಾನದ ಕಾಂಗ್ರೆಸ್ ಸದಸ್ಯರನೇಕರು ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಅವರ ಪರವಾಗಿ ಕಾಂಗ್ರೆಸ್ ಸಂಸ್ಥೆಯು ಬಿರುಸಿನ ಪ್ರಸಾರ ಕೈಗೊಂಡಿತು. ಕಾಂಗ್ರೆಸ್ ಪಕ್ಷವು ಪ್ರಥಮ ಬಾರಿಗೆ ಸಂಸ್ಥಾನದ ರಾಜಕೀಯದಲ್ಲಿ ಭಾಗವಹಿಸಲು ತೀರ್ಮಾನಿಸಿದುದರಿಂದ ಸರ್ಕಾರವು ಕೆರಳಿ ಕಾಂಗ್ರೆಸ್ ಪ್ರಭಾವವನ್ನು ಕುಗ್ಗಿಸಲು ಅನೇಕ ಕ್ರಮಗಳನ್ನು ಕೈಗೊಂಡಿತು. 1937ರ ಆರಂಭದಲ್ಲಿ ಚುನಾವಣಾ ಪ್ರಚಾರ ಆರಂಭವಾದ ಕೂಡಲೇ, ಪ್ರಮುಖ ಕಾಂಗ್ರೆಸ್ ನಾಯಕರು ಭಾಷಣಮಾಡದಂತೆ ಸರಕಾರ ಪ್ರತಿಬಂಧಕಾಜ್ಞೆಗಳನ್ನು ಹಾಕಿತು. ಚುನಾವಣಾ ಪ್ರಚಾರವನ್ನು ಆರಂಭಿಸಲು ಬಂದಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರು, ಬೆಂಗಳೂರು ನಗರದಲ್ಲಿ ಬಹಿರಂಗ ಸಭೆಯೊಂದರಲ್ಲಿ ಮಾತನಾಡಲು ಒಪ್ಪಿದರು. ಕೆಂಪೇಗೌಡ ರಸ್ತೆಯಲ್ಲಿ ಈಗ ಗುಪ್ತಾ ಮಾರ್ಕೆಟ್ ಇರುವ ಪ್ರದೇಶದಲ್ಲಿ ಬಹಿರಂಗಸಭೆ ಏರ್ಪಾಡಾಗಿ ಸಾವಿರಾರು ಜನ ಉತ್ಸಾಹ ದಿಂದ ಸೇರಿದ್ದರು. "ಕಮಲಾದೇವಿಯವರು ಬೆಂಗಳೂರು ನಗರದ ಏಳುಮೈಲಿ ಸುತ್ತಳತೆಯಲ್ಲಿ ಆರು ತಿಂಗಳಕಾಲ ಭಾಷಣ ಮಾಡಬಾರದೆಂದು ಸರಕಾರವು ನಿಷೇಧಾಜ್ಞೆ ಜಾರಿಮಾಡಿತು. ಆಗ ಕಾಂಗ್ರೆಸ್ಸಿನ ಕೆಲವು ನಾಯಕರು ಆಲೋಚಿಸಿ ಕಮಲಾದೇವಿಯವರ ಭಾಷಣವನ್ನು ಬೇರೆಯವರೊಬ್ಬರು ಓದುವುದೆಂದು ತೀರ್ಮಾನಿಸಿದರು. ಈ ತೀರ್ಮಾನದಿಂದ ಜನರು ಹೆಚ್ಚು ಉತ್ಸಾಹಗೊಂಡರು. ಸರಕಾರದ ಮುಖಕ್ಕೆ ಮಸಿಬಳಿದಂತಾಯಿತು." ಸರಕಾರವು ಅನೇಕ ಪ್ರತಿಕೂಲಗಳನ್ನು ಉಂಟುಮಾಡಿದರೂ, ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಸುಮಾರು 30 ಜನ ಸ್ಪರ್ಧಿಗಳು ಜಯಗಳಿಸಿದರು.

ಸಂಸ್ಥಾನದಲ್ಲೆಲ್ಲಾ, ರಾಜಕೀಯ ಚಳುವಳಿಯನ್ನು ಬಲಪಡಿಸುವ ಉದ್ದೇಶದಿಂದ, ಪ್ರತಿಯೊಂದು ಜಿಲ್ಲಾ ಸಮಿತಿಯ ಪ್ರತಿನಿಧಿಯಿಂದ ಕೂಡಿದ 'ಮೈಸೂರು ಕಾಂಗ್ರೆಸ್ ಬೋರ್ಡ್' ಎಂಬ ಕೇಂದ್ರ ಸಂಸ್ಥೆಯನ್ನು 1937ರ ಮೇ ಮಾಹೆಯಲ್ಲಿ, ಬೆಂಗಳೂರಿನಲ್ಲಿ ನಡೆದ ಮೊದಲನೆ ರಾಷ್ಟ್ರಕೂಟದಲ್ಲಿ

ಸ್ಥಾಪಿಸಲಾಯಿತು. ಈ ರಾಷ್ಟ್ರಕೂಟಕ್ಕೆ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷರಾಗಿ ನೇಮಕವಾದರು. ಸಂಸ್ಥಾನದ ರಾಜಕೀಯದಲ್ಲಿ ಕಾಂಗ್ರೆಸ್ ಪ್ರವೇಶಿಸಿದ ಮೇಲೆ, ಅದರ ನಾಯಕರ ಮೇಲೆ ಸರಕಾರ ತನ್ನ ದಬ್ಬಾಳಿಕೆಯನ್ನು ಆರಂಭಿಸಿತು. ಸರಕಾರದ ಈ ದಬ್ಬಾಳಿಕೆಯ ನೀತಿಯನ್ನು ಖಂಡಿಸಿ, ನಾಗರಿಕ ಹಕ್ಕು ಭಾಧ್ಯತೆಗೆ ಧಕ್ಕೆ ತಗಲುವುದನ್ನು ಪ್ರತಿಭಟಿಸಲು, ಹಾಗೂ ಕಾಂಗ್ರೆಸ್ ಸಂಸ್ಥೆಯನ್ನು, ಬಲಗೊಳಿಸುವ ಉದ್ದೇಶದಿಂದ 'ಕೌನ್ಸಿಲ್ ಆಫ್ ಆಕ್ಷನ್' ಎಂಬ ಕಾರ್ಯನಿರ್ವಾಹಕ ಸಮಿತಿಯೊಂದನ್ನು ಮೈಸೂರು ಕಾಂಗ್ರೆಸ್ ಬೋರ್ಡಿನ ಪರವಾಗಿ ನೇಮಿಸಲಾಯಿತು.

ಕೌನ್ಸಿಲ್ ಆಫ್ ಆಕ್ಷನ್ ಕ್ರಿಯಾಸಮಿತಿ

ಸರಕಾರದ ಅನುಚಿತ ಕ್ರಮಗಳನ್ನು ನ್ಯಾಯವಾದ ರೀತಿಯಲ್ಲಿ, ಈ ಕ್ರಿಯಾ ಸಮಿತಿ ವಿರೋಧಿಸಲಾರಂಭಿಸಿತು. ಈ ಸಮಿತಿಯ ಸದಸ್ಯರು ಒಂದು ಹೇಳಿಕೆ ಹೊರಡಿಸಿ, ಸಂಸ್ಥಾನದ ಏಳಿಗೆಗೆ ಜವಾಬ್ದಾರೀ ಸರಕಾರ ಅತ್ಯಗತ್ಯವೆಂದು ತಿಳಿಸಿ, ಇದರ ಬಗ್ಗೆ ಜನಜಾಗ್ರತಿಯನ್ನುಂಟುಮಾಡಲು ಸಂಸ್ಥಾನದಲ್ಲೆಲ್ಲಾ ಪ್ರಚಾರ ಕಾರ್ಯ ಕೈಗೊಂಡರು. ಕ್ರಿಯಾಸಮಿತಿಯ ಅಧ್ಯಕ್ಷ ಟಿ. ಸಿದ್ಧಲಿಂಗಯ್ಯನವರು, ಸಂಸ್ಥಾನದಲ್ಲೆಲ್ಲಾ ಸಂಚರಿಸಿ, ಸರಕಾರದ ನೀತಿಯನ್ನು ಖಂಡಿಸಿ, ಜವಾಬ್ದಾರೀ ಸರಕಾರಕ್ಕಾಗಿ ತಾವು ನಡೆಸುತ್ತಿರುವ ಹೋರಾಟಕ್ಕೆ ಜನತೆಯ ಬೆಂಬಲ ಕೋರಿದರು. ಕ್ರಿಯಾ ಸಮಿತಿಯ ಇತರ ಸದಸ್ಯರಾದ ತಗಡೂರು ರಾಮಚಂದ್ರರಾವ್ ಮತ್ತು ವೀರಕೇಸರಿ ಸೀತಾರಾಮ ಶಾಸ್ತ್ರಿಯವರೂ ಕೂಡ ಕಾಂಗ್ರೆಸ್ ಧ್ಯೇಯಗಳನ್ನು ಪ್ರಚಾರ ಮಾಡಿದರು. ಈ ಕ್ರಿಯಾ ಸಮಿತಿಯವರು ಮೊದಲು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡರು. ಪ್ರತಿ ಪಟ್ಟಣ, ಗ್ರಾಮಗಳಲ್ಲಿಯೂ ಸಾವಿರಾರು ಜನರ ಭಾರಿ ಸಭೆಗಳು ಜರುಗುತ್ತಿದ್ದವು. ಪ್ರತಿ ಬಹಿರಂಗ ಸಭೆಯಲ್ಲಿಯೂ ಅಧ್ಯಕ್ಷರಿಗೆ ನೂರಾರು ರೂಪಾಯಿಗಳ ನಿಧಿ ಅರ್ಪಿಸುತ್ತಿದ್ದರು. ಕ್ರಿಯಾಸಮಿತಿಯ ಸದಸ್ಯರ ಭಾಷಣಗಳು ಜನರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಕೆರಳಿಸಿ ಜವಾಬ್ದಾರೀ ಸರ್ಕಾರದ ಸ್ಥಾಪನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಿ

ರುವ ಮನೋಭಾವನೆಯನ್ನು ಬಹಿರಂಗವಾಗಿ ಈ ಸಭೆಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಈ ಪ್ರಚಾರ ಕಾರ್ಯದ ವಿವರಗಳು ದಿನವೂ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದವು. ಇದರ ಫಲವಾಗಿ ಜನರಲ್ಲಿ ರಾಜಕೀಯ ಆಸಕ್ತಿ, ಕಾಂಗ್ರೆಸ್ ಸಂಸ್ಥೆಯಲ್ಲಿ ವಿಶ್ವಾಸ-ಭಕ್ತಿ ಹೆಚ್ಚಾದವು. ಜನಮನದಲ್ಲಾದ ಈ ಪರಿವರ್ತನೆಯನ್ನು ಸರಕಾರದವರು ನಿರೀಕ್ಷಿಸಿರಲಿಲ್ಲ. ಕೆಲವು ಕಡೆಗಳಲ್ಲಿ ಪ್ರಜಾ ಸರಕಾರ ಸ್ಥಾಪನೆ ಆಗಿಯೇ ಹೋಯಿತೇನೋ ಎನ್ನುವ ರೀತಿಯಲ್ಲಿ ಜನರ ಉತ್ಸಾಹ ಎಲ್ಲೆ ಮೀರುತ್ತಿತ್ತು. ಕ್ರಿಯಾಸಮಿತಿಯವರ ಕಾರ್ಯ ಕಲಾಪಗಳನ್ನು ಅದಷ್ಟುಬೇಗ ತಡೆಗಟ್ಟದಿದ್ದರೆ ದಿನನಿತ್ಯದ ಆಡಳಿತಕ್ಕೆ ಧಕ್ಕೆ ಬರಬಹುದೆಂದು ಸರಕಾರದವರು ಶಂಕಿಸಿದರು. ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಿ ಸರಕಾರ ಆಜ್ಞೆಗಳನ್ನು ಹೊರಡಿಸಿತು. ಕ್ರಿಯಾಸಮಿತಿಯು ನಿಷೇದಾಜ್ಞೆಗಳನ್ನು ಹಿಂದಕ್ಕೆ ಪಡೆಯಲು ಸೂಚಿಸಿ, ಹಾಗೆ ಹಿಂದಕ್ಕೆ ಪಡೆಯದಿದ್ದರೆ ಕಾನೂನು ಭಂಗ ಚಳುವಳಿಯನ್ನು ಆರಂಭಿಸುವುದಾಗಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿತು. ಸರಕಾರದ ನೀತಿ ವಿರೋಧಿಸಿ ಹೆಚ್ಚು ಜನರು ಕಾಂಗ್ರೆಸ್ ಸೇರಿದುದರಿಂದ, ಸರಕಾರ ಪೇಚಿಗೀಡಾಯಿತು. ಒಡನೆಯೇ ಕ್ರಿಯಾಸಮಿತಿಯವರ ಮೇಲೆ ಉಗ್ರಕ್ರಮ ಕೈಗೊಳ್ಳಲು ನಿರ್ಧರಿಸಿ, ಸಮಿತಿಯ ಮೂರು ಜನರನ್ನೂ ದಸ್ತಗಿರಿ ಮಾಡಿ, ಒಳ್ಳೆ ನಡೆತೆಯ ಬಗ್ಗೆ ಮುಚ್ಚಳಿಕೆ ಬರೆದುಕೊಡಲು ಕೇಳಿತು. ಹಾಗೆ ಬರೆದುಕೊಡಲು ಅವರು ನಿರಾಕರಿಸಿದುದರಿಂದ ಅವರನ್ನು ಒಂದೊಂದು ವರ್ಷ ಶಿಕ್ಷೆಗೆ ಗುರಿಮಾಡಿ ಸರಕಾರ ಅವರನ್ನು ಜೈಲಿಗೆ ಕಳಿಸಿತು. ಇದರಿಂದ ಪರಿಸ್ಥಿತಿ ಉಲ್ಬಣಗೊಂಡಿತು. ಸರಕಾರದ ನೀತಿ ಕುರಿತು ಪತ್ರಿಕೆಗಳಲ್ಲೂ ಬಹಿರಂಗ ಸಭೆಗಳಲ್ಲೂ ಕಟುವಾದ ಟೀಕೆಗಳು ನಡೆದವು. ಜನತೆಯ ಸಾಮಾನ್ಯ ಹಕ್ಕಾದ ವಾಕ್ ಸ್ವಾತಂತ್ರ್ಯಕ್ಕೆ ಅಡಚಣೆ ತಂದೊಡ್ಡಿದ ಸರಕಾರವನ್ನು ಅಂತ್ಯಗೊಳಿಸಬೇಕೆಂದೇ, ಜನತೆ ಕಾತುರರಾಗುವ ಚಿನ್ಹೆಗಳು ಎದ್ದುಕಾಣುತ್ತಿದ್ದವು. ಪ್ರಜಾಪಕ್ಷದ ಮುಖಂಡರು ಸರಕಾರದ ದಮನ ನೀತಿಯನ್ನು ಹೆಚ್ಚು ಕಾಲ ಸಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದು ಮನಗಂಡು, ಅಲ್ಲಲ್ಲೇ ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಲಾರಂಭಿಸಿದರು.

ಸಂಯುಕ್ತ ಪ್ರಜಾಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳ ವಿಲೀನ

ಸಂಯುಕ್ತ ಪ್ರಜಾಪಕ್ಷವು ಸಂಸ್ಥಾನದ ರಾಜಕೀಯದಲ್ಲಿ ಪ್ರಮುಖ ಸ್ಥಾನಗಳಿಸಿ ಪ್ರಬಲವಾಯಿತು. ಇದೊಂದೇ ವ್ಯವಸ್ಥಿತವಾದ ರಾಜಕೀಯ ಪಕ್ಷವಾಗಿದ್ದು, ಪಕ್ಷದ ನಾಯಕರುಗಳೆಲ್ಲಾ ನಿಸ್ಪೃಹರಾಗಿ ಕೆಲಸಮಾಡುತ್ತಿದ್ದರು. ಜನಸಾಮಾನ್ಯರ ಬೆಂಬಲವಿದ್ದು ಪಕ್ಷವು ನಗರ ಹಾಗೂ ಗ್ರಾಮ ಪ್ರದೇಶಗಳೆರಡರಲ್ಲೂ ಸೇವೆ ಸಲ್ಲಿಸುತ್ತಿತ್ತು. ಅತ್ಯಲ್ಪ ಕಾಲದಲ್ಲಿಯೇ ತನ್ನ ಸಾಧನೆಯಿಂದ ಪ್ರಸಿದ್ಧಿಪಡೆಯಿತು. ಕಾಂಗ್ರೆಸ್ ಸಂಸ್ಥೆಯು ಸಂಸ್ಥಾನದಲ್ಲಿ ನಗರ ಪ್ರದೇಶಕ್ಕೆ ಮಾತ್ರ ಮೀಸಲಾಗಿದ್ದು ಜನಸಾಮಾನ್ಯರ ಬೆಂಬಲಪಡೆದಿರಲಿಲ್ಲ, ಹಾಗೂ ಸದಸ್ಯರ ಸಂಖ್ಯೆಯು ಮಿತಿಯಲ್ಲಿದ್ದು ಬಹುಮಟ್ಟಿಗೆ ಅದು ಕೇವಲ ಒಂದು ವರ್ಗಕ್ಕೆ ಮೀಸಲಾಗಿತ್ತು, ಆದುದರಿಂದ ರಾಷ್ಟ್ರೀಯ ಕಾಂಗ್ರೆಸ್ ನಾಯಕರಾದ ಎನ್. ಎಸ್. ಹರ್ಡೀಕರ್ ಮತ್ತು ಕಮಲಾದೇವಿಯವರು ಮೈಸೂರು ಸಂಸ್ಥಾನಕ್ಕೆ ಭೇಟಿನೀಡಿ ಸಂಯುಕ್ತ ಪ್ರಜಾಪಕ್ಷದ ಕೆಲಸವನ್ನು ಅಭಿನಂದಿಸಿದರು. ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಗೊಳಿಸುವ ಉದ್ದೇಶದಿಂದ, ಸಂಯುಕ್ತ ಪ್ರಜಾಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳ ವಿಲೀನಕ್ಕೆ ಪ್ರಯತ್ನಿಸಿದರು. ಈ ಎರಡು ಪಕ್ಷಗಳು ವಿಲೀನಗೊಂಡರೆ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯು ತೀವ್ರಗೊಳ್ಳುವುದೆಂದು ಅದಕ್ಕಾಗಿ ಪ್ರಯತ್ನ ನಡೆಸಿದರು.

ಈ ಮಧ್ಯೆ ಆಂಗ್ಲಭಾರತದ ಪ್ರಾಂತ್ಯಗಳಲ್ಲಿ 1935ನೇ ಭಾರತ ಶಾಸನದ ಪ್ರಕಾರ, ಸ್ವಯಂ ಸರಕಾರ ವ್ಯವಸ್ಥೆಯು ಜಾರಿಗೆ ಬಂದು ಕಾಂಗ್ರೆಸ್ ಪಕ್ಷ ಎಂಟು ಪ್ರಾಂತ್ಯಗಳಲ್ಲಿ ಸರಕಾರ ರಚನೆ ಮಾಡಿತು. ಮೈಸೂರು ಸಂಸ್ಥಾನದ ಪಕ್ಕದ ಪ್ರಾಂತ್ಯವಾದ ಮದರಾಸ್‌ನಲ್ಲಿ ಸಿ. ರಾಜಗೋಪಾಲಾಚಾರಿಯವರು ಮುಖ್ಯಮಂತ್ರಿಯಾದರು. ಮೊದಲಿನಿಂದಲೂ ಆಂಗ್ಲಭಾರತದ ಬೆಳವಣಿಗೆಗಳು ಸಂಸ್ಥಾನದ ರಾಜಕೀಯದ ಮೇಲೆ ಪ್ರಭಾವ ಬೀರುತ್ತಿದ್ದಿತು. ಕಾಂಗ್ರೆಸ್ ಅಧಿಕಾರ ವಹಿಸಿಕೊಂಡು ಮಂತ್ರಿಮಂಡಲ ರಚಿಸಿದ ಮೇಲೆ, ಅದರ ಪ್ರಭಾವದಿಂದ, ಸಂಸ್ಥಾನದ ನಾಯಕರೆಲ್ಲರೂ, ಒಂದೇ ಗುರಿಯಿರುವ ಪಕ್ಷಗಳೆಲ್ಲವೂ ಒಟ್ಟುಗೂಡಿ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಪರಿಣಾಮಕಾರಿಯಾಗಿ ಮಾಡಲು ಯತ್ನಿಸಿದರು. ಈ ದೆಸೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್

ಸದಸ್ಯರು ಉತ್ತೇಜನ ನೀಡಿ, ಸಂಸ್ಥಾನದ ರಾಜಕೀಯ ಪಕ್ಷಗಳು ವಿಲೀನ ಗೊಳ್ಳಲು ಅಪೇಕ್ಷೆ ವಹಿಸಿ ಕ್ರಮ ಕೈಗೊಂಡರು.

ಪ್ರಮುಖ ಕಾಂಗ್ರೆಸ್ ನಾಯಕರಾದ ಎಸ್. ಎಸ್. ಹರ್ಡೀಕರ್, ಟಿ. ಸಿದ್ದಲಿಂಗಯ್ಯ, ಎಸ್.ಕೆ. ವೆಂಕಟರಂಗಯ್ಯಂಗಾರ್, ಬಿ.ಎನ್.ಗುಪ್ತಾ ರವರು ನಂದೀಬೆಟ್ಟಕ್ಕೆ ಹೋಗಿ ಸಂಯುಕ್ತ ಪ್ರಜಾಪಕ್ಷದ ನಾಯಕ ಕೆ. ಚೆಂಗಲರಾಯರೆಡ್ಡಿಯವರನ್ನು ಕರೆಸಿದರು. "ದೇಶದ ಪರಿಸ್ಥಿತಿ ಎಷ್ಟು ಮುಂದುವರಿದಿದೆ, ಪ್ರಜಾಪಕ್ಷ ಒಂದು ಸಂಸ್ಥಾನದ ಪಕ್ಷವಾಗಿ ಎಷ್ಟೇ ಕೆಲಸ ಮಾಡಿದರೂ ಅದಕ್ಕೆ ರಾಷ್ಟ್ರಮಟ್ಟದ ಪ್ರಖ್ಯಾತಿ ಬರುವುದಿಲ್ಲ. ದೇಶದ ನಾಯಕರಾಗಬಲ್ಲ ರೆಡ್ಡಿಯವರು ಕಾಂಗ್ರೆಸ್ ಸೇರಿ ಕೆಲಸ ಮಾಡಬೇಕು" ಎಂದು ಹರ್ಡೀಕರರು ರೆಡ್ಡಿಯವರಿಗೆ ತಿಳಿಸಿ ಕಾಂಗ್ರೆಸ್ ಪಕ್ಷದೊಡನೆ ಪ್ರಜಾ ಪಕ್ಷವನ್ನು ವಿಲೀನಗೊಳಿಸುವಂತೆ ಕೋರಿದರು. ಪ್ರಜಾಪಕ್ಷವನ್ನು ತ್ಯಜಿಸಿ, ಕಾಂಗ್ರೆಸ್ ಪಕ್ಷವನ್ನು ಸೇರಲು, ಕೆ. ಸಿ. ರೆಡ್ಡಿಯವರು ಅಷ್ಟು ಉತ್ಸಾಹ ತೋರಲಿಲ್ಲ, ಆದರೂ ಪಕ್ಷದ ಇತರರೊಡನೆ ಸಮಾಲೋಚಿಸುವುದಾಗಿ ಭರವಸೆ ನೀಡಿದರು.

ಸಂಯುಕ್ತ ಪ್ರಜಾಪಕ್ಷದ ನಾಯಕರೆಲ್ಲರೂ ಒಟ್ಟಿಗೆ ಸೇರಿ ದೀರ್ಘವಾಗಿ ಆಲೋಚಿಸಿ, ಇಡೀ ಭಾರತದಲ್ಲೆಲ್ಲಾ ತಮ್ಮ ಪ್ರಭಾವ ಹೆಚ್ಚಬೇಕಾದರೆ. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯನ್ನು ಸೇರುವುದು ಒಳ್ಳೆಯ ದೆಂಬ ಅಭಿಪ್ರಾಯದಿಂದ ಕೂಡಿದ್ದು ಕಾಂಗ್ರೆಸ್ಸಿನೊಡನೆ ವಿಲೀನಗೊಳ್ಳುವ ಕಡೆ ವಾಲಿದರು. ಪ್ರತ್ಯೇಕ ರಾಜಕೀಯ ಸಂಸ್ಥೆಯ ಆವಶ್ಯಕತೆ ಇಲ್ಲವೆಂದೂ, ಸಂಯುಕ್ತ ಪ್ರಜಾಪಕ್ಷವು ಕಾಂಗ್ರೆಸ್ಸಿನೊಡನೆ ವಿಲೀನಗೊಳ್ಳುವುದು ಸೂಕ್ತ ವೆಂದೂ,ಸಂಸ್ಥೆಯ ಕಾರ್ಯ ನಿರ್ವಾಹಕ ಸಮಿತಿಯು ತೀರ್ಮಾನಿಸಿತು. ಈ ತೀರ್ಮಾನಕ್ಕೆ ಸಂಸ್ಥೆಯ ಸಮ್ಮತಿಯನ್ನು ಪಡೆಯುವ ಉದ್ದೇಶದಿಂದ ಮೈಸೂರು ಪ್ರಜಾಸಂಯುಕ್ತ ಸಭೆಯ ವಿಶೇಷ ಅಧಿವೇಶನವೊಂದನ್ನು ಮೈಸೂರು ನಗರದಲ್ಲಿ ಅಕ್ಟೋಬರ್ 16ರಂದು ಕರೆದರು. ಈ ವಿಶೇಷ ಸಭೆಯು ಮೈಸೂರು ನಗರದಲ್ಲಿ ಕಾಳಮ್ಮನ ಗುಡಿ ಬೀದಿಯಲ್ಲಿರುವ ಯಾಲಕ್ಕಪ್ಪಾಚಾರಿ ಛತ್ರದಲ್ಲಿ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಈ ವಿಶೇಷಾಧಿವೇಶನಕ್ಕೆ ಸ್ವಾಗತಾಧ್ಯಕ್ಷರಾದ ಹೆಚ್. ಸಿ ದಾಸಪ್ಪ ನವರು ಸಂಯುಕ್ತ ಪ್ರಜಾಪಕ್ಷದ ಸದಸ್ಯರನ್ನು ಸ್ವಾಗತಿಸಿದರು. ಸದಸ್ಯರಿಗೆ ಸ್ವಾಗತ ಬಯಸುತ್ತಾ, ಪ್ರಜಾಮಿತ್ರಮಂಡಲಿಯನ್ನು ಎಂ. ಬಸವಯ್ಯನವರು ಪ್ರಾರಂಭಿಸಿದ ಉದ್ದೇಶಗಳನ್ನು ಸೂಕ್ಷ್ಮವಾಗಿ ತಿಳಿಸಿ, ಪಕ್ಷವು ಪ್ರಬಲವಾದ ನಂತರ ಸರ್ಕಾರವು ತನ್ನ ನೀತಿಯನ್ನು ಬದಲಾಯಿಸಿದುದನ್ನು ವಿವರಿಸಿ, ಪಕ್ಷಗಳು ಸಂಸ್ಥಾನದ ರಾಜಕೀಯದಲ್ಲಿ ಭಾಗವಹಿಸಲಾರಂಭಿಸಿದ ನಂತರ ಅವುಗಳಿಗೆ ಅನೇಕ ಅಡಚಣೆಗಳನ್ನುಂಟುಮಾಡಿ ತೊಂದರೆ ಕೊಟ್ಟಿದುದನ್ನು ವಿವರಿಸಿದರು. ದಾಸಪ್ಪನವರು ಮುಂದುವರಿದು "ನಮ್ಮ ಜನರು ಎಚ್ಚತ್ತು ತಮ್ಮ ಹಕ್ಕುಗಳೇನೆಂಬುದನ್ನು ಅರಿಯಲು ಸಹಾಯಕವಾಗುವ ಯಾವ ಪ್ರಯತ್ನವೂ ನಮ್ಮ ಸರ್ಕಾರಕ್ಕೆ ದುಸ್ಸಹನೀಯವಾಗಿ ಪರಿಣಮಿಸಿದೆ. ಆದರೆ, ನ್ಯಾಯ ಸಮ್ಮತವಾದ ಚಳುವಳಿಯನ್ನು ದಬ್ಬಾಳಿಕೆಯಿಂದ ಅಡಗಿಸಬಹು ದೆಂದು ಸರ್ಕಾರದವರಿಗೆ ಭಾವನೆ ಇರುವುದಾದರೆ ಅದಕ್ಕೆ ನಾವು ಕನಿಕರಪೂರಿತ ವಾದ ಪಶ್ಚಾತ್ತಾಪ ಪಡಬೇಕಾಗಿದೆ. ಸುಲಭವಾಗಿ ನಂಬುವ ಸರಳ ಹೃದಯ ರಾದ ಪ್ರಜೆಗಳನ್ನು ಸಂದಿಗ್ಧ ಸಮಯದಲ್ಲಿ ಬಣ್ಣದ ನುಡಿಗಳಿಂದ ಮರುಳು ಗೊಳಿಸಿ ಕೊನೆಗೆ ಆಶಾಭಂಗವನ್ನು ಮಾಡಿ ತಮ್ಮ ಕಾರ್ಯ ಸಾಧನೆಯನ್ನು ಮಾಡಿಕೊಳ್ಳುವ ಉದ್ಯಮದಲ್ಲಿ ತೊಡಗಿದವರು ತಮ್ಮನ್ನು ತಾವೇ ಮೋಸ ಗೊಳಿಸಿಕೊಂಡಂತಾಗುವುದು" ಎಂದರು.

"ಸಂಯುಕ್ತ ಪ್ರಜಾಪಕ್ಷ ಹಾಗೂ ಸಂಸ್ಥಾನ ಕಾಂಗ್ರೆಸ್ ಶ್ರೀಮನ್ಮಹ ರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರೀ ಸರಕಾರ ಸ್ಥಾಪಿಸುವುದೇ ಆಗಿರು ತ್ತದೆ. ಕಾರ್ಯಕ್ರಮಗಳಲ್ಲಿ ವ್ಯತ್ಯಾಸವಿಲ್ಲದಿರುವುದರಿಂದ ಪ್ರತ್ಯೇಕವಾಗಿರುವ ಪ್ರಮೇಯವೂ ಇಲ್ಲ. ಕಾಂಗ್ರೆಸ್ಸಿನೊಡನೆ ವಿಲೀನಗೊಳ್ಳುವುದರಿಂದ "ಇಡೀ ಭಾರತ ಭೂಮಿಯ ಹೋರಾಟದಲ್ಲಿ ಭಾಗವಹಿಸಲವಕಾಶ ದೊರೆತಂತಾಗಿ ಮಾತೃ ಭೂಮಿಯ ಸೇವೆಯಲ್ಲಿ ನಮ್ಮ ಕಾಣಿಕೆಯನ್ನು ಸಲ್ಲಿಸಿದೆವೆಂಬ ಸಂತೃಪ್ತ ಭಾವನೆಯೂ ನಮ್ಮಲ್ಲಿ ಮೂಡುತ್ತದೆ. ಸಂಸ್ಥಾನದ ಮೇಲ್ಮೆಗಾಗಿ ದುಡಿಯುವ ಜವಾಬ್ದಾರಿಯೂ ನಮ್ಮದೇ ಆಗಿದ್ದರೂ, ಭಾರತ ರಾಜಕೀಯ ರಚನೆಗೆ ಒಳ ಪಟ್ಟ ಆ ಮಹಾಸಭೆಯ ಸೇವೆ, ತ್ಯಾಗ, ಶಿಸ್ತು, ಶೀಲತೆಯೇ ಮೊದಲಾದ

ಗುಣಗಳನ್ನು ಗ್ರಹಿಸಲವಕಾಶವಾಗುವುದು" ಎಂದು ದಾಸಪ್ಪನವರು ತಮ ಸ್ವಾಗತ ಭಾಷಣದಲ್ಲಿ ತಿಳಿಸಿದರು.

ಹೀಗೆ ಸಂಯುಕ್ತ ಪ್ರಜಾಪಕ್ಷದ ಸಭೆ ನಡೆದು, ತಮ್ಮ ರಾಜಕೀಯ ಧ್ಯೇಯವನ್ನು ಕಾಂಗ್ರೆಸ್ಸಿನೊಡನೆ ಸೇರುವುದರಿಂದ ಸಾಧಿಸಬಹುದೆಂಬ ಉದ್ದೇಶದಿಂದ ಕಾಂಗ್ರೆಸ್ ನೊಡನೆ ಸೇರುವ ನಿರ್ಣಯವನ್ನು ಚರ್ಚಿಸಿತು. ಹಿಂದಿನ ರಾತ್ರಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಕೆ.ಟಿ. ಭಾಷ್ಯಂ ಮತ್ತು ಕಾಂಗ್ರೆಸ್ ನಾಯಕ ಎನ್. ಸಿ. ತಿಮ್ಮಾರೆಡ್ಡಿಯವರನ್ನು ಅಧಿಕಾರಿಗಳು ಬಂಧಿಸಿದರು. ಕಾಂಗ್ರೆಸ್ ನಾಯಕರ ಬಂಧನದಿಂದ ಸಂಸ್ಥಾನದ ರಾಜಕೀಯ ವಾತಾವರಣವು ಉಗ್ರರೂಪ ತಾಳಿತು.

ಸಂಯುಕ್ತ ಪ್ರಜಾಪಕ್ಷ ಕಾಂಗ್ರೆಸ್ ಸಂಸ್ಥೆಯೊಂದಿಗೆ ವಿಲೀನಗೊಳ್ಳಬೇಕೆಂಬ ನಿರ್ಣಯವನ್ನು ಪ್ರಜಾಪಕ್ಷದ ಪ್ರತಿಯೊಬ್ಬ ಸದಸ್ಯರೂ ಅನುಮೋದಿಸಿ, ಸರಕಾರದ ದಬ್ಬಾಳಿಕೆಯನ್ನು ಆ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಖಂಡಿಸಿ ಸಭಾತ್ಯಾಗ ಮಾಡಬೇಕೆಂದು ನಿರ್ಣಯಮಾಡಿದರು. ಇದನ್ನು ಮದ್ದೂರಿನ ಎಸ್. ಸಿ. ಮಲ್ಲಯ್ಯನವರು ಮತ್ತು ಎಂ. ಸಿ. ಲಿಂಗೇಗೌಡರು ವಿರೋಧಿಸಿ, ಕಾಂಗ್ರೆಸ್ಸಿನ ಚಳುವಳಿಯನ್ನು, ಮೈಸೂರು ಸಂಸ್ಥಾನದಲ್ಲಿ ಬೆಂಬಲಿಸಕೂಡದೆಂದು ಭಾಷಣ ಮಾಡಿ ಸಭಾತ್ಯಾಗ ಮಾಡಿ ಹೊರಟು ಹೋದರು ಮತ್ತು ಕಾಂಗ್ರೆಸ್ಸನ್ನು ಹತ್ತಿಕ್ಕುವ ಕಾರ್ಯದಲ್ಲಿ ಅಂದಿನ ದಿವಾನರಾದ ಸರ್ ಮಿರ್ಜಾರವರಿಗೆ ಬೆಂಬಲಿಗರಾಗಿ ನಿಂತರು. ಸಂಯುಕ್ತ ಪಕ್ಷದ ಉಳಿದೆಲ್ಲಾ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಖಾದಿ ಬಟ್ಟೆಯನ್ನು ಧರಿಸಿದರು. ಈಗಾಗಲೇ ತಮ್ಮ ಕೆಲಸ ಕಾರ್ಯಗಳಿಂದಲೇ ನಾಯಕರಾಗಿದ್ದವರು, ಕಾಂಗ್ರೆಸ್ಸಿನಲ್ಲಿಯೂ ಪ್ರಭಾವಿತರಾದ ನಾಯಕರಾದರು. ಅವರ ಸೇರ್ಪಡೆಯಿಂದ ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯು ಬಲಗೊಂಡಿತು. ಹಾಗೆಯೇ ಕಾಂಗ್ರೆಸ್ ಸಂಸ್ಥೆಯನ್ನು ಸೇರಿದುದರಿಂದ ಅವರಿಗೆ ಅಖಿಲ ಭಾರತ ವಲಯದಲ್ಲಿ ಸೇವೆ ಸಲ್ಲಿಸಿ ಜನಪ್ರಿಯತೆಗಳಿಸಲು ಅವಕಾಶವಾಯಿತು.

ಹೀಗೆ ಕಾಂಗ್ರೆಸ್ ಮತ್ತು ಸಂಯುಕ್ತ ಪ್ರಜಾಪಕ್ಷಗಳ ವಿಲೀನದಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಗುಂಪಿನ ಸದಸ್ಯರ ಸಂಖ್ಯೆ ಕೇವಲ ಮುವತ್ತು ಇದ್ದದ್ದು, ವಿಲೀನದ ನಂತರ 130 ಕ್ಕೇರಿತು. ಹೀಗೆ

ಸರಕಾರದ ದಬ್ಬಾಳಿಕೆ ನೀತಿಯಿಂದಲೂ ಹಾಗೂ ಪಕ್ಷಗಳ ಆದರಲ್ಲೂ ಸಂಯುಕ್ತ ಪ್ರಜಾಪಕ್ಷ ಕಾಂಗ್ರೆಸ್ಸಿನಲ್ಲಿ ಒಟ್ಟುಗೂಡಿದುದರಿಂದಲೂ, ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವು ಬಲಗೊಂಡು ಸ್ವಾತಂತ್ರ್ಯ ಚಳುವಳಿಯು ಬಲವಾಯಿತು. ಹಿಂದುಳಿದವರ ಪರ ಚಳುವಳಿಯ ಅಂಗವಾಗಿ ಬೆಳೆದ ಸಂಯುಕ್ತ ಪ್ರಜಾಪಕ್ಷವು ಜನ ಸಾಮಾನ್ಯರ ಪಕ್ಷವಾಯಿತು. ಅದುವರೆಗೂ ಇದ್ದಂಥ ನಾಮ ಮಾತ್ರ ಕಾಂಗ್ರೆಸ್, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸಂವಿಧಾನ ದಂತೆ, ಸಂಸ್ಥಾನಗಳಲ್ಲಿ ರಾಜಕೀಯ ಚಟುವಟಿಕೆಗಳ ಬದಲು ವಿಧಾಯಕ ಕಾರ್ಯಗಳ ಹೆಸರಿನಲ್ಲಿ ಕಾಲ ತಳ್ಳುತ್ತಿತ್ತು. ವಿಲೀನದ ನಂತರ ಸಂಸ್ಥಾನದ ಕಾಂಗ್ರೆಸ್ ಜನ ಸಾಮಾನ್ಯರ ಪಕ್ಷವಾಗಿ, ರಾಜಕೀಯ ಚಟುವಟಿಕೆಗಳಲ್ಲಿಯೂ ಬಲಿಷ್ಠವಾಯಿತು. ಆಜನ್ಮ ಸಿದ್ಧ ಹಕ್ಕುಗಳನ್ನು ಸಾಧಿಸಲು ಹಾಗೂ ಜವಾಬ್ದಾರಿ ಸರಕಾರ ಆಚರಣೆಗೆ ತರಲು ದುಡಿಯುವ ನಿಶ್ಚಯ ದೃಢಗೊಂಡಿತು.

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿಯೂ ಕಾಂಗ್ರೆಸ್‌ಪಕ್ಷಗಳನ್ನು ಆರಂಭಿಸಿ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರನ್ನು ಆರಿಸಿಕೊಂಡರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆ.ಟಿ. ಭಾಷ್ಯಂ ರವರು ಅಧ್ಯಕ್ಷರಾಗಿಯೂ, ಹೆಚ್.ಕೆ. ವೀರಣ್ಣಗೌಡರು ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದರು. ಭಾಷ್ಯಂ ರವರು ದಿವಾನರಿಗೆ ಒಂದು ಪತ್ರ ಬರೆದು ಮಿರ್ಜಾರವರ ಮನೋಭಾವವನ್ನು ಬದಲಿಸಲು ಯತ್ನಿಸಿ ವಿಫಲರಾದರು.

1937ರ ಅಕ್ಟೋಬರ್ 16ರಲ್ಲಿ ಆರಂಭವಾದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಚರಿತ್ರಾರ್ಹವಾಗಿತ್ತು. ಸಭೆಯು ಸೇರುವ ವೇಳೆಯಲ್ಲಿ ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದನ್ನು ಪ್ರತಿಭಟಿಸಿ, ಸಂಸ್ಥಾನದಾದ್ಯಂತ ಜನರು ಸರಕಾರವನ್ನು ಖಂಡಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಮುಖ್ಯವಾಗಿ ಹೆಚ್. ಕೆ. ವೀರಣ್ಣಗೌಡರು ಸರಕಾರದ ದಮನ ನೀತಿಯನ್ನು ಖಂಡಿಸಿದರು. ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಕಾಂಗ್ರೆಸ್ ಸದಸ್ಯರು ಪ್ರಜಾಪ್ರತಿನಿಧಿ ಸಭೆಯಿಂದ ಹೆಚ್.ಕೆ. ವೀರಣ್ಣಗೌಡರ ನೇತೃತ್ವದಲ್ಲಿ ಸಭಾ ತ್ಯಾಗ ಮಾಡಿದರು. ಟಿ. ಮಾದಯ್ಯಗೌಡರು ಎದ್ದು ನಿಂತು ಕನ್ನಡದಲ್ಲಿ ಉದ್ವೇಗದಿಂದ 'ದಿವಾನ್ ಸಾಹೇಬರೇ, ನಿಮ್ಮ ನಿರಂಕುಶಾಧಿಕಾರದ ಆಡಳಿತದಿಂದ ನಾವು ಹೊರ

ಹೋಗುತ್ತೇವೆ' ಎಂದರು. ಸ್ವಲ್ಪ ಹೊತ್ತಿನ ನಂತರ ಅವರೆಲ್ಲರೂ ಪುನಃ ಸಭೆಯನ್ನು ಪ್ರವೇಶಿಸುತ್ತಿದ್ದಾಗ ಎಸ್. ರಂಗರಾಮಯ್ಯನವರು ಗಟ್ಟಿಯಾಗಿ ಮಹಾತ್ಮಗಾಂಧೀಕೀ ಜೈ! ಪ್ರಜಾಪ್ರತಿನಿಧಿ ಸರ್ಕಾರ ಬರಲಿ! ಎಂದು ಕೂಗಿಕೊಂಡರು. ಸಭಿಕರು ಆಶ್ಚರ್ಯಚಕಿತರಾಗಿ ದಿಗ್ಭ್ರಮೆ ಹಿಡಿದವರಂತೆ ಕುಳಿತುಬಿಟ್ಟಿದ್ದರು. ಈ ಪ್ರತಿಭಟನೆಯು ದಿವಾನ್ ಮಿರ್ಜಾರವರ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡಿತು.

ಆಂಗ್ಲ ಭಾರತದಲ್ಲಿ ಹರಡಿದ ಚೈತನ್ಯವು ಮೈಸೂರು ಸಂಸ್ಥಾನದಲ್ಲಿಯೂ ಪ್ರಭಾವ ಬೀರಿತು. ಸಂಸ್ಥಾನದ ಪ್ರಜೆಗಳು ಶ್ರೀಮನ್ಮಹಾರಾಜರ ಆಶ್ರಯದಲ್ಲಿ ಜವಾಬ್ದಾರೀ ಸರಕಾರ ಸ್ಥಾಪನೆ ಕೋರುತ್ತಿದ್ದುದರಿಂದ, ಅದು ಸಿಗುವವರೆಗೂ ಆಡಳಿತವರ್ಗಕ್ಕೂ ಜನತೆಗೂ ತಿಕ್ಕಾಟವಿರಬೇಕಾಯಿತು. ಜನತೆಯ ಆಶೋತ್ತರಗಳನ್ನು ಪೂರ್ಣಗೊಳಿಸಲು ನಿಧಾನವಾಗಿ ಆಲೋಚನೆ ಮಾಡಿ ತಕ್ಕ ಶಿಫಾರಸುಗಳನ್ನು ಮಾಡಲು ಒಂದು ಮಿಶ್ರ ಸಮಿತಿ ನೇಮಿಸಲಿ ಅಥವಾ ಚಕ್ರಗೋಷ್ಠಿಯನ್ನು ಕರೆಯಲೆಂದು ಕಾಂಗ್ರೆಸ್ ನಾಯಕರು ಕೋರಿದರು. ಪ್ರಜಾಪ್ರತಿನಿಧಿ ಸಭೆಯ ಮುಕ್ತಾಯ ಭಾಷಣ ಮಾಡುವ ಸಂದರ್ಭದಲ್ಲಿ ದಿವಾನರು ಆಡಳಿತ ವ್ಯವಸ್ಥೆಯನ್ನು ಪರಿವರ್ತನೆ ಮಾಡುವ ಉದ್ದೇಶವಿಲ್ಲವೆಂದೂ, ಪ್ರಜಾಪ್ರಭುತ್ವ ವ್ಯವಸ್ಥೆಯು ಎಲ್ಲಾ ಕಡೆಗಳಲ್ಲಿಯೂ ಕುಸಿಯುತ್ತಿರುವಾಗ, ಮೈಸೂರು ಜನರು ಜವಾಬ್ದಾರೀ ಸರಕಾರ ಸ್ಥಾಪನೆಯನ್ನು ಕೋರುತ್ತಿರುವುದಕ್ಕೆ ತಮ್ಮ ಆಶ್ಚರ್ಯವನ್ನೂ ವ್ಯಕ್ತಪಡಿಸಿದರು. ದಿವಾನರ ಭಾಷಣದಿಂದ ಅಸಮಾಧಾನಗೊಂಡು ಸಂಸ್ಥಾನದ ಎಲ್ಲಾ ಪಕ್ಷಗಳ ಸದಸ್ಯರೂ ಐಕ್ಯಮತ್ಯದಿಂದ ವರ್ತಿಸಿ ಶಾಸನ ಸಮ್ಮತವಾದ ಕಾರ್ಯಗಳನ್ನು ಕೈಗೊಳ್ಳಲು ತೀರ್ಮಾನಿಸಿದರು.

ಹೀಗೆ ಕಾಂಗ್ರೆಸ್ ಬಲ ಹೆಚ್ಚಿದಂತೆ ಅದರ ಪ್ರಚಾರ ಕಾರ್ಯವೂ ತೀವ್ರಗೊಂಡಿತು. ವೀರಣ್ಣಗೌಡರು, ಸೂರ್ಯನಾರಾಯಣ ಪಂಡಿತರು ಮತ್ತು ತಾಯಮ್ಮನವರ ಜೊತೆಯಲ್ಲಿ, ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಕಾಂಗ್ರೆಸ್ಸಿನ ಸಂದೇಶವನ್ನು ತಿಳಿಸಿ, ಮೈಸೂರಿನಲ್ಲಿ ಜವಾಬ್ದಾರೀ ಸರಕಾರದ ಅವಶ್ಯಕತೆಯನ್ನು ಜನಗಳಿಗೆ ಮನದಟ್ಟು ಮಾಡಿ, ಜನ ಬೆಂಬಲವನ್ನು ಕ್ರೋಢೀಕರಿಸಿದರು. ಇದಕ್ಕೆ ವಿರುದ್ಧವಾಗಿ ದಿವಾನ್ ಮಿರ್ಜಾರವರು

ಕಾಂಗ್ರೆಸ್ಸಿನ ಚಳುವಳಿಯನ್ನು ಹತ್ತಿಕ್ಕಲು ತನ್ನ ಪರವಾದ ರಾಜಕೀಯ ಮುಂದಾಳುಗಳನ್ನು ಗುಂಪುಕಟ್ಟಿ ಬಲಪಡಿಸಿದರು. ಬಿ.ಎಸ್. ಪುಟ್ಟಸ್ವಾಮಿ, ನಾಗಮಂಗಲದ ಶಂಕರಲಿಂಗೇಗೌಡರು, ಸೋಮನಹಳ್ಳಿ ಎಸ್.ಸಿ. ಮಲ್ಲಯ್ಯ, ಎಂ.ಸಿ. ಲಿಂಗೇಗೌಡರು, ಚನ್ನಪಟ್ಟಣದ ಮುನಿಸ್ವಾಮಿ ಐಯ್ಯರು, ಕೃಷ್ಣರಾಜ ನಗರದ ಬಳೆ ಸಿದ್ದಲಿಂಗಶೆಟ್ಟರು ಇನ್ನೂ ಅನೇಕರು, ದಿವಾನ್ ಮಿರ್ಜಾರವರಿಗೆ ಬೆಂಬಲವಾಗಿ ನಿಂತು ಮೈಸೂರು ರಾಜ್ಯದಲ್ಲಿ ಪ್ರಜಾ ಸರಕಾರದ ಅನವಶ್ಯಕತೆಯನ್ನು ಪ್ರಚಾರ ಮಾಡುತ್ತಿದ್ದರು. ಕಾಂಗ್ರೆಸ್ ಚಳುವಳಿಗೆ ವಿರೋಧವಾಗಿ ಬಲವಾದ ಪ್ರಚಾರ ನಡೆಸಿ ದಿವಾನರಿಗೆ ಬೆಂಬಲ ನೀಡುತ್ತಿದ್ದರು.

ನಾರೀಮನ್ ಗಲಭೆ

ಮುಂಬೈ ಕಾಂಗ್ರೆಸ್ ನಾಯಕ ಪಾರ್ಸಿ ಚಳುವಳಿಗಾರ ಕೆ. ಎಫ್. ನಾರೀಮನ್ನರು 1937ರ ಅಕ್ಟೋಬರ್‌ನಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿಯಿತ್ತರು. ಕೆಲವು ಕಡೆಗಳಲ್ಲಿ ಭಾಷಣ ಮಾಡಿ ಕಾಂಗ್ರೆಸ್ ಸಂಸ್ಥೆಗೆ ಬೆಂಬಲ ನೀಡುವಂತೆ ಜನತೆಯನ್ನು ಕೇಳಿಕೊಂಡರು. ಮೈಸೂರು ನಗರದ ಟೌನ್‌ಹಾಲ್ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಮೈಸೂರು ಸಂಸ್ಥಾನ ಸರಕಾರವು ದಸರಾ ಉತ್ಸವಕ್ಕೆ ಅನ್ಯಾಯವಾಗಿ ಹಣವ್ಯಯಮಾಡುತ್ತಿದೆಯೆಂದು ಕಟುವಾಗಿ ಟೀಕಿಸಿದರು. ಮುಂಬೈಗೆ ಹಿಂದಿರುಗುವಾಗ ಬೆಂಗಳೂರು ನಗರದಲ್ಲಿ ವಿದ್ಯಾರ್ಥಿಗಳು ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಲು ಒಪ್ಪಿದರು. ಈ ಸಭೆಯು ನಗರದ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಎದುರಿಗಿರುವ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯಪಾತ್ರ ವಹಿಸಿರುವ ಬನಪ್ಪಾ ಪಾರ್ಕಿನಲ್ಲಿ ನಡೆಯಿತು. ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಯುವಕರು ಸಾರ್ವಜನಿಕರು ಬಾಗವಹಿಸಿದ್ದರು. ಮಧ್ಯಾಹ್ನ 3 ಗಂಟೆಯಲ್ಲಿಯೇ ಪೋಲಿಸ್ ನಿಯಮದ 39ನೇ ವಿಧಿಯಂತೆ, ನಗರ ನ್ಯಾಯಾಧೀಶರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡದಂತೆ ಪ್ರತಿ ಬಂಧಕಾಜ್ಞೆಯೊಂದನ್ನು ಹೊರಡಿಸಿ ಅದನ್ನು ನಾರೀಮನ್ನರ ಮೇಲೆ ಜಾರಿ ಮಾಡಿದರು. ಆದಕ್ಕೆ ಉತ್ತರವಾಗಿ ನಾರೀಮನ್ನರು ತಾವು ರಾಜಕೀಯ ಭಾಷಣ ಮಾಡುವುದಿಲ್ಲವೆಂದೂ, ವಿದ್ಯಾರ್ಥಿಗಳನ್ನು

ಉದ್ದೇಶಿಸಿ ಮಾತ್ರ ಮಾತನಾಡುವುದಾಗಿಯೂ ಸರಕಾರದ ಅಧಿಕಾರಿಗಳಿಗೆ ತಿಳಿಸಿದರು.

ನಾರೀಮನ್ನರು ನಿಯಮಿತ ವೇಳೆಗೆ ಬನಪ್ಪಾ ಪಾರ್ಕಿಗೆ ಬಂದಾಗ ಜನರು ಉತ್ಸಾಹಗೊಂಡರು. ಮೈಸೂರು ವಿದ್ಯಾರ್ಥಿ ಸಂಘಗಳನ್ನು ಉದ್ದೇಶಿಸಿ, 1937ರ ಅಕ್ಟೋಬರ್ 24ರ ಭಾನುವಾರದಂದು ಬೆಂಗಳೂರು ನಗರದ ಬನಪ್ಪಾ ಪಾರ್ಕಿನಲ್ಲಿ ಬಾಷಣ ಮಾಡುತ್ತಾ, ದೈನಂದಿನ ಜೀವನದಲ್ಲಿ ಜಯುಗಳಿಸಲು ನಿರಂತರ ಸಹನೆ ಮತ್ತು ನಿಜಸಾಧನೆಗಳೇ ಮುಖ್ಯ ಕಾರಣ ವೆಂದು ತಿಳಿಸಿದರು. ಮುಂದುವರಿದು "ನಿಮ್ಮ ಸರಕಾರದ ವಿಚಿತ್ರ ವರ್ತನೆ ನನಗೆ ಅರ್ಥವಾಗುವುದಿಲ್ಲ. ಈ ಮೂರು ನಾಲ್ಕು ದಿನಗಳಿಂದ ನಿಮ್ಮ ರಾಜ್ಯ ದಲ್ಲಿ ಹತ್ತಾರು ಕಡೆ ಸಂಚಾರ ಮಾಡಿ, ರಾಜಕೀಯ ಭಾಷಣ ಮಾಡಿ ಬಂದಮೇಲೆ, ಒಂದು ಕಡೆಯೂ ನನಗೆ ಪ್ರತಿಬಂಧಕಾಜ್ಞೆ ಜಾರಿ ಮಾಡಲಿಲ್ಲ. ಇಲ್ಲಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡುವವನಿದ್ದೇನೆ, ಇದು ರಾಜಕೀಯ ಬಾಷಣವಲ್ಲದಿದ್ದರೂ ನಿಮ್ಮ ಸರಕಾರಕ್ಕೆ ಬೇಡವಾಗಿದೆ" ಎಂದು ಹೇಳಿದರು. ಉತ್ತಮ ಪೌರರಾಗಲು ಜ್ಞಾನ ಸಂಪಾದಿಸುವುದು ನಿಮ್ಮ ಗುರಿಯಾಗಿರಬೇಕು. ಇದಕ್ಕಾಗಿ ರಾಷ್ಟ್ರದ ನಾಯಕ ಲೋಕಮಾನ್ಯ ತಿಲಕರನ್ನು ಮಾದರಿಯಾಗಿಟ್ಟುಕೊಂಡು ಅವರನ್ನು ಅನುಕರಿಸಬೇಕೆಂದು ತಿಳಿಸಿದರು. ಅಷ್ಟರಲ್ಲಿ ಪೊಲೀಸ್ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಸಭೆ ಯನ್ನು ನಡೆಸದಂತೆ ಪ್ರಯತ್ನಿಸಿದರು. ನಾರೀಮನ್ನರು ತಮ್ಮ ಭಾಷಣ ಮುಗಿಸಲು ಐದು ನಿಮಿಷ ವೇಳೆಯನ್ನು ಕೇಳಿದರು. ಆದರೆ ಪೊಲೀಸ್ ಅಧಿಕಾರಿಗಳು ಕುಪಿತರಾಗಿ ತಾಳ್ಮೆಯನ್ನು ಕಳೆದುಕೊಂಡು ಅಸಭ್ಯರೀತಿಯಲ್ಲಿ ವರ್ತಿಸಿ ನಾರೀಮನ್ನರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಹೋದರು. ಪರಿಣಾಮವಾಗಿ ಜನರು ರೊಚ್ಚಿಗೆದ್ದು ಗಲಭೆಯುಂಟಾಗಿ ಪೊಲೀಸರಿಗೆ ಕಲ್ಲು ಹೊಡೆದರು. ನಗರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಏರ್ಪಟ್ಟಿತು. ಪೊಲೀಸರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರು. ಕೆಲವರನ್ನು ದಸ್ತಗಿರಿ ಮಾಡಿ ಜೈಲಿಗೆ ಕಳಿಸಿದರು. ಕೆಲವರನ್ನು ಗಡೀಪಾರು ಮಾಡಿದರು. ಕೆಲವರ ಮೇಲೆ ಗಲಭೆಗೆ ಕಾರಣರೆಂದು ಕೋರ್ಟಿನಲ್ಲಿ ಕೇಸ್ ದಾಖಲೆ ಮಾಡಿದರು.

ದಸ್ತಗಿರಿಯಾಗಿದ್ದ ನಾರೀಮನ್ನರನ್ನು ಅಕ್ಟೋಬರ್ 25ರ ಸಂಜೆ ಬಿಡುಗಡೆ ಮಾಡಿ ರೈಲು ಹೊರಡುವ ವೇಳೆಗೆ ಸರಿಯಾಗಿ ಬೆಂಗಳೂರು ಈಸ್ಟ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ರೈಲಿನಲ್ಲಿ ಕೂರಿಸಿ ಸಂಸ್ಥಾನದಿಂದಾಚೆಗೆ ಕಳಿಸಿಬಿಟ್ಟರು. ಹೊರಡುವ ಮುನ್ನ ಒಂದು ಹೇಳಿಕೆಯನ್ನು ನೀಡಿ ಪೊಲೀಸರು ತಾನು ಕೇಳಿದ್ದ 5 ನಿಮಿಷ ವೇಳೆಯನ್ನು ಕೊಟ್ಟುಬಿಟ್ಟಿದ್ದರೆ ಗಲಭೆಯುಂಟಾಗುತ್ತಿರಲಿಲ್ಲವೆಂದು ನಾರೀಮನ್ನರು ತಿಳಿಸಿ, ರಾಷ್ಟ್ರಪ್ರೇಮದಲ್ಲಿ ಬೆಂಗಳೂರಿನ ಜನತೆಯು ಇತರರಿಗಿಂತ ಹಿಂದಿಲ್ಲವೆಂದೂ ಹೇಳಿದರು. ಈ ಗಲಭೆ ಸಂಬಂಧದಲ್ಲಿ ಕೆಲವರ ಮೇಲೆ ಮಾಡಿದ್ದ ಕೇಸುಗಳನ್ನು ವಿಚಾರಣೆ ಮಾಡಿ ಸೆಷನ್ಸ್ ನ್ಯಾಯಾಧೀಶರು 1938ರ ಫೆಬ್ರವರಿಯ ಕೊನೆಯಲ್ಲಿ ತೀರ್ಮಾನ ಕೊಟ್ಟು, 9 ಜನರಿಗೆ ಶಿಕ್ಷೆ ವಿಧಿಸಿ ಉಳಿದ ಮೂವರನ್ನು ಖುಲಾಸೆ ಮಾಡಿದರು. ಶಿಕ್ಷೆಗೊಳಗಾದವರಲ್ಲಿ ಲಕ್ಷ್ಮಿ, ನರಸಯ್ಯ, ಭೀಮಕುಮಾರ್, ಕೃಷ್ಣಪ್ಪ, ಸೀನಪ್ಪ, ಎಸ್.ಎ. ಗುಪ್ತ, ಶ್ರೀಕಂಠಯ್ಯ ಎಂಬುವವರಿಗೆ ತಲಾ 6 ತಿಂಗಳ ಕಠಿಣ ಸಜಾವನ್ನೂ, ಪೊನ್ನಯ್ಯ, ರಾಮಮೂರ್ತಿ ಮತ್ತು ಜಿ. ಆರ್. ಸ್ವಾಮಿಯವರುಗಳಿಗೆ ತಲಾ 3 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಈ ತೀರ್ಮಾನ ಕೊಟ್ಟಾಗ ಗಲಭೆಯ ದಿನ ಪೋಲಿಸರ ವರ್ತನೆಯನ್ನು ನ್ಯಾಯಾಧೀಶರು ಖಂಡಿಸಿ, ಅಧಿಕಾರಿಗಳು ತಾಳ್ಮೆ ಹಾಗೂ ದೂರದೃಷ್ಟಿಯಿಂದ ವರ್ತಿಸಿದ್ದರೆ ಗಲಭೆಗೆ ಅವಕಾಶವೇ ಇರಲಿಲ್ಲವೆಂದು ಹೇಳಿದರು. ಪೊಲೀಸ್ ಇನ್ಸ್‌ಪೆಕ್ಟರವರು ಅಸಂಬದ್ಧ ರೀತಿಯಲ್ಲಿ ವರ್ತಿಸಿದುದರಿಂದಲೇ ಪರಿಸ್ಥಿತಿ ಹದಗೆಟ್ಟು ಗಲಭೆಗೆ ಕಾರಣವಾಯಿತು ಎಂದರು. ಆರಂಭದಲ್ಲಿ ಸಭೆಯು ಶಾಂತರೀತಿಯಿಂದಲೇ ಇತ್ತು. ಆದರೆ ಸಾರ್ವಜನಿಕ ಸಭೆ ನಡೆಯುತ್ತಿರುವಾಗ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ ನಾಯಕರಲ್ಲೊಬ್ಬರಾದ ನಾರೀಮನ್ನರನ್ನು ದಸ್ತಗಿರಿ ಮಾಡಿದ್ದು ಸಾರ್ವಜನಿಕರ ಸಹನೆಯನ್ನು ಪರೀಕ್ಷಿಸುವಂತಿತ್ತು. ಪೊಲೀಸರು ಸಂದರ್ಭೋಚಿತವಾಗಿ ನಾರಿಮನ್ನರು ಕೇಳಿದಂತೆ 5 ನಿಮಿಷ ವೇಳೆಯನ್ನು ಕೊಟ್ಟಿದ್ದರೆ ಬನಪ್ಪಾ ಪಾರ್ಕಿನಲ್ಲಿ ನಡೆದ ಘಟನೆಗಳು ನಡೆಯುತ್ತಲೇ ಇರಲಿಲ್ಲವೆಂದು ಹೇಳಿದರು. ಪೊಲೀಸರ ಅಸಭ್ಯ ವರ್ತನೆಯಿಂದ, ಜನರೆಲ್ಲರೂ ಕಾನೂನು ಬಾಹಿರವಾಗಿದ್ದರೂ ಸಭೆ ಸೇರಿ ಗಲಭೆಗೆ ಅವಕಾಶವಾಯಿತು. ಹೀಗೆ ಪೊಲೀಸರ ಅಸಭ್ಯವರ್ತನೆಯಿಂದಲೇ

ಈ ಗಲಭೆ ನಡೆಯಿತೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು. ಪೊಲೀಸರು ತಾಳ್ಮೆಯಿಂದ ವರ್ತಿಸಿ ಚಾಕಚಕ್ಯತೆಯಿಂದ ನಡೆಯುವ ಬದಲು ತಮ್ಮ ದರ್ಪ ಮತ್ತು ಅಧಿಕಾರವನ್ನು ತೋರಿಸಲು ಪ್ರಯತ್ನಿಸಿದುದರಿಂದ ಗಲಭೆಯುಂಟಾಯಿತು. ಶಿಕ್ಷೆಗೊಳಗಾಗಿದ್ದವರೆಲ್ಲರೂ ಹೈಕೋರ್ಟಿಗೆ ಅಪೀಲು ಹಾಕಿದರು. ಅಲ್ಲಿ ಅವರೆಲ್ಲರೂ ಖುಲಾಸೆ ಮಾಡಲ್ಪಟ್ಟರು.

ಸಂಸ್ಥಾನಗಳ ಪ್ರಜಾ ಸಮ್ಮೇಳನ

ಜವಾಬ್ದಾರೀ ಸರಕಾರ ಮತ್ತು ಕಾಂಗ್ರೆಸ್ ಧ್ವಜದ ಅಂಗೀಕರಣೆಗಾಗಿ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಚಳುವಳಿಯನ್ನು ತುಳಿಯಲು, ಸಂಸ್ಥಾನದ ಸರಕಾರವು ಬಹುವಾಗಿ ಪ್ರಯತ್ನಿಸಿತು. ಅನೇಕ ನಾಯಕರು ಜೈಲಿಗೆ ಕಳುಹಿಸಲ್ಪಟ್ಟರು. ಆದರೆ ಜೈಲಿನಲ್ಲಿ ಅವರನ್ನು ಸರಿಯಾಗಿ ಕಾಣುತ್ತಿರಲಿಲ್ಲ. ಈ ವೇಳೆಯಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದಂತೆಯೇ, ಇನ್ನಿತರ ದೇಶೀಯ ಸಂಸ್ಥಾನಗಳಲ್ಲಿಯೂ ಜವಾಬ್ದಾರೀ ಸರಕಾರಕ್ಕಾಗಿ ಚಟುವಟಿಕೆಗಳು ಆರಂಭವಾದವು. ಈ ಚಟುವಟಿಕೆಗಳ ಸಂಘಟನೆಗಾಗಿ ಸಂಸ್ಥಾನಗಳ ಪ್ರಜಾ ಸಮ್ಮೇಳನ (States Peoples Conference) ಸ್ಥಾಪಿಸಲ್ಪಟ್ಟಿತು. ಪಟ್ಟಾಭಿ ಸೀತಾರಾಮಯ್ಯನವರು ಅಧ್ಯಕ್ಷರಾಗಿಯೂ, ಗುಜರಾತಿನ ಬಲವಂತರಾಯ್ ಮೆಹತಾರವರು ಕಾರ್ಯದರ್ಶಿಯಾಗಿಯೂ ನೇಮಕವಾದರು. ನಮ್ಮ ಸಂಸ್ಥಾನದ ರಾಜಕೀಯ ಬೆಳವಣಿಗೆಯ ಅಧ್ಯಯನ ಮಾಡುವ ಉದ್ದೇಶದಿಂದ ಈ ನಾಯಕರಿಬ್ಬರೂ ಮೈಸೂರು ಸಂಸ್ಥಾನಕ್ಕೆ 1937ರ ಡಿಸೆಂಬರ್ (19–29) ನಲ್ಲಿ ಭೇಟಿಯಿತ್ತರು. ಸಂಸ್ಥಾನದಲೆಲ್ಲಾ ಪ್ರವಾಸಮಾಡಿ, ರಾಷ್ಟ್ರೀಯ ಕಾಂಗ್ರೆಸ್ಸಿಗೆ ಒಂದು ವರದಿಯನ್ನೊಪ್ಪಿಸಿ, ಪ್ರಜೆಗಳ ಚಳುವಳಿಯ ಉದ್ದೇಶಗಳನ್ನೂ ಸರಕಾರದ ದೌರ್ಜನ್ಯವನ್ನೂ ತಿಳಿಸಿದರು. ಪಟ್ಟಾಭಿ ಸೀತಾರಾಮಯ್ಯ ಮತ್ತು ಮೆಹತಾರವರೊಡನೆ ಹೆಚ್. ಸಿ. ದಾಸಪ್ಪನವರೂ ಸಂಚಾರ ಮಾಡಿದರು. ಅದಕ್ಕಾಗಿ ಸಂಸ್ಥಾನ ಸರಕಾರವು ಅವರನ್ನು ಬಂಧಿಸಿತು. ಇನ್ನೂ ಅನೇಕ ನಾಯಕರೂ ಬಂಧಿಸಲ್ಪಟ್ಟರು. ಈ ಬಂಧನಗಳನ್ನೆಲ್ಲಾ ವೃತ್ತಪತ್ರಿಕೆಗಳು ಖಂಡಿಸಿದವು. ವೃತ್ತ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿ **ಜನವಾಣಿ** ಮತ್ತು **ಪ್ರಜಾಮತದ** ಸಂಪಾದಕ ಬಿ. ಎನ್. ಗುಪ್ತಾ ಮತ್ತು ಕೊಡಗಿನ

ಸಿ. ಬಿ. ಪೊನ್ನಯ್ಯರಿಬ್ಬರನ್ನೂ ಗಡೀಪಾರು ಆಜ್ಞೆಯ ಮೂಲಕ ಸಂಸ್ಥಾನದಿಂದ ಹೊರಕ್ಕೆ ಕಳಿಸಿದರು. 1938ರ ಜನವರಿಯಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡಿನ ಎರಡನೆ ರಾಷ್ಟ್ರಕೂಟವು, ಚಿತ್ರದುರ್ಗದಲ್ಲಿ ಬೋರ್ಡಿನ ಅಧ್ಯಕ್ಷ ಟಿ. ಸಿದ್ದಲಿಂಗಯ್ಯನವರು ಜೈಲಿನಲ್ಲಿದ್ದುದರಿಂದ, ಕೆ. ಚೆಂಗಲರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಬಂಧನದಲ್ಲಿದ್ದ ಕಾಂಗ್ರೆಸ್ ನಾಯಕರುಗಳನ್ನೆಲ್ಲಾ ಸರಕಾರವು ಬೇಷರತ್ತಾಗಿ ಫೆಬ್ರವರಿಯಲ್ಲಿ ಬಿಡುಗಡೆ ಮಾಡಿತು.

ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮೈಸೂರು ಚಳುವಳಿ

ರಾಷ್ಟ್ರೀಯ ಕಾಂಗ್ರೆಸ್‌ನ ಅಂಗವಾಗಿದ್ದ ಮೈಸೂರು ಕಾಂಗ್ರೆಸ್ ಸಮಿತಿಯು ಚಳುವಳಿಯನ್ನು ಆರಂಭಿಸಿದ ಮೇಲೆ ಸಂಸ್ಥಾನದಲ್ಲಿ ರಾಜಕೀಯ ಪರಿಸ್ಥಿತಿ ಬದಲಾಯಿಸಲ್ಪಟ್ಟಿತು. ಇದೇ ವೇಳೆಯಲ್ಲಿ ಕಲಕತ್ತಾದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ನಡೆಯಿತು. ಕೆ. ಸಿ ರೆಡ್ಡಿ ಮತ್ತಿತರ ಕಾಂಗ್ರೆಸ್ ನಾಯಕರು ಅಧಿವೇಶನಕ್ಕೆ ಹೋಗಿ ಅಲ್ಲಿ ಕಾಂಗ್ರೆಸ್ಸಿನ ರಾಷ್ಟ್ರೀಯ ಮುಖಂಡರುಗಳನ್ನು ಭೇಟಿ ಮಾಡಿ ಮೈಸೂರು ಚಳುವಳಿಯ ಬಗ್ಗೆ ವಿಶ್ವಾಸ ಮತ್ತು ಸಹಾನುಭೂತಿ ಬೆಳೆಯುವಂತೆ ಮಾಡಿದರು. ಜವಾಬ್ದಾರೀ ಸರಕಾರದ ಸ್ಥಾಪನೆ ಮತ್ತು ಜನತೆಯ ಆಜನ್ಮ ಸಿದ್ಧವಾದ ಹಕ್ಕು ಬಾಧ್ಯತೆಗಳಿಗಾಗಿ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಚಳುವಳಿಯಲ್ಲಿ ತಮ್ಮ ಸಹಾನುಭೂತಿ ವ್ಯಕ್ತಪಡಿಸಿ, ಮೈಸೂರು ಕಾಂಗ್ರೆಸ್ ಬೋರ್ಡಿನ ಕಾರ್ಯವನ್ನು ಪ್ರಶಂಸಿಸಿ, 1937ರ ನವೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ನಿರ್ಣಯ ಮೈಸೂರು ಕಾಂಗ್ರೆಸ್ ಸದಸ್ಯರಲ್ಲಿ ಚೈತನ್ಯವನ್ನುಂಟು ಮಾಡಿತು. ಮೈಸೂರು ಕಾಂಗ್ರೆಸ್ ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿ, ಕಾಂಗ್ರೆಸ್ ತನ್ನ ಹೋರಾಟವನ್ನು ಸಭೆಗಳ ಮುಖಾಂತರ ಪ್ರಾರಂಭಮಾಡಿತು. ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಪ್ರಚಾರ ಸಭೆಗಳು ಹೆಚ್ಚಾಗಿ ನಡೆದವು. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದರು. ದಿನಗಳುರುಳಿದಂತೆ ಕಾಂಗ್ರೆಸ್ಸಿನ ಪ್ರಭಾವ ಅದ್ಭುತವಾಗಿ ಬೆಳೆಯಿತು.

ಮೈಸೂರು ಚಳುವಳಿಯ ಮೇಲಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯವನ್ನು ಗಾಂಧೀಜಿಯವರು ವಿರೋಧಿಸಿ, ಸಂಸ್ಥಾನಗಳ ರಾಜಕೀಯದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರವೇಶ ಸರಿಯಲ್ಲವೆಂದು ತಮ್ಮ ಅಭಿಪ್ರಾಯವನ್ನು ತಮ್ಮ ವಾರಪತ್ರಿಕೆ '**ಹರಿಜನ**'ದಲ್ಲಿ ಒಂದು ಲೇಖನದ ಮೂಲಕ ವ್ಯಕ್ತಪಡಿಸಿದರು. ಗಾಂಧೀಜಿಯವರ ಈ ಹೇಳಿಕೆಯನ್ನು ಸಂಸ್ಥಾನ ಸರಕಾರವು ಉಪಯೋಗಿಸಿಕೊಂಡು, ಸಂಸ್ಥಾನದ ಚಳುವಳಿಗೆ ಮಹಾತ್ಮರ ಬೆಂಬಲವಿಲ್ಲವೆಂದು ಬಿರುಸಿನ ಪ್ರಚಾರ ಮಾಡಿ, ಹೆಚ್ಚು ಜನರು ಚಳುವಳಿಯಲ್ಲಿ ಭಾಗವಹಿಸುವುದನ್ನು ತಡೆಯಲೆತ್ನಿಸಿತು. ಆದರೆ ಸರಕಾರದ ಈ ಪ್ರಯತ್ನಗಳಿಗೆ ಜನತೆಯು ಸೊಪ್ಪು ಹಾಕಲಿಲ್ಲ. ಹೀಗೆ ರಾಷ್ಟ್ರೀಯ ನಾಯಕರಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಎರಡು ಗುಂಪುಗಳಾಗಿ, ಒಂದು ಗುಂಪು ಸಂಸ್ಥಾನಗಳ ರಾಜಕೀಯದಲ್ಲಿ ಕಾಂಗ್ರೆಸ್ ಪ್ರವೇಶವನ್ನು ವಿರೋಧಿಸಿ ಗಾಂಧೀಜಿಯವರ ಅಭಿಪ್ರಾಯಗಳನ್ನು ಅನುಮೋದಿಸಿತು. ಮತ್ತೊಂದು ಗುಂಪು ಸಂಸ್ಥಾನಗಳ ಸತ್ಯಾಗ್ರಹ ಚಳುವಳಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿತ್ತು. ಜವಹರಲಾಲ್ ನೆಹರೂ, ಜಯಪ್ರಕಾಶನಾರಾಯಣ್, ಆಚಾರ್ಯನರೇಂದ್ರದೇವ, ಯೂಸಫ್ ಮೆಹರಾಲಿ ಮತ್ತಿತರರು ಸಂಸ್ಥಾನಗಳ ಜನರಿಗೆ ಅವರ ಹೋರಾಟದಲ್ಲಿ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದರು. ಇವರೆಲ್ಲರ ಪ್ರಭಾವದಿಂದ ಕ್ರಮೇಣ ಸಂಸ್ಥಾನಗಳ ರಾಜಕೀಯದಲ್ಲಿಯೂ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸುವ ತೀರ್ಮಾನ ಕೈಗೊಂಡಿತು. ಆಂಗ್ಲ ಭಾರತದಲ್ಲಿನ ಕಾಂಗ್ರೆಸ್ ಮಂತ್ರಿ ಮಂಡಲಗಳು ಅಕ್ಕಪಕ್ಕದ ಸಂಸ್ಥಾನಗಳ ಚಳುವಳಿಗಳಿಗೆ ಸಹಾಯ ಮಾಡಿದವು. ಗಾಂಧೀಜಿಯು ಪುನಃ ಒಂದು ಹೇಳಿಕೆ ನೀಡಿ, ಇನ್ನಿತರ ಕಡೆಗಳಂತೆ ಸಂಸ್ಥಾನಗಳಲ್ಲಿಯೂ ಉಂಟಾದ ಜಾಗೃತಿ ಕಾಲದ ಸ್ಫೂರ್ತಿಯೆಂದರು. ಪ್ರಾಂತ್ಯಗಳ ಮಂತ್ರಿಮಂಡಲಗಳು, ಪಕ್ಕದ ಸಂಸ್ಥಾನಗಳ ದುರಾಡಳಿತವನ್ನು ವೀಕ್ಷಿಸಿ, ಆಂಗ್ಲ ಭಾರತದ ಕೇಂದ್ರ ಸರಕಾರಕ್ಕೆ ಸಲಹೆ ಕೊಡುವುದು ನೈತಿಕ ಹಕ್ಕು ಮತ್ತು ಕರ್ತವ್ಯವಾಗಿದೆಯೆಂದು ತಿಳಿಸಿದರು. ಜವಾಬ್ದಾರಿ ಸರಕಾರ ಕೊಡದಿದ್ದರೆ, ಕಾಂಗ್ರೆಸ್ಸಿನ ತಟಸ್ಥ ನೀತಿಯನ್ನು ಬಿಡಬೇಕಾಗುತ್ತದೆಂದೂ ಗಾಂಧೀಜಿ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗ್ರಂಥಾಲಯ

ಹರಿಪುರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

ಹೀಗೆ ರಾಷ್ಟ್ರನಾಯಕರಲ್ಲುಂಟಾದ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಸಂಸ್ಥಾನಗಳ ರಾಜಕೀಯದಲ್ಲಿ ಒಂದು ನಿಖರವಾದ ನೀತಿ ಅನುಸರಿಸಲು ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಈ ವಿಷಯ ಪುನಃ ವಿವರವಾಗಿ ಚರ್ಚಿಸಲ್ಪಟ್ಟಿತು. ಮೈಸೂರು ಸಂಸ್ಥಾನದಲ್ಲಿ ನಡೆದ ಘಟನೆಗಳಿಂದ ಮತ್ತು ಅಲ್ಲಿ ನಡೆಯುತ್ತಿದ್ದ ಅಸಹಕಾರಿ ಚಳುವಳಿಗಳ ಪರಿಣಾಮವಾಗಿ, ಸಂಸ್ಥಾನಗಳಲ್ಲಿ ನಡೆಯುತ್ತಿದ್ದ ಅಸಹಕಾರಿ ಚಳುವಳಿಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸುವುದು ಸರಿಯಲ್ಲವೆಂಬ ಭಾವನೆ ಬೆಳೆಯಿತು. ಹಾಗೆಯೇ ಚಳುವಳಿ ವೇಳೆಯಲ್ಲಿ ಕಾಂಗ್ರೆಸ್ ರಚನಾತ್ಮಕ ಕೆಲಸಗಳಲ್ಲಿ ಭಾಗವಹಿಸುವುದು ಅಸಾಧ್ಯವೆಂದೂ ಭಾವಿಸಿದರು.

ಈ ಮಧ್ಯೆ ವಾರ್ಧಾದಲ್ಲಿ ನಡೆದ ರಾಷ್ಟ್ರೀಯಕಾಂಗ್ರೆಸ್ ಕಾರ್ಯಸಮಿತಿಯಲ್ಲಿ, ದೇಶಿಯ ಸಂಸ್ಥಾನಗಳಲ್ಲಿ ರಾಷ್ಟ್ರೀಯ ಶಾಖೆಗಳು ಇರಕೂಡದೆಂದೂ, ಸಂಸ್ಥಾನಗಳಲ್ಲಿ ಜವಾಬ್ದಾರೀ ಸರಕಾರಕ್ಕಾಗಿ ನಡೆಯುವ ಹೋರಾಟವು ಅದಕ್ಕಾಗಿಯೇ ಸ್ಥಾಪಿತವಾದ ಸ್ವತಂತ್ರ ಸಂಸ್ಥೆಗಳ ಮೂಲಕ ನಡೆಯಬೇಕೇ ವಿನಃ ರಾಷ್ಟ್ರೀಯ ಕಾಂಗ್ರೆಸ್‌ನ ಹೆಸರಿನಲ್ಲಿ ನಡೆಯಕೂಡದೆಂದೂ ನಿರ್ಣಯ ಮಾಡಿದರು. 1938ರ ಫೆಬ್ರವರಿಯಲ್ಲಿ ಹರಿಪುರದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಗಾಂಧೀಜಿಯವರ ಪ್ರಭಾವದಿಂದ ಅಂಗೀಕೃತವಾದ ನಿರ್ಣಯವು ಸಾಧುವಾದದ್ದಾಗಿತ್ತು. ಸಂಸ್ಥಾನಗಳೂ ಕೂಡ ಭಾರತದ ಭಾಗವೆಂದು ಪರಿಗಣಿಸಿ, ಭಾರತದ ಇನ್ನಿತರ ಭಾಗಗಳಂತೆಯೇ ಅಲ್ಲಿಯೂ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಾಧಿಸುವುದೇ ಚಳುವಳಿಯ ಉದ್ದೇಶವೆಂದು ಹೇಳಿ, ಆ ಹೊರೆಯನ್ನು ತಾನೇ ವಹಿಸಿಕೊಳ್ಳುವುದು ಸಾಧ್ಯವಿಲ್ಲವೆಂದೂ ನಿರ್ಣಯ ಮಾಡಿತು. ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಜವಾಬ್ದಾರಿಯನ್ನು ಅಲ್ಲಿಯ ಜನರೇ ಹೊರಬೇಕೆಂದೂ ತಿಳಿಸಿತು. ಹರಿಪುರದ ನಿರ್ಣಯದ ಪ್ರಕಾರ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯು "ಪ್ರತ್ಯಕ್ಷವಾಗಿ ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಕೈಹಾಕುವುದಿಲ್ಲವೆಂದೂ ಆದರೆ ಕಾಂಗ್ರೆಸ್ ಸದಸ್ಯರು ವೈಯಕ್ತಿಕವಾಗಿ ಭಾಗವಹಿಸಬಹುದೆಂದೂ ಆಯಿತು. ಹಾಗೆಯೇ ದೇಶೀಯ ಸಂಸ್ಥಾನಗಳು ತಂತಮ್ಮ ರಾಜಕೀಯ ಚಳುವಳಿಗಾಗಿ ಸ್ವತಂತ್ರ ಸಂಸ್ಥೆಗಳನ್ನು

ಸ್ಥಾಪಿಸಿಕೊಳ್ಳಬೇಕೆಂದೂ ಆ ನಿರ್ಣಯದಲ್ಲಿ ಸೂಚಿಸಲ್ಪಟ್ಟಿತು." ಸಂಸ್ಥಾನಗಳಲ್ಲಿರುವ ರಾಷ್ಟ್ರೀಯ ಕಾಂಗ್ರೆಸ್ ಶಾಖೆಗಳು ರಾಜಕೀಯ ಧ್ಯೇಯಗಳನ್ನು ಬದಿಗಿಟ್ಟು, ಕೇವಲ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂದೂ ಮತ್ತು ರಾಜಕೀಯ ಗುರಿಸಾಧನೆಗಾಗಿ ಸಂಸ್ಥಾನಗಳಲ್ಲಿ ಪ್ರತ್ಯೇಕವಾದ ಸ್ವತಂತ್ರ ರಾಜಕೀಯ ಪಕ್ಷಗಳನ್ನು ಸ್ಥಾಪಿಸಿಕೊಳ್ಳಬಹುದೆಂದೂ ನಿರ್ಣಯವಾಯಿತು.

ಮೈಸೂರು ಕಾಂಗ್ರೆಸ್ ಜನನ

ಭಾರತದ ದೇಶೀಯ ಸಂಸ್ಥಾನಗಳಿಗೆ ಸಂಬಂಧಪಟ್ಟ ವಾರ್ಧಾ ನಿರ್ಣಯ "ಕಾಂಗ್ರೆಸ್ಸಿನ ಧ್ಯೇಯವು ಸಂಪೂರ್ಣ ಜವಾಬ್ದಾರೀ ಸರ್ಕಾರ ಸ್ಥಾಪನೆ ಮತ್ತು ವ್ಯಕ್ತಿ ಸ್ವಾತಂತ್ರ್ಯವೆಂಬಂಶವನ್ನು ನಿಸ್ಸಂದೇಹವಾಗಿ ಸ್ಥಿರಪಡಿಸಿದರೂ, ತಾತ್ಕಾಲಿಕವಾಗಿ ಸಂಸ್ಥಾನಗಳಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿಗಳ ಸ್ಥಾಪನೆಗೆ ಕೊಡಲಿಯಿಟ್ಟಿತು." ಹರಿಪುರದ ಕಾಂಗ್ರೆಸ್ ಅಧಿವೇಶನದ ನಿರ್ಣಯದ ಫಲವಾಗಿ "ಶಾಸನಾನುರೂಪವಾಗಿಯೂ ನ್ಯಾಯಸಮ್ಮತವಾಗಿಯೂ ರಾಜಕೀಯ ಧೋರಣೆಗಳನ್ನು ನಡೆಸಲು ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯಿಂದ ಪ್ರತ್ಯೇಕವಾದ ಒಂದು ಸಂಸ್ಥೆಯೇರ್ಪಡಬೇಕಾದ ಸನ್ನಿವೇಶವು ಒದಗಿತು." ಹರಿಪುರದ ನಿರ್ಣಯದಂತೆ ದೇಶೀಯ ಸಂಸ್ಥಾನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಶಾಖೆಗಳಿಗೆ ಅವಕಾಶ ಕೊಟ್ಟರೂ "ಸಂಸ್ಥಾನಗಳಲ್ಲಿ ಚುನಾವಣೆಗಳಾಗಲೀ, ಕಾನೂನು ಭಂಗ, ಸತ್ಯಾಗ್ರಹ ಮುಂತಾದ ಚಳುವಳಿಯಾಗಲೀ ನಡೆಯಬೇಕಾದರೆ, ಅದಕ್ಕಾಗಿ ಸಂಸ್ಥಾನಗಳ ಜನರು ಸ್ವತಂತ್ರ ರಾಜಕೀಯ ಸಂಸ್ಥೆಗಳನ್ನುಸ್ಥಾಪಿಸಿಕೊಳ್ಳಲೇಬೇಕೆಂಬ ನಿರ್ಣಯವು ಅಂಗೀಕೃತವಾಯಿತು."

ಹರಿಪುರದ ರಾಷ್ಟ್ರೀಯ ಕಾಂಗ್ರೆಸ್ಸಿನ ನಿರ್ಣಯದಲ್ಲಿ ಸೂಚಿತವಾದ ಸಲಹೆಯನ್ನು ಚರ್ಚಿಸಲು, ತಮ್ಮ ಮುಂದಿನ ಕಾರ್ಯಕ್ರಮಗಳನ್ನು ತೀರ್ಮಾನಿಸಲು 1938 ರ ಫೆಬ್ರುವರಿ 28ರಂದು ಮಹಾಶಿವರಾತ್ರಿ ಹಬ್ಬದ ದಿನವೇ ರಾಜಧಾನಿ ಮೈಸೂರು ನಗರದಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಸಭೆ ನಡೆಯಿತು. ದೀರ್ಘ ಚರ್ಚೆಯನಂತರ ಶ್ರೀಮನ್ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರೀ ಸರಕಾರವನ್ನು ಸ್ಥಾಪಿಸಲು ರಾಷ್ಟ್ರೀಯ ಕಾಂಗ್ರೆಸ್ಸಿಗೆ

ಸಂಬಂಧವಿಲ್ಲದೆ ಸ್ವತಂತ್ರವಾದ **'ಮೈಸೂರು ಕಾಂಗ್ರೆಸ್'** ಎಂಬ ಹೊಸ ಸಂಸ್ಥೆ ಆರಂಭಿಸಲು ತೀರ್ಮಾನಿಸಿತು. ಹೀಗೆ ಮೈಸೂರು ಸಂಸ್ಥಾನದಲ್ಲಿ 1938ರ ಫೆಬ್ರವರಿ 28 ಮಹಾಶಿವರಾತ್ರಿಯಂದು 'ಮೈಸೂರು ಕಾಂಗ್ರೆಸ್' ಸಂಸ್ಥೆಯು ಜನ್ಮ ತಾಳಿತು. ಟಿ. ಸಿದ್ದಲಿಂಗಯ್ಯನವರೇ ಪ್ರಥಮ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಈ ಹೊಸ 'ಮೈಸೂರು ಕಾಂಗ್ರೆಸ್'ನ ಸದಸ್ಯರಾಗಲು ಇಚ್ಛಿಸುವವರೆಲ್ಲರೂ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿರಲೇ ಬೇಕೆಂದೂ ತೀರ್ಮಾನವಾಯಿತು. ಈ ಸಭೆಯಲ್ಲಿ "ಹೊಸದಾಗಿ ಸ್ಥಾಪಿತ ವಾದ ಸಂಸ್ಥೆಗೆ ಮಹಾಜನರ ಅಂಗೀಕಾರ ಪಡೆಯುವುದಕ್ಕೂ, ಸಂದೇಹಾಸ್ಪದ ವಾಗಿ ವರ್ತಿಸುತ್ತಿರುವ ಸರಕಾರದವರನ್ನು ಯಾವ ರೀತಿ ಎದುರಿಸಬೇಕೆಂಬು ದನ್ನೂ, ಸರಕಾರದವರು ನೇಮಿಸಬೇಕೆಂದಿರುವ ರಾಜಕೀಯ ಸಮಿತಿಗಳ ಸಂಬಂಧವಾಗಿ ಯಾವ ನೀತಿಯನ್ನನುಸರಿಸಬೇಕೆಂಬುದನ್ನು ನಿರ್ಧರಿಸು ವುದಕ್ಕೂ," ಈ ಎಲ್ಲಾ ಕಾರಣಗಳಿಗೂ ಏಪ್ರಿಲ್‌ನಲ್ಲಿ ಕಾಂಗ್ರೆಸ್‌ನ ಸಮ್ಮೇಳನ ವನ್ನು ಶಿವಪುರದಲ್ಲಿ ನಡೆಸಬೇಕೆಂದು ತೀರ್ಮಾನವಾಯಿತು. ಶಿವಪುರದ ರಾಷ್ಟ್ರಕೂಟಕ್ಕೆ ಏರ್ಪಾಡುಗಳನ್ನು ಮಾಡಲು ಒಂದು ಸ್ವಾಗತ ಸಮಿತಿಯು ರಚಿಸಲ್ಪಟ್ಟಿತು. ಸ್ವಾಗತ ಸಮಿತಿಗೆ ಸಾಹುಕಾರ್ ಚನ್ನಯ್ಯನವರು ಅಧ್ಯಕ್ಷ ರಾಗಿಯೂ, ತಿರುಮಲೇಗೌಡ, ಹೆಚ್. ಸಿ. ದಾಸಪ್ಪ ಮತ್ತು ಎಸ್. ರಂಗ ರಾಮಯ್ಯನವರು ಉಪಾಧ್ಯಕ್ಷರಾಗಿಯೂ ಹೊಸಹಳ್ಳಿ ಕೆ. ವೀರಣ್ಣಗೌಡರು ಮತ್ತು ಎ.ಜಿ. ಬಂದೀಗೌಡರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟರು. ರಾಷ್ಟ್ರಕೂಟದ ಅಧ್ಯಕ್ಷರನ್ನಾಗಿ ಟಿ. ಸಿದ್ದಲಿಂಗಯ್ಯನವರನ್ನು ಬಹುಮತದಿಂದ ಆರಿಸಿದರು.

1938ರ ಮಾರ್ಚಿ 1 ರಂದು ಕಾಂಗ್ರೆಸ್ ನಾಯಕರಲ್ಲೊಬ್ಬರಾದ ಕೆ. ಟಿ. ಭಾಷ್ಯಂರವರು ದಿವಾನ್ ಮಿರ್ಜಾರವರೊಡನೆ ದೀರ್ಘಕಾಲ ಮಾತುಕತೆ ನಡೆಸಿದರು. ಸರಕಾರದೊಡನೆ ಸಮಾಲೋಚನೆ ನಡೆಸಿ, ಒಂದು ಒಪ್ಪಂದಕ್ಕೆ ಬರುವ ಉದ್ದೇಶದಿಂದ ಕಾಂಗ್ರೆಸ್ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯ ನವರು ಊಟಿಯಲ್ಲಿದ್ದ ದಿವಾನರನ್ನು ಮಾರ್ಚಿ 5 ಮತ್ತು 6 ರಂದು ಎರಡು ಸಾರಿ ಭೇಟಿಮಾಡಿದರು. ಮೈಸೂರು ಕಾಂಗ್ರೆಸ್ಸನ್ನು ಸರಕಾರ ಮಾನ್ಯಮಾಡಿ, ಸುಧಾರಣಾ ಸಮಿತಿಯಲ್ಲಿ ಅದಕ್ಕೆ ಪ್ರಾತಿನಿಧ್ಯ ಕೊಡಬೇಕೆಂದೂ, ಜವಾಬ್ದಾರಿ

ಸರಕಾರ ಸ್ಥಾಪನೆಯೇ ಸುಧಾರಣೆಗಳ ಅಂತಿಮ ಗುರಿಯೆಂದು ಸರಕಾರವು ಘೋಷಿಸಬೇಕೆಂದೂ ಕೇಳಿದರು. ಕಾಂಗ್ರೆಸ್ಸಿನ ಕೇಳಿಕೆಗಳಿಗೆ ದಿವಾನರು ಒಪ್ಪಲಿಲ್ಲ. ಕಾಂಗ್ರೆಸ್ ಅಧ್ಯಕ್ಷರು ಜವಾಬ್ದಾರೀ ಸರಕಾರವನ್ನು ತಕ್ಷಣವೇ ಸ್ಥಾಪಿಸಬೇಕೆಂದು ಕೇಳಲಿಲ್ಲ. ಕ್ರಮಕ್ರಮವಾಗಿ ಸುಧಾರಣೆಗಳನ್ನು ಜಾರಿಗೆ ತರುತ್ತ, ಕೊನೆಯಲ್ಲಿ ಜವಾಬ್ದಾರೀ ಸರಕಾರ ಸ್ಥಾಪಿಸುವುದೇ ಸರಕಾರದ ಉದ್ದಿಶ್ಯವೆಂಬುದನ್ನು ಸ್ಪಷ್ಟಪಡಿಸಬೇಕೆಂದು ಮಾತ್ರ ಕೇಳಿದರು. ಅದನ್ನೂ ದಿವಾನರು ಒಪ್ಪದೆಹೋಗಲು, ಕಾಂಗ್ರೆಸ್ ಸಂಸ್ಥೆಯ ಬಗ್ಗೆ ದಿವಾನರ ನಡವಳಿಕೆಯನ್ನು ಅಧ್ಯಕ್ಷ ಸಿದ್ಧಲಿಂಗಯ್ಯನವರು ಕಟುವಾಗಿ ಟೀಕಿಸಿದರು. ಹೋರಾಟವು ಅನಿವಾರ್ಯವಾಯಿತು. 1938ರ ಏಪ್ರಿಲ್ ಒಂದರಂದು ಸರಕಾರವು ಸುಧಾರಣೆಗಳ ಸಮಿತಿಯನ್ನು ಕೆ. ಆರ್. ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನೇಮಿಸಿತು. ಸಮಿತಿಯಲ್ಲಿ ಅಧ್ಯಕ್ಷರಲ್ಲದೆ ಹತ್ತೊಂಬತ್ತು ಜನ ಸದಸ್ಯರಿದ್ದರು.

ಶಿವಪುರದ ಕಾಂಗ್ರೆಸ್ ಅಧಿವೇಶನ

ಹರಿಪುರ, ಫೈಜ್‌ಪುರ ಮುಂತಾದ ಭಾರತದ ಸಣ್ಣ ಸಣ್ಣ ಗ್ರಾಮಗಳು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನಗಳಿಂದ ಇತಿಹಾಸ ಪ್ರಾಮುಖ್ಯತೆ ಪಡೆದಂತೆ, ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಶಿವಪುರದಲ್ಲಿ ಸೇರಿದುದರಿಂದ, ಶಿವಪುರವು ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಸ್ಥಾನ ಗಳಿಸಿದೆ. ನಿಜವಾಗಿಯೂ ಮೈಸೂರಿನಲ್ಲಿ ಆರಂಭವಾದ ಉಗ್ರರೂಪ ಚಳುವಳಿಗೆ ಶಿವಪುರ ಕಾಂಗ್ರೆಸ್ ಅಧಿವೇಶನವೇ ನಾಂದಿಯಾಯಿತು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಅಂದಿನಿಂದಲೇ ಆರಂಭವಾಯಿತೆನ್ನಬಹುದು. ಅದುವರೆಗೂ ನಡೆದದ್ದು ಗಣನೀಯವಾಗಿರಲಿಲ್ಲ, ಪ್ರಭಾವಶಾಲಿಯಾಗಿರಲಿಲ್ಲ. ಶಿವಪುರವು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶಿಂಷಾನದಿಯ ದಡದಲ್ಲಿರುವ ಒಂದು ಚಿಕ್ಕ ಗ್ರಾಮ. ಅಲ್ಲಿಯ ಜನರಲ್ಲಿ ರಾಷ್ಟ್ರಪ್ರೇಮ, ಉತ್ಸಾಹ ತುಂಬಿತ್ತು. ಏಪ್ರಿಲ್ 11, 12 ಮತ್ತು 13 ರಂದು ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕಾಗಿ, ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಸುಮಾರು ಇಪ್ಪತ್ತರಿಂದ ಮೂವತ್ತು ಸಾವಿರ ಜನ ಸೇರಿದರು. ಸ್ವಾಗತ ಸಮಿತಿ ಅಧ್ಯಕ್ಷ

ಎಸ್. ಚನ್ನಯ್ಯ ಮತ್ತು ಕಾರ್ಯದರ್ಶಿ ಹೆಚ್. ಕೆ. ವೀರಣ್ಣಗೌಡರ ಮುಂದಾಳತ್ವದಲ್ಲಿ ಅಧಿವೇಶನದ ಸೌಕರ್ಯಗಳೆಲ್ಲ ಏರ್ಪಡಿಸಲ್ಪಟ್ಟವು. ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ಧಲಿಂಗಯ್ಯನವರನ್ನು ಆದರದಿಂದ ಸ್ವಾಗತಿಸ ಲಾಯಿತು. ಜಿಲ್ಲೆಗೆ ಒಂದು ಜೊತೆಯಂತೆ ಎಂಟು ಜೊತೆ ಎತ್ತುಗಳನ್ನು ಹೂಡಿ ಅಲಂಕರಿಸಿದ್ದ ರಥದಲ್ಲಿ ಏಪ್ರಿಲ್ ಹತ್ತನೇ ತಾರೀಖು ಸಾಯಂಕಾಲ ವೈಭವದಿಂದಲೂ, ವಿಜೃಂಭಣೆಯಿಂದಲೂ ಅಧ್ಯಕ್ಷ ಟಿ. ಸಿದ್ದಲಿಂಗಯ್ಯನವರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಶಿವಪುರದಿಂದ 3.2 ಕಿಲೋ ಮೀಟರ್ ದೂರದಲ್ಲಿರುವ ಮದ್ದೂರಿನ ಪಶ್ಚಿಮ ಹೆಬ್ಬಾಗಿಲಿನಿಂದ ಅಧ್ಯಕ್ಷರ ಮೆರವಣಿಗೆಯು ಹೊರಟಿತು. 20–25 ಸಾವಿರ ಜನರು ಮೆರವಣಿಗೆಯಲ್ಲಿ ಭಾಗವಹಿಸಿ ಆನಂದಿಸಿದರು. ವಾದ್ಯದವರು, ಬ್ಯಾಂಡಿನವರೂ ಮುಂದೆಯೂ, ಎಂ. ಎನ್. ಜೋಯಿಸ್‌ರವರ ನಾಯಕತ್ವದಲ್ಲಿ ಸ್ವಯಂಸೇವಕರೂ, ವೆಂಕಮ್ಮನವರ ನಾಯಕತ್ವದಲ್ಲಿ ಸ್ವಯಂಸೇವಿಕೆಯರೂ, ನಂತರ ಸ್ವಾಗತ ಸಮಿತಿ, ಅಧ್ಯಕ್ಷ, ಉಪಾಧ್ಯಕ್ಷರುಗಳೂ, ಪ್ರಧಾನ ಕಾರ್ಯದರ್ಶಿಗಳೂ ಶಿಸ್ತಿ ನಿಂದ ನಡೆಯುತ್ತಿದ್ದರು. ಅವರ ಹಿಂದೆ ಗಾಂಧೀಜಿಯ ಭಾವಚಿತ್ರವನ್ನು ಹಿಡಿದು ಕೊಂಡು ಅಧ್ಯಕ್ಷರು ಕುಳಿತಿದ್ದ ರಥ ಮೆರವಣಿಗೆಯಲ್ಲಿ ಹೊರಟಿತು. ಸುಮಾರು ಎರಡೂವರೆ ಗಂಟೆಗಳ ಮೆರವಣಿಗೆಯ ನಂತರ, ಅಧ್ಯಕ್ಷರು ಅಧಿವೇಶನ ಪ್ರದೇಶ ತಲುಪಿ, ಪುಟ್ಟ ಭಾಷಣವೊಂದನ್ನು ಮಾಡಿ, ಎಲ್ಲರಿಗೂ ವಂದಿಸಿ ರಥದಿಂದ ಇಳಿದು ಬಿಡಾರವನ್ನು ಸೇರಿದರು. ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಸಾವಿರಾರು ಮಂದಿ ಎಲ್ಲೆಲ್ಲೂ ಶಾಂತಿಯುತರಾಗಿ ಸಡಗರದಿಂದ ಓಡಾಡುತ್ತಿದ್ದರು. ಈ ಸಮ್ಮೇಳನದಲ್ಲಿ ಭಾಗವಹಿಸಲು ಯಾವ ಭೇದವೂ ಇಲ್ಲದೆ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಹೆಚ್ಚು ಜನರು ಬಂದು ಸೇರಿ ದ್ದರು. ಹೀಗೆ ಜನರೆಲ್ಲ ಒಟ್ಟುಗೂಡಿ ಚಳುವಳಿಯು ಪ್ರಬಲವಾಗುವುದನ್ನು ಸರಕಾರವು ಸಹಿಸಲಿಲ್ಲ. ನಿಷೇಧಾಜ್ಞೆಗಳನ್ನು ಜಾರಿಗೆ ತರಲು ತೀರ್ಮಾನಿಸಿತು.

ಏಪ್ರಿಲ್ ಹನ್ನೊಂದರಂದು ನಡೆಯಬೇಕಾಗಿದ್ದ ಬಹಿರಂಗ ಸಭೆಗೆ ಎಲ್ಲಾ ಏರ್ಪಾಡುಗಳು ಆದವು. ಅಧಿವೇಶನವು ಯಾವ ಅಶಾಂತಿಗೂ ಅವಕಾಶ ವಿಲ್ಲದಂತೆ ಸುಗಮವಾಗಿ ನಡೆಯಲು ಏರ್ಪಾಡಾಗಿತ್ತು. ಆದರೆ ಹತ್ತನೇ ತಾರೀಖು ಮಧ್ಯಾಹ್ನವೇ, ಸಂಭ್ರಮಗಳಿಂದ ಓಡಾಡುತ್ತಿದ್ದ ಸಾವಿರಾರು

ಮಂದಿ ಜನರಲ್ಲಿ ಕಳವಳ ಹಾಗೂ ಕುತೂಹಲವನ್ನುಂಟುಮಾಡುವಂತೆ, ಅದುವರೆಗೂ ಇರದಿದ್ದ ಪೊಲೀಸ್ ಅಧಿಕಾರಿಗಳು ಮತ್ತು ರಿಸರ್ವ್ ಪೊಲೀಸಿನವರು ಧಾವಿಸಿದರು. ಮೈಸೂರು ಪೊಲೀಸ್ ನಿಬಂಧನೆ 39ನೆಯ ಸೆಕ್ಷನ್ ಪ್ರಕಾರ ಮೈಸೂರು ಜಿಲ್ಲಾ ನ್ಯಾಯಾಧೀಶರು ಒಂದು ಆಜ್ಞೆ ಹೊರಡಿಸಿ, ಒಂದು ತಿಂಗಳು ಕಾಲ ಶಿವಪುರ ಹಾಗೂ ಅದರ ಎರಡು ಮೈಲಿ ಸುತ್ತಳತೆಯಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಕೂಡದೆಂದು ತಿಳಿಸಿದರು. ಈ ಆಜ್ಞೆಯನ್ನು ಪೊಲೀಸ್ ಅಧಿಕಾರಿಗಳು, ಕಾಂಗ್ರೆಸ್ ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತಿತರ ನಾಯಕರ ಮೇಲೆ ಜಾರಿಮಾಡಿದರು. ಸಂದಿಗ್ಧ ಪರಿಸ್ಥಿತಿಯೊದಗಿ ಕುತೂಹಲ ವಾತಾವರಣವುಂಟಾಯಿತು. ಸರಕಾರದ ಈ ಕಾರ್ಯವು 'ಜನರ ದೇಶಾಭಿಮಾನವನ್ನು ಮತ್ತು ಭಾರತದ ರಾಷ್ಟ್ರ ಧ್ವಜದಲ್ಲಿ ಅವರಿಗಿದ್ದ ಅಭಿಮಾನವನ್ನು ಅಪಮಾನಗೊಳಿಸುವುದಾಗಿತ್ತು. ಜನರಲ್ಲಿ ಉತ್ಪನ್ನವಾದ ಅಸಮಾಧಾನದ ಚಂಡಮಾರುತದ ಮಹಾ ರಭಸದ ಮುಂದೆ ಪ್ರತಿಬಂಧಕಾಜ್ಞೆಯು ಧೂಳಿಪಟವಾಗಿ ಬಿಟ್ಟಿತು.'

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆಸೇರಿ ಬಹಳ ಹೊತ್ತು ಚರ್ಚಿಸಿದ ಮೇಲೆ "ಧ್ವಜಾರೋಹಣವು ನಡೆಯಬೇಕಾಗಿರುವ ಸ್ಥಳವು ಖಾಸಗಿ ಸ್ಥಳವಾದ್ದರಿಂದ ಪ್ರತಿಬಂಧಕಾಜ್ಞೆಯು ಅನ್ಯಾಯವಾದುದೆಂದೂ ಅದು ಜನರ ಆಜನ್ಮ ಸಿದ್ಧವಾದ ಹಕ್ಕು ಬಾಧ್ಯತೆಗೆ ಆತಂಕ ತರುವಂಥಾದ್ದೆಂದೂ, ಆದ ಕಾರಣ ಮೊದಲೆ ಪ್ರಕಟವಾಗಿದ್ದ ಕಾರ್ಯಕ್ರಮದ ಪ್ರಕಾರ....ರಾಷ್ಟ್ರ ಧ್ವಜಾರೋಹಣ ಕಾರ್ಯವನ್ನು ನಡೆಸಿ, ಅನ್ಯಾಯವೂ ಅನಗತ್ಯವೂ ಆದ ಪ್ರತಿಬಂಧಕಾಜ್ಞೆಯನ್ನು ಲ್ಲಂಘಿಸಬೇಕೆಂದೂ ತೀರ್ಮಾನವಾಯಿತು." ಈ ನಿರ್ಧಾರದಿಂದ ಜನರು ಉತ್ಸಾಹಶಾಲಿಗಳಾದರು. ನಿರ್ಧಾರವು ರಾಷ್ಟ್ರಕೂಟದ ಮುಂದಿನ ಕಾರ್ಯಕ್ಕೆ ಮಹತ್ವವನ್ನುಂಟುಮಾಡಿತು.

ಬಹಿರಂಗ ಅಧಿವೇಶನಕ್ಕಾಗಿ ರಚಿತವಾಗಿದ್ದ ಆವರಣದ ಮುಂಭಾಗದಲ್ಲಿ ಝುಂಡಾ ಮೈದಾನವು ಸಿದ್ಧವಾಗಿತ್ತು. ಕಲಶದ ಸಮೇತ ಅರವತ್ತು ಅಡಿ ಎತ್ತರದ ಧ್ವಜಸ್ತಂಭವು ಪೂಜಾಕ್ರಮಗಳಿಂದ ನೆಡಲ್ಪಟ್ಟಿತು. ಅದರ ಸುತ್ತಲೂ ಒಂದೂವರೆ ಅಡಿ ಎತ್ತರದ ವಿಶಾಲವಾಗಿದ್ದ ವೇದಿಕೆಯನ್ನು ನಿರ್ಮಿಸಿದ್ದರು. ವೇದಿಕೆಯನ್ನೂ ಧ್ವಜಸ್ತಂಭವನ್ನು ಖಾದಿಬಟ್ಟೆಯಿಂದ ಶೃಂಗರಿ

ಸಿದ್ಧರು. ಧ್ವಜಸ್ತಂಭವನ್ನು ಸ್ವಯಂಸೇವಕರು ಸರ್ಪಕಾವಲಿನಂತೆ ಕಾದಿದ್ದರು. ಕಾರ್ಯಕ್ರಮದಂತೆ ಏಪ್ರಿಲ್ ಹನ್ನೊಂದರಂದು ಧ್ವಜಾರೋಹಣಕ್ಕೆ ಎಲ್ಲಾ ಸಿದ್ಧತೆಗಳು ಮಾಡಲ್ಪಟ್ಟವು. "ಒಂದುಕಡೆ ಅಧಿಕಾರ ವರ್ಗದವರ ಪಶುಬಲ ಪ್ರದರ್ಶನದ ಚಿನ್ಹೆಗಳೂ, ಇನ್ನೊಂದು ಕಡೆ ಸತ್ಯಾಗ್ರಹಿಗಳು ಶಾಂತಿಯುತರಾಗಿ ಸಿದ್ಧರಾಗಿದ್ದುದೂ, ಮತ್ತೊಂದು ಕಡೆ ಸಾವಿರಾರು ಮಂದಿ ಮಹಾಜನರು ತವಕದಿಂದ ಕಾದಿದ್ದುದೂ, ನೋಡಿದವರಿಗೆ ಒಂದು ಬಗೆಯ ರಣರಂಗದಂತೆ ಕಾಣುತ್ತಿತ್ತು."

ಏಪ್ರಿಲ್ ಹನ್ನೊಂದರಂದು ಎಂಟು ಗಂಟೆಗೆ ಸರಿಯಾಗಿ ಸ್ವಯಂಸೇವಕರ ನಾಯಕ ಎಂ. ಎನ್. ಜೋಯಿಸ್‌ರೊಡನೆ, ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರು ವೇದಿಕೆಯ ಹತ್ತಿರ ಬಂದು ಧ್ವಜಾರೋಹಣ ಮಾಡುವುದಾಗಿ ತಿಳಿಸಿದರು. ಜಿಲ್ಲಾ ನ್ಯಾಯಾಧೀಶರಾದ ಮ್ಯಾಕ್ರಿಯವರು ಪೊಲೀಸ್ ಕಾಯಿದೆ 36ನೆ ಕಲಮ್ಮಿನಂತೆ, ಧ್ವಜಾರೋಹಣ ನಿಷೇಧಿಸಲಾಗಿದೆಯೆಂದು ಅಧ್ಯಕ್ಷರಿಗೆ ತಿಳಿಸಿದರು. ನಿಯಮವನ್ನು ವಿರೋಧಿಸಿದರೆ ಲಾಠಿ ಹೊಡೆತ, ಗೋಲಿಬಾರ್ ಆಗುವ ಸಂಭವವಿದೆಯೆಂದೂ, ದಾರುಣ ಪರಿಸ್ಥಿತಿಯೊದಗುತ್ತದೆಂದೂ ಎಚ್ಚರಿಕೆ ನೀಡಿದರು. ಧ್ವಜಮಂಡಲವನ್ನು ಅಧ್ಯಕ್ಷರು ಹಾಗೂ ಸ್ವಯಂಸೇವಕರ ನಾಯಕ ಇಬ್ಬರೇ ಪ್ರವೇಶಿಸಿದರು. ವಂದೇಮಾತರಂ ಮತ್ತು ಜನಮನಗಣ ಪ್ರಾರ್ಥನೆ ಗೀತೆಗಳನ್ನು ಹೇಳಿ ಅಧ್ಯಕ್ಷರು ಧ್ವಜ ಹಾರಿಸಲು ಮುಂದಾದಾಗ, ನ್ಯಾಯಾಧೀಶರಿಗೂ ಅವರಿಗೂ ವಾದಗಳು ನಡೆದವು. ಎಂ. ಎನ್. ಜೋಯಿಸ್‌ರವರ ಸಹಾಯದಿಂದ ಅಧ್ಯಕ್ಷ ಟಿ. ಸಿದ್ಧಲಿಂಗಯ್ಯನವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದರು. ಅವರಿಬ್ಬರನ್ನೂ ಪೊಲೀಸರು ದಸ್ತಗಿರಿ ಮಾಡಿದರು. ಅಧ್ಯಕ್ಷರು ತಮ್ಮ ಸ್ಥಾನಕ್ಕೆ ಹಂಗಾಮಿಯಾಗಿ ಹೆಚ್. ಸಿ. ದಾಸಪ್ಪನವರನ್ನು ನೇಮಿಸಿ ನಂತರ ಪೊಲೀಸರೊಡನೆ ಹಸನ್ಮುಖಿಯಾಗಿ ಹೊರಟರು.

ಕಾಂಗ್ರೆಸ್ ಸದಸ್ಯರೆಲ್ಲರೂ ಅಸಮಧಾನದಿಂದ ಕೂಡಿದ್ದರೂ ಶಾಂತಿಯಿಂದ ಇದ್ದರು. ಮುಖಂಡರೂ ಹಾಗೂ ಸ್ವಯಂಸೇವಕರೂ ಜನರೆಲ್ಲರನ್ನೂ ಶಾಂತಿಯಿಂದಿರಲು ಕೇಳಿಕೊಂಡರು. ಸ್ತ್ರೀ ಸ್ವಯಂಸೇವಿಕೆಯರೂ, ಮುಖಂಡರಲ್ಲಿ ಕೆಲವರು ಅಲ್ಲಿಯೇ ಇದ್ದು ರಾಷ್ಟ್ರ ಧ್ವಜದ ಗೌರವವನ್ನು ಕಾಪಾಡಲು

ನಿರ್ಧರಿಸಿದರು. ಹಾರಿಸಲ್ಪಟ್ಟ ಧ್ವಜವು ಕೆಳಗಿಳಿಯದಂತೆ ಜನರೆಲ್ಲ ಉಸ್ತುವಾರಿಯಿದ್ದರು. ಧ್ವಜಾರೋಹಣ ಸಮಾರಂಭವು ಅಧಿವೇಶನ ಕಾಲದ ಮೂರು ದಿನಗಳು ತಪ್ಪದೇ ಜರುಗಿತು. ಜನ ಸಮೂಹವು ಮುಖಂಡರ ಭಾಷಣ, ಲಾವಣಿ ಮತ್ತು ರಾಷ್ಟ್ರಗೀತೆಗಳನ್ನು ಕೇಳಿಕೊಂಡು ಬಿಸಿಲನ್ನೂ ಕೂಡ ಲೆಕ್ಕಿಸದೆ, ಸಂಜೆ ಆರುಗಂಟೆಯಲ್ಲಿ ಧ್ವಜಾವರೋಹಣವಾಗುವವರೆಗೂ ಕಾದಿದ್ದರು. ಸಂಜೆ 6 ಗಂಟೆಗೆ ವಿಧಿವತ್ತಾಗಿ ಧ್ವಜಾವರೋಹಣ ನಡೆಯಿತು. ಧ್ವಜಾರೋಹಣದ ನಿಮಿತ್ತವಾಗಿಯೇ ಎರಡನೆಯ ದಿನ ಹೆಚ್. ಸಿ. ದಾಸಪ್ಪ, ವಿ. ವೆಂಕಟಪ್ಪ ಮತ್ತು ಕೆ. ಚೆಂಗಲರಾಯರೆಡ್ಡಿಯವರನ್ನೂ, ಮೂರನೆ ದಿನ ಕೆ. ಟಿ. ಭಾಷ್ಯಂ, ಹೆಚ್. ಸಿದ್ದಯ್ಯ ಮತ್ತು ಬಳ್ಳಾರಿ ಸಿದ್ದಮ್ಮನವರನ್ನೂ ಪೋಲೀಸಿನವರು ಬಂಧಿಸಿದರು. ಆದರೂ ಕೂಡ ಅಧಿಕಾರಿಗಳು ತಾಳ್ಮೆ, ಸಂಯಮ ಮತ್ತು ಉದಾರತೆಯಿಂದ ನಡೆದುಕೊಂಡರು. ಈ ಅಧಿವೇಶನದಲ್ಲಿ ಭಾಗವಹಿಸಿದ್ದ ಅನೇಕ ಕಾಂಗ್ರೆಸ್ ಸದಸ್ಯರು ಮತ್ತು ನಾಯಕರು ಅಧಿಕಾರಿಗಳ ಅದರಲ್ಲೂ ಅಂದು ಜಿಲ್ಲಾ ನ್ಯಾಯಾಧೀಶರಾಗಿದ್ದ ಮೇಕ್ರಿಯವರ ನಡತೆಯನ್ನು ಪ್ರಶಂಸಿಸಿರುತ್ತಾರೆ. ರಾಷ್ಟ್ರ ಧ್ವಜಾರೋಹಣ ವೇಳೆಯಲ್ಲಿ ನಡೆದ ಕಾಂಗ್ರೆಸ್ ನಾಯಕರ ದಸ್ತಗಿರಿಯ ದೃಶ್ಯವು ವರ್ಣನಾತೀತವಾಗಿತ್ತು. ಮೈದಾನದಲ್ಲಿ ಸೇರಿದ್ದ ಜನರು ಶಾಂತಿಯಿಂದಿದ್ದರು. ಧ್ವಜಾರೋಹಣ ಮಾಡಲು ನಾಯಕರು ಪ್ರಯತ್ನಿಸುತ್ತಿದ್ದಾಗ ಅವರಿಗೂ ಪೋಲೀಸ್ ಅಧಿಕಾರಿಗಳಿಗೂ ಸಂಭಾಷಣೆ ಶಾಂತಿಯುತವಾಗಿಯೇ ನಡೆಯುತ್ತಿತ್ತು. ನಾಯಕರನ್ನು ದಸ್ತಗಿರಿ ಮಾಡಿದಾಗಲೂ, ಜನರು ಉದ್ರೇಕಗೊಳ್ಳದೆ ಶಾಂತಿಯುತರಾಗಿಯೇ ವರ್ತಿಸಿದರು. ಈ ದೃಶ್ಯಗಳೆಲ್ಲಾ ಬಹಳ ರೋಮಾಂಚನ ಕಾರಿಯಾಗಿದ್ದವು.

ಏಪ್ರಿಲ್ ಹನ್ನೊಂದರ ಸಾಯಂಕಾಲ ಬಹಿರಂಗಸಭೆಯು ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತಾಧ್ಯಕ್ಷರಾದ ಚನ್ನಯ್ಯನವರು ತಮ್ಮ ಭಾಷಣವನ್ನು ಓದಿದ ನಂತರ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷ ಭಾಷಣವನ್ನು ಹಂಗಾಮಿ ಅಧ್ಯಕ್ಷ ದಾಸಪ್ಪನವರು ಓದಿದರು. ರಾಷ್ಟ್ರದ ನಾಯಕರು ಕಳಿಸಿದ್ದ ಸಂದೇಶಗಳನ್ನು ಪ್ರಧಾನ ಕಾರ್ಯದರ್ಶಿಗಳಾಗಿದ್ದ ಹೆಚ್. ಕೆ. ವೀರಣ್ಣಗೌಡರು ಓದಿದರು. ಎರಡನೆಯ ದಿನ ಬಹಿರಂಗ ಸಭೆಯು ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿಯೂ, ಮೂರನೆಯ ದಿನದ

ಬಹಿರಂಗ ಸಭೆಯು ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿಯೂ ನಡೆಯಿತು. 13ರ ಸಂಜೆ ಧ್ವಜಾವರೋಹಣದ ನಂತರ ಧ್ವಜ ಸ್ತಂಭವನ್ನು ಕಿತ್ತು ಕಲಶವನ್ನು ಸ್ವಾಗತ ಸಮಿತಿ ಕಛೇರಿಗೆ ತಂದರು. ಅಲ್ಲಿಗೆ ಶಿವಪುರದ ಅಧಿವೇಶನವು ಮುಕ್ತಾಯವಾಯಿತು.

ಬಹಿರಂಗ ಸಭೆ

ಶಿವಪುರದ ಬಹಿರಂಗ ಅಧಿವೇಶನದಲ್ಲಿ ವಿಷಯ ನಿಯಾಮಕ ಸಮಿತಿ ಅಂಗೀಕರಿಸಿ ಸಿದ್ಧಗೊಳಿಸಿದ್ದ ನಿರ್ಣಗಳನ್ನು ಅಂಗೀಕರಿಸಿದರು. ಆದರೆ ನ್ಯಾಯ ವಿಧಾಯಕ ಸಭೆ ಪ್ರಜಾಪ್ರತಿನಿಧಿಸಭೆ ಸದಸ್ಯರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಕೂಡದೆಂಬ ತಿದ್ದುಪಡಿಯು, ಸದಸ್ಯರು ಎರಡಾಣೆ ಚಂದಾ ಕೊಡಬೇಕೆಂಬ ನಿರ್ಣಯ, ಇವೆರಡು ನಿರ್ಣಗಳು ಮಾತ್ರ ಬಹಿರಂಗ ಅಧಿವೇಶನದಲ್ಲಿ ತಿರಸ್ಕರಿಸಲ್ಪಟ್ಟವು. ಒಟ್ಟು ಹದಿನೆಂಟು ನಿರ್ಣಯಗಳು ಅಂಗೀಕೃತವಾದವು. ಜವಾಬ್ದಾರೀ ಸರಕಾರ ಸ್ಥಾಪಿಸಬೇಕು, ಆಜನ್ಮಸಿದ್ಧ ಹಕ್ಕುಗಳನ್ನು ಜನರಿಗೆ ದೊರಕಿಸಿಕೊಡಬೇಕು, ಸುಧಾರಣಾ ಸಮಿತಿಯು ಜವಾಬ್ದಾರೀ ಸರಕಾರದ ವಿಷಯ ಪರಿಶೀಲಿಸಿ ಶಿಫಾರಸು ಮಾಡಲು ಅವಕಾಶವಿರಬೇಕು, ಮೈಸೂರು ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವೆಂದು ಅಂಗೀಕರಿಸಬೇಕೆಂದೂ ಕೋರಿದರು. ಸುಧಾರಣಾ ಸಮಿತಿಗೆ ಸದಸ್ಯರನ್ನು ನೇಮಿಸಿ, ಅದರ ವಿಮರ್ಶೆಗೆ ಅರ್ಪಿಸಿರುವ ಅಂಶಗಳು ಕಾಂಗ್ರೆಸ್‌ಗೆ ತೃಪ್ತಿಯನ್ನುಂಟು ಮಾಡಿಲ್ಲವೆಂದು ತಿಳಿಸಿತು. ಜವಾಬ್ದಾರೀ ಸರಕಾರ ಸ್ಥಾಪಿಸುವ ಬಗ್ಗೆ ಸಮಿತಿ ಪರಿಶೀಲಿಸಿ ಶಿಫಾರಸು ಮಾಡುವ ಅವಕಾಶ ಅದಕ್ಕೆ ಇದೆಯೆಂದು ಸರಕಾರ ಅಧಿಕಾರಿಯುತವಾಗಿ ಘೋಷಿಸುವವರೆಗೂ, ಮೈಸೂರು ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಯೆಂದು ಒಪ್ಪಿಕೊಂಡು, ಸುಧಾರಣಾ ಸಮಿತಿಯಲ್ಲಿ ಅದರ ಪ್ರಾತಿನಿಧ್ಯವನ್ನು ಪರಸ್ಪರ ಸರಿಪಡಿಸಿಕೊಂಡ ಹೊರತು ಸಮಿತಿಯೊಡನೆ ಸಹಕರಿಸಲು ಸಾಧ್ಯವಿಲ್ಲವೆಂದು ಶಿವಪುರದ ಅಧಿವೇಶನ ತೀರ್ಮಾನಿಸಿತು. ದಸ್ತಗಿರಿ ಮಾಡಲ್ಪಟ್ಟ ನಾಯಕರನ್ನು ಅಭಿನಂದಿಸಿ, ಗಡೀಪಾರ್ ಆಜ್ಞೆಗಳನ್ನು ಖಂಡಿಸಿದರು. ಕೆಲವು ಬದಲಾವಣೆಗಳೊಡನೆ ಸಂಸ್ಥೆಯ ರಚನಾಕ್ರಮವನ್ನು ಅಂಗೀಕರಿಸಿದರು.

ಹೀಗೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ಶಿವಪುರದ ಕಾಂಗ್ರೆಸ್ ಅಧಿವೇಶನವು ಒಂದು ಮೈಲಿಗಲ್ಲಾಯಿತು. ಶಿವಪುರದಲ್ಲಿ ಗಲಭೆ ಯುಂಟಾಗುತ್ತದೆಯೆಂದು ಎಣಿಸಿ, ಆ ಸಂದರ್ಭದಲ್ಲಿ ಕಾಂಗ್ರೆಸ್‌ನ್ನು ಸದೆ ಬಡಿ ಯಲು ಸರಕಾರದ ಅಧಿಕಾರಿಗಳು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಆದರೆ ಅಧಿವೇಶನದ 3 ದಿನಗಳಲ್ಲಿಯೂ ಕಾಂಗ್ರೆಸ್ ಸದಸ್ಯರುಗಳು ಕುಪಿತ ಗೊಳ್ಳದೆ, ಶಿಸ್ತಿನಿಂದ ವರ್ತಿಸಿದುದು ಅವರನ್ನು ಬೆರಗುಗೊಳಿಸಿತು. ಪರಿಣಾಮ ವಾಗಿ ಕೊಂಚ ಗಲಭೆಗೂ ಅವಕಾಶವಿಲ್ಲದಂತೆ ಶಾಂತಿಯಿಂದಲೇ ಅಧಿವೇಶನ ಮುಗಿಯಿತು. ಆದುದರಿಂದ ಸರಕಾರದ ಎಣಿಕೆಗಳಿಗೆ ಅವಕಾಶವೇ ಇಲ್ಲವಾಗಿ ಅದಕ್ಕೆ ಒಂದು ರೀತಿಯಲ್ಲಿ ನಿರಾಶೆಯುಂಟಾಯಿತು.

028252

ಧ್ವಜ ಸತ್ಯಾಗ್ರಹ

ಸಂಸ್ಥಾನದ ಪ್ರಜೆಗಳು ರಾಷ್ಟ್ರ ಧ್ವಜವನ್ನು ಕಾಪಾಡಲಾರರೆಂಬ ಕಾರಣದಿಂದಲೇ, ರಾಷ್ಟ್ರೀಯ ಕಾಂಗ್ರೆಸ್ ಕಾರ್ಯ ಸಮಿತಿಯು ಮತ್ತು ನಾಯಕರು ದೇಶೀಯ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಸಂಸ್ಥೆಗಳನ್ನು ವಿರೋಧಿ ಸುತ್ತಿದ್ದರು. ಆದ್ದರಿಂದ ರಾಷ್ಟ್ರ ಧ್ವಜದ ಸಂರಕ್ಷಣೆಯು ತಮ್ಮ ಆದ್ಯ ಕರ್ತವ್ಯವೆಂದು ಮೈಸೂರು ಸಂಸ್ಥಾನದ ಕಾಂಗ್ರೆಸ್ ಸದಸ್ಯರೆಲ್ಲರೂ ತಿಳಿದು ಅದರಂತೆ ಶಿವಪುರದಲ್ಲಿ ವರ್ತಿಸಿದರು. ರಾಷ್ಟ್ರ ಧ್ವಜವು, ಸತ್ಯ, ಅಹಿಂಸೆ ಮತ್ತು ತ್ಯಾಗ ಹಾಗೂ ರಾಷ್ಟ್ರ ಸ್ವಾತಂತ್ರ್ಯದ ಸಂಕೇತ; ದೇಶದ ಹೃದಯ ವನ್ನು ಹೇಗೆ ಕಾಂಗ್ರೆಸ್ ಆಕರ್ಷಿಸಿದೆಯೋ ಹಾಗೆಯೇ ರಾಷ್ಟ್ರ ಧ್ವಜವೂ ಆಕರ್ಷಿಸಿದೆ. ಹೀಗೆ ರಾಷ್ಟ್ರ ಧ್ವಜ ರಕ್ಷಿಸಲು ಧೃಡ ಸಂಕಲ್ಪ ಮಾಡಿದರು. ಸರಕಾರದ ಅಧಿಕಾರಿಗಳು ರಾಷ್ಟ್ರೀಯ ಧ್ವಜವನ್ನು ಹಾರಿಸಕೂಡದೆಂದು ಹೇಳಿದರು. ರಾಷ್ಟ್ರೀಯ ಧ್ವಜವನ್ನು ಹಾರಿಸುವುದು, ಅದನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು ಜನತೆಯು ಭಾವಿಸಿತು. ಇದೇ ಶಿವಪುರದಲ್ಲಿ ಆರಂಭ ವಾದ ಘರ್ಷಣೆಗೆ ಮೂಲವಾಯಿತು.

ರಾಷ್ಟ್ರ ಧ್ವಜಕ್ಕೆ ಸರಕಾರದ ನೀತಿಯಿಂದ ಆಗುತ್ತಿದ್ದ ಅವಮಾನ ನಿಲ್ಲುವವರೆಗೂ, ಧ್ವಜವನ್ನು ಹಾರಿಸುತ್ತಿರಬೇಕೆಂದೂ, ಪ್ರತಿಬಂಧಕಾಜ್ಞೆಯ ವಾಯಿದೆಯು ಮುಗಿಯುವವರೆಗೂ ಸರಕಾರದ ನೀತಿ ಪ್ರತಿಭಟಿಸಲು ಒಂದು

ತಿಂಗಳ ಕಾಲ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಯಲೇಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ಏಪ್ರಿಲ್ ಹದಿಮೂರರಂದು ತೀರ್ಮಾನಿಸಿತು. ಇತರ ಪ್ರದೇಶಗಳಿಂದ ಬಂದಿದ್ದ ಕಾಂಗ್ರೆಸ್ಸಿಗರಿಗೂ ತಮ್ಮ ತಮ್ಮ ಊರುಗಳಲ್ಲಿಯೂ ಧ್ವಜಾರೋಹಣ ಮಾಡಬೇಕೆಂಬ ಸೂಚನೆ ನೀಡಲಾಯಿತು. ಸಂಸ್ಥಾನದಲ್ಲೆಲ್ಲಾ ಹರಡಿದ ಈ ಚಳುವಳಿಯನ್ನು 'ಧ್ವಜ ಸತ್ಯಾಗ್ರಹ' ಎಂದು ಕರೆದರು. ಮೈಸೂರು ಸ್ವಾತಂತ್ರ್ಯ ಚಳುವಳಿಯಲ್ಲಿ, ಈ ಧ್ವಜ ಸತ್ಯಾಗ್ರಹವು ಒಂದು ಮುಖ್ಯಹಂತವಾಗಿದೆ. ಶಿವಪುರದಲ್ಲಿ ಸತ್ಯಾಗ್ರಹ ಆಶ್ರಮವೊಂದನ್ನು ತೆರೆದರು. ಸತ್ಯಾಗ್ರಹ ಪ್ರಾರಂಭೋತ್ಸವವನ್ನು ಹಂಗಾಮಿ ಅಧ್ಯಕ್ಷ ಗುಂಡಪ್ಪಗೌಡರು ನೆರವೇರಿಸಿದರು ಮತ್ತು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದರು.

ಸ್ವಾಗತ ಸಮಿತಿಯ ಆಶ್ರಯದಲ್ಲಿ ಒಂದು ತಿಂಗಳ ಕಾಲವೂ ಧ್ವಜ ಸತ್ಯಾಗ್ರಹವು ನಡೆಯಿತು. ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಜಿಲ್ಲಾ ಬೋರ್ಡ್ ಅಧ್ಯಕ್ಷರು, ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳ, ಜಿಲ್ಲಾ ಬೋರ್ಡ್‌ಗಳ ಸದಸ್ಯರೂ ಹಾಗೂ ಇತರ ಕಾಂಗ್ರೆಸ್ ಮುಖಂಡರೂ, ಸ್ವಯಂ ಸೇವಕರೂ ಶಿವಪುರಕ್ಕೆ ಬಂದು ಈ ಧ್ವಜ ಸತ್ಯಾಗ್ರಹದಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದರು. ಶಿವಪುರದಲ್ಲಿ ನಡೆದಂತೆ ಸಂಸ್ಥಾನದ ಅನೇಕ ಕಡೆಗಳಲ್ಲಿಯೂ ಜನರು ಧ್ವಜ ಸತ್ಯಾಗ್ರಹ ಆಚರಿಸಿದರು. ಒಂದು ತಿಂಗಳ ನಂತರ ಅದು ಮುಕ್ತಾಯವಾಯಿತು. ಶಿವಪುರದ ಅಧಿವೇಶನ, ಅಲ್ಲಿಯ ಧ್ವಜ ಸತ್ಯಾಗ್ರಹ ಮೈಸೂರಿನ ಇತಿಹಾಸದಲ್ಲಿ ಒಂದು ಮುಖ್ಯ ಘಟನೆಯಾಗಿದೆ. ಮೈಸೂರು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಶಿವಪುರ ಕಾಂಗ್ರೆಸ್ ಒಂದು ಹೊಸಯುಗವನ್ನಾರಂಭಿಸಿತು ಮತ್ತು ಜನತೆಯು ಅಲ್ಲಿ ನೈಜ ಸ್ವಾತಂತ್ರ್ಯದ ದರ್ಶನ ಪಡೆಯಿತು. ಅದರಿಂದ ಸ್ಫೂರ್ತಿ ಪಡೆದ ಸತ್ಯಾಗ್ರಹಿಗಳು ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಧ್ವಜಾರೋಹಣ ಮಾಡಿ ಸರ್ವ ತ್ಯಾಗಕ್ಕೂ ತಯಾರಾಗಿದ್ದರು. ಶಿವಪುರದ ಅಧಿವೇಶನವು ಜಯಪ್ರದವಾಯಿತು. ಸಾವಿರಾರು ಜನ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ನೂರಾರು ಜನರು ಬಂಧಿಸಲ್ಪಟ್ಟರು. ಹೆಚ್ಚು ಜನರು ಕಾಂಗ್ರೆಸ್ ಸೇರಿ ಅದು ನಡೆಸುತ್ತಿದ್ದ ಚಳುವಳಿಗೆ ಬೆಂಬಲ ನೀಡಿದರು.

ವಿಧುರಾಶ್ವತ್ಥದ ಗಲಭೆ

ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಿಂದ ಸ್ಫೂರ್ತಿಗೊಂಡು, ಸರಕಾರದ ನಿಷೇಧಾಜ್ಞೆಗಳ ಉಲ್ಲಂಘನೆ ಧ್ವಜಾರೋಹಣಗಳೊಡನೆ ಸಂಸ್ಥಾನದ ಇತರ ಕಡೆಗಳಲ್ಲಿಯೂ ಚಳುವಳಿಗಳು ನಡೆದವು. ಇಂತಹ ಒಂದು ಚಳುವಳಿಯ ಪರಿಣಾಮವಾಗಿ ವಿಧುರಾಶ್ವತ್ಥದಲ್ಲಿ ಗಲಭೆಯುಂಟಾಯಿತು. ಮೈಸೂರು ಸಂಸ್ಥಾನದ ಕೋಲಾರ ಜಿಲ್ಲೆ ಗೌರೀಬಿದನೂರು ತಾಲ್ಲೂಕಿಗೆ ಚಿಕ್ಕಸೇರಿದಂತೆ ಅಲ್ಲಿಂದ 7 ಕಿಲೋಮೀಟರ್ ದೂರದಲ್ಲಿ ವಿಧುರಾಶ್ವತ್ಥವು ಒಂದು ಗ್ರಾಮ. ಅದು ಒಂದು ಯಾತ್ರಾಸ್ಥಳ. ಅಲ್ಲಿ ಪ್ರತಿ ವರ್ಷವೂ ಏಪ್ರಿಲ್ ಮಾಹೆಯಲ್ಲಿ ಜಾತ್ರೆ ನಡೆಯುತ್ತದೆ. ಜೊತೆಗೆ ದನಗಳ ಪರಿಷೆಯು ನಡೆಯುತ್ತದೆ. ಸುತ್ತಮುತ್ತಲ ಹಾಗೂ ದೂರದ ಸ್ಥಳಗಳಿಂದ ಸಾವಿರಾರು ಜನರು ಬಂದು ಸೇರುತ್ತಾರೆ. 1938ರ ಏಪ್ರಿಲ್ ತಿಂಗಳಲ್ಲಿ ಜಾತ್ರೆ ನಡೆದ ಸಂದರ್ಭದಲ್ಲಿ ಹೆಚ್ಚು ಜನರು ಸೇರಿದ್ದ ಅವಕಾಶವನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಪ್ರಚಾರ ಕೆಲಸ ಕೈಗೊಳ್ಳಲು ನಿರ್ಧರಿಸಿತು. ಆರಂಭದಲ್ಲಿ ಜಾತ್ರೆಯು ಶಾಂತಿಯುತವಾಗಿ ನಡೆಯಿತು. ಧ್ವಜಾರೋಹಣ ಮಾಡಿದ ನಂತರ ಏಪ್ರಿಲ್ 25ರಂದು ಬಹಿರಂಗ ಸಭೆ ನಡೆಸಲು ಕಾಂಗ್ರೆಸ್ ಕೆಲಸಗಾರರು ತೀರ್ಮಾನಿಸಿದರು.

ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ತಪ್ಪಿಸುವ ಉದ್ದೇಶದಿಂದ, ವಿಧುರಾಶ್ವತ್ಥದ ಎರಡು ಮೈಲಿ ಸುತ್ತಳತೆಯಲ್ಲಿ ಮೆರವಣಿಗೆ, ಧ್ವಜಾರೋಹಣ ಮತ್ತು ಭಾಷಣಗಳನ್ನು ನಿಷೇಧಿಸಿ ಸರಕಾರವು 18ನೇ ತಾರೀಖು ಒಂದು ಆಜ್ಞೆ ಹೊರಡಿಸಿತು. 18ನೇ ತಾರೀಖಿನಿಂದ 21ರವರೆಗೆ ಸರಕಾರದ ಆಜ್ಞೆಯನ್ನು ಯಾರೂ ಉಲ್ಲಂಘಿಸಲಿಲ್ಲ. ಆದರೆ 22 ಮತ್ತು 23 ರಂದು ಅನೇಕ ಜನ ಸರಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದರು. ಪರಿಣಾಮವಾಗಿ ಅನೇಕರು ದಸ್ತಗಿರಿ ಮಾಡಲ್ಪಟ್ಟರು. 23 ರಂದು ಗೌರೀಬಿದನೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯು ಅಚ್ಚು ಹಾಕಿಸಿದ್ದ ನೋಟಿಸುಗಳು ವಿಧುರಾಶ್ವತ್ಥದಲ್ಲಿ ಹಂಚಲ್ಪಟ್ಟವು. ವಾಕ್ ಸ್ವಾತಂತ್ರ್ಯದ ಹಕ್ಕನ್ನು ಸ್ಥಾಪಿಸಿ ರಾಷ್ಟ್ರಧ್ವಜದ ಗೌರವವನ್ನು ಕಾಪಾಡಲು ಜನರೆಲ್ಲರೂ ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ ಸರಕಾರವು ನಿಷೇಧಾಜ್ಞೆಗಳನ್ನು ಹಿಂದಕ್ಕೆ ಪಡೆಯುವವರೆಗೂ ಸತ್ಯಾಗ್ರಹ ಚಳುವಳಿ ನಡೆಸಬೇಕೆಂದು

ಕಾಂಗ್ರೆಸ್ ಸಮಿತಿ ಕರೆಯಿತ್ತಿತು. ಧ್ವಜಾರೋಹಣದ ನಂತರ ಏಪ್ರಿಲ್ 25 ರಂದು ಬಹಿರಂಗ ಸಭೆ ನಡೆಸಲು ತೀರ್ಮಾನಿಸಿದರು. ಅಂದು ಸೇರಿದ ಬಹಿರಂಗ ಸಭೆಯಲ್ಲಿ ಹತ್ತು ಹನ್ನೆರಡು ಸಾವಿರ ಜನ ಭಾಗವಹಿಸಿದ್ದರು. ಜನರು ಅಂದು ಸರಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರು. ಸಭೆಯು ನ್ಯಾಯಬಾಹಿರವಾದುದೆಂದು ಅಧಿಕಾರಿಗಳು ಘೋಷಿಸಿ ಸಭೆಯು ಚದುರುವಂತೆ ಗುಂಪಿನ ಜನರಿಗೆ ತಿಳಿಸಿದರು. ಧ್ವಜಾರೋಹಣಕ್ಕೆ ಪ್ರಯತ್ನಿಸಿದ ನಾಲ್ಕು ಜನರನ್ನು ಬಂಧಿಸಿದರು. ಬಂಧಿಸಿದವರನ್ನು ಪೊಲೀಸ್ ವ್ಯಾನಿಗೆ ಕರೆದುಕೊಂಡು ಹೋಗುತ್ತಿದ್ದಾಗ ಗುಂಪಿನ ಜನರು ಪೊಲೀಸ್ ಅಧಿಕಾರಿಗಳನ್ನು ಗೇಲಿಮಾಡಿದರು. ಅಧಿಕಾರಿಗಳು ಕುಪಿತಗೊಂಡರು. ಸಭೆಯನ್ನು ಚದುರಿಸಲು ಅಧಿಕಾರಿಗಳು ಪ್ರಯತ್ನಿಸಿದರು. ಅವರೆಲ್ಲರೂ ಶಾಂತಿವಾದಿಗಳಾದುದರಿಂದ 'ಅಲ್ಲಿಂದ ಚದುರುವುದಿಲ್ಲ'ವೆಂದು ಗುಂಪಿನ ಜನ ತಿಳಿಸಿದರು. ಫಲವಾಗಿ ಅದು ಆಜ್ಞೋಲ್ಲಂಘನೆಯೆಂದು ಭಾವಿಸಿ ಸರಕಾರವು ಕಾಂಗ್ರೆಸ್ಸಿನ ಅನೇಕ ಸದಸ್ಯರನ್ನು ಬಂಧಿಸಿದರು. ಬಂಧಿಸಿದವರನ್ನು ಪೊಲೀಸರು ಕರೆದೊಯ್ಯುವ ವೇಳೆಯಲ್ಲಿ ಗುಂಪಿನ ಜನರಿಗೂ ಪೊಲೀಸರಿಗೂ ವಾಗ್ಯುದ್ಧ ಉಂಟಾಯಿತು. ಪೊಲೀಸರು ಲಾಠಿ ಪ್ರಹಾರಕ್ಕೆ ತೊಡಗಿ ನಂತರ ಕೆಲವು ಸುತ್ತು ಗುಂಡು ಹಾರಿಸಿದರು. ಶಾಂತಿಯುತವಾಗಿ ನೆರಳಿನಲ್ಲಿ ಆಯಾಸ ಪರಿಹರಿಸಿಕೊಳ್ಳುತ್ತಿದ್ದ ಗುಂಪಿನ ಜನರ ಮೇಲೂ ಗುಂಡಗಳ ಸುರಿಮಳೆಯಾಯಿತು. ಆ ದಿನ 3 ಸಾರಿ ಅಧಿಕಾರಿಗಳು ಗುಂಡು ಹಾರಿಸಿದರು. ಅಸಂಖ್ಯಾತ ಜನರು ಗಾಯಗೊಂಡು ಸುಮಾರು ಮೂವತ್ತೈದು (ಸರಕಾರದ ವರದಿಯಂತೆ ಹತ್ತು ಜನ ಮಾತ್ರ) ಜನ ಮಡಿದರು.

ಜಲಿಯನ್ ವಾಲಾಭಾಗ್‌ನಲ್ಲಿ ನಡೆದ ರೀತಿಯಲ್ಲಿ ಸಣ್ಣ ಹತ್ಯೆ ವಿಧುರಾಶ್ವತ್ಥದಲ್ಲಿಯೂ ನಡೆದುಹೋಯಿತು. ಈ ಘಟನೆಯಿಂದ ಮೈಸೂರು ಸಂಸ್ಥಾನವೂ ಸೇರಿದಂತೆ ಇಡೀ ಭಾರತವು ತಲ್ಲಣಿಸಿತು. ಈ ಘೋರ ಕೃತ್ಯವು ಎಲ್ಲರಲ್ಲಿಯೂ ಕಳವಳವನ್ನುಂಟುಮಾಡಿತು. ಇದನ್ನು ಗಾಂಧೀಜಿಯವರೂ ಕೂಡ ಖಂಡಿಸಿ ಸ್ವತಂತ್ರವಾದ ಬಹಿರಂಗ ವಿಚಾರಣಾ ಸಮಿತಿ ನೇಮಿಸಲು ಸೂಚನೆಯಿತ್ತರು. ಇಡೀ ಸಂಸ್ಥಾನದಲೆಲ್ಲಾ ಹಾಗೂ ಸಂಸ್ಥಾನದ ಹೊರಗಡೆಯಲ್ಲಿಯೂ ಖಂಡನಾ ಸಭೆಗಳು ನಡೆದವು.

ಸಾರ್ವಜನಿಕರೂ ನಿರ್ಣಯಗಳ ಮೂಲಕ ಈ ಗಲಭೆಯನ್ನು ಖಂಡಿಸಿ ವಿಚಾರಣೆ ಏರ್ಪಡಿಸಬೇಕೆಂಬ ಕೂಗು ಹಾಕಿದರು.

ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ಪೋಲೀಸರು ಗುಂಡು ಹಾರಿಸಿದ ಘಟನೆಯನ್ನು ಒಂದು ನಿರ್ಣಯದ ಮೂಲಕ ಖಂಡಿಸಿತು. ಈ ಘಟನೆಯಲ್ಲಿ ಸತ್ತವರಿಗೂ ಹಾಗೂ ಗಾಯಗೊಂಡವರಿಗೂ ಸಮಿತಿಯು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿತು. ಇಡೀ ಸಂಸ್ಥಾನದ ಎಲ್ಲೆಡೆ ಗಳಲ್ಲಿಯೂ ಪ್ರತಿಭಟನಾ ಸಭೆಗಳು ನಡೆದವು. ಅಧಿಕಾರಿಗಳು ಅನೇಕ ಜನರನ್ನು ಬಂಧಿಸಿದರು. ಸಾರ್ವಜನಿಕರು ಬೆಂಗಳೂರು ನಗರದಲ್ಲಿ ಹರತಾಳ ಆಚರಿಸಿದರು. ಸರಕಾರದ ಆಜ್ಞೆಗಳನ್ನೂ ಘಟನೆಗಳನ್ನೂ ವಿರೋಧಿಸಿ ಕೆಲವು ವೃತ್ತ ಪತ್ರಿಕೆಗಳು ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿ ಬಿಟ್ಟವು. ಶಿವಪುರದ ಘಟನೆಗಳಿಗೂ, ವಿದುರಾಶ್ವತ್ಥದ ಘಟನೆಗಳಿಗೂ, ಹೋಲಿಸದಷ್ಟು ರೀತಿಯಲ್ಲಿ ಹಿಂಸೆ ಇಲ್ಲಿ ನಡೆಯಿತು. ಶಿವಪುರದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೋಲ್ಲಂಘನೆಯಾಯಿತು. ಧ್ವಜಾರೋಹಣವಾಯಿತು. ಹೆಚ್ಚು ಜನ ಸೇರಿದ್ದರೂ ಯಾವ ಗಲಾಟೆಯೂ ಆಗಲಿಲ್ಲ. ಅದಕ್ಕೆ ಮುಖ್ಯ ಕಾರಣವೆಂದರೆ ಶಿವಪುರದಲ್ಲಿ ಅಧಿಕಾರಿಗಳು ಸಂಯಮದಿಂದಲೂ, ದೂರ ದೃಷ್ಟಿ, ಜಾಣತನ ಮತ್ತು ಜವಾಬ್ದಾರಿಯಿಂದ ವರ್ತಿಸಿದರು. ಆದರೆ ವಿಧುರಾಶ್ವತ್ಥದಲ್ಲಿ ಅಧಿಕಾರಿಗಳು ಸರಿಯಾಗಿ ವರ್ತಿಸಲಿಲ್ಲ. ದೂರದೃಷ್ಟಿ ಮತ್ತು ಜವಾಬ್ದಾರಿಯಿಂದ ವರ್ತಿಸಲಿಲ್ಲ. ಅಹಂಕಾರ ಮತ್ತು ದರ್ಪದಿಂದ ಕೂಡಿದ್ದು ಜನರಿಗೆ ತಮ್ಮ ಅಧಿಕಾರವನ್ನು ತೋರಿಸುವಂತೆ ವರ್ತಿಸಿದರು. ಬಹುಮಟ್ಟಿಗೆ ಅವರ ನಡತೆಯೇ ಗಲಭೆಗೆ ಮುಖ್ಯ ಕಾರಣವಾಯಿತು.

ಗಾಂಧೀಜಿಯವರು ಈ ಗಲಭೆಯನ್ನು ಟೀಕಿಸಿ ಬಹಿರಂಗ ವಿಚಾರಣಾ ಸಮಿತಿ ನೇಮಿಸಬೇಕೆಂಬ ಸಲಹೆಯನ್ನು ಮೈಸೂರು ಸರಕಾರಕ್ಕೆ ತಿಳಿಸಿದರು. ಈ ಘಟನೆಗಳ ಬಗ್ಗೆ ಗಾಂಧೀಜಿಯವರು, "ರಾಷ್ಟ್ರೀಯ ಧ್ವಜದ ಬಗ್ಗೆ ಮೈಸೂರಿನಲ್ಲಿ ನಡೆಯುತ್ತಿರುವ ಚಳುವಳಿ ಕಾಲ ಧರ್ಮವನ್ನನುಸರಿಸಿದೆ....ಈ ಸಂದರ್ಭದಲ್ಲಿ ಸರ್ಕಾರವು ತನ್ನ ನಿರಂಕುಶ ವರ್ತನೆಯನ್ನು ಉಪಸಂಹರಿಸಿ ಕೊಂಡು ಮೈಸೂರಿನ ಆಡಳಿತಕ್ಕೆ ಸಾರ್ವಜನಿಕ ಪ್ರತಿನಿಧಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಸೂಕ್ತವಾದ ಮಾರ್ಗವೆಂದು

ಶ್ರೀಮನ್ಮಹಾರಾಜರವರಿಗೂ ಅವರ ಸಲಹೆಗಾರರಾದ ಸರ್ ಮಿರ್ಜಾವರಿಗೂ ಸೂಚಿಸುತ್ತೇನೆ" ಎಂದು ಹೇಳಿದರು. "ಈಗ ವಿಧುರಾಶ್ವತ್ಥದಲ್ಲಿ ನಡೆದ ದುರಂತ ಪ್ರಕರಣವು ದಕ್ಷಿಣ ಹಿಂದೂಸ್ಥಾನದ ಆಧುನಿಕ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದ ಘಟನೆಯಾಗಿದೆ, ಅಲ್ಲದೆ ಇದು ಜಲಿಯನ್ವಾಲ ಬಾಗಿನ ಘಟನೆಯನ್ನು ಸ್ಮೃತಿಪಥಕ್ಕೆ ತರುತ್ತದೆ" ಎಂದು ಡಾ|| ಪಟ್ಟಾಭಿ ಸೀತಾ ರಾಮಯ್ಯನವರು ಹೇಳಿದರು.

ಈ ಘಟನೆಯಿಂದ ಸಾವಿರಾರು ಜನ ಸ್ಫೂರ್ತಿ ಪಡೆದು ಏನೇ ಕಷ್ಟಗಳು ಬಂದರೂ ರಾಷ್ಟ್ರ ಧ್ವಜಕ್ಕಾಗಿ ಹೋರಾಡಲು ತೀರ್ಮಾನಿಸಿದರು. ಕ್ರಮೇಣ ಸರಕಾರಕ್ಕೂ ಕಾಂಗ್ರೆಸ್ಸಿಗೂ ಒಂದು ಒಪ್ಪಂದವಾಯಿತು. ಹೀಗೆ ಚಳುವಳಿಯ ಮೂಲಕ ಜನರು ವಾಕ್ ಸ್ವಾತಂತ್ರ್ಯ ಮತ್ತು ಸಭೆ ಸೇರುವ ಸ್ವಾತಂತ್ರ್ಯ ಸ್ಥಾಪಿಸಿ ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿಕೊಂಡರು.

ಸರಕಾರದ ವರ್ತನೆಯನ್ನು ಖಂಡಿಸಿ, ಭೀಕರ ಕೃತ್ಯದ ನಿಜಾಂಶವನ್ನು ಅರಿಯಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು, ಎಂ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ, ಎಂ. ಎ. ದೊರೆಸ್ವಾಮಿ ಅಯ್ಯಂಗಾರ್, ಎಸ್. ನಿಜಲಿಂಗಪ್ಪ, ಕೆ. ಟಿ. ಸತ್ಯನಾರಾಯಣಶೆಟ್ಟಿ ಮತ್ತು ಹೆಚ್. ಕೆ. ವೀರಣ್ಣಗೌಡರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಸದಸ್ಯರೆಲ್ಲರೂ ಗೌರೀಬಿದನೂರು, ಹಿಂದೂಪುರ ಹಾಗೂ ಸುತ್ತ ಮುತ್ತಲ ಗ್ರಾಮಗಳಲ್ಲಿ ಸಂಚರಿಸಿ ವಿಚಾರಣೆ ನಡೆಸಿದರು. ಈ ಮಧ್ಯೆ ಸರಕಾರವೇ ಒಂದು ವಿಚಾರಣಾ ಸಮಿತಿ ರಚಿಸಿದ್ದರಿಂದ ಕಾಂಗ್ರೆಸ್ ಸಮಿತಿ ತನ್ನ ವರದಿಯನ್ನು ಒಪ್ಪಿಸುವ ಅಗತ್ಯವಿಲ್ಲವೆಂದು ಎ.ಎಂ.ಸಿ.ಸಿ. ತೀರ್ಮಾನಿಸಿತು. ಈ ಸಮಿತಿಯು ತನ್ನದೇ ವರದಿ ಸಿದ್ಧಪಡಿಸಿದ್ದರೆ ಚೆನ್ನಾಗಿರುತ್ತಿತ್ತು. ಜೊತೆಗೆ ಸರಕಾರದ ಸಮಿತಿಯ ವರದಿಯೊಡನೆ ಹೋಲಿಸಿ ನೋಡುವ ಅವಕಾಶ ಸಾರ್ವಜನಿಕರಿಗೆ ದೊರೆಯುತ್ತಿತ್ತು.

ವಿಧುರಾಶ್ವತ್ಥದ ಗಲಭೆಯ ಕಾರಣಗಳನ್ನು ವಿಚಾರಿಸಲು ವೇಪಾ ರಮೇಶಂರವರ ಅಧ್ಯಕ್ಷತೆಯಲ್ಲಿ ಡಾ|| ಎಫ್. ಎಕ್ಸ್. ಡಿಸೌಜಾ ಮತ್ತು

ಎ. ಆರ್. ನಾಗೇಶ್ವರಯ್ಯರ್‌ರವರನ್ನು ಸದಸ್ಯರಾಗುಳ್ಳ ಒಂದು ವಿಚಾರಣಾ ಸಮಿತಿಯನ್ನು ಸರಕಾರ 1938ರ ಮೇ 6ರಂದು ನೇಮಿಸಿತು. ಈ ಸಮಿತಿಯು 5½ ತಿಂಗಳು ಕಾಲ ವಿಚಾರಣೆ ನಡೆಸಿ 147 ಜನರ ಸಾಕ್ಷ್ಯವನ್ನು ಪಡೆದು ಒಂದು ವರದಿ ಒಪ್ಪಿಸಿತು. ಈ ಸಮಿತಿಯ ವರದಿಯಿಂದ ಮೈಸೂರು ಕಾಂಗ್ರೆಸ್ ಸಮಾಧಾನ ಪಡೆಯಲಿಲ್ಲ. ವರದಿಯು ಸಂಸ್ಥಾನದಲೆಲ್ಲಾ ಅಸಮಾಧಾನವನ್ನೂ ಅತೃಪ್ತಿಯನ್ನೂ ಉಂಟುಮಾಡಿತು. ವರದಿಯಲ್ಲಿ ಮೈಸೂರು ಕಾಂಗ್ರೆಸ್ ಮೇಲಿನ ಟೀಕೆಗಳಿದ್ದವು. ಸರಕಾರವು ವರದಿಯನ್ನು ಒಪ್ಪಿಕೊಂಡು ಕಾಂಗ್ರೆಸ್ ಮೇಲಿನ ಟೀಕೆಯನ್ನೂ ಅನುಮೋದಿಸಿತು. ಆದರೆ ವರದಿಯನ್ನೂ ಅದರ ಮೇಲಿನ ಸರಕಾರದ ಆಜ್ಞೆಯನ್ನೂ ಎಲ್ಲಾ ಕಡೆಗಳಲ್ಲಿಯೂ ಜನರು ತೀವ್ರವಾಗಿ ಖಂಡಿಸಿದರು. ಸರಕಾರದ ಬಗ್ಗೆ ಪ್ರಜೆಗಳಲ್ಲಿ ಜಿಗುಪ್ಸೆ ಮತ್ತು ಅವಿಶ್ವಾಸ ಹೆಚ್ಚಿದವು. "ವಿಧುರಾಶ್ವತ್ಥದಲ್ಲಿ ನಡೆದ ದುರಂತವು ಸ್ವಾತಂತ್ರ್ಯ ಸಾಧನೆಯ ಮಹೋದ್ಯಮದಲ್ಲಿ ಸಂಸ್ಥಾನದ ಪ್ರಜೆಗಳಿಗೆ ಶೀಲ ಶೌರ್ಯ ಮತ್ತು ಧೃಡ ಸಂಕಲ್ಪ ಶಕ್ತಿಯನ್ನು ಗಳಿಸಿಕೊಟ್ಟಿತು. ಈ ದುರಂತವು ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಒಂದು ಮಹತ್ವ ಘಟನೆ. ಅನಂತರ ರಾಜಕೀಯ ಆಂದೋಲನ ಬಲಗೊಂಡಿತು.

ಒಂದು ದೃಷ್ಟಿಕೋನದಿಂದ ವಿವೇಚಿಸಿದರೆ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ಸಿನ ಬೆಳವಣಿಗೆ ಹಾಗೂ ಅದರ ಪ್ರಭಾವಗಳಿಗೆ, ಸರಕಾರದ ನೀತಿಯೇ ಕಾರಣವೆಂದು ಹೇಳಬಹುದು. ಕಾಂಗ್ರೆಸ್ಸಿನ ವಿರುದ್ಧ ಕೈಗೊಂಡ ಪ್ರತಿಯೊಂದು ಕ್ರಮವೂ, ಕಾಂಗ್ರೆಸ್ ಸಂಸ್ಥೆಯ ಶಕ್ತಿಯು ಮತ್ತೂ ಹೆಚ್ಚಾಗಿ ಬೆಳೆಯಲು ಸಹಾಯಕವಾಯಿತು. ವಿದುರಾಶ್ವತ್ಥದ ದುರ್ಘಟನೆಯಿಂದ ಕಾಂಗ್ರೆಸ್ಸಿಗೆ "ಇನ್ನೊಂದು ಶತಮಾನದಲ್ಲಿ ಬರಬಹುದಾಗಿದ್ದ ಶಕ್ತಿಯು ಅಲ್ಪಕಾಲದಲ್ಲಿಯೇ ಬಂದಿತು."

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಗ್ರಂಥಾಲಯ

ಪಟೇಲ್-ಮಿರ್ಜಾ ಒಪ್ಪಂದ

ಮಿರ್ಜಾ ಸರಕಾರವು ತನ್ನ ತಪ್ಪನ್ನರಿತು ಸಮಸ್ಯೆ ಬಗೆಹರಿಸಲು ಗಾಂಧೀಜಿಯವರ ಪ್ರವೇಶವನ್ನು ಅಪೇಕ್ಷಿಸಿತು. ಈ ಗಲಭೆಯ ಪೂರ್ತಿ

ವಿವರಣೆಯನ್ನು ಪಡೆಯಲು ಗಾಂಧೀಜಿಯವರು ಸರದಾರ ವಲ್ಲಭಬಾಯಿ ಪಟೇಲ್ ಮತ್ತು ಆಚಾರ್ಯ ಜೀವತ ರಾಮಭಗವಾನ್‌ದಾಸ್ ಕೃಪಲಾನಿಯವರನ್ನು ಮೈಸೂರು ಸಂಸ್ಥಾನಕ್ಕೆ ಕಳಿಸಿದರು. ಇಕ್ಕಟ್ಟಿನಿಂದ ಪಾರಾಗಲು ಸರಕಾರಕ್ಕೆ ಒಂದು ಅವಕಾಶ ಬೇಕಾಗಿತ್ತು. ಸರದಾರ್ ಪಟೇಲ್ ಮತ್ತು ಜೆ. ಬಿ. ಕೃಪಲಾನಿಯವರು ಸರಕಾರದೊಡನೆ ಹಾಗೂ ಕಾಂಗ್ರೆಸ್ ವರಿಷ್ಠರೊಡನೆ ಚರ್ಚಿಸಿದರು. ಕೆಲವು ದಿನಗಳ ಚರ್ಚೆ ಮತ್ತು ಮಾತುಕತೆಗಳ ಫಲವಾಗಿ ಪಟೇಲ್ – ಮಿರ್ಜಾ ಒಪ್ಪಂದವಾಯಿತು. ಒಪ್ಪಂದವನ್ನು ಸರಕಾರವು 1938ರ ಮೇ 17ರಂದು ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಯಲ್ಲಿ ಅದನ್ನು ಸೂಚಿಸಿತು. ಈ ಒಪ್ಪಂದದಂತೆ ಸರಕಾರವು ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು ಒಂದು ರಾಜಕೀಯ ಪಕ್ಷವೆಂದು ಅಂಗೀಕರಿಸಿತು. ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನು ಮೈಸೂರು ಧ್ವಜದೊಡನೆ ಹಾರಿಸಬಹುದೆಂದು ಒಪ್ಪಿಕೊಂಡರು. ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲೂ, ನಿಷೇದಾಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಮತ್ತು ಅಷ್ಟರಲ್ಲಿ ನೇಮಿಸಲ್ಪಟ್ಟಿದ್ದ ಸುಧಾರಣಾ ಸಮಿತಿಗೆ, ಅದು ಇಚ್ಛಿಸಿದರೆ ಜವಾಬ್ದಾರೀ ಸರಕಾರ ಸ್ಥಾಪನೆಗೆ ಒಂದು ಯೋಜನೆ ಶಿಫಾರಸು ಮಾಡಲು ಒಪ್ಪಿತು.

ಈ ಒಪ್ಪಂದದ ಅಂಶಗಳನ್ನೆಲ್ಲಾ ಅಂಗೀಕರಿಸಿ ಸರಕಾರವು 1938ರ ಮೇ 17ರಂದು ಒಂದು ಪ್ರಕಟಣೆಯನ್ನು ಹೊರಡಿಸಿತು. ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿದರು ಮತ್ತು ಸುಧಾರಣೆ ಸಮಿತಿಗೆ ಮತ್ತೆ ಮೂರು ಜನ ಕಾಂಗ್ರೆಸ್ ಸದಸ್ಯರನ್ನು ನೇಮಿಸಿದರು. ಒಪ್ಪಂದದಿಂದ ಸಮಾಧಾನಗೊಂಡ ಕಾಂಗ್ರೆಸ್ ಇವೆಲ್ಲಾ ತನ್ನ ವಿಜಯವೆಂದು ತಿಳಿದು, ಒಪ್ಪಂದದಂತೆ ಸುಧಾರಣಾ ಸಮಿತಿಗೆ ಸಹಕಾರ ನೀಡುವುದರ ಜೊತೆಗೆ ಎಲ್ಲಾ ವಿಷಯಗಳಲ್ಲಿಯೂ ಒಪ್ಪಂದದಂತೆಯೇ ನಡೆಯಿತು. ಎಲ್ಲಾ ವಿಷಯಗಳೂ ಚರ್ಚಿಸಲ್ಪಟ್ಟರೂ, ಬಿ. ಎನ್. ಗುಪ್ತಾರವರ ಮೇಲಿನ ಗಡೀಪಾರು ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಮಿರ್ಜಾರವರು ಒಪ್ಪಲಿಲ್ಲ. ಪಟೇಲ್ – ಮಿರ್ಜಾ ಒಪ್ಪಂದದಿಂದ ಶಿವಪುರದ ಕಾಂಗ್ರೆಸ್ ಅಧಿವೇಶನದ ಕೋರಿಕೆಗಳನ್ನು ಈಡೇರಿಸಿದಂತಾಯಿತು ಮತ್ತು ಧ್ವಜ ಸತ್ಯಾಗ್ರಹದ ಗುರಿ ಸಾಧಿಸಲಾಯಿತೆಂಬ ಭಾವನೆ ಬೆಳೆಯಿತು.

ಒಪ್ಪಂದದ ಬಗ್ಗೆ ಸರಕಾರದ ಧೋರಣೆ

ಪಟೇಲ್-ಮಿರ್ಜಾ ಒಪ್ಪಂದವು ಮೈಸೂರು ಸಂಸ್ಥಾನದ ರಾಜಕೀಯದಲ್ಲಿ ಪ್ರಗತಿಯ ಕಾಲದ ಆರಂಭಕ್ಕೆ ಅನುಕೂಲವಾಗುತ್ತದೆಂದು ಎಲ್ಲರೂ ಆಶಿಸಿದ್ದರು. ಕಾಂಗ್ರೆಸ್ ಸಂಸ್ಥೆಯು ಸರಕಾರದೊಡನೆ ಸಹಕರಿಸಿತು. ಆದರೆ ಸ್ನೇಹ ಸಂಬಂಧ ಬಹಳ ದಿನಗಳ ಕಾಲ ಉಳಿಯಲಿಲ್ಲ. ಮೈಸೂರು ಕಾಂಗ್ರೆಸ್‌ನ ಧ್ಯೇಯ ಮತ್ತು ಗುರಿಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆ. ಟಿ. ಭಾಷ್ಯಂರವರು ನಿರೂಪಿಸಿದರು. ಕಾಂಗ್ರೆಸ್ ಸಂಸ್ಥೆಯು ಪ್ರಭಲವಾಗಿ ರಾಜಕೀಯದಲ್ಲಿ ಪ್ರಾಮುಖ್ಯತೆ ಗಳಿಸುವುದು ಸರಕಾರಕ್ಕೆ ಇಷ್ಟವಿರಲಿಲ್ಲ. ಹಾಗಾದ ಸಂದರ್ಭದಲ್ಲಿ ತಮ್ಮ ಅಧಿಕಾರಕ್ಕೆ ಚ್ಯುತಿ ಬರುತ್ತದೆಂದು ಅಧಿಕಾರಿಗಳಿಗೆ ತಿಳಿದಿತ್ತು. ಒಪ್ಪಂದದಿಂದ ದೊರೆತ ಸೌಹಾರ್ದಯುತ ಕಾಲಾವಕಾಶವನ್ನು ಸರಕಾರವು ತನ್ನ ಅನುಕೂಲಕ್ಕಾಗಿ ಬಳಸಿಕೊಂಡಿತೇ ಹೊರತು, ಕಾಂಗ್ರೆಸ್ಸಿನೊಡನಿದ್ದ ಸಂಬಂಧ ಬಲಪಡಿಸಿಕೊಂಡು ರಾಜಕೀಯ ಬೆಳವಣಿಗೆಗಳಿಗೆ ಹೊಸರೂಪ ಕೊಡಲು ಇಚ್ಛಿಸಲಿಲ್ಲ. ಸಿ. ಬಿ. ಮೊನ್ನಯ್ಯ ಮತ್ತು ಬಿ. ಎನ್. ಗುಪ್ತಾರವರ ವಿರುದ್ಧ ಇದ್ದ ಗಡೀಪಾರಾಜ್ಞೆಗಳನ್ನು ಹಿಂದಕ್ಕೆ ಪಡೆಯಲಿಲ್ಲ. ಸಾರ್ವಜನಿಕರ ಕೋರಿಕೆಯಂತೆ ಏರ್ಪಡಿಸಿದ್ದ ವಿಧುರಾಶ್ವತ್ಥ ವಿಚಾರಣೆಯನ್ನು ಸರಕಾರವು ಕಾಂಗ್ರೆಸ್ ಸಂಸ್ಥೆಯನ್ನು ಅವಹೇಳನಮಾಡಲು ಉಪಯೋಗಿಸಿಕೊಂಡಿತೇ ಹೊರತು, ಗಲಭೆಯ ಕಾರಣಗಳನ್ನು ಸಂದರ್ಭವನ್ನೂ ಅಧ್ಯಯನಮಾಡಿ ವರದಿಮಾಡಲು ಅವಕಾಶ ನೀಡಲಿಲ್ಲ. ಸಂಸ್ಥಾನದಾದ್ಯಂತ ಜನರು 'ವಿಧುರಾಶ್ವತ್ಥದ ದಿನ' ಆಚರಿಸಿ, ವರದಿಯನ್ನು ಖಂಡಿಸಿದರು.

ಪಟೇಲ್-ಮಿರ್ಜಾ ಒಪ್ಪಂದದಂತೆ ನಡೆಯದೆ ಸರಕಾರವು ಕಾಂಗ್ರೆಸ್ ಕೆಲಸಗಾರರಿಗೆ ಮತ್ತೆ ಕಿರುಕುಳ ಕೊಡಲು ಆರಂಭಿಸಿತು. ಪಟೇಲ್-ಮಿರ್ಜಾ ಒಪ್ಪಂದದಂತೆ ಸರಕಾರವು ನಡೆಯುತ್ತಿಲ್ಲವೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಆಪಾದಿಸಿದಾಗ, ಒಪ್ಪಂದವೇ ಆಗಿಲ್ಲವೆನ್ನುವ ರೀತಿಯಲ್ಲಿ ದಿವಾನ್ ಮಿರ್ಜಾರವರು ನಡೆದುಕೊಂಡರು. ಇದರಿಂದ ಜನರು ದಿಗ್ಭ್ರಾಂತರಾಗಿ, ಸರಕಾರದ ನೀತಿಯನ್ನು ಪ್ರತಿಭಟಿಸಿದರು. ಜನನಾಯಕರು ದಿವಾನರನ್ನು ಖಂಡಿಸಿದರು. ಕಾಂಗ್ರೆಸ್ ಸದಸ್ಯರ ಬಂಧನ, ಅವರಿಗೆ ಶಿಕ್ಷೆ, ಅವರ ವಿರುದ್ಧ ನಿಷೇಧಾಜ್ಞೆಗಳು ಜಾಸ್ತಿಯಾದವು. ಇದರಿಂದ ಅತೃಪ್ತಿಗೊಂಡ

ಕಾಂಗ್ರೆಸ್ ಸದಸ್ಯರೆಲ್ಲರೂ ತುಮಕೂರಿನಲ್ಲಿ ಡಿಸೆಂಬರ್ 3 ಮತ್ತು 4 ರಂದು ನಡೆದ ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಸರಕಾರದ ಧೋರಣೆಯನ್ನು ಪರಿಶೀಲಿಸಿ, ಸುಧಾರಣಾ ಸಮಿತಿಯ ಕೆಲಸಗಳನ್ನು ವಿಪುಲ ವಾಗಿ ಚರ್ಚಿಸಿತು. ಸುಧಾರಣಾ ಸಮಿತಿಯ ಕೆಲಸಗಳು ಮಂದಗಾಮಿಯಾಗಿ ನಡೆಯುತ್ತಿದ್ದವು. ಜವಾಬ್ದಾರೀ ಸರಕಾರ ಸ್ಥಾಪನೆ ವಿಷಯವನ್ನು ಸಮಿತಿಯು ನಾನಾ ಕಾರಣಗಳಿಂದ ಮುಂದೂಡಿತು. ಆದ್ದರಿಂದ ಕಾಂಗ್ರೆಸ್ ಕಾರ್ಯ ಸಮಿತಿಯು, ಸುಧಾರಣಾ ಸಮಿತಿಯಲ್ಲಿ ಕಾಂಗ್ರೆಸ್ ಮುಂದುವರಿಯುವುದ ರಿಂದ ಯಾವ ಪ್ರಯೋಜನವೂ ಇಲ್ಲವೆಂದು ಅಭಿಪ್ರಾಯಪಟ್ಟಿತು. ಕಾಂಗ್ರೆಸ್ ಆಶಯಗಳಿಗೆ ಅನುಕೂಲವಲ್ಲದ ತೀರ್ಮಾನ ಅಥವಾ ಅದರ ವಿರುದ್ಧದ ತೀರ್ಮಾನಗಳಾಗುವ ಸಂಭವವಾದರೆ ಕಾಂಗ್ರೆಸ್ ಪ್ರತಿನಿಧಿಗಳು ಸಹಕರಿಸ ಬಾರದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕಾಂಗ್ರೆಸ್ ಸದಸ್ಯರ ರಾಜೀನಾಮೆ

ಕಾಂಗ್ರೆಸ್ ಸಂಸ್ಥೆಯೊಡನೆ ಒಂದು ಒಪ್ಪಂದ ಮಾಡಿಕೊಂಡಿದ್ದರೂ, ಸರಕಾರವು ಭಾಂಧವ್ಯ ಬೆಳಸಿಕೊಳ್ಳಲು ಯತ್ನಿಸದೆ, ಕಾಂಗ್ರೆಸ್ಸಿನ ಕೆಲಸ ಕಾರ್ಯಗಳನ್ನು ಅನುಮಾನ ದೃಷ್ಟಿಯಿಂದಲೇ ನೋಡುತ್ತಾ ಸಾಧ್ಯವಾದಷ್ಟು ತೊಂದರೆಗಳನ್ನು ಕೊಡಲು ಪ್ರಯತ್ನಿಸಿತು ಆದರೂ ಅಂತಹ ಸಂದರ್ಭಗಳಲ್ಲಿ ತನ್ನ ವಿಷಾದವನ್ನು ವ್ಯಕ್ತಪಡಿಸಿ, ನಂತರವಾದರೂ ಸರಕಾರ ಉತ್ತಮ ರೀತಿ ಯಲ್ಲಿ ನಡೆಯುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಕಾಂಗ್ರೆಸ್ ಅಂಗೀಕರಿಸಿತು. ಒಪ್ಪಂದದಂತೆ ಸರಕಾರ ವರ್ತಿಸದೇ ಹೋದುದ ರಿಂದ, ಸರಕಾರದ ಮನೋಭಾವನೆಯನ್ನು ಖಂಡಿಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಲು, ಕಾಂಗ್ರೆಸ್ ಸದಸ್ಯರೆಲ್ಲರೂ ಶಾಸಕಾಂಗ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿನ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಲು ಯೋಚಿಸಿದರು.

ಮೈಸೂರು ಕಾಂಗ್ರೆಸ್ ಕಾರ್ಯಸಮಿತಿಯ ವಿಶೇಷ ಅಧಿವೇಶನವೊಂದು 1939ರ ಫೆಬ್ರವರಿಯಲ್ಲಿ ಬೆಂಗಳೂರು ನಗರದ ಮಲ್ಲೇಶ್ವರದಲ್ಲಿ ನಡೆದು ಸರಕಾರದೊಡನೆ ತನ್ನ ಸಂಬಂಧವನ್ನು ಚರ್ಚಿಸಿತು. ಅಧ್ಯಕ್ಷ ಟಿ. ಸಿದ್ದಲಿಂಗಯ್ಯ ನವರು, ಸರಕಾರದ ವರ್ತನೆಯನ್ನು ಟೀಕಿಸಿ, ಒಪ್ಪಂದಕ್ಕೆ ವಿರುದ್ಧವಾಗಿ

ಬೇಕೆಂವೇ ನೆಡೆದಿರುವುದನ್ನು ಸಮರ್ಥಿಸಲು ಕೆಲವು ಉದಾಹರಣೆಗಳನ್ನು ನೀಡಿದರು. ಸ್ವಾತಂತ್ರ್ಯ ಪಡೆಯಲು ನಡೆಸಬೇಕಾಗಿರುವ ಚಳವಳಿಯಲ್ಲಿ ಭಾಗವಹಿಸಲು ಎಲ್ಲರೂ ತಯಾರಾಗಿರಬೇಕೆಂದು ಸಾರ್ವಜನಿಕರನ್ನು ಕೋರಿದರು. ಒಂದು ನಿರ್ಣಯದ ಮೂಲಕ ಸರಕಾರವು ಪ್ರಾರಂಭದಿಂದಲೂ ಒಪ್ಪಂದವನ್ನು ಮನ್ನಿಸದಿರುವುದರಿಂದಲೂ, ಒಪ್ಪಂದಕ್ಕನುಗುಣವಾಗಿ, ಮೈಸೂರು ಕಾಂಗ್ರೆಸ್ಸಿನವರು ಸರಕಾರವನ್ನು ಸೌಹಾರ್ದವಾಗಿ ಕೋರಿದ ಎಲ್ಲಾ ಕೋರಿಕೆಗಳೂ, ತಿರಸ್ಕರಿಸಲ್ಪಟ್ಟದ್ದರಿಂದಲೂ, ರಾಜಕೀಯ ಸುಧಾರಣಾ ಸಮಿತಿಗೆ ಕಾಂಗ್ರೆಸ್ಸಿನಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಯನ್ನು ಸ್ವೀಕರಿಸದೆ, ಕಾಂಗ್ರೆಸ್ ಪ್ರಾತಿನಿಧ್ಯಕ್ಕೆ ಕೊರತೆ ಉಂಟುಮಾಡಿದುದರಿಂದಲೂ, ಒಪ್ಪಂದವನ್ನು ಸರಕಾರವೇ ಮುರಿದಿದ್ದಾರೆಂಬ ಅಂಶವನ್ನು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ವಿಷಾದಪೂರ್ವಕವಾಗಿ ವ್ಯಕ್ತಪಡಿಸಿತು. ಸುಧಾರಣಾ ಸಮಿತಿ ಸದಸ್ಯರನ್ನು ತೆರವಾದ ಜಾಗಗಳಿಗೆ ನೇಮಿಸುವ ವಿಷಯದಲ್ಲಿ ಕಾಂಗ್ರೆಸ್ಸಿನ ಸಲಹೆಗಳನ್ನು ಸರಕಾರ ಮನ್ನಿಸದೇ ಇರುವುದಕ್ಕೆ ತನ್ನ ವಿಷಾದ ವ್ಯಕ್ತಪಡಿಸಿತು. ಸಮಿತಿಯು ಸುಧಾರಣಾ ಸಮಿತಿಯಲ್ಲಿನ ತನ್ನ ಸದಸ್ಯರುಗಳನ್ನು ವಾಪಸ್ಸು ಕರೆದುಕೊಳ್ಳಲು ತೀರ್ಮಾನಿಸಿತು. ಇದರ ಜೊತೆಗೆ ತನ್ನ ಸಂಪೂರ್ಣ ಅಸಹಕಾರ ಸೂಚಿಸಲು ಹಾಗೂ ಸರಕಾರವು ಒಪ್ಪಂದವನ್ನು ಮುರಿದು ಜವಾಬ್ದಾರೀ ಸರಕಾರ ಸ್ಥಾಪನೆ ಬಗ್ಗೆ ಕಾಂಗ್ರೆಸ್ಸಿನ ಸೇವಾ ಕಾರ್ಯಕ್ಕೆ ಭಂಗ ತಂದಿರುವುದರಿಂದ, ಪ್ರತಿಭಟನಾರ್ಥವಾಗಿ, ಪ್ರಜಾಪ್ರತಿನಿಧಿಸಭೆ, ನ್ಯಾಯ ವಿಧಾಯಕಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿನ ಕಾಂಗ್ರೆಸ್ ಸದಸ್ಯರೆಲ್ಲರೂ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ ಕಾರ್ಯಸಮಿತಿ ತೀರ್ಮಾನಿಸಿತು. ಈ ರಾಜೀನಾಮೆಗಳು, ಸರಕಾರ ಒಪ್ಪಂದದಂತೆ ನಡೆಯದಿರುವುದನ್ನು ವಿರೋಧಿಸುವುದರ ಜೊತೆಗೆ, ಹೋರಾಟಕ್ಕೆ ಸಿದ್ಧವಾಗಿರುವ ಕಾಂಗ್ರೆಸ್ಸಿನ ಬಲವನ್ನೂ ಸೂಚಿಸುತ್ತದೆಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ತೀರ್ಮಾನದಂತೆ, ಮೇ ತಿಂಗಳ ಕೊನೆಯ ಹೊತ್ತಿಗೆ ಪ್ರಜಾಪ್ರತಿನಿಧಿ ಸಭೆಯ 66 ಜನ ಸದಸ್ಯರೂ, ನ್ಯಾಯವಿಧಾಯಕ ಸಭೆಯ 9 ಜನ ಸದಸ್ಯರೂ, ಜಿಲ್ಲಾ ಬೋರ್ಡು ಮತ್ತು

ಪೌರಸಭೆಗಳ 150 ಜನ ಸದಸ್ಯರೂ, ಸ್ಥಳೀಯ ಸಂಸ್ಥೆಗಳ ಕಾಂಗ್ರೆಸ್ ಸದಸ್ಯರುಗಳೆಲ್ಲರೂ ರಾಜೀನಾಮೆ ನೀಡಿದರು. ಈ ನಿರ್ಣಯದಲ್ಲಿ ಗ್ರಾಮ ಪಂಚಾಯಿತಿಗಳು ಸೇರಿಲ್ಲದಿದ್ದರೂ, ಗ್ರಾಮಪಂಚಾಯಿತಿಗಳ ಕಾಂಗ್ರೆಸ್ ಸದಸ್ಯರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟರು. ಆದರೆ ಹಾಸನದ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ ಹೆಚ್. ಬಿ. ಗುಂಡಪ್ಪಗೌಡರು ನ್ಯಾಯ ವಿಧಾಯಕ ಸಭೆಗೆ ರಾಜೀನಾಮೆ ಕೊಟ್ಟರೂ, ಜಿಲ್ಲಾ ಬೋರ್ಡಿಗೆ ರಾಜೀನಾಮೆ ಕೊಡಲಿಲ್ಲ. ಕ್ರಮೇಣ ಅವರು ಕಾಂಗ್ರೆಸ್ ಪಕ್ಷವನ್ನೇ ತ್ಯಜಿಸಿದರು.

ಕಾಂಗ್ರೆಸ್ ಸದಸ್ಯರಲ್ಲದವರಲ್ಲಿಯೂ ಅನೇಕರು ಕಾಂಗ್ರೆಸ್ಸಿನಲ್ಲಿ ತಮಗಿರುವ ಸಹಾನುಭೂತಿ ತೋರಿಸಲು ರಾಜೀನಾಮೆ ನೀಡಿದರು. ಅರಸೀಕೆರೆಯಲ್ಲಿ ನಡೆದ ಎ.ಎಂ.ಸಿ.ಸಿ. ಸಮಿತಿಯು ಸರಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿ, ಒಬ್ಬೊಬ್ಬ ವ್ಯಕ್ತಿಯು, ತನಗೆ ಸರಿತೋರಿದ, ಸಾಧ್ಯವಿರುವ ರೀತಿಯಲ್ಲಿ ಅಹಿಂಸಾತ್ಮಕವಾಗಿ ಚಳುವಳಿ ಮಾಡಬೇಕೆಂಬ ಕರೆ ಕೊಟ್ಟಿತು. "ರಚನಾತ್ಮಕ ಕಾರ್ಯಗಳಲ್ಲಿ ಹೆಚ್ಚು ಶ್ರದ್ಧೆಯಿಂದ ಪಾಲುಗೊಳ್ಳಬೇಕೆಂದು ಕಾಂಗ್ರೆಸ್ ಕೆಲಸಗಾರರಿಗೆ ಕರೆಯಿತ್ತು, ಜವಾಬ್ದಾರೀ ಸರಕಾರಕ್ಕಾಗಿ ನಡೆಯುತ್ತಿದ್ದ ಹೋರಾಟದ ತಳಹದಿ ಹಾಕಿತು."

ಮಲ್ಲೇಶ್ವರದಲ್ಲಿ ನಡೆದ ಕಾಂಗ್ರೆಸ್ ಸಮಿತಿಯ ತೀರ್ಮಾನದಂತೆ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಕೊಟ್ಟರೂ ಕೂಡ ಸರಕಾರದ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಪಕ್ಷವನ್ನು ಟೀಕಿಸಿ, ಕಡೆಗೆ ಒಪ್ಪಂದವೇ ಆಗಿಲ್ಲವೆಂದು ದಿವಾನರು ನ್ಯಾಯವಿಧಾಯಕ ಸಭೆಯಲ್ಲಿ ತಿಳಿಸಿದರು. ದಿವಾನರ ಈ ನಿರಾಕರಣೆಯನ್ನು ಜವಹರಲಾಲ್ ನೆಹರೂರವರು ಕೂಡ ಕಟುವಾಗಿ ಟೀಕಿಸಿದರು.

ರೈತರ ಸಭೆಗಳು

ಜನಸಾಮಾನ್ಯರಲ್ಲಿ ಕಾಂಗ್ರೆಸ್ಸಿನ ಧ್ಯೇಯ ಮತ್ತು ತತ್ವಗಳನ್ನು ಪ್ರಚಾರ ಮಾಡಲು ಹಾಗೂ ಜನರ ಬೆಂಬಲವನ್ನು ಗಳಿಸಲು ರೈತರ ಸಭೆಗಳನ್ನು ನಡೆಸಲು ಕಾಂಗ್ರೆಸ್ ತೀರ್ಮಾನಿಸಿತು. ರೈತರ ಸಭೆಗಳ ವಿಷಯ, ಅವುಗಳನ್ನು

ವ್ಯವಸ್ಥೆಗೊಳಿಸುವ ರೀತಿಯನ್ನು ಕುರಿತು ಹೆಚ್. ಕೆ. ವೀರಣ್ಣಗೌಡರು ಒಂದು ಚಿಕ್ಕಹೊತ್ತಿಗೆಯನ್ನು ಪ್ರಕಟಿಸಿದರು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ರೈತರ ಸಭೆಗಳು ನಡೆದವು. ರೈತರ ಸಮಸ್ಯೆಗಳು ಈ ಸಭೆಗಳಲ್ಲಿ ಚರ್ಚಿಸಲ್ಪಟ್ಟು, ಅವರ ಅಭಿವೃದ್ಧಿಗೆ ಸಲಹೆಗಳೂ ಸೂಚಿಸಲ್ಪಟ್ಟವು. ಎಲ್ಲಾ ಸಭೆಗಳಲ್ಲಿಯೂ, ಜವಾಬ್ದಾರೀ ಸರಕಾರ ಏರ್ಪಡಿಸಬೇಕೆಂದು ನಿರ್ಣಯಗಳನ್ನು ಅನುಮೋದಿಸಿದರು. ಹೀಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ರೈತರ ಸಭೆಗಳು ನಡೆದ ಪರಿಣಾಮವಾಗಿ ಕಾಂಗ್ರೆಸ್ ಹೆಚ್ಚು ಪ್ರಚಾರ ಪಡೆದು, ಸದಸ್ಯರ ಸಂಖ್ಯೆ ಬೆಳೆಯಿತು ಹಾಗೂ ಅದರ ಪ್ರಭಾವ ಎಲ್ಲಾ ಕಡೆಗಳಲ್ಲಿಯೂ ಹರಡಿತು.

ಕಾಂಗ್ರೆಸ್ ಪಕ್ಷಗಳು

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಕೂಡಿ ಪಕ್ಷಗಳನ್ನು ಮೈಸೂರು ಕಾಂಗ್ರೆಸ್ ಬೋರ್ಡಿನ ಅಧೀನದಲ್ಲಿ ಸ್ಥಾಪಿಸಿಕೊಂಡರು. ಮೈಸೂರು ಕಾಂಗ್ರೆಸ್ ಸ್ಥಾಪನೆಯಾದ ಮೇಲೆ ಇವು ಅದರ ಅಧೀನಕ್ಕೆ ಬಂದವು. ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ಕೆ. ಟಿ. ಬಾಷ್ಯಂರವರು ನಾಯಕರಾಗಿದ್ದರು. ಕೇವಲ ಮೂವತ್ತು ಸದಸ್ಯರನ್ನೊಳಗೊಂಡಿದ್ದ ಕಾಂಗ್ರೆಸ್ ಪಕ್ಷದ ಸಂಖ್ಯೆಯು ಪ್ರಜಾಪಕ್ಷ ಕಾಂಗ್ರೆಸ್‌ನಲ್ಲಿ 1937ರಲ್ಲಿ ವಿಲೀನಗೊಂಡ ನಂತರ 130ಕ್ಕೆ ಏರಿತು. ಶಾಸನಸಭೆಯ ಕಾಂಗ್ರೆಸ್ ಪಕ್ಷ ತನ್ನದೇ ಆದ ಶಿಸ್ತು ನಿಯಮಗಳನ್ನು ಹೊಂದಿತ್ತು. ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ಡಿ. ಎಸ್. ಮಲ್ಲಪ್ಪನವರು ನಾಯಕರಾಗಿದ್ದು ಉತ್ತಮ ಕೆಲಸ ಮಾಡಿ ಕಾಂಗ್ರೆಸ್ಸಿನ ಧ್ಯೇಯಗಳನ್ನು ಎತ್ತಿ ಹಿಡಿದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರು ಸಂಸ್ಥಾನದಲ್ಲೆಲ್ಲಾ ಪ್ರವಾಸ ಮಾಡಿ ಕಾಂಗ್ರೆಸ್ಸಿನ ಸಂದೇಶವನ್ನು ಜನರಲ್ಲಿ ವಿಶೇಷವಾಗಿ ಪ್ರಚಾರ ಮಾಡಿದರು. ಅಧ್ಯಕ್ಷರು ವಾರ್ಧಾಕ್ಕೆ ಭೇಟಿ ನೀಡಿ ಮಹಾತ್ಮಗಾಂಧಿ, ಸರದಾರ್ ವಲ್ಲಭಭಾಯಿ ಪಟೇಲ್ ಮುಂತಾದ ರಾಷ್ಟ್ರ ನಾಯಕರೊಡನೆ ಮೈಸೂರಿನ ರಾಜಕೀಯದ ವಿಷಯವಾಗಿ ಚರ್ಚೆ ನಡೆಸಿದರು. ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಲೂದಿಯಾನದಲ್ಲಿ

ನಡೆದ ಅಖಿಲ ಭಾರತ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಸಭೆಯಲ್ಲಿ ಅಧ್ಯಕ್ಷ ಟಿ. ಸಿದ್ದಲಿಂಗಯ್ಯನವರು ಭಾಗವಹಿಸಿದ್ದರು.

1939ರ ಜನವರಿ 17ರಂದು ಆಗ ಭಾರತದಲ್ಲಿ ವೈಸ್‌ರಾಯಿಯಾಗಿದ್ದ ಲಾರ್ಡ್ ಲಿನ್‌ಲಿತ್‌ಗೋರವರು ಮೈಸೂರು ಸಂಸ್ಥಾನಕ್ಕೆ ಭೇಟಿಯಿತ್ತರು. ಸಾರ್ವಜನಿಕರು ಅವರ ಭೇಟಿಯನ್ನು ವಿರೋಧಿಸಿ ಪ್ರತಿಭಟಿಸಿದರು. ಹೀಗೆ ವಿರೋಧಿಸಿದ ಅನೇಕ ಕಾಂಗ್ರೆಸ್ ಕೆಲಸಗಾರರನ್ನು ಅಧಿಕಾರಿಗಳು ಬಂಧಿಸಿದರು. ಅರಣ್ಯ ಸತ್ಯಾಗ್ರಹ ವೇಳೆಯಲ್ಲಿ ಪಾನನಿರೋಧ ಚಳುವಳಿಯಲ್ಲಿ ಭಾಗವಹಿಸಿದ್ದ ಅನೇಕರನ್ನು ಅಧಿಕಾರಿಗಳು ಬಂಧಿಸಿದ್ದರು. ಅವರ ಮೇಲೆ ಕೇಸುಗಳನ್ನು ದಾಖಲು ಮಾಡಿಕೊಂಡು ನ್ಯಾಯಾಧೀಶರ ಮುಂದೆ ವಿಚಾರಣೆ ನಡೆಸಿದರು. ವಿಚಾರಣೆ ಮುಗಿದ ಮೇಲೆ ನ್ಯಾಯಾಧೀಶರು ತೀರ್ಪು ನೀಡಿ, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ ಕೆಲಸಗಾರರೆಲ್ಲರೂ ಉತ್ತಮ ಕುಟುಂಬಗಳಿಂದ ಬಂದವರೆಂದೂ, ಜನರನ್ನು ಕುಡಿತದ ಕೆಟ್ಟ ಅಭ್ಯಾಸದಿಂದ ಬಿಡಿಸಬೇಕೆಂಬುದೇ ಅವರ ಉದ್ದೇಶವಾಗಿತ್ತೆಂದೂ, ಅವರು ಯಾವ ನಿಯಮವನ್ನು ಉಲ್ಲಂಘಿಸಿಲ್ಲವೆಂದು, ಅವರನ್ನು ಖುಲಾಸೆ ಮಾಡಿ ಬಿಡುಗಡೆ ಮಾಡಿದರು. ಈ ತೀರ್ಮಾನದಿಂದ ಸ್ವಾತಂತ್ರ್ಯ ಚಳುವಳಿಯು ಜನರ ಬೆಂಬಲ ಪಡೆಯಿತು. ಹೆಚ್ಚು ಪ್ರಭಾವಿತವಾಯಿತು.

ಹ್ಯಾಮಿಲ್ಟನ್ ಸತ್ಯಾಗ್ರಹ

ಮೈಸೂರು ನಗರದಲ್ಲಿ, ಹೊಸದಾಗಿ ನಿರ್ಮಿಸಿದ್ದ ಕೇಂದ್ರ ಪೊಲೀಸ್ ಠಾಣೆಗೆ, ಮೈಸೂರು ಸಂಸ್ಥಾನದಲ್ಲಿ ಆಂಗ್ಲ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದ ಹ್ಯಾಮಿಲ್ಟನ್ ಎಂಬಾತನ ಹೆಸರನ್ನು, ಸಾರ್ವಜನಿಕಾಭಿಪ್ರಾಯಕ್ಕೆ ವಿರುದ್ಧವಾಗಿ ಇಡಲು ಸರಕಾರವು ತೀರ್ಮಾನಿಸಿತು. ಇದು ಅಸಂಬದ್ಧವೆಂದೂ ರಾಷ್ಟ್ರಪ್ರೇಮದಿಂದ ಕೂಡಿದುದಲ್ಲವೆಂದೂ ಕಾಂಗ್ರೆಸ್ ಸದಸ್ಯರೆಲ್ಲರು ವಿರೋಧಿಸಿದರು. 1939ರ ಜನವರಿ 9ರಂದು ಸಾರ್ವಜನಿಕ ಸಭೆಯೊಂದು ಮೈಸೂರು ನಗರದಲ್ಲಿ ನಡೆದು ಪೋಲೀಸ್ ಠಾಣೆಗೆ ಹ್ಯಾಮಿಲ್ಟನ್ ಹೆಸರಿಡುವುದನ್ನು ವಿರೋಧಿಸಿದರು. ತಗಡೂರು ರಾಮಚಂದ್ರರಾಯರು ಆ ಹೆಸರಿಡಕೂಡದೆಂದು, ಹಾಗೆ ಸಾರ್ವಜನಿಕರ ಅಭಿಪ್ರಾಯಕ್ಕೆ ವಿರುದ್ಧವಾ

ಪ್ರಕಾರ ವರ್ತಿಸಿದರೆ, ನೂತನ ಪೋಲೀಸ್ ಠಾಣೆಯ ಮುಂದೆಯೇ ಸತ್ಯಾಗ್ರಹ ಆರಂಭಿಸುವುದಾಗಿ ಘೋಷಿಸಿದರು. ಬೆಂಗಳೂರು ನಗರದಲ್ಲಿಯೂ ಜನವರಿ 19ರಂದು ಒಂದು ಸಾರ್ವಜನಿಕ ಸಭೆ ನಡೆದು ಸರಕಾರವು ಪೋಲೀಸ್ ಠಾಣೆಗೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ಹೆಸರಿಟ್ಟುದುದನ್ನು ವಿರೋಧಿಸಿದರು. ಆ ಹೆಸರನ್ನು ಬದಲಾಯಿಸುವುದಿಲ್ಲವೆಂದು ಸರಕಾರವೂ ಕೂಡ ಖಚಿತವಾಗಿ ತಿಳಿಸಿದುದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಆ ವಿಷಯವನ್ನು ಪರಿಶೀಲಿಸಿತು. ಆ ವಿಷಯವು ಚರ್ಚಿಸಲ್ಪಟ್ಟು ಅಂತಹ ವಿರೋಧಿ ಚಳುವಳಿಯಲ್ಲಿ "ಕಾಂಗ್ರೆಸ್ ಸತ್ಯಾಗ್ರಹವನ್ನಾರಂಭಿಸಬಾರದೆಂದೂ, ಯಾರಾದರೂ ವೈಯಕ್ತಿಕವಾಗಿ ಮಾಡುವುದಾದರೆ ಅದಕ್ಕೆ ತಮ್ಮ ಅಡ್ಡಿಯಿಲ್ಲವೆಂದೂ ಘೋಷಿಸಿತು." ಅದರಂತೆ ತಗಡೂರು ರಾಮಚಂದ್ರರಾಯರು 1939 ರ ಫೆಬ್ರವರಿ 15 ರಿಂದ ಶಾಂತಿಯುತವಾಗಿ ಸತ್ಯಾಗ್ರಹವನ್ನು ಪೋಲೀಸ್ ಠಾಣೆಯ ಮುಂದೆ ಆರಂಭಿಸಿದರು. ರಾಮಚಂದ್ರರಾಯರು ಮತ್ತು ಎಂ. ಎನ್. ಜೋಯಿಸ್‌ರವರನ್ನು ಅಧಿಕಾರಿಗಳು ದಸ್ತಗಿರಿ ಮಾಡಿ ಒಳ್ಳೆಯ ನಡವಳಿಕೆ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕಾಗಿದ್ದ ಸೆಕ್ಷನ್ ಪ್ರಕಾರ ಒಂದೊಂದು ವರ್ಷ ಶಿಕ್ಷೆಗೆ ಗುರಿಮಾಡಿದರು. ಈ ಸತ್ಯಾಗ್ರಹ ಚಳುವಳಿಯು ಸರಕಾರದ ಅಪ್ರಿಯ ಕಾರ್ಯಗಳ ವಿರುದ್ಧ ಪ್ರತಿಭಟಿಸಲು ಉದ್ದೇಶಿಸಿದ್ದು ಸಾಧನೆಯಾಯಿತು. ಅದು ಜಯಪ್ರದವಾಗಿ ಸಾರ್ವಜನಿಕ ವಿರೋಧ ಶಕ್ತಿಯು ಬೆಳಕಿಗೆ ತರಲ್ಪಟ್ಟಿತು.*

ಶಾಸನ ಸಭೆಗಳ ಅನೇಕ ಜನ ಕಾಂಗ್ರೆಸ್ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟರು. ಸರಕಾರವು ಅನೇಕ ಕೆಲಸಗಾರರನ್ನು ದಸ್ತಗಿರಿ ಮಾಡಿದರೂ ಕೂಡ ಸತ್ಯಾಗ್ರಹವು ಮುಂದುವರಿಯಿತು. ಉತ್ತಮ ವಾತಾವರಣ ಕಲ್ಪಿಸುವ ಉದ್ದೇಶದಿಂದ ವಿಧುರಾಶ್ವತ್ಥದ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಸತ್ಯಾಗ್ರಹವು ಕೆಲವು ದಿನಗಳ ಮಟ್ಟಿಗೆ

*ಪ್ರಥಮ ಪ್ರಜಾ ಸರಕಾರ 1947ರಲ್ಲಿ ಆರಂಭವಾದ ನಂತರ ಗೃಹಮಂತ್ರಿ ಕೆ. ಮರಿಯಪ್ಪನವರು ಹ್ಯಾಮಿಲ್ಟನ್ ಹೆಸರು ತೆಗೆದು ಸೆಂಟ್ರಲ್ ಪೋಲೀಸ್ ಸ್ಟೇಷನ್ ಎಂದು ಕರೆದರು.

ಸಿಲ್ಲಿಸಲ್ಪಟ್ಟಿತು. ಏಪ್ರಿಲ್ ತಿಂಗಳಲ್ಲಿ ಹೆಚ್. ಸಿದ್ದಯ್ಯನವರು ಮತ್ತು ಟಿ. ಸುಬ್ರಮಣ್ಯಂರವರನ್ನು ಅಧಿಕಾರಿಗಳು "ರಾಜದ್ರೋಹದ ಅಪಾದನೆಯ ಮೇಲೆ ದಸ್ತಗಿರಿ ಮಾಡಿ ಶಿಕ್ಷೆಯನ್ನು ವಿಧಿಸಿದುದು ಮಾತ್ರವಲ್ಲದೆ, ಸೆಂಟ್ರಲ್ ಜೈಲಿನಲ್ಲಿ ಅವರಿಬ್ಬರ ಕೈಯ್ಯಲ್ಲಿ ರಾಗಿ ಬೀಸಿಸಿದರು."

ಸತ್ಯಾಗ್ರಹ ಚಳುವಳಿ

ಕಾಂಗ್ರೆಸ್ಸಿನ ಎರಡನೇ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಎರಡನೇ ಅಧಿವೇಶನವು 1939ರ ಏಪ್ರಿಲ್ 15 ರಂದು ವಿಧುರಾಶ್ವತ್ಥದಲ್ಲಿ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಸ್ವಾಗತ ಸಮಿತಿ ಅಧ್ಯಕ್ಷ ಎನ್. ಸಿ. ತಿಮ್ಮಾರೆಡ್ಡಿಯವರು ತಮ್ಮ ಭಾಷಣದಲ್ಲಿ ಸರಕಾರವು ಗ್ರಾಮಾಂತರ ಜನರ ಪರಿಸ್ಥಿಯು ಶೋಚನೀಯ ವಾಗಿದ್ದರೂ ರಾಜರ ಅರಮನೆ ಶೃಂಗರಿಸಲು ಸಾವಿರಾರು ರೂಪಾಯಿ ವೆಚ್ಚ ಮಾಡುತ್ತಿದೆಯೆಂದು ಆಪಾದಿಸಿದರು. ಹೆಚ್. ಸಿ. ದಾಸಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿದರು. ಸಂಸ್ಥಾನದ ಜನತೆಯು ಜವಾಬ್ದಾರೀ ಸರಕಾರಕ್ಕೆ ಅರ್ಹರಾಗಿದ್ದಾರೆಂದು ತಿಳಿಸಿ, ಅದರ ವಿರುದ್ಧ ಎಷ್ಟೇ ಅಪಪ್ರಚಾರ ಮಾಡಿದರೂ ಅದನ್ನು ಸುಳ್ಳಾಗಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಮೈಸೂರು ಕಾಂಗ್ರೆಸ್ ಚಳುವಳಿಯು ಅಖಿಲಭಾರತ ಸ್ವಾತಂತ್ರ್ಯ ಸಂಗ್ರಾಮದ ಭಾಗವೆಂದೂ, ಮುಂದೆ ಎರಡೂ ಒಟ್ಟಾಗಿ ಮಿಳಿತಗೊಳ್ಳುತ್ತವೆಯೆಂದೂ ಆಶಾಭಾವನೆ ವ್ಯಕ್ತಪಡಿಸಿದರು. ಜವಾಬ್ದಾರೀ ಸರಕಾರ ಸ್ಥಾಪನೆಯ ಕೋರಿಕೆಯು ಜನತೆಯ ಹಕ್ಕೆಂದೂ ತಿಳಿಸಿದರು.

ಮೈಸೂರು ಕಾಂಗ್ರೆಸ್ಸಿನ ಎರಡನೇ ಅಧಿವೇಶನದ ಹೊತ್ತಿಗೆ, ಸಂಸ್ಥಾನದ "ರಾಜಕೀಯ ದಿಗಂತವು ಮುಂದೆ ಬರಲಿದ್ದ ಕಾರ್ಮುಗಿಲುಗಳಿಂದ ಅಂಧಕಾರ ಮಯವಾಗಿತ್ತು." ರಮೇಶಂ ಸಮಿತಿಯ ಮುಂದೆ ಕಾಂಗ್ರೆಸ್ಸಿನ ಅವಹೇಳನ ಮಾಡುವ ಪ್ರಯತ್ನಗಳು ನಡೆದಿದ್ದವು. ಅಸಂಬದ್ಧ ಪ್ರಲಾಪಗಳನ್ನೊಳಗೊಂಡ ವರದಿಯನ್ನು ಸಮಿತಿ ಪ್ರಕಟಿಸಿ ಕಾಂಗ್ರೆಸ್ಸನ್ನು

ಸ್ವೇಚ್ಛೆಯಾಗಿ ನಿಂದಿಸಿತು. ಸರಕಾರವು ಕಾಂಗ್ರೆಸ್ ಕೆಲಸಗಾರರನ್ನು ದಸ್ತಗಿರಿ ಮಾಡಿ ನಿಷೇದಾಜ್ಞೆಗಳನ್ನು ಜಾರಿಗೆ ತಂದಿರುವುದರಿಂದ, ಹೋರಾಟಕ್ಕೆ ಸಿದ್ಧವಾಗಿರಬೇಕೆಂದು ಕಾಂಗ್ರೆಸ್ ಒಂದು ನಿರ್ಣಯ ಮಾಡಿತು. ಜವಾಬ್ದಾರೀ ಸರಕಾರ ಸ್ಥಾಪನೆಯಲ್ಲಿ ಕಾಂಗ್ರೆಸ್ ತನ್ನ ನಂಬಿಕೆಯನ್ನು ವ್ಯಕ್ತಪಡಿಸಿ, ಅದನ್ನು ಸಾಧಿಸಲು ರಚನಾತ್ಮಕ ಕಾರ್ಯಕ್ರಮವೊಂದನ್ನು ರೂಪಿಸಿತು.

ಮೈಸೂರು ಸರಕಾರವು 1938 ರ ಮಿರ್ಜಾ–ಪಟೇಲ್ ಒಪ್ಪಂದದಂತೆ ನಡೆಯದೆ, ಕಾಂಗ್ರೆಸ್ ವಿರುದ್ಧ ದಬ್ಬಾಳಿಕೆ ಆರಂಭಿಸಿದೆಯೆಂದು 1939ರ ಜೂನ್ ಆರಂಭದಲ್ಲಿ ನಡೆದ ಕಾರ್ಯಕಾರೀ ಸಮಿತಿ ನಿರ್ಣಯಿಸಿತು. ಸುಧಾರಣಾ ಸಮಿತಿಯ ಸಲಹೆಗಳು ತೃಪ್ತಿಕರವಾಗಿಲ್ಲವೆಂದೂ, ಕಾಂಗ್ರೆಸ್ಸಿನ ಬೇಡಿಕೆಯನ್ನು ಈಡೇರಿಸಿ ಗೌರವಯುತ ಒಪ್ಪಂದ ಮಾಡಿಕೊಳ್ಳುವ ಉದ್ದೇಶ ಸರಕಾರಕ್ಕಿಲ್ಲವೆಂದು ತಿಳಿದು, ಸತ್ಯಾಗ್ರಹ ಚಳುವಳಿಯನ್ನಾರಂಭಿಸುವುದು ಅನಿವಾರ್ಯವೆಂದು ಕಾಂಗ್ರೆಸ್ ಕಾರ್ಯ ಸಮಿತಿ ನಿರ್ಣಯಿಸಿತು.

ಚಳುವಳಿಯನ್ನು ಆರಂಭಿಸುವ ಮೊದಲು ಗಾಂಧೀಜಿಯವರನ್ನು ಭೇಟಿ ಮಾಡಿ ಅವರ ಸಲಹೆ ಕೇಳಲು ಜೂನ್‌ನಲ್ಲಿ ಒಂದು ನಿಯೋಗ ಕಳುಹಿಸಲು ಮೈಸೂರು ಕಾಂಗ್ರೆಸ್ ತೀರ್ಮಾನಿಸಿತು. ಈ ನಿಯೋಗದಲ್ಲಿ ಹೆಚ್. ಸಿ. ದಾಸಪ್ಪ, ಟಿ. ಸಿದ್ದಲಿಂಗಯ್ಯ, ಕೆ. ಚೆಂಗಲರಾಯರೆಡ್ಡಿ, ಕೆ. ಟಿ. ಭಾಷ್ಯಂ, ಕೆ. ಟಿ. ಸತ್ಯನಾರಾಯಣ ಶೆಟ್ಟಿ ಮತ್ತು ಡಿ. ಎಸ್. ಮಲ್ಲಪ್ಪನವರು ಇದ್ದರು. ಈ ನಿಯೋಗ ಜೂನ್ 13 ರಂದು ಸೆಯಿಗಾಂನಲ್ಲಿ ಗಾಂಧೀಜಿಯವರನ್ನು, ಮುಂಬೈನಲ್ಲಿ ಜೂನ್ 17, 18, 19 ರಂದು ರಾಷ್ಟ್ರೀಯ ಕಾಂಗ್ರೆಸ್ ವರಿಷ್ಠರು ನೆಹರೂ ಮತ್ತು ವಲ್ಲಭಬಾಯಿ ಪಟೇಲರನ್ನು ಭೇಟಿಮಾಡಿತು. ಮಿರ್ಜಾ-ಪಟೇಲ್ ಒಪ್ಪಂದದ ನಂತರ ನಡೆದ ಘಟನೆಗಳೆಲ್ಲವನ್ನೂ ನಾಯಕರಿಗೆ ವಿವರಿಸಿ, ಜವಾಬ್ದಾರೀ ಸರಕಾರ ಸ್ಥಾಪನೆಗೆ ಹೋರಾಟವು ಅತ್ಯಾವಶ್ಯಕವೆಂದು ಅದಕ್ಕೆ ಸಂಸ್ಥಾನದ ಜನತೆ ಸಿದ್ಧರಾಗಿ ಆಸಕ್ತಿಯಿಂದಿದ್ದಾರೆಂದು ತಿಳಿಸಿದರು.

ತ್ಯಾಗ ಮತ್ತು ಹೋರಾಟವಿಲ್ಲದೆ ಸಂಸ್ಥಾನದ ಜನತೆಗೆ ಜವಾಬ್ದಾರೀ ಸರಕಾರದ ತಿರುಳು ಲಭಿಸುವುದಿಲ್ಲವೆಂದು ಸರದಾರ್ ಪಟೇಲರು ತಿಳಿಸಿದರು. ಸುಧಾರಣಾ ಸಮಿತಿಯ ಸಲಹೆಗಳು ಅತೃಪ್ತವಾದರೆ ಅವುಗಳನ್ನು

ತ್ಯಜಿಸಬೇಕೆಂದೂ, ಮಹಾರಾಜರು ಮತ್ತು ದಿವಾನರ ವಿಷಯದಲ್ಲಿ ವೈಯಕ್ತಿಕ ಅಪವಾದ ಮಾಡಬಾರದೆಂದು ಬುದ್ಧಿವಾದ ಹೇಳಿದರು. ತಮ್ಮ ಬೇಡಿಕೆಗಳಿಗೆ ಸರಕಾರ ಗಮನ ಕೊಡುವುದಿಲ್ಲವೆಂದು ಸ್ಪಷ್ಟವಾದರೂ ಕೂಡ ಚಳುವಳಿಯನ್ನು ಆರಂಭಿಸುವ ಮುನ್ನ ಸರಕಾರದ ಮುಂದೆ ತಮ್ಮ ಬೇಡಿಕೆಗಳನ್ನಿಟ್ಟು ಮತ್ತೊಂದು ಸಾರಿಸಂಧಾನಕ್ಕೆ ಪ್ರಯತ್ನಿಸುವಂತೆ ಸಲಹೆ ಮಾಡಿದರು.

ಕಾಂಗ್ರೆಸ್ ಪಕ್ಷದ ಅದೇಶದಂತೆ ಮೇ ತಿಂಗಳ 19ರಿಂದ 'ಮೈಸೂರು ಕಾಂಗ್ರೆಸ್ ಸಪ್ತಾಹ' ಆಚರಿಸಲ್ಪಟ್ಟಿತು. ಈ ವೇಳೆಯಲ್ಲಿ ಕಾಂಗ್ರೆಸ್ ಕೆಲಸಗಾರರು ಪೋಲೀಸ್ ಕಾಯಿದೆಗಳನ್ನು ವಿರೋಧಿಸಿದುದರಿಂದ ಅವರಲ್ಲಿ ಅನೇಕರನ್ನು ದಸ್ತಗಿರಿಮಾಡಿದರು. ಹೆಂಡದ ಅಂಗಡಿಗಳ ಮುಂದೆ ತುಮಕೂರಿನಲ್ಲಿ ಕಾಂಗ್ರೆಸ್ ಕೆಲಸಗಾರರು ಪಿಕೆಟಿಂಗ್‌ನಡೆಸಿದರು.

ಕಾಂಗ್ರೆಸ್ ಕಾರ್ಯ ಸಮಿತಿಯ ತೀರ್ಮಾನಗಳು

ಮೈಸೂರು ಸರಕಾರವು ಪಟೇಲ್–ಮಿರ್ಜಾ ಒಪ್ಪಂದಕ್ಕೆ ವಿರುದ್ಧವಾಗಿ ನಡೆದರೂ ಕೂಡ ಕಾಂಗ್ರೆಸ್ ಮಾತ್ರ ತನ್ನ ಶಾಂತಿ ಮಾರ್ಗವನ್ನು ಬಿಡಲಿಲ್ಲ. 1939 ರ ಜುಲೈ 8 ಮತ್ತು 9 ರಂದು ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ಅರಸೀಕೆರೆಯಲ್ಲಿ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಈ ಸಮಿತಿಯು ಸಭೆ ಸೇರುವುದರೊಳಗೆ "ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ'ದ ಸಂದರ್ಭದಲ್ಲಿ ಅನೇಕ ಯುವಕರನ್ನು ಜೈಲಿಗೆ ಕಳುಹಿಸಿದರು. ಹಾಗೂ ರಾಜದ್ರೋಹದ ಅಪಾದನೆಯ ಮೇಲೆ ಹೆಚ್. ಸಿದ್ದಯ್ಯ ಮತ್ತು ಟಿ. ಸುಬ್ರಮಣ್ಯಾಂ ರವರನ್ನು ದಸ್ತಗಿರಿ ಮಾಡಿದರು. ಸರಕಾರದ ವಿರೋಧ ಭಾವ ಇದರಿಂದ ವ್ಯಕ್ತಪಟ್ಟು ರಾಜಕೀಯ ವಾತಾವರಣವು ಬಿಸಿಯಾಗಿದ್ದಿತು. ಸರಕಾರದ ದಬ್ಬಾಳಿಕೆ ಮತ್ತು ಉದಾಸೀನತೆಯಿಂದ ಕಾಂಗ್ರೆಸ್ ನಾಯಕರು ಕುಪಿತರಾಗದೆ ಗೌರವ ಒಪ್ಪಂದಮಾಡಿಕೊಂಡು ಶಾಂತಿ ವಾತಾವರಣ ಕಲ್ಪಿಸಲು ಯತ್ನಿಸಿದರು. ಸರಕಾರವು ಒಪ್ಪಂದಕ್ಕೆ ವಿರುದ್ಧವಾಗಿ ನಡೆದರೂ ಕೂಡ ಮತ್ತೊಮ್ಮೆ ಸರಕಾರದೊಡನೆ ಸಂಧಾನ ನಡೆಸಿ ಶಾಂತಿಯುತ ಮಾರ್ಗ ಮುಗಿದ ನಂತರವೇ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಸಭೆ ತೀರ್ಮಾನಿಸಿತು. ಸಮಿತಿಯು ಒಂದು ನಿರ್ಣಯದಲ್ಲಿ "ಶ್ರೀ ಮನ್ಮಹಾರಾಜರವರ

ಆಶ್ರಯದಲ್ಲಿ ಸಂಪೂರ್ಣ ಜವಾಬ್ದಾರೀ ಸರಕಾರವು ಕೂಡಲೇ ಸ್ಥಾಪಿಸಲ್ಪಡಬೇಕೆಂಬ ಮೈಸೂರು ಕಾಂಗ್ರೆಸ್ಸಿನ ಬೇಡಿಕೆಯನ್ನು" ಒತ್ತಿ ಹೇಳಿ ಅದನ್ನು ಶಾಂತಿಯುತ ಮಾರ್ಗದಿಂದ ಪಡೆಯುವ ತನ್ನ ನಿಶ್ಚಯವನ್ನು ಪುನಃ ಖಚಿತಪಡಿಸಿತು. ಸರಕಾರದೊಡನೆ ಒಪ್ಪಂದಕ್ಕೆ ಬರುವ ಉದ್ದೇಶದಿಂದ ಅಧ್ಯಕ್ಷರು ದಿವಾನರನ್ನು ಭೇಟಿಮಾಡಬೇಕೆಂದೂ, ಸೆಪ್ಟಂಬರ್ 1 ರೊಳಗೆ ಯಾವುದಾದರೊಂದು ತೀರ್ಮಾನವಾಗದಿದ್ದರೆ ನಂತರ ಮುಂದಿನ ಕಾರ್ಯಕ್ರಮ ನಿರ್ಧರಿಸುವುದೆಂದೂ ನಿರ್ಣಯವಾಯಿತು.

ಸರಕಾರದ ಅಸಹಾಯಕ ನೀತಿಯನ್ನು ಕಾಂಗ್ರೆಸ್ ಸಮಿತಿ ಟೀಕಿಸಿ, ಸೂಚಿಸಲ್ಪಟ್ಟಿದ್ದ ಸುಧಾರಣೆಗಳ ಪ್ರಕಾರ "ಜವಾಬ್ದಾರೀ ಸರ್ಕಾರದ ತಿರುಳಾಗಲೀ ನೆರಳಾಗಲೀ" ದೊರೆಯುವುದಿಲ್ಲವೆಂದು ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿತು. ಒಪ್ಪಂದದಂತೆ ನಡೆಯಲು ಸರಕಾರಕ್ಕೆ ಇನ್ನೂ ಸ್ವಲ್ಪ ಸಮಯ ಕೊಟ್ಟಿದ್ದರೂ ಕೂಡ, ಜವಾಬ್ದಾರೀ ಸರಕಾರಕ್ಕಾಗಿ ಹೋರಾಡುವ ತನ್ನ ನಿರ್ಧಾರವನ್ನು ವ್ಯಕ್ತಪಡಿಸಿ, ಹೋರಾಟಕ್ಕೆ ಜನತೆ ಸಿದ್ಧವಾಗಿರಬೇಕೆಂದು ಕರೆ ನೀಡಿತು. ಕಾಂಗ್ರೆಸ್ಸಿನ ಬೇಡಿಕೆಗಳನ್ನು ಸರಕಾರವು ಪರಿಗಣಿಸದಿದ್ದರೆ, ಸೆಪ್ಟಂಬರ್ 1 ರಿಂದ ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಲು ತೀರ್ಮಾನಿಸಿ ಸಂಬಂಧಪಟ್ಟ ಕಾರ್ಯಕ್ರಮವನ್ನು ಸೂಚಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಟ್ಟಿತು.

ಸರಕಾರದೊಡನೆ ಒಪ್ಪಂದಕ್ಕೆ ಬರಲು ಕಾಂಗ್ರೆಸ್ ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದುವೆಂದೂ, ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಸಂಪೂರ್ಣ ಜವಾಬ್ದಾರೀ ಸರಕಾರದ ಸ್ಥಾಪನೆಯೇ ಕಾಂಗ್ರೆಸ್ಸಿನ ಗುರಿಯೆಂದೂ ಅಧ್ಯಕ್ಷರು ತಿಳಿಸಿದರು. ಅನ್ಯ ಮಾರ್ಗವಿಲ್ಲದಿರುವುದರಿಂದ, ಸರಕಾರದ ಪ್ರತಿಬಂಧಕಾಜ್ಞೆಗಳನ್ನು ಎದುರಿಸುವುದರ ಮೂಲಕ ಕಾಂಗ್ರೆಸ್ ತನ್ನ ಶಾಂತಿಯುತ ಹೋರಾಟದ ನೀತಿಯನ್ನು ನಿರ್ಧರಿಸುವುದಾಗಿಯೂ, ಎಲ್ಲರೂ ಒಟ್ಟಾಗಿ ನಿಲ್ಲಬೇಕೆಂದೂ ಅಧ್ಯಕ್ಷರು ಘೋಷಿಸಿದರು. ರಚನಾತ್ಮಕ ಕ್ರಮದ ಆರ್ಟಿಕಲ್ 15 ರಂತೆ ಅಧ್ಯಕ್ಷರೇ ಎಲ್ಲಾ ಅಧಿಕಾರವನ್ನು ವಹಿಸಿಕೊಂಡು ಪ್ರಥಮ ಡಿಕ್ಟೇಟರ್ ಆಗುವುದಕ್ಕೆ ಅವಕಾಶ ಮಾಡಿದರು. ಅಧ್ಯಕ್ಷರನ್ನು ಬಂಧಿಸಿದಾಗ ಹಂಗಾಮಿ ಅಧ್ಯಕ್ಷರನ್ನು ನೇಮಿಸಲು ಕ್ರಮ ಕೈಗೊಳ್ಳಲು ತೀರ್ಮಾನವಾಯಿತು.

ಸೆಪ್ಟಂಬರ್ 1 ರೊಳಗೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗದಿದ್ದರೆ, ವರ್ಕಿಂಗ್ ಕಮಿಟಿಯೇ ಕಾಂಗ್ರೆಸ್ ಧ್ಯೇಯ ಸಾಧನೆಗಾಗಿ ಕಾರ್ಯಕ್ರಮಗಳನ್ನು ನಿರ್ಧರಿಸಲು ಅದಕ್ಕೆ ಅಧಿಕಾರ ಕೊಟ್ಟರು.

ಸರಕಾರವು ಸಂಧಾನವನ್ನು ಅಪೇಕ್ಷಿಸಿದರೆ ಎಲ್ಲಾ ಸಮಯದಲ್ಲಿಯೂ ಅದಕ್ಕೆ ಅವಕಾಶವಿದೆಯೆಂದು ತಿಳಿಸಿದರು. ಆದರೆ ಮೊದಲಿನ ಕಾರ್ಯಕಾರೀ ಮಂಡಲಿಯ ಸದಸ್ಯರು ಮಾತ್ರ ಒಂದು ನಿರ್ಧಾರಕ್ಕೆ ಬರಲರ್ಹರೆಂದೂ, ಹಂಗಾಮಿ ಅಧ್ಯಕ್ಷರಾಗಲೀ, ಸರ್ವಾಧಿಕಾರಿಗಳಾಗಲೀ, ಚಳುವಳಿಯ ಮೇಲ್ವಿಚಾರಣೆಯನ್ನು ನಡೆಸುವುದಕ್ಕೆ ಅಧಿಕೃತರೇ ವಿನಃ, ಸಂಧಾನವನ್ನಾರಂಭಿಸುವುದಕ್ಕಾಗಲೀ, ಸಂಧಾನದ ಫಲವಾಗಿ ಚಳುವಳಿಯನ್ನು ನಿಲ್ಲಿಸುವುದಕ್ಕಾಗಲೀ, ಅವರು ಅಧಿಕಾರ ಹೊಂದಿರುವುದಿಲ್ಲವೆಂದು ಸಮಿತಿ ತೀರ್ಮಾನಿಸಿತು.

ಕಾಂಗ್ರೆಸ್ ಸಮಿತಿಯ ತೀರ್ಮಾನದಂತೆ ದಿವಾನರನ್ನು ಭೇಟಿಮಾಡಲು ಕಾಂಗ್ರೆಸ್ ಅಧ್ಯಕ್ಷರಾದ ದಾಸಪ್ಪನವರು ಜುಲೈ 13 ರಂದು ಪ್ರಯತ್ನಿಸಿದರು. ಆದರೆ ದಿವಾನರಿಗೆ ಒಪ್ಪಂದಕ್ಕೆ ಬರುವ ಅಭಿಲಾಷೆಯೇ ಇರಲಿಲ್ಲ. ಆದ್ದರಿಂದ ಕಾಂಗ್ರೆಸ್ ನಾಯಕರನ್ನು ಭೇಟಿಮಾಡಲು ಅವರು ನಿರಾಕರಿಸಿದರು. ಸಮಿತಿಯ ತೀರ್ಮಾನದಂತೆ ಜುಲೈ 30 ರಂದು ಇಡೀ ಸಂಸ್ಥಾನದಲ್ಲೆಲ್ಲಾ 'ಜವಾಬ್ದಾರೀ ಸರಕಾರದ ದಿನ' ಆಚರಿಸಿದರು. ಅಂದು ಕಾಂಗ್ರೆಸ್ ಧ್ಯೇಯಗಳ ಪ್ರಚಾರವಾಯಿತು.

ಜವಾಬ್ದಾರೀ ಸರಕಾರ ಸ್ಥಾಪನೆಯ ಬಗ್ಗೆ ಜನಾಭಿಪ್ರಾಯ ರೂಪಿಸುವ ಉದ್ದೇಶದಿಂದ, ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ 1939ರ ಆಗಷ್ಟ್ 1 ರಿಂದ ಸಂಸ್ಥಾನದಲ್ಲೆಲ್ಲಾ ಪ್ರವಾಸ ಮಾಡಲು ತೀರ್ಮಾನಿಸಿದರು. ಮೂರು ಗುಂಪುಗಳಾಗಿ, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅನೇಕ ಸಭೆಗಳನ್ನು ನಡೆಸಿದರು. ಅವರಲ್ಲಿ ಕೆಲವರು ಕೆ.ಜಿ.ಎಫ್. ತಲುಪಿದಾಗ, ಅವರು ಭಾಷಣಗಳನ್ನು ಮಾಡದಂತೆ ನಿರ್ಬಂಧಕಾಜ್ಞೆಗಳನ್ನು ಜಾರಿಮಾಡಿದರು. ಕೋಲಾರದ ಜಿಲ್ಲಾ ಮ್ಯಾಜಿಸ್ಟ್ರೇಟರು ಮೈಸೂರು ಪೋಲೀಸ್ ರೆಗ್ಯುಲೇಷ್ 39ನೇ ಸೆಕ್ಷನ್ ಪ್ರಕಾರ ಮುಖಂಡರ ಮೇಲೆ ಪ್ರತಿಬಂಧಕಾಜ್ಞೆಗಳನ್ನು ಹೊರಡಿಸಿ ರಾಬರ್ಟ್‌ಸನ್‌ಪೇಟೆ

ಮತ್ತು 5 ಮೈಲಿ ಫಾಸಲೆಯಲ್ಲಿ ಭಾಷಣ ಮಾಡುವುದನ್ನು ನಿರ್ಬಂಧಿಸಿದರು. ಆ ಸ್ಥಳದಲ್ಲಿಯೇ ಇದ್ದುಕೊಂಡು, ಆಜ್ಞೆಯು ಉಲ್ಲಂಘನೆಯಾಗಿದೆಯೇ ಎಂಬುದನ್ನು ನೋಡಿಕೊಳ್ಳುವ ಬದಲು, ಚಿನ್ನದ ಗಣಿ ಪೊಲೀಸಿನವರು ತಮ್ಮ ಕಾರ್ಯಾತುರದಲ್ಲಿ ಕ್ಯಾಸಂಬಳ್ಳಿಗೂ, ರಾಬರ್ಟ್‌ಸನ್‌ಪೇಟೆಗೂ ಮಧ್ಯೆ ಕಾಂಗ್ರೆಸ್ ನಾಯಕರು ಹೋಗುತ್ತಿದ್ದ ಕಾರುಗಳನ್ನು ತಡೆಗಟ್ಟಿ ಅವರನ್ನು ದಸ್ತಗಿರಿ ಮಾಡಿದರು. ಹೀಗೆ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಕಾಂಗ್ರೆಸ್ ಧ್ಯೇಯಗಳ ಪ್ರಚಾರಕ್ಕೆ ಯತ್ನಿಸಿದಾಗ, ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಗಸ್ಟ್ ತಿಂಗಳಲ್ಲಿಯೇ ದಸ್ತಗಿರಿ ಮಾಡಿದರು. ಕೋಲಾರ ಜಿಲ್ಲಾ ನ್ಯಾಯಾಧೀಶರ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ಅಧ್ಯಕ್ಷ ಹೆಚ್. ಸಿ. ದಾಸಪ್ಪ, ಎನ್. ಸಿ. ತಿಮ್ಮಾರೆಡ್ಡಿ, ಕೆ. ಟಿ. ಭಾಷ್ಯಂ ಮುಂತಾದ 13 ಜನ ನಾಯಕರನ್ನು ಬಂಧಿಸಿ ಕಠಿಣಶಿಕ್ಷೆ ವಿಧಿಸಿದರು. ಅವರಲ್ಲಿ ಹೆಚ್ಚು ಜನರಿಗೆ 3 ತಿಂಗಳ ಕಠಿಣ ಶಿಕ್ಷೆಯೂ, ಇಬ್ಬರಿಗೆ 2 ತಿಂಗಳ ಕಠಿಣ ಶಿಕ್ಷೆಯೂ ವಿಧಿಸಲ್ಪಟ್ಟಿತು. "ಒಂದು ವೇಳೆ ತಾವು ತಪ್ಪಿತಸ್ಥರಲ್ಲವೆಂಬ ಅಪರಾಧಿಗಳ ವಾದವನ್ನು ಮ್ಯಾಜಿಸ್ಟ್ರೇಟರು ತಳ್ಳಿಹಾಕಿದಂತೆ ತಳ್ಳಿಹಾಕಿದರೂ ಸಹ ಅಪರಾಧವು ಕೇವಲ ಕಾನೂನಿನ ತಪ್ಪಿತವಲ್ಲದೆ ವಾಸ್ತವವಾದ ಅಪರಾಧವಲ್ಲವೆಂದು ತೋರುವುದರಿಂದ ಶಿಕ್ಷೆಯು ಬಹಳ ಉಗ್ರವೂ, ಅಸಮಂಜಸವೂ ಆದುದೆಂದು" **ಹಿಂದೂ** ಪತ್ರಿಕೆ (14-8-1939) ಟೀಕಿಸಿತು. ಅಧಿಕಾರಿಗಳು ದಬ್ಬಾಳಿಕೆಯ ಶಸ್ತ್ರವನ್ನು ಎತ್ತಿದ್ದು "ಅತ್ಯಂತ ಅಸಮರ್ಥನೀಯವೂ ಅನ್ಯಾಯದ್ದೂ" ಆದುದೆಂದು **ಸಂಯುಕ್ತ ಕರ್ನಾಟಕ** ಪತ್ರಿಕೆ ತಿಳಿಸಿತು.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗ್ರಂಥಾಲಯ

ಕಾನೂನು ಭಂಗ ಚಳುವಳಿ

ಅರಸೀಕೆರೆಯಲ್ಲಿ ನಡೆದ ಅ. ಮೈ. ಕಾಂಗ್ರೆಸ್ ಸಮಿತಿಯು ಸೂಚಿಸಿದ್ದ ಕಾಲಾವಧಿ ಮುಗಿದರೂ, ಸರಕಾರ ಯಾವುದೇ ಕಾರ್ಯಕ್ರಮ ಕೈಗೊಳ್ಳಲಿಲ್ಲ. ಜನತೆಯ ನ್ಯಾಯಸಮ್ಮತ ಬೇಡಿಕೆಗಳಿಗೆ ಮನ್ನಣೆ ಕೊಡುವ ಮನೋಭಾವ ಸರಕಾರಕ್ಕಿರಲಿಲ್ಲ. ಕಾಂಗ್ರೆಸ್ಸಿನ ಕೆಲಸ ಕಾರ್ಯಗಳನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ, ಹೋರಾಟ ನಡೆಸುವುದು ಕಾಂಗ್ರೆಸ್ಸಿನ ನೀತಿಯಲ್ಲವೆಂದೂ,

ಆದರೆ ಹೋರಾಟವು ಅನಿವಾರ್ಯವಾದಾಗ ಅದನ್ನು ಸ್ವಾಗತಿಸಿ "ಸ್ವಾತಂತ್ರ್ಯ ದೇವಿಯ ಆರಾಧನೆಗಾಗಿ ವೀರ ಯೋಧರಂತೆ ಬಲಿದಾನ ನೀಡಲು ಸದಾಸಿದ್ಧರಾಗಿಯೇ ಇದ್ದೇವೆ" ಎಂದು ಅಧ್ಯಕ್ಷ ಟಿ. ಸಿದ್ದಲಿಂಗಯ್ಯ ನವರು ತಿಳಿಸಿದರು. 1939ರ ಸೆಪ್ಟಂಬರ್ 1 ರಂದು ಬೆಂಗಳೂರಿನ ಬಸಪ್ಪಾ ಪಾರ್ಕಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಒಂದು ಉದ್ಘೋಷಣೆ ಯೊಡನೆ ಮೈಸೂರು ಕಾಂಗ್ರೆಸ್ಸಿನ ರಚನಾಕ್ರಮವನ್ನು ರದ್ದುಗೊಳಿಸಿ ಪ್ರಪ್ರಥಮ ಡಿಕ್ಟೇಟರ್ ಆದರು. ಅವರು ತಮ್ಮ ಉದ್ಘೋಷಣೆಯಲ್ಲಿ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಸಂಪೂರ್ಣ ಜವಾಬ್ದಾರೀ ಸರಕಾರ ಸ್ಥಾಪನೆಯೇ ಕಾಂಗ್ರೆಸ್ಸಿನ ಧ್ಯೇಯವೆಂದೂ ಅದಕ್ಕೆ ಹೊರತಾದ ಯಾವ ಸುಧಾರಣೆಯಿಂದಲೇ ಆಗಲಿ ಕಾಂಗ್ರೆಸ್ಸು ತೃಪ್ತಿಹೊಂದುವುದಿಲ್ಲ ವೆಂದೂ ತಿಳಿಸಿದರು. ಶಾಸನ ರೀತ್ಯ ಸ್ಥಾಪಿತವಾಗಿರುವ ಸರಕಾರವು ತಮ್ಮ ಶಕ್ತಿಯನ್ನು ನೆಚ್ಚಿ ಜನಾಭಿಪ್ರಾಯವನ್ನು ಕಡೆಗಣಿಸಬಹುದೆಂದು ತಿಳಿದಿರು ವಂತೆ ಕಾಣುತ್ತದೆ. ಸರಕಾರದ ಈ ಸವಾಲನ್ನು ಸಂಸ್ಥಾನದ ಜನತೆಯ ಪರವಾಗಿ ಅಂಗೀಕರಿಸುತ್ತೇನೆಂದು ಅಧ್ಯಕ್ಷರು ತಿಳಿದರು. ಗೌರವಯುತ ಒಪ್ಪಂದಕ್ಕೆ ಬರಲು ಮಾಡಿದ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿ ಬೇರೆ ಮಾರ್ಗವಿಲ್ಲದಿದ್ದುದರಿಂದ ಇನ್ನು ಮುಂದೆ ಮೈಸೂರು ಕಾಂಗ್ರೆಸ್ "ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳಿಂದ ಶಾಂತರೀತಿಯಿಂದ ಸರಕಾರವು ಹಾಕಿರುವ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಎದುರಿಸುವುದರ ಮೂಲಕ ತನ್ನ ಶಾಂತಿ ಹೋರಾಟದ ನೀತಿಯನ್ನು ನಿರ್ಧರಿಸಿರುವುದಾಗಿ ಈದಿನ ಅಂದರೆ 1–9–1939ನೇ ದಿನ ಉದ್ಘೋಷಿಸುತ್ತೇನೆ. ಈ ಕಾರಣದಿಂದ ನಮ್ಮ ನಾಗರಿಕ ಹಕ್ಕುಬಾಧ್ಯತೆ ಗಳಿಗೆ ಧಕ್ಕೆ ತಂದೊಡ್ಡುವಂಥ, ಹಾಲಿ ಈಗ ಜಾರಿಯಲ್ಲಿರುವ ಮತ್ತು ಮುಂದೆ ಆಗಿಂದಾಗ್ಗೆ ಜಾರಿಗೆ ಬರುವ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಮುರಿದು, ನನ್ನಿಂದ ಅಥವಾ ಮುಂದೆ ನನ್ನ ಸ್ಥಾನಕ್ಕೆ ಬರುವವರಿಂದ ಕಾಲ ಕಾಲಕ್ಕೆ ಸೂಚಿತವಾಗುವ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂತಲೂ" ಅಧ್ಯಕ್ಷರು ಪ್ರಾರ್ಥಿಸಿದರು. ಅಹಿಂಸೆಯೇ ಹೋರಾಟ ಅಸ್ತ್ರವೆಂದು ಹೇಳಿ, ಶಾಂತಿ ಮತ್ತು ಅಹಿಂಸೆಯ ಸಂಶೋಧಕರಾದ ಮಹಾತ್ಮ ಗಾಂಧೀಯವರೇ ಈ ಹೋರಾಟದ ನೀತಿಯ ಆಚಾರ್ಯರೂ ಎಂದು ಹೇಳಿದರು.

ಸತ್ಯಾಗ್ರಹವು 1–9–1939 ರಿಂದ ಪ್ರಾರಂಭವಾಗಿ, ಕಾನೂನು ಭಂಗ ಚಳುವಳಿಯು ಸಂಸ್ಥಾನದಲೆಲ್ಲಾ ಹಬ್ಬಿಕೊಂಡಿತು. ಒಬ್ಬ ಸರ್ವಾಧಿಕಾರಿಯು ದಸ್ತಗಿರಿಯಾದ ಮೇಲೆ ಮತ್ತೊಬ್ಬರು ನೇಮಿಸಲ್ಪಟ್ಟು ಒಟ್ಟು 24 ಜನ ಸರ್ವಾಧಿಕಾರಿಗಳಾಗಿ ಚಳುವಳಿ ನಡೆಸಿಕೊಂಡು ಬಂದರು. ಅದೇ ವರ್ಷ ಅಕ್ಟೋಬರ್‌ನಲ್ಲಿ ಆಂಗ್ಲ ಭಾರತದ ಪ್ರಾಂತ್ಯಗಳಲ್ಲಿ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ನೀಡಿದವು. ಅಷ್ಟು ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿಯೂ ಮೈಸೂರು ಕಾಂಗ್ರೆಸ್ ತನ್ನ ಚಳುವಳಿಯನ್ನು ಆರಂಭಿಸಿತ್ತು. ಆಂಗ್ಲ ಭಾರತದಲ್ಲುಂಟಾದ ಬೆಳವಣಿಗೆಯ ಪರಿಣಾಮವಾಗಿ ಸಂಸ್ಥಾನದಲ್ಲಿಯೂ ವಾತಾವರಣ ಕಾವೇರತೊಡಗಿ ಸರಕಾರಕ್ಕೂ ಪ್ರಜೆಗಳಿಗೂ ಘರ್ಷಣೆಗಳುಂಟಾದವು. ಸಂಸ್ಥಾನದ ವೃತ್ತ ಪತ್ರಿಕೆಗಳೆಲ್ಲಾ ಕಾಂಗ್ರೆಸ್ಸಿನ ಚಳುವಳಿಗೆ ಪ್ರೋತ್ಸಾಹ ನೀಡಿದವು.

ಸತ್ಯಾಗ್ರಹಿಗಳ ಬಂಧನ

ಸೆಪ್ಟಂಬರ್ 1 ರಿಂದ ಕಾನೂನುಭಂಗ ಚಳುವಳಿ ಆರಂಭವಾದ ಮೇಲೆ ಮೊದಲ ವಾರದಲ್ಲಿಯೇ, ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದ ಟಿ. ಸಿದ್ದಲಿಂಗಯ್ಯನವರನ್ನೂ ಹಾಗೂ ಕೆ. ಹನುಮಂತಯ್ಯ ಮತ್ತಿತರ ನಾಯಕರನ್ನು ತುಮಕೂರಿನ ಅಧಿಕಾರಿಗಳು ಬಂಧಿಸಿದರು. ಚಳುವಳಿಯು ವಿವಿಧ ಪ್ರದೇಶಗಳಲ್ಲಿ ವಿವಿಧ ರೂಪ ಪಡೆಯಿತು. ಮುಖ್ಯವಾಗಿ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಈಚಲು ಮರಗಳನ್ನು ಕಡಿಯುವ ಕಾರ್ಯಕ್ರಮವು ನಡೆಯಿತು. ಕೆ.ಜಿ.ಎಫ್ ನಲ್ಲಿ ಚಿನ್ನದಗಣಿ ಪ್ರದೇಶಕ್ಕೆ ಪ್ರವೇಶಿಸಕೂಡದೆಂಬ ನಿಷೇಧಾಜ್ಞೆಗಳನ್ನು ಉಲ್ಲಂಘಿಸುವುದು, ಮೈಸೂರು ನಗರದ ಪುರಭವನದ ಆವರಣದಲ್ಲಿ ಭಾಷಣ ಮಾಡಕೂಡದೆಂಬ ಆಜ್ಞೋಲ್ಲಂಘನೆ ನಡೆದು ನೂರಾರು ಮಂದಿ ಸತ್ಯಾಗ್ರಹಿಗಳು ಸೆರೆಮನೆ ಸೇರಿದರು. ಕೆಲವು ಕಡೆ ಇದರ ಸಂಬಂಧವಾಗಿ ಅರಣ್ಯ ಸತ್ಯಾಗ್ರಹ ನಡೆಯಿತು. ಅದರ ವಿವರಗಳನ್ನು ಮುಂದೆ ಕೊಟ್ಟಿದೆ. ಮೈಸೂರು, ಬೆಂಗಳೂರು, ಕೆ.ಜಿ.ಎಫ್.ಗಳಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಾಜ್ಞೆಗಳನ್ನು ಅನೇಕ ಕಾಂಗ್ರೆಸ್ ಕೆಲಸಗಾರರು ಪ್ರತಿಭಟಿಸಿದರು. ಅವರೆಲ್ಲಾ ಸರಕಾರದ ಅಧಿಕಾರಿಗಳು ಬಂಧಿಸಿ ಜೈಲಿಗೆ ಕಳಿಸಿದರು. ಮೈಸೂರು

ನಗರದಲ್ಲಿ ಪ್ರತಿಬಂಧಕಾಜ್ಞೆಯನ್ನು ಪ್ರತಿಭಟಿಸಿದ ಸಾಹುಕಾರ್ ಚನ್ನಯ್ಯ ನವರನ್ನೂ ಬಂಧಿಸಿದರು.

ಇದೂವರೆಗೂ ಮೈಸೂರು ಸರಕಾರವು ಪೋಲೀಸ್ ಕಾಯದೆ, ಇಂಡಿಯನ್ ಪೀನಲ್ ಕಾಯದೆ, ಕ್ರಿಮಿನಲ್ ಪ್ರೋಸೀಸರ್ ಕಾಯದೆ ಮತ್ತು ಮೈಸೂರು ಅರಣ್ಯ ಕಾಯದೆಗಳನ್ನು ಬಳಸಿ ಸತ್ಯಾಗ್ರಹಿಗಳನ್ನು ಬಂದಿಸುತ್ತಿತ್ತು. 1939ರ ಸೆಪ್ಟಂಬರ್ 25ರಂದು ಮೈಸೂರು ಸಾರ್ವಜನಿಕ ರಕ್ಷಣಾ ಕಾನೂನು ಎಂಬ ತುರ್ತು ಶಾಸನವೊಂದನ್ನು ಜಾರಿಗೆ ತಂದಿತು. ಇಂತಹ ಶಾಸನ ಆಂಗ್ಲ ಭಾರತದಲ್ಲಿ ಅಸಹಕಾರಿ ಚಳುವಳಿ ಕಾಲದಲ್ಲಿ ಮಾತ್ರ ಜಾರಿಯಲ್ಲಿರುತ್ತಿತ್ತು. ಈ ಸಾರ್ವಜನಿಕ ರಕ್ಷಣಾ ಕಾನೂನನ್ನು ಬಳಸಿ ನೂರಾರು ಜನರನ್ನು ಅಧಿಕಾರಿಗಳು ಬಂಧಿಸಿದರು. ಇಡೀ ಸಂಸ್ಥಾನದಲ್ಲೆಲ್ಲಾ ಸಾರ್ವಜನಿಕ ರಕ್ಷಣ ಕಾನೂನನ್ನು ಜನರು ಪ್ರತಿಭಟಿಸಿದರು. ವೃತ್ತಪತ್ರಿಕೆಗಳೂ ಕೂಡ ಈ ಕಾನೂನನ್ನು ವಿರೋಧಿಸಿದವು.

ಈ ಸತ್ಯಾಗ್ರಹ ಚಳುವಳಿಯಲ್ಲಿ ಸಾವಿರಾರು ಜನರು ಭಾಗವಹಿಸಿದರು. ಸುಮಾರು ಮೂರು ಸಾವಿರ ಮಂದಿ ಬಂಧಿಸಲ್ಪಟ್ಟು, ಎರಡು ಸಾವಿರ ಮಂದಿ ಶಿಕ್ಷಿಸಲ್ಪಟ್ಟರು. ಪತ್ರಿಕಾ ಕಾನೂನನ್ನು ಜಾರಿಮಾಡಿ ಪತ್ರಿಕೆಗಳ ಮೇಲಿನ ಹಿಡಿತವನ್ನು ಬಿಗಿ ಮಾಡಿದರು. ಅನೇಕ ಸತ್ಯಾಗ್ರಹಿಗಳನ್ನು ಕ್ರೂರ ರೀತಿಯಲ್ಲಿ ಹಿಂಸಿಸಿ, ಕ್ಷಮಾಪಣೆ ಪತ್ರಗಳನ್ನು ಬರೆಸಿಕೊಳ್ಳಲು ಯತ್ನಿಸಿದರು.

ಸತ್ಯಾಗ್ರಹ ಚಳುವಳಿ ಪ್ರಬಲವಾಗಿದ್ದುದರಿಂದ, ದಸರಾ ವೇಳೆಯಲ್ಲಿ ಹೊರಗಿನವರು ಭೇಟಿ ಕೊಡುವ ಸಮಯದಲ್ಲಿ ಅದು ಮುಂದುವರಿಯುವುದು ಸರಕಾರಕ್ಕೆ ಇಷ್ಟವಿರಲಿಲ್ಲ. ಅದರ ಫಲವಾಗಿ ದಸರಾ ಸಮಾರಂಭಕ್ಕೆ ಸ್ವಲ್ಪ ಮುಂಚೆ, ಸತ್ಯಾಗ್ರಹ ಚಳುವಳಿ ಬಹು ಭರದಿಂದ ಸಾಗುತ್ತಿದ್ದ ವೇಳೆಯಲ್ಲಿ ಸರಕಾರಕ್ಕೂ ಕಾಂಗ್ರೆಸ್ಸಿಗೂ ಒಂದು ಒಪ್ಪಂದವನ್ನು ಏರ್ಪಡಿಸುವ ಸಲುವಾಗಿ ಸಂಪಿಗೆ ವೆಂಕಟಪತಯ್ಯ ಮತ್ತು ಭೂಪಾಳಂ ಚಂದ್ರಶೇಖರಶೆಟ್ಟಿಯವರು ಪ್ರಯತ್ನಿಸಿದರು. ಇವರ ಪ್ರಯತ್ನಗಳಿಗೆ ದಸರಾ ಉತ್ಸವದ ಸಮಯದಲ್ಲಿ ಸರಕಾರವು ಒಪ್ಪಂದಕ್ಕೆ ಉತ್ಸಾಹಿತವಾಗಿದ್ದು ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿತು. ದಸರಾ ಉತ್ಸವ ಕಳೆದ ನಂತರ, ಸರಕಾರ ನಿರಾಸಕ್ತಿಯಿಂದ

ಕೂಡಿ ತನ್ನ ನಿಜಬಣ್ಣ ಹೊರಗೆಡಹಿತು. ನವೆಂಬರ್ 11ರಂದು ಸರಕಾರವು ಬಂಧಿಸಿದ್ದ ಕಾಂಗ್ರೆಸ್ ನಾಯಕರನ್ನೆಲ್ಲಾ ಬಿಡುಗಡೆ ಮಾಡಿತು. ಬಿಡುಗಡೆಯ ನಂತರ ನಾಯಕರೆಲ್ಲಾ ಮುಂದಿನ ಚಳುವಳಿಯ ಮಾರ್ಗದರ್ಶನವನ್ನು ಗಾಂಧೀಜಿಯವರಿಗೆ ಒಪ್ಪಿಸಿ ಸತ್ಯಾಗ್ರಹ ನಿಲ್ಲಿಸಿದರು. 1940ರ ಜನವರಿ 26ರಂದು ಸಂಸ್ಥಾನದಾದ್ಯಂತ ಧ್ವಜಾರೋಹಣ ಮಾಡಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದರು. ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ವಿದ್ಯಾರ್ಥಿಗಳು ಸಾರ್ವಜನಿಕ ಸಭೆಗಳನ್ನು ನಡೆಸಿ ಸ್ವಾತಂತ್ರ್ಯ ಪ್ರತಿಜ್ಞೆ ಕೈಗೊಂಡರು.

ಅರಣ್ಯ ಸತ್ಯಾಗ್ರಹ

ಮೈಸೂರು ಸಂಸ್ಥಾನದ ಸರಕಾರವು ಕಾಂಗ್ರೆಸ್ಸಿನ ಕೋರಿಕೆಯಂತೆ ಪಾನನಿರೋಧವನ್ನು ಜಾರಿಗೆ ತರಲಿಲ್ಲವಾದುದರಿಂದ, ಕಾಂಗ್ರೆಸ್ ಕುಪಿತಗೊಂಡು, ಸರಕಾರಿ ಜಮೀನಿನಲ್ಲೆಲ್ಲಾ ಈಚಲು ಮರದ ವನಗಳನ್ನು ಕಡಿದು ಸಂಸ್ಥಾನದಲ್ಲೆಲ್ಲಾ ಹೆಂಡದ ಸರಬರಾಜು ಆಗದಂತೆ ಮಾಡಲು ಒಂದು ಚಳುವಳಿಯನ್ನು 1939ರ ಸೆಪ್ಟೆಂಬರ್‌ನಲ್ಲಿ ಆರಂಭಿಸಿದರು. ಈ ಚಳುವಳಿಯಲ್ಲಿ ಭಾಗವಹಿಸಿದ್ದ ಅನೇಕ ಯುವಕರನ್ನು ದಸ್ತಗಿರಿ ಮಾಡಿ ದೂರದ ಕಾಡುಗಳಲ್ಲಿ ಮಧ್ಯರಾತ್ರಿಯಲ್ಲಿ ಬಿಟ್ಟು ಚಿತ್ರಹಿಂಸೆ ಕೊಡುತ್ತಿದ್ದರು. ಇದೇ ಮೈಸೂರು ಸ್ವಾತಂತ್ರ್ಯ ಇತಿಹಾಸದಲ್ಲಿ 'ಅರಣ್ಯ ಸತ್ಯಾಗ್ರಹ'ವೆಂದು ಪ್ರಸಿದ್ಧವಾಗಿದೆ. ಸಂಸ್ಥಾನದಲ್ಲಿ ಪ್ರಥಮವಾಗಿ ಈ ಚಳುವಳಿಯು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತುರುವನೂರಿನಲ್ಲಿ ಆರಂಭವಾಯಿತು. ಕಾಂಗ್ರೆಸ್ ಸಂಸ್ಥೆಯಲ್ಲಿದ್ದರೂ, ಯಾವ ಮುಖ್ಯ ಚಳುವಳಿಯಲ್ಲಿಯೂ ಭಾಗವಹಿಸದಿದ್ದ, ಸಿದ್ದವನಹಳ್ಳಿ ನಿಜಲಿಂಗಪ್ಪನವರು ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಈಚಲುಮರ ಕಡಿಯುವ ಚಳುವಳಿಯಲ್ಲಿ ಭಾಗವಹಿಸಲು ಬಳ್ಳಾರಿ ಸಿದ್ದಮ್ಮ, ರಾಜಶೇಖರಯ್ಯ ಹಿರೇಮಠ, ಕೃಷ್ಣಾರೆಡ್ಡಿ, ವಾಸುದೇವರಾವ್ ಮುಂತಾದವರು ತುರುವನೂರಿಗೆ ಹೋದರು. ಅಲ್ಲಿ ಅವರೆಲ್ಲರನ್ನೂ ಅಧಿಕಾರಿಗಳು ದಸ್ತಗಿರಿ ಮಾಡಿದರು. ಈಚಲು ಮರವನ್ನು ಕಡಿಯಲು ಯತ್ನಿಸಿದ್ದು ನಿಜವೆಂದು ಕೋರ್ಟಿನಲ್ಲಿ ಒಪ್ಪಿಕೊಂಡಮೇಲೆ, ನಿಜಲಿಂಗಪ್ಪನವರಿಗೆ ಒಂದೂವರೆ ವರ್ಷ ಶಿಕ್ಷೆ ವಿಧಿಸಿದರು.

ಬಹಳ ಉತ್ಸಾಹದಿಂದ ಮಹಿಳೆಯರೂ ಸೇರಿದಂತೆ ತುರುವನೂರು ಜನರೆಲ್ಲಾ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಸರಕಾರ ಅಲ್ಲಿಯ ಜನರೆಲ್ಲರ, ಮುಖ್ಯವಾಗಿ ಲಿಂಗಾಯಿತ ಮತ್ತು ರೆಡ್ಡಿ ಜನರ ಮೇಲೆ ಪುಂಡುಗಂದಾಯ ವಿಧಿಸಿತು.

ಚಿತ್ರದುರ್ಗ ಜಿಲ್ಲೆಯಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹವು ತುಮಕೂರು ಜಿಲ್ಲೆಗೂ ಹರಡಿ ಅಲ್ಲಿಯೂ ಅದು ಉಗ್ರರೂಪ ತಾಳಿತು. ಶಿರ್ಾ ತಾಲ್ಲೂಕಿಗೆ ಸೇರಿದ ತಾವರೆಕೆರೆ, ವಡ್ಡನಹಳ್ಳಿ ಮತ್ತು ಯಲಿಯೂರಿನಲ್ಲಿರುವ ಸರಕಾರಿ ಈಚಲು ವನಗಳಲ್ಲಿ ಸತ್ಯಾಗ್ರವನ್ನು 1939ರ ಸಪ್ಟೆಂಬರ್ ಕೊನೆಯಲ್ಲಿ ಆರಂಭಿಸಿದರು. ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮಾಲಿಮರಿಯಪ್ಪ, ಮಠದ ಬಸವಯ್ಯ, ಬಿ. ಸಿ. ನಂಜುಂಡಯ್ಯ, ಬಿ. ಕೆಂಚಣ್ಣ ಮುಂತಾದ ಕಾಂಗ್ರೆಸ್ ನಾಯಕರನ್ನು ಸರಕಾರವು ಬಂಧಿಸಿ, ವಿಚಾರಣೆಯ ನಂತರ ಮಧುಗಿರಿ ನ್ಯಾಯಾಧೀಶರು ಆರು ತಿಂಗಳು ಸಜಾ ವಿಧಿಸಿ, 150 ರೂಪಾಯಿಗಳ ದಂಡವನ್ನು ಹೇರಿದರು. ದಂಡಕೊಡಲು ಅವರೆಲ್ಲ ಒಪ್ಪದಿದ್ದುದರಿಂದ ಇನ್ನು ಒಂದುವರೆ ತಿಂಗಳ ಶಿಕ್ಷೆ ವಿಧಿಸಿದರು. ಅರಣ್ಯ ಸತ್ಯಾಗ್ರಹವು ಸೆಪ್ಟೆಂಬರ್ ತಿಂಗಳಿಂದ ನವೆಂಬರ್‌ವರೆಗೂ ಎಲ್ಲಾ ಕಡೆಗಳಲ್ಲಿಯೂ ನಡೆಯಿತು. ಸಂಸ್ಥಾನದ ಸರಕಾರದವರು ಇಡೀ ಸಂಸ್ಥಾನದಲ್ಲಿ ಒಟ್ಟು 1238 ಜನರನ್ನು ದಸ್ತಗಿರಿ ಮಾಡಿ ಸಾವಿರಾರು ಜನರನ್ನು ನಿರ್ಜನ ಪ್ರದೇಶಗಳಲ್ಲಿ ಬಿಟ್ಟರು. ಗಾಂಧೀಜೀಯವರ ಸೂಚನೆ ಮೇರೆಗೆ ಡಿಸೆಂಬರ್‌ನಲ್ಲಿ ಅರಣ್ಯ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿತು.

ಈ ವೇಳೆಯಲ್ಲಿ ಕೆಲವರು ಕಾಂಗ್ರೆಸ್ ಮತ್ತು ಸರಕಾರದ ಮಧ್ಯೆ ಒಂದು ಒಪ್ಪಂದವನ್ನು ಏರ್ಪಡಿಸುವ ಉದ್ದೇಶದಿಂದ ಪ್ರಯತ್ನ ನಡೆಸಿದರು. ಪರಿಣಾಮವಾಗಿ ಕಾಂಗ್ರೆಸ್ ಗಾಂಧೀಜಿಯವರ ಸಲಹೆ ಮತ್ತು ಸೂಚನೆಯಂತೆ ಮೊದಲು ಅರಣ್ಯ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ರದ್ದುಪಡಿಸಿತು. ಚಳುವಳಿಯು ಅಹಿಂಸಾಮಾರ್ಗದಲ್ಲಿ ನಡೆದಿದೆಯೆಂದು ಗಾಂಧೀಜಿಯವರು ಒಪ್ಪಿದರೂ ಕೂಡ ಅದರ ಸ್ವಭಾವವನ್ನು ಇನ್ನೂ ಸ್ವಲ್ಪ ಉತ್ತಮಪಡಿಸುವ ಅವಕಾಶವಿದೆಯೆಂದು ತಿಳಿಸಿ ಮತ್ತೆ ಸ್ವಲ್ಪಕಾಲ ರಚನಾತ್ಮಕ ಕೆಲಸಗಳಲ್ಲಿ

ತೊಡಗಬೇಕೆಂದು ಸಲಹೆ ಮಾಡಿದರು. ಸ್ಥಳೀಯ ಸಂಸ್ಥೆ ಮುಂತಾದುವಕ್ಕೆ ನಡೆಯುವ ಚುನಾವಣೆಗಳಲ್ಲಿ ಸ್ಪರ್ಧಿಸಲು ಗಾಂಧೀಜಿ ಸಲಹೆ ಮಾಡಿದ್ದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ ಗ್ರಂಥಾಲಯ.

ಸತ್ಯಾಗ್ರಹಿಗಳಿಗೆ ಹಿಂಸೆ

ಚಳುವಳಿಯಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳು ಕೆಲವರನ್ನು ದಸ್ತಗಿರಿ ಮಾಡಿ ಜೈಲಿಗೆ ಕಳಿಸದೆ, ದೂರ ಪ್ರದೇಶದ ಕಾಡುಗಳಲ್ಲಿ ರಾತ್ರಿವೇಳೆ ಬಿಟ್ಟು ಬರುತ್ತಿದ್ದರು. ಪೊಲೀಸ್ ಠಾಣೆಗಳಲ್ಲಿದ್ದವರಿಗೂ ಲಾಠಿಗಳಿಂದ ಹೊಡೆಯುವುದು, ಒದೆಯುವುದು, ಅನ್ನ ನೀರು ಕೊಡದಿರುವುದು ಇತ್ಯಾದಿ ಹಿಂಸೆ ಕೊಟ್ಟರು. ಆದರೂ ಸುಮಾರು 3 ಸಾವಿರ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟು ಅವರಲ್ಲಿ 2 ಸಾವಿರ ಜನ ಜೈಲಿಗೆ ಕಳುಹಿಸಲ್ಪಟ್ಟರು. ಶಾಸನ ಭಂಗಮಾಡಿದವರೆಲ್ಲರನ್ನೂ ಜೈಲಿಗೆ ಕಳುಹಿಸಿ ಅವರಿಗೆ ಊಟ ವಸತಿ ಏರ್ಪಡಿಸುವುದು ಕಷ್ಟವಾಯಿತು.

ದೇಶಾಭಿಮಾನದಿಂದ ಕೂಡಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ ದಸ್ತಗಿರಿ ಮಾಡಲ್ಪಟ್ಟ ರಾಜಕೀಯ ಖೈದಿಗಳನ್ನು ಸರಕಾರವು ಬೈರಮಂಗಲ ಮತ್ತು ತಿಪ್ಪಗಾನಹಳ್ಳಿಗಳ ಕೆರೆ ಕಟ್ಟುವ ಕೆಲಸದಲ್ಲಿ ಭಾಗವಹಿಸುವಂತೆ ಮಾಡಿತು. ಉರಿಯುವ ಬಿಸಿಲಿನಲ್ಲಿ ಮಣ್ಣನ್ನು ಅಗೆದು ಹೊರುವ ಕೆಲಸ ವಹಿಸಿದ್ದಿತು. ನಾಗರೀಕ ಮಾನವನಿಗೆ ಯೋಗ್ಯವಲ್ಲದ ಈ ಶಿಕ್ಷೆಯನ್ನು ಸರಕಾರ ಚಳುವಳಿಗಾರರ ಮೇಲೆ ಹಾಕಿತು. ಆದರೂ ಕೂಡ ದೇಶಬಾಂಧವರು ಈ ಕಷ್ಟಗಳನ್ನೆಲ್ಲಾ ಸಹಿಸಿಕೊಂಡಿದ್ದರು. ಚಿತ್ರದುರ್ಗದ ತುರುವನೂರು ಗ್ರಾಮದ ಕೆಲವು ಕೋಮಿನವರ ಮೇಲೂ ಹಾಗೂ ಬೆಂಗಳೂರು ಜಿಲ್ಲೆಯ ಬೈರಾಪಟ್ಟಣದ ಜನರಮೇಲೂ ಪುಂಡುಗಂದಾಯವನ್ನು ಹೇರಿದರು. ಕಠಿಣ ಶಿಕ್ಷೆಯನ್ನು ಸಹಿಸಲಾರದೆ ಜೈಲಿನಲ್ಲಿದ್ದ ಶಿವಮೊಗ್ಗದ ಪ್ರಹ್ಲಾದಶೆಟ್ಟರೂ, ತುಮಕೂರು ಜಿಲ್ಲೆಯ ಉಗ್ರಪ್ಪನವರೂ, ಚಿತ್ರದುರ್ಗದ ಹನುಮಂತಪ್ಪನವರೂ ಪ್ರಾಣತ್ಯಾಗಮಾಡಿದರು.

ಸತ್ಯಾಗ್ರಹ ನಿಲ್ಲಿಸಲು ಗಾಂಧೀಜಿಯ ಸಲಹೆ

ಜವಾಬ್ದಾರೀ ಸರಕಾರ ಸ್ಥಾಪನೆಯಾಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಕಾನೂನುಭಂಗ ಚಳುವಳಿಯನ್ನು ಕಾಂಗ್ರೆಸ್ ಆರಂಭಿಸಿತು.

ಕಾಂಗ್ರೆಸ್ಸಿನ ಈ ಬೇಡಿಕೆಗೆ ಸಂಸ್ಥಾನದಾದ್ಯಂತವೂ ಬೆಂಬಲದೊರೆತು ಚಳುವಳಿ ಎಲ್ಲಾ ಕಡೆಗೂ ವ್ಯಾಪಿಸಿತು. ಕೆ. ಜಿ. ಎಫ್. ಪ್ರದೇಶದಲ್ಲಿ ದಸ್ತಗಿರಿಯಾಗಿದ್ದ ಕಾಂಗ್ರೆಸ್ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ತಮ್ಮ ಪೂರ್ಣಾವಧಿ ಸಜವನ್ನು ಅನುಭವಿಸಿ 1939 ರ ನವೆಂಬರ್‌ನಲ್ಲಿ ಹೊರ ಬಂದರು. ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಪರೀಕ್ಷಿಸಿ ಮುಂದೇನು ಮಾಡಬೇಕೆಂಬ ಬಗ್ಗೆ ಗಾಂಧೀಜಿಯವರ ಬುದ್ಧಿವಾದದಂತೆ ನಡೆದುಕೊಳ್ಳಲು ತೀರ್ಮಾನಿಸಿ, ಅವರ ಸಲಹೆ ಕೇಳಿದರು. ಮೈಸೂರು ಕಾಂಗ್ರೆಸ್ಸಿಗೆ ಜನ ಬೆಂಬಲವಿಲ್ಲವೆಂದು ಸರಕಾರದವರು ತಿಳಿದಿರುವುದರಿಂದ, ಚುನಾವಣೆಗಳಲ್ಲಿ ಭಾಗವಹಿಸಿ ಕಾಂಗ್ರೆಸ್ಸಿಗಿರುವ ಜನ ಬೆಂಬಲವನ್ನು ತೋರಿಸಬೇಕೆಂದು ಗಾಂಧೀಜಿ ಸಲಹೆ ಮಾಡಿದರು. ಸತ್ಯಾಗ್ರಹವು ಯಶಸ್ವಿಯಾಗಿ ನಡೆದಿರು ವುದರಿಂದ ಅದನ್ನು ನಿಲ್ಲಿಸಿ, ಚುನಾವಣೆಗಳಲ್ಲಿ ಭಾಗವಹಿಸುವುದು ಸೂಕ್ತ ವೆಂದು ಗಾಂಧೀಜಿ ಸಲಹೆ ಮಾಡಿದರು. ಅವರ ಸಲಹೆಯಂತೆ ಅನಿರ್ದಿಷ್ಟ ಕಾಲ ಸತ್ಯಾಗ್ರಹವನ್ನು ನಿಲ್ಲಿಸಿ ಚುನಾವಣೆಗಳಲ್ಲಿ ಭಾಗವಹಿಸಲು ಕಾಂಗ್ರೆಸ್ ತೀರ್ಮಾನಿಸಿತು.

ಜನ ಬೆಂಬಲದಿಂದ ಚಳುವಳಿ ತೀವ್ರ ರೂಪ ಪಡೆದ ಸಂದರ್ಭದಲ್ಲಿಯೇ, ಗಾಂಧೀಜಿಯವರ ಸಲಹೆಯಂತೆ ಕಾನೂನು ಭಂಗ ಚಳುವಳಿಯನ್ನು ಕಾಂಗ್ರೆಸ್ ಅನಿರ್ದಿಷ್ಟ ಕಾಲದವರೆಗೂ ನಿಲ್ಲಿಸಿತು. ಸರಕಾರ ಮತ್ತು ಕಾಂಗ್ರೆಸ್ಸಿನವರ ಮಧ್ಯೆ ಸಹಕಾರ ಭಾವನೆ ಬೆಳೆದು ಸಾರ್ವಜನಿಕ ಜೀವನದಲ್ಲಿ ಸಂತೋಷ ವುಂಟಾಗಿ ಸಂಸ್ಥಾನದಲ್ಲೆಲ್ಲಾ ಸ್ನೇಹಪೂರ್ಣ ವಾತಾವರಣ ಕಲ್ಪಿಸಲು ಕಾಂಗ್ರೆಸ್ ಚಳುವಳಿಯನ್ನು ನಿಲ್ಲಿಸಿತು. ಆದರೆ ಸರಕಾರವು ಇದನ್ನು ತಪ್ಪಾಗಿ ಭಾವಿಸಿ ಅಪಪ್ರಚಾರದ ಮೂಲಕ ಕಾಂಗ್ರೆಸ್ಸಿನವರನ್ನು ದೂಷಿಸಲು ಪ್ರಯ ತ್ನಿಸಿತು.

ಪ್ರಜಾಪ್ರತಿನಿಧಿ ಮತ್ತು ನ್ಯಾಯ ವಿಧಾಯಕ ಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಕೊಟ್ಟದ್ದು ತಪ್ಪೆಂದೂ, ಸತ್ಯಾಗ್ರಹವನ್ನು ನಿಲ್ಲಿಸಬಾರದಾಗಿತ್ತೆಂದೂ ಕೆಲವರು ಟೀಕಿಸಿದರು. ಆದರೆ ನಾಯಕರು ಆ ತೀರ್ಮಾನಗಳನ್ನು ಕೈಗೊಂಡ ಸಂದರ್ಭಗಳನ್ನು ವಿವರಿಸಿ ಅವು ಸರಿಯಾದುವೆಂದು ಸಮರ್ಥಿಸಿದರು. ಕಾಂಗ್ರೆಸ್ಸಿನ ಸಾಮಾನ್ಯ

ೇಡಿಕೆಗಳನ್ನೂ ಸರಕಾರವು ಮನ್ನಿಸದೆ ಹೋದುದರಿಂದ, ಎಲ್ಲಾ ಸಂಸ್ಥೆ ಳಿಗೂ ಕಾಂಗ್ರೆಸ್ ಸದಸ್ಯರುಗಳು ರಾಜೀನಾಮೆ ಕೊಡಬೇಕೆಂದು ತೀರ್ಮಾನ ಾಯಿತು. ಅಂತೆಯೇ ಎಲ್ಲರೂ ರಾಜೀನಾಮೆ ಸಲ್ಲಿಸಿ, ಕರ್ತವ್ಯನಿಷ್ಠೆ ಮತ್ತು ್ಯಾಗ ಮನೋಭಾವವನ್ನು ವ್ಯಕ್ತಪಡಿಸಿದರು.

ುಹದೇವ ದೇಶಾಯಿಯವರ ವರದಿ

ಮೈಸೂರು ಸಂಸ್ಥಾನದಲ್ಲಿ ನಡೆದ ಚಳುವಳಿಯ ಸಂಬಂಧದಲ್ಲಿ ಸತ್ಯಾ ್ರಹಿಗಳನ್ನು ವಿವಿಧರೀತಿಯಲ್ಲಿ ಹಿಂಸಿಸಿದ ಸರಕಾರದ ಬಗ್ಗೆ ಗಾಂಧೀಜಿಯು ಹಳ ಬೇಸರಗೊಂಡರು. ದಿವಾನ್ ಮಿರ್ಜಾರವರು ತಮ್ಮ ಅಭಿಪ್ರಾಯ ಳನ್ನು ವ್ಯಕ್ತಪಡಿಸಿ, ಗಾಂಧೀಜಿಯವರ ಬೆಂಬಲ ಪಡೆಯುವ ಪ್ರಯತ್ನ ಾಡುತ್ತಿದ್ದರು. ಇದನ್ನರಿತು ಸಂಸ್ಥಾನದ ಕಾಂಗ್ರೆಸ್ ನಾಯಕರೇ ವಾರ್ಧಾ ಲ್ಲಿ ಗಾಂಧೀಜಿಯವರನ್ನು ಭೇಟಿಮಾಡಿ ಸಂಸ್ಥಾನದ ರಾಜಕೀಯ ಬೆಳವಣಿಗೆ ಳನ್ನು ವಿವರಿಸಿದರು. ಗಾಂಧೀಜಿಯವರಿಗೆ ಮೈಸೂರು ಸಂಸ್ಥಾನದ ಬಗ್ಗೆ ಶೇಷ ಆಸಕ್ತಿಯಿತ್ತು: ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಅಭಿಮಾನವಿತ್ತು. ೊತೆಗೆ ಮೈಸೂರಿನ ಮಹಾರಾಜರು ಮತ್ತು ದಿವಾನ್ ಮಿರ್ಜಾ ರವರನ್ನು ಂಡರೆ ಗೌರವವನ್ನು ಹೊಂದಿದ್ದರು. ಆದ್ದರಿಂದ ಬೆಳವಣಿಗೆಗಳನ್ನು ಅಧ್ಯ ುನಮಾಡಿ ನಿಜಪರಿಸ್ಥಿತಿಯನ್ನು ಅರಿಯುವುದು ಅವಶ್ಯಕವೆಂದು ಗಾಂಧೀಜಿ ರಿಗಣಿಸಿದರು.

ಸಂಸ್ಥಾನದಲ್ಲಿ ಸಂಚರಿಸಿ, ಸರಕಾರ ಹಾಗೂ ಕಾಂಗ್ರೆಸ್ಸಿನ ಅಭಿಮತ ಳನ್ನು ತಿಳಿದು, ಜನತೆಯ ಅಭಿಪ್ರಾಯಗಳನ್ನು ಅರಿತು, ತಮಗೆ ಒಂದು ಷ್ಟವಾದ ವರದಿ ಒಪ್ಪಿಸಲೆಂದು, ಗಾಂಧೀಜಿಯವರು ತಮ್ಮ ಆಪ್ತ ಕಾರ್ಯ ಾರ್ಯದರ್ಶಿ ಮಹದೇವ ದೇಸಾಯಿಯವರನ್ನು ಮೈಸೂರು ಸಂಸ್ಥಾನಕ್ಕೆ ಳಿಸಿದರು. ಮಹದೇವ ದೇಸಾಯಿಯವರು, ಡಿಸೆಂಬರ್ 12ರಂದು ಸಂಸ್ಥಾ ಕ್ಕೆ ಬಂದು ಮುಖ್ಯ ಭಾಗಗಳಿಗೆ ಭೇಟಿ ನೀಡಿದರು. ಎಲ್ಲಾ ಕಡೆಗಳಲ್ಲಿಯೂ ಂಗ್ರೆಸ್ ಕೆಲಸಗಾರರನ್ನು, ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿ ್ದವರನ್ನು ಭೇಟಿಮಾಡಿ ವಿಷಯಗಳನ್ನು ಸಂಗ್ರಹಿಸಿದರು. ಜೈಲು ಹಾಗೂ ಸ್ಪತ್ರೆಗಳಿಗೂ, ಭೇಟಿ ನೀಡಿ ಪೊಲೀಸರ ದೌರ್ಜನ್ಯದಿಂದ ನರಳುತ್ತಿದ್ದವರ

ಸ್ಥಿತಿಯನ್ನು ಕಣ್ಣಾರೆ ನೋಡಿದರು. ಪೊಲೀಸರ ದೌರ್ಜನ್ಯ ಹಾಗೂ ಸರಕಾರದ ದಬ್ಬಾಳಿಕೆಯನ್ನು ಖಂಡಿಸುವ ಮನವಿಪತ್ರಗಳನ್ನು, ಹಾಸನ, ಶಿವಮೊಗ್ಗ, ಹರಿಹರ, ದಾವಣಗೆರೆ, ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿ ಕಾಂಗ್ರೆಸ್ ಕೆಲಸಗಾರರು ಮಹದೇವ ದೇಶಾಯಿಯವರಿಗೆ ಅರ್ಪಿಸಿದರು. ಬೆಂಗಳೂರು ನಗರದಲ್ಲಿ ದೇಸಾಯಿಯವರು ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜನತೆಯ ಅಶೋತ್ತರಗಳು ಸರಕಾರಕ್ಕೆ ತಿಳಿದಿರುವುದ ರಿಂದ ಸತ್ಯಾಗ್ರಹವನ್ನು ನಿಲ್ಲಿಸಲು ಕರೆಯಿತ್ತರು.

ಸಂಸ್ಥಾನದ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಮಹದೇವ ದೇಸಾಯಿ ಯವರು ವಾರ್ಧಾಕ್ಕೆ ಹಿಂದಿರುಗಿ, ಗಾಂಧೀಜಿಯವರಿಗೆ ಒಂದು ವರದಿಯನ್ನು ಸಲ್ಲಿಸಿದರು. ಪೊಲೀಸರ ದೌರ್ಜ್ಯನ್ಯದ ಬಗ್ಗೆ ಒಂದು ನಿಷ್ಪಕ್ಷಪಾತವಾದ ವಿಚಾರಣೆಯನ್ನು ಏರ್ಪಡಿಸುವ ಸಲಹೆ ಮಾಡಿದರು. ರಾಜಕೀಯ ಬಂಧಿಗಳನ್ನು ತಕ್ಷಣ ಬಿಡುಗಡೆ ಮಾಡಲು ಸಲಹೆ ನೀಡಿದರು. ಆದರೆ ಸರಕಾರ ರಾಜಕೀಯ ಬಂಧಿಗಳನ್ನು ಬಿಡುವ ಬದಲು ಅವರಿಗೆಲ್ಲಾ ಹೆಚ್ಚು ತೊಂದರೆ ಕೊಡಲು ಆರಂಭಿಸಿತು. ಕೆಲವು ಕಾಂಗ್ರೆಸ್ ಕೆಲಸಗಾರರು, ಜೈಲಿನಲ್ಲಿ ಸತ್ಯಾಗ್ರಹಿ ಗಳಿಗೆ ಕೊಡುತ್ತಿದ್ದ ಶಿಕ್ಷೆ ಮುಂತಾದ ವಿಷಯಗಳನ್ನು ಗುಪ್ತವಾಗಿ ತಿಳಿದು ಹೊರಗಡೆ ಪ್ರಚಾರ ಮಾಡುತ್ತಿದ್ದರು. ಹೀಗೆ ಬಹಳ ದಿನಗಳವರೆಗೆ ಪ್ರಚಾರ ಮಾಡುತ್ತಿದ್ದ ತುಮಕೂರಿನ ಆರ್. ಎಸ್. ಆರಾಧ್ಯರವರನ್ನು ಅಧಿಕಾರಿಗಳು ಹಿಡಿದು ಅವರಿಗೆ "ನಿಲುವು ಬೇಡಿ" ಶಿಕ್ಷೆಯನ್ನು ವಿಧಿಸಿದರು. ಸತ್ಯಾಗ್ರಹಿ ಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅನೇಕ ರೀತಿಯ ಕೆಲಸಗಳನ್ನು ಮಾಡಿಸುತ್ತಿದ್ದರು. ಬೈರಮಂಗಲದ ಪಾಳ್ಯದಲ್ಲಿ ಹೆಚ್ಚು ಜನ ಬಂಧಿತರು ಕೆಲಸಮಾಡಲಾರಂಭಿಸಿದರು.

ಈ ಸಂದರ್ಭದಲ್ಲಿಯೇ, ತಂದೆ ತಾಯಿಗಳಿಗೆ ಒಬ್ಬನೇ ಮಗನಾದ, ಶಿವ ಮೊಗ್ಗದ ಪ್ರಹ್ಲಾದಶೆಟ್ಟಿ ಯವರು ಜೈಲಿನಲ್ಲಿಯೇ ನ್ಯೂಮೋನಿಯಾ ಕಾಯಿಲೆ ಯಿಂದ ನರಳುತ್ತಿದ್ದು ನಂತರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣ ಹೊಂದಿ ದರು. ಕಾಂಗ್ರೆಸ್ ಪ್ರಮುಖರಾದ ಟಿ. ಸಿದ್ದಲಿಂಗಯ್ಯ, ಕೆ. ಹನುಮಂತಯ್ಯ ಮತ್ತು ತಿವಾರಿಯವರು ಆಸ್ಪತ್ರೆಗೆ ಭೇಟಿ ನೀಡಿ ಶ್ರದ್ಧಾಂಜಲಿ ಅರ್ಪಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಮಡಿದು ಪ್ರಹ್ಲಾದ ಶೆಟ್ಟರು ಹುತಾತ್ಮರಾದರು.

ಪೋಲೀಸರ ಅತ್ಯಾಚಾರದಿಂದ ಮರೂರು ವೀರಭದ್ರಪ್ಪನವರು ಪ್ರಾಣ ನೀಗಿದರು. ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸುತ್ತಾ, ಸರಕಾರದ ಅಧಿಕಾರಿಗಳ ಕಣ್ಣಿಗೆ ಬೀಳದಂತೆ ವೇಷಮರೆಸಿಕೊಂಡು, ಶಿವಮೊಗ್ಗ ಜಿಲ್ಲೆಯ ಮರಿಸ್ವಾಮಿ ಹಿರೇಮಠರವರು ಬಹಳ ದಿನಗಳವರೆಗಿದ್ದರು. ಅವರನ್ನು ಡಿಸೆಂಬರ್ ಕೊನೆಯಲ್ಲಿ ಬಂಧಿಸಿ ಸರಕಾರ ಅವರಿಗೆ ಕಠಿಣ ಶಿಕ್ಷೆ ವಿಧಿಸಿತು. ಹೀಗೆ ಸಂಸ್ಥಾನದಾದ್ಯಂತ ಚಳುವಳಿಯು ಉಗ್ರರೂಪ ತಾಳಿ ಎಲ್ಲಾ ವರ್ಗಗಳ ಜನತೆಯು ಭಾಗವಹಿಸಿತು. 1940 ರ ಜನವರಿ 26 ರಂದು, ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಸಾರ್ವಜನಿಕ ಸಭೆಗಳು ನಡೆದು ಧ್ವಜಾರೋಹಣವಾಯಿತು. ಅಂದು ಸ್ವಾತಂತ್ರ ಪ್ರತಿಜ್ಞೆ ಕೈಗೊಂಡರು.

ಏಕಸದಸ್ಯ ವಿಚಾರಣ ಸಮಿತಿ

ಪೋಲೀಸರ ದೌರ್ಜನ್ಯದ ಮೇಲಿನ ಆಪಾದನೆಗಳ ಸಂಬಂಧವಾಗಿ ಸ್ವತಂತ್ರವಾದ ಹಾಗೂ ನಿಷ್ಪಕ್ಷವಾದ ವಿಚಾರಣೆ ಏರ್ಪಡಿಸಬೇಕೆಂದು ಕಾಂಗ್ರೆಸ್ ಕೇಳಿತು. ಮಹದೇವ ದೇಸಾಯಿಯವರೂಕೂಡ ತಮ್ಮ ವರದಿಯಲ್ಲಿ ಇದನ್ನು ಸಮರ್ಥಿಸಿದ್ದರು. ಈ ಸಲಹೆಯನ್ನು ಒಪ್ಪಿಕೊಂಡು, ಮೈಸೂರು ಸರಕಾರವು ಆತುರಾತುರವಾಗಿ ವಿಚಾರಣೆ ಏರ್ಪಾಡು ಮಾಡಿ, ಎಲ್ಲರಿಗೂ ಆಶ್ಚರ್ಯವಾಗುವ ರೀತಿಯಲ್ಲಿ ನ್ಯಾಯಾಧೀಶರಾದ ಎ. ಆರ್. ನಾಗೇಶ್ವರಅಯ್ಯರ್ ರೊಬ್ಬರನ್ನೇ 1940 ರ ಜನವರಿಯಲ್ಲಿ ನೇಮಿಸಿತು. ಕಾಂಗ್ರೆಸ್ ಹೊರಗಿನ ನ್ಯಾಯಾಧೀಶರನ್ನೊಳಗೊಂಡ ನಿಷ್ಪಕ್ಷಪಾತವಾದ ವಿಚಾರಣೆ ಸಮಿತಿಯನ್ನು ಕೋರಿತೆ ಹೊರತು ಸರಕಾರದ ಅಧೀನದಲ್ಲಿರುವ ನ್ಯಾಯಾಧೀಶರು ಸರಕಾರದ ತಪ್ಪುಗಳನ್ನು ಒಪ್ಪಿಕೊಳ್ಳುವುದು ತೀರ ಅಸಂಭವವಾದುದರಿಂದ ಈ ಏಕ ಸದಸ್ಯ ಸಮಿತಿಯಲ್ಲಿ ಕಾಂಗ್ರೆಸ್ಸಿಗೆ ನಂಬಿಕೆ ಬರಲಿಲ್ಲ. ಆದ್ದರಿಂದ ವಿಚಾರಣೆಯಲ್ಲಿ ಸಹಕರಿಸಲು ಕಾಂಗ್ರೆಸ್ ನಿರಾಕರಿಸಿತು. ಕಾಂಗ್ರೆಸ್ಸಿನ ಈ ತೀರ್ಮಾನವನ್ನು ಮಹಾತ್ಮ ಗಾಂಧೀಜಿಯವರೂ ಕೂಡ ಅನುಮೋದಿಸಿದರು.

ಕಾಂಗ್ರೆಸ್ ಪಕ್ಷವು ತನಗಿರುವ ಜನಬೆಂಬಲವನ್ನು ಬಹಿರಂಗಪಡಿಸಲು, ಸತ್ಯಾಗ್ರಹವನ್ನು ನಿಲ್ಲಿಸಿ ಚುನಾವಣೆಗಳಲ್ಲಿ ಸ್ಪರ್ಧಿಸಬೇಕೆಂದು ಗಾಂಧೀಜಿಯವರು ಸಲಹೆ ಮಾಡಿದರು. ಈ ಸಲಹೆಯನ್ನು 1940ರ ಫೆಬ್ರವರಿಯಲ್ಲಿ

ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಪ್ಪಿಕೊಂಡು, ಸತ್ಯಾಗ್ರಹ ವನ್ನು ಮುಂದೂಡಿತು. ಹಾಗೂ ಸರಕಾರವು ನಡೆಸಲು ಏರ್ಪಡಿಸಿದ್ದ ಚುನಾವಣೆಗಳಲ್ಲಿ ಭಾಗವಹಿಸಲು ತೀರ್ಮಾನಿಸಿತು. ಕಾಂಗ್ರೆಸ್ಸಿನ ಪ್ರಭಾವ ವನ್ನು ನಾಶಮಾಡುವ ಉದ್ದೇಶದಿಂದ ಸರಕಾರವೂ ಕೂಡ ಅನೇಕ ದಬ್ಬಾಳಿಕೆ ಕ್ರಮಗಳನ್ನು ಕೈಗೊಂಡಿತು. ಆದರೆ ಸರಕಾರದ ಈ ಕ್ರಮಗಳಿಂದ ಕಾಂಗ್ರೆಸ್ ಸಂಸ್ಥೆ ಇನ್ನೂ ಹೆಚ್ಚು ಪ್ರಭಾವಿತವಾಗಿ ಜನ ಬೆಂಬಲ ಗಳಿಸಿತೇ ಹೊರತು ದುರ್ಬಲಗೊಳ್ಳಲಿಲ್ಲ.

ಜೈಲಿನಲ್ಲಿ ರಾಜಕೀಯ ಬಂಧಿಗಳು ಅನುಭವಿಸುತ್ತಿದ್ದ ಕಷ್ಟಗಳ ಬಗ್ಗೆ, ಜನತೆಯ ಗಮನ ಸೆಳೆಯುವ ಉದ್ದೇಶದಿಂದ, ಸಂಸ್ಥಾನದಾದ್ಯಂತ, 1940ರ ಮೇ 19ರಂದು ರಾಜಕೀಯ ಖೈದಿಗಳ ದಿನವನ್ನಾಗಿ ಆಚರಿಸಿ ಸಾರ್ವಜನಿಕ ಸಭೆಗಳನ್ನು ನಡೆಸಿದರು. ಹೀಗೆ ನಡೆದ ಎಲ್ಲಾ ಸಭೆಗಳಲ್ಲಿಯೂ ಪೋಲೀಸರ ವರ್ತನೆಯನ್ನು ಟೀಕಿಸಲಾಯಿತು. ಜೈಲಿನಲ್ಲಿದ್ದ ಸ್ವಾತಂತ್ರ್ಯ ಹೋರಾಟ ಗಾರರ ಬಗ್ಗೆ ಸಹಾನುಭೂತಿ ತೋರಿಸಿ ನಿರ್ಣಯಗಳನ್ನು ಅಂಗೀಕರಿಸಿದರು.

ರಾಜ್ಯಾಂಗ ಸುಧಾರಣಾ ಸಮಿತಿ

ಜವಾಬ್ದಾರೀ ಸರಕಾರ ಬೇಕೆಂದು ರಾಜಕೀಯ ಪಕ್ಷಗಳು ಚಳುವಳಿ ನಡೆಸಿದವು. ಅಕ್ಕ ಪಕ್ಕದ ಆಂಗ್ಲ ಭಾರತದಲ್ಲಿ ಪ್ರಾಂತೀಯ ಸ್ವಯಂ ಆಡಳಿತವು ಆರಂಭವಾದ ಮೇಲೆ, ಸಂಸ್ಥಾನದಲ್ಲಿಯೂ ಮತ್ತೆ ಕೆಲವು ಸುಧಾರಣೆಗಳನ್ನು ಜಾರಿಗೆ ತರುವುದು ಅನಿವಾರ್ಯವಾಯಿತು. ಸುಧಾರಣೆ ಗಳನ್ನು ಜಾರಿಗೆ ತರುವ ವಿಷಯವನ್ನು ಪರಿಶೀಲಿಸಿ ತಕ್ಕ ಶಿಫಾರಸು ಗಳನ್ನು ಮಾಡಲು ಸರಕಾರವು ರಾಜ್ಯಾಂಗ ಸುಧಾರಣೆಗಳ ಸಮಿತಿಯೊಂದನ್ನು 1938ರ ಏಪ್ರಿಲ್‌ನಲ್ಲಿ ನೇಮಿಸಿತು. ಕೆ. ಆರ್. ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷರಾಗಿದ್ದ ಈ ಸಮಿತಿಯಲ್ಲಿ 19 ಜನ ಸದಸ್ಯರಿದ್ದರು. ಪಟೇಲ್–ಮಿರ್ಜಾ ಒಪ್ಪಂದದ ನಂತರ ಮತ್ತೆ ಕೆಲವು ಕಾಂಗ್ರೆಸ್ ಸದಸ್ಯರನ್ನು ಸೇರಿಸಿಕೊಂಡಾಗ ಸದಸ್ಯರ ಸಂಖ್ಯೆಯು 25ಕ್ಕೆ ಏರಿತು. ಈ ಸಮಿತಿಯ ಮುಂದೆ ಎಲ್ಲಾ ರಾಜಕೀಯ ಪಕ್ಷಗಳೂ, ಸಂಘಗಳೂ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದವು.

ಕಾಂಗ್ರೆಸ್ ಪಕ್ಷವು ತನ್ನದೇ ಯೋಜನೆಯೊಂದನ್ನು ತಯಾರಿಸಿ ುಧಾರಣಾ ಸಮಿತಿಯ ಮುಂದಿಟ್ಟಿತು. ಮಹಾರಾಜರ ಆಶ್ರಯದಲ್ಲಿ ತಕ್ಷಣ ಜವಾಬ್ದಾರೀ ಸರಕಾರದ ಸ್ಥಾಪನೆಗೆ ಆಗ್ರಹಪಡಿಸಿತು. ಕಾಂಗ್ರೆಸ್ಸಿನ ಈ ೇಡಿಕೆಗಳು ತೀವ್ರತರವಾದುವು ಎಂದು ಕೆಲವು ಮಂದಗಾಮಿಗಳು ಟೀಕಿ ವರು. ಕೇಂದ್ರ ಮಹಮ್ಮದೀಯ ಸಂಘ, ಮುಸ್ಲಿಂಲೀಗ್, ಕ್ಯಾಥಲಿಕ್ ುತ್ತು ಐರೋಪ್ಯರ ಸಂಘಗಳು ಮತ್ತು ಮೈಸೂರು ಪ್ಲಾಂಟರುಗಳ ಸಂಘ, ವೆಲ್ಲಾ ಯಾವ ಬದಲಾವಣೆಗಳನ್ನೂ ಬಯಸದೆ, ಅಂದಿನ ಆಡಳಿತ ್ಯವಸ್ಥೆಯೇ ಸರಿಯಾಗಿದೆಯೆಂದವು. ಸಾರಿಗೆ ಸಂಪರ್ಕಗಳ ಬೆಳವಣಿಗೆ ಯಿಂದ ಒಂದು ರಾಷ್ಟ್ರವು ಇತರ ಭಾಗಗಳಿಂದ ವಿಚಾರ ಮತ್ತು ಅಭಿಪ್ರಾಯ ಳ ಲಾಭವನ್ನು ಪಡೆಯುವುದೆಂದೂ, ಅಕ್ಕ ಪಕ್ಕದ ಆಂಗ್ಲ ಭಾರತ ಲ್ಲುಂಟಾದ ರಾಜಕೀಯ ಬೆಳವಣಿಗೆಗಳ ಪ್ರಭಾವದಿಂದಲೂ ಹಾಗೂ ಜನ ಾಮಾನ್ಯರಲ್ಲುಂಟಾಗಿರುವ ರಾಜಕೀಯ ಪ್ರಜ್ಞೆಯ ಬೆಳವಣಿಗೆಯಿಂದಲೂ, ಂಸ್ಥಾನದ ಜನತೆಯ ಕೋರಿಕೆಯನ್ನು ನಿರಾಕರಿಸುವುದು ಅಸಾಧ್ಯವೆಂದೂ, ್ರತಿಗಾಮಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಜವಾಬ್ದಾರೀ ರಕಾರ ಸ್ಥಾಪನೆಯ ಮೊದಲ ಹಂತವಾಗಿ, ಜನರು ಆಡಳಿತದೊಡನೆ ಸಂಪರ್ಕ ೆಳಸಿಕೊಳ್ಳಲು ಅನುಕೂಲವಾಗುವಂತೆ ಕೆಲವು ಸುಧಾರಣೆಗಳನ್ನು ಜಾರಿಗೆ ಂದು, ಅವು ಸಮರ್ಪಕವಾಗಿ ಕೆಲಸ ಮಾಡಿದರೆ ಮಾತ್ರ ಪೂರ್ಣಜವಾಬ್ದಾರೀ ರಕಾರ ಸ್ಥಾಪನೆಯ ಪ್ರಶ್ನೆಯನ್ನು ಪರಿಗಣಿಸಬೇಕೆಂದು ಅವರು ಅಭಿಪ್ರಾಯ ಟ್ಟರು.

ುಧಾರಣಾ ಸಮಿತಿಯ ವರದಿ

ಈ ಸಮಿತಿಯು ಸುಮಾರು 64 ದಿನಗಳ ಕಾಲದಲ್ಲಿ 20 ಸಾರಿ ಭೆ ಸೇರಿ, ಎಲ್ಲಾ ಸಂಘ ಸಂಸ್ಥೆಗಳ ಅಭಿಪ್ರಾಯಗಳನ್ನು ಹಾಗೂ ಜನತೆಯ ೋರಿಕೆಗಳನ್ನು ಪರಿಶೀಲಿಸಿ ಸರಕಾರಕ್ಕೆ ಒಂದು ವರದಿ ಒಪ್ಪಿಸಿತು. ವರದಿ ಯನ್ನು ಪರಿಶೀಲಿಸಿ, ಮುಖ್ಯ ಸಲಹೆಗಳನ್ನು ಒಪ್ಪಿಕೊಂಡು ಸರಕಾರವು 939ರ ಮೇ ತಿಂಗಳಲ್ಲಿ ಒಂದು ಆಜ್ಞೆ ಹೊರಡಿಸಿತು.

ಮಹಾರಾಜರಿಂದ ನೇಮಿಸಲ್ಪಟ್ಟ ಕಾರ್ಯಾಂಗ ಸಮಿತಿಯು ರಾಜರ ಂಬಿಕೆ ಹಾಗೂ ಶಾಸಕಾಂಗದ ಸಹಾಯದಿಂದ ಆಡಳಿತ ನಡೆಸಲು ಸಮಿತಿ

ಸೂಚಿಸಿತು. ಕಾರ್ಯಾಂಗ ಸಮಿತಿಯಲ್ಲಿ ದಿವಾನರಲ್ಲದೆ ನಾಲ್ಕು ಜನ ಸದಸ್ಯರಿರಬೇಕೆಂದೂ, ಅವರಲ್ಲಿ ಇಬ್ಬರು ಚುನಾಯಿತ ಖಾಸಗೀ ಸದಸ್ಯರಾಗಿರಬೇಕೆಂದೂ ಸಮಿತಿ ಸಲಹೆ ನೀಡಿತು. ಕಾರ್ಯಾಂಗವು ಶಾಸಕಾಂಗದ ಪ್ರಭಾವಕ್ಕೊಳಗಾಗಿರುವಂತಿರಬೇಕೆಂದೂ ಸೂಚಿಸಿತು. ನ್ಯಾಯವಿಧಾಯಕ ಸಭೆಯು ಸದಸ್ಯರು ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಲು ಸೂಚಿಸಿ, ಪ್ರಥಮವಾಗಿ, ಚುನಾಯಿತ ಸದಸ್ಯರೊಬ್ಬರನ್ನು ಮಹಾರಾಜರು ನೇಮಿಸಲು ಅವಕಾಶ ಮಾಡಿಕೊಟ್ಟಿತು. ಆದರೆ ಕಾರ್ಯಾಂಗ ಸಮಿತಿಯು ಶಾಸಕಾಂಗಕ್ಕೆ ಜವಾಬ್ದಾರಿಯಿಂದಿರಲಿಲ್ಲ. ಹಾಗೂ ದಿವಾನರು ಸಮಿತಿಯ ಸಲಹೆಗಳನ್ನು ತಿರಸ್ಕರಿಸುವ ಪರಮಾಧಿಕಾರ ಪಡೆದಿದ್ದರು. ಹೀಗಾಗಿ ಈ ಸುಧಾರಣೆಗಳು ದಿವಾನರ ಅಧಿಕಾರವನ್ನು ಮೊಟಕುಗೊಳಿಸಲಿಲ್ಲ.

ರಾಜಕೀಯ ಪಕ್ಷಗಳು ಚಳುವಳಿಯ ಮೂಲಕ ಕೇಳುತ್ತಿದ್ದ, ಜವಾಬ್ದಾರೀ ಸರಕಾರ, ಮೂಲಭೂತ ಹಕ್ಕುಗಳು ಮತ್ತು ನ್ಯಾಯಾಂಗ ಸ್ವಾತಂತ್ರ್ಯ ಮುಂತಾದ ಮುಖ್ಯ ಪ್ರಶ್ನೆಗಳನ್ನು ಸುಧಾರಣಾ ಸಮಿತಿಯು ಪರಿಶೀಲಿಸಲೇ ಇಲ್ಲ. ಸಮಿತಿಯ ಸಲಹೆಗಳು ಅಂದಿನ ಆಡಳಿತ ವ್ಯವಸ್ಥೆಯ ಸಾಮಾನ್ಯ ಪ್ರವೃತ್ತಿಯನ್ನು ಬಲಪಡಿಸಿದವೇ ಹೊರತು ಜವಾಬ್ದಾರೀ ಸರಕಾರ ಸ್ಥಾಪನೆಗೆ ನಾಂದಿಯಾಗಲಿಲ್ಲ. ಜವಾಬ್ದಾರೀ ಸರಕಾರ ಕೊಡದಿರುವುದೇ ಅಲ್ಲ, ಅದೇ ಅಂತ್ಯ ಗುರಿ ಎಂದು ಹೇಳಲೂ ನಿರಾಕರಿಸಿದರು. ಸುಧಾರಣೆಗಳು ತೃಪ್ತಿಕರವಾಗಿಲ್ಲವೆಂದು ತೀರ್ಮಾನಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರು ಅವುಗಳನ್ನು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ವಿರೋಧಿಸಿದರು.

ಮೂರನೇ ಕಾಂಗ್ರೆಸ್ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಮೂರನೆಯ ಅಧಿವೇಶನವು ಶಿವಮೊಗ್ಗದ ಹತ್ತಿರ ಅಜಾದ್ ನಗರದಲ್ಲಿ 1940 ರ ಮೇ ತಿಂಗಳಲ್ಲಿ ನಡೆಯಿತು. ಆಂಗ್ಲ ಭಾರತ ಪ್ರದೇಶಗಳಲ್ಲಿ ಸ್ವಯಂ ಆಡಳಿತವಿರುವುದರ ಪ್ರಭಾವದಿಂದ ಸಂಸ್ಥಾನದಲ್ಲಿಯೂ ಜವಾಬ್ದಾರೀ ಸರಕಾರದ ಬೇಡಿಕೆಯು ಹೆಚ್ಚಿದೆಯೆಂದು ಅಧ್ಯಕ್ಷತೆ ವಹಿಸಿದ್ದ ಕೆ. ಟಿ. ಭಾಷ್ಯಂರವರು ತಿಳಿಸಿದರು. ರಾಜಕೀಯ ಸುಧಾರಣೆಗಳು ಅಸಮಧಾನಕರವಾದುವೆಂದೂ, ಅಂಗೀಕಾರಕ್ಕೆ ಯೋಗ್ಯವಾದುವುಗಳಲ್ಲವೆಂದೂ, ಜನರ ನಿರೀಕ್ಷೆ ಮತ್ತು ಕಾಂಗ್ರೆಸ್ಸಿನ ಬೇಡಿಕೆಗಿಂತ ಕಡಿಮೆಯೆಂದೂ

ಕಾಂಗ್ರೆಸ್ ನಿರ್ಣಯಿಸಿತು. ಸರ್ಕಾರದ ಕಾರ್ಯಾಂಗ ಸಮಿತಿಗೆ ಸರಕಾರದ ಅಧಿಕಾರಿಗಳು ಮತ್ತು ಖಾಸಗಿ ಸದಸ್ಯರಿಬ್ಬರನ್ನು ನೇಮಿಸಿಕೊಂಡರೂ, "ಮಂತ್ರಿಮಂಡಲವು ಶಾಸನ ಸಭೆಗೆ ಜವಾಬ್ದಾರಿಯಾಗಿಲ್ಲವಾದುದರಿಂದ" ಸುಧಾರಣೆಗಳು ಅತೃಪ್ತಿಯುತವೂ, ಆಶಾಭಂಗದಿಂದ ಕೂಡಿದುವೂ ಆಗಿದ್ದು ಒಪ್ಪುವುದು ಅಸಾಧ್ಯವೆಂದು ಕಾಂಗ್ರೆಸ್ ಸಮಿತಿ ತೀರ್ಮಾನಿಸಿತು.

ಕಾಂಗ್ರೆಸ್ ಮತ್ತು ಚುನಾವಣೆಗಳು

ಸುಧಾರಣಾ ಸಮಿತಿಯ ವರದಿಯನ್ನು ಕಾಂಗ್ರೆಸ್ ಪಕ್ಷವು ತಿರಸ್ಕರಿಸಿದರೂ ಕೂಡ ಚುನಾವಣೆಗಳಲ್ಲಿ ಭಾಗವಹಿಸಿ ನಿಯಮಿತ ರಾಜ್ಯಾಂಗ ವ್ಯವಸ್ಥೆಯಲ್ಲಿ ಕೆಲಸ ಮಾಡಲು ತೀರ್ಮಾನಿಸಿತು. ಜವಾಬ್ದಾರೀ ಸರಕಾರಕ್ಕಾಗಿ ನಡೆಯುತ್ತಿದ್ದ ಕಾನೂನುಭಂಗ ಚಳುವಳಿಯನ್ನು ನಿಲ್ಲಿಸಿ, ಚಳುವಳಿಯ ಮತ್ತೊಂದು ಮಾರ್ಗವಾಗಿ, ಚುನಾವಣೆಗಳಲ್ಲಿ ಭಾಗವಹಿಸಿ ಪಾರ್ಲಿಮೆಂಟರಿ ಕಾರ್ಯವನ್ನು ಅನುಸರಿಸಲು ಅಜಾದ್ ನಗರದಲ್ಲಿ ನಡೆದ ಕಾಂಗ್ರೆಸ್ಸಿನ ಮೂರನೇ ಅಧಿವೇಶನವು ನಿಶ್ಚಯಿಸಿತು. ಸಾಧ್ಯವಾದ ಕಡೆಗಳಲ್ಲೆಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಉಮೇದುವಾರರನ್ನು ನಿಲ್ಲಿಸಲು 1940 ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿತು. ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲದಂತೆ ಮಾಡಲು ಸರಕಾರವು ಅನೇಕ ಅಡಚಣೆಗಳನ್ನು ಉಂಟುಮಾಡಿತು. ಆದರೂ ಕೂಡ, ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ, ಹೆಚ್ಚು ಜನ ಕಾಂಗ್ರೆಸ್ ಸ್ಪರ್ಧಿಗಳು ಜಯಗಳಿಸಿದರು. ಜೊತೆಗೆ ಮೈಸೂರು ಮತ್ತು ಬೆಂಗಳೂರು ನಗರ ಸಭೆಗಳಲ್ಲಿ ಕಾಂಗ್ರೆಸ್ ಪಕ್ಷ ಬಹುಮತಗಳಿಸಿದುದರಿಂದ, ಕಾಂಗ್ರೆಸ್ ಸದಸ್ಯರೇ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಹೀಗೆ ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಪ್ರಭಾವಿತವಾಯಿತು.

ಸ್ವಲ್ಪ ದಿನಗಳ ನಂತರ ನಡೆದ ಜಿಲ್ಲಾಬೋರ್ಡುಗಳ ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಪಕ್ಷ ಭಾಗವಹಿಸಿತು. ಕಾಂಗ್ರೆಸ್ ಪಕ್ಷದ ಪರವಾಗಿ 133 ಅಭ್ಯರ್ಥಿಗಳು ಸ್ಪರ್ಧಿಸಿದ್ದು 119 ಉಮೇದುವಾರರು ಜಯಗಳಿಸಿದರು. 5 ಜಿಲ್ಲೆಗಳಲ್ಲಿ ನಿಶ್ಚಳಬಹುಮತವೂ, 3 ಜಿಲ್ಲೆಗಳಲ್ಲಿ ಏಕಪಕ್ಷ ಬಹುಮತವೂ

ಕಾಂಗ್ರೆಸ್ ಪಕ್ಷಕ್ಕೆ ಲಭಿಸಿತು. ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ವಿಜಯವನ್ನು ಸಹಿಸಲಾರದ ಸರಕಾರವು, ಕಾಂಗ್ರೆಸ್ ಪಕ್ಷದ ಉಮೇದುವಾರರಿಗೆ ಮತ ನೀಡಿದರೆಂಬ ಸಂಶಯದ ಮೇಲೆ, ಪಟೇಲರು, ಶ್ಯಾನುಭೋಗರು ಮುಂತಾದ ಕೆಲವು ಗ್ರಾಮಾಧಿಕಾರಿಗಳಿಗೆ ಶಿಕ್ಷೆ ವಿಧಿಸಿತು. ಮುಖ್ಯವಾಗಿ ಕೋಲಾರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಗ್ರಾಮಾಧಿಕಾರಿಗಳಿಗೆ ಬಹಳ ತೊಂದರೆ ಕೊಟ್ಟರು. ಸರಕಾರದ ಈ ನೀತಿಯನ್ನು ಕಾಂಗ್ರೆಸ್ ವಿರೋಧಿಸಿತು.

ಜಿಲ್ಲಾ ಬೋರ್ಡ್ ಕಾಂಗ್ರೆಸ್ ಸದಸ್ಯರ ಸಮ್ಮೇಳನ

ಸಂಸ್ಥಾನದ ಜಿಲ್ಲಾ ಬೋರ್ಡುಗಳ ಚುನಾವಣೆಗಳಲ್ಲಿ ವಿಜಯಗಳಿಸಿದ ಕಾಂಗ್ರೆಸ್ ಸದಸ್ಯರ ಸಮ್ಮೇಳನವು ನಂಜನಗೂಡಿನಲ್ಲಿ 1940ರ ಮೇ 26 ರಂದು ನಡೆಯಿತು. ಕಾಂಗ್ರೆಸ್ ನಾಯಕ ಕೆ. ಟಿ. ಭಾಷ್ಯಂ ರವರು ಸಮ್ಮೇಳನದ ಅಧ್ಯಕ್ಷತೆ ವಹಿಸಬೇಕಾಗಿತ್ತು. ಚುನಾವಣೆಗಳಲ್ಲಿ ಜಯಗಳಿಸಿದ ನಂತರ ಪರಸ್ಪರ ಕಲೆತು ಮುಂದಿನ ತಮ್ಮ ಕಾರ್ಯಕ್ರಮವನ್ನು ಆಲೋಚಿಸಿ ಒಮ್ಮತಾಭಿಪ್ರಾಯಕ್ಕೆ ಬರುವುದೇ ಸಮ್ಮೇಳನದ ಮುಖ್ಯ ಉದ್ದೇಶ ಆಗಿತ್ತು.

ಸಮ್ಮೇಳನದ ಸ್ವಾಗತ ಸಮಿತಿಯವರು ಅಧ್ಯಕ್ಷರ ಮೆರವಣಿಗೆಗೆ ಏರ್ಪಾಡು ಮಾಡಿಕೊಂಡಿದ್ದು ಚಪ್ಪರಗಳನ್ನು ಹಾಕಲು ಅಪ್ಪಣೆ ಕೇಳಿದಾಗ ಸರಕಾರ ಅಪ್ಪಣೆ ಕೊಡಲಿಲ್ಲ. ಜೊತೆಗೆ ನಂಜನಗೂಡಿನಲ್ಲಿ ಒಂದು ವಾರ ಮೆರವಣಿಗೆಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿತು. ಕಾಂಗ್ರೆಸ್ ನಾಯಕ ಭಾಷ್ಯಂರವರು ನಂಜನಗೂಡಿಗೆ ಹೋಗಲು ಮೈಸೂರು ನಗರದ ರೈಲ್ವೆ ನಿಲ್ದಾಣ ತಲಪಿದ ತಕ್ಷಣವೇ ಆ ನಿಷೇಧಾಜ್ಞೆಯನ್ನು ಅವರಿಗೆ ಜಾರಿ ಮಾಡಿದರು. ತಕ್ಷಣವೇ ಭಾಷ್ಯಂರವರು ಟೆಲಿಫೋನಿನ ಮೂಲಕ ಗಾಂಧೀಜಿಯವರ ಸಲಹೆ ಕೇಳಿದರು. ಗಾಂಧೀಜಿಯವರು ಸರಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸದಿರಲು ಭಾಷ್ಯಂರವರಿಗೆ ಸೂಚಿಸಿ, ಸಮ್ಮೇಳನದಲ್ಲಿ ಶಾಸನ ಸಭೆಗಳ ಚುನಾವಣೆಗಳಲ್ಲಿ ಭಾಗವಹಿಸುವ ಬಗ್ಗೆ ನಿರ್ಣಯ ಮಾಡುವಂತೆ ತಿಳಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷ ಮಹೇಶ ಚಂದ್ರಗುರು ರವರು, ಸಮ್ಮೇಳನಕ್ಕೆ ಬಂದಿದ್ದ ಕಾಂಗ್ರೆಸ್ ಕೆಲಸಗಾರರನ್ನು ಸ್ವಾಗತಿಸುತ್ತಾ, ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಜಯದಿಂದ, ಪಕ್ಷದ ಧ್ಯೇಯವು ಜನಪ್ರಿಯ ವಾಗಿದೆಯೆಂಬುದಕ್ಕೆ ನಿದರ್ಶನವಾಗಿದೆಯೆಂದೂ, ಕಾಂಗ್ರೆಸ್ ಸಂಸ್ಥೆಯಲ್ಲಿ ಜನತೆಗಿರುವ ವಿಶ್ವಾಸ ಭರವಸೆಯನ್ನು ಪ್ರತಿಬಿಂಬಿಸುವ ಶುಭ ಸೂಚನೆಯಾಗಿದೆ ಯೆಂದೂ ತಿಳಿಸಿದರು. ಇದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಅವಕಾಶವಾಗಿದೆಯೆಂದೂ, ಅದನ್ನು ದೇಶ ಸೇವೆಗಾಗಿ ಉಪಯೋಗಿಸಿಕೊಳ್ಳಬೇಕೆಂದೂ ತಿಳಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕೆ. ಟಿ. ಭಾಷ್ಯಂರವರು "ಈಗ ಲಭಿಸಿರುವ ಜಯವು ಕಾಂಗ್ರೆಸ್ಸಿನ ಸತ್ಯ ಮತ್ತು ಅಹಿಂಸಾ ಯುಕ್ತವಾದ ಧ್ಯೇಯಕ್ಕೆಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು. ಜನಗಳ ಬೆಂಬಲವನ್ನು ಪಡೆದಿರುವ ಕಾಂಗ್ರೆಸ್ಸನ್ನು ಸರಕಾರದವರು ತುಳಿಯಲು ಪ್ರಯತ್ನಪಟ್ಟರೆ ಆಗಲಾರದೆಂಬು ದನ್ನು ಈ ಚುನಾವಣೆ ಸ್ಪಷ್ಟ ಪಡಿಸಿರುತ್ತೆ" ಎಂದರು. ಹೀಗೆ ಸ್ವಾತಂತ್ರ್ಯ ಚಳುವಳಿಯು ಮೈಸೂರು ಸಂಸ್ಥಾನದಲ್ಲಿ ಪ್ರಬಲವಾಗುತ್ತ ಬಂದಿತು.

ಕಾಂಗ್ರೆಸ್‌ನ ಪ್ರಾಬಲ್ಯವನ್ನು ಸಹಿಸದಿದ್ದ ಸರಕಾರವು, ಕಾಂಗ್ರೆಸ್ ಸದಸ್ಯರ ಪ್ರಭಾವವನ್ನು ಕಡಿಮೆ ಮಾಡಲು ಅನೇಕ ಕ್ರಮಗಳನ್ನು ಕೈಗೊಂಡಿತು. ಸರಕಾರವು ಪ್ರತಿಯೊಂದು ಜಿಲ್ಲಾ ಬೋರ್ಡಿಗೂ ಕೆಲವು ಸದಸ್ಯರನ್ನು ನಾಮಕರಣಮಾಡುವ ಅಧಿಕಾರವನ್ನು ಹೊಂದಿತ್ತು. ಈ ಅಧಿಕಾರವನ್ನು ಉಪಯೋಗಿಸಿಕೊಂಡು, ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರ ವಿರುದ್ಧ ಸ್ಪರ್ಧಿಸಿ ಸೋತುಹೋಗಿದ್ದ ಅಭ್ಯರ್ಥಿಗಳನ್ನು ಬೇಕೆಂದೇ ನಾಮಕರಣ ಮಾಡಿತು. ತರುವಾಯ ನಡೆದ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಚುನಾವಣೆಯಲ್ಲಿಯೂ, ಕಾಂಗ್ರೆಸ್ ಪಕ್ಷದ ಸ್ಪರ್ಧಿಗಳು ಗೆಲ್ಲ ದಂತೆ ಮಾಡುವ ಉದ್ದೇಶದಿಂದ, ಕಾಂಗ್ರೆಸ್ ಪಕ್ಷದ ಸ್ಪರ್ಧಿಗಳಿಗೆ ವಿರುದ್ಧ ವಾಗಿ ಓಟು ಮಾಡುತ್ತಾರೆಂಬ ಭರವಸೆಯಿಂದ, ಸರಕಾರಿ ಸದಸ್ಯರುಗಳೂ ಕೂಡ ಮತ ನೀಡುವ ಅವಕಾಶ ಮಾಡಿಕೊಟ್ಟಿತು. ಇಷ್ಟೆಲ್ಲಾ ಅಡಚಣೆಗಳನ್ನು ಕಾಂಗ್ರೆಸ್ ಸ್ಪರ್ಧಿಗಳ ವಿರುದ್ಧ ಸರಕಾರ ಒಡ್ಡಿದರೂ ಕೂಡ, ಸಂಸ್ಥಾನದ

ಒಟ್ಟು 9 ಜಿಲ್ಲಾ ಬೋರ್ಡುಗಳ ಪೈಕಿ 3 ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಕಾಂಗ್ರೆಸ್ ಸದಸ್ಯರು ಜಯಗಳಿಸಿದರು.

ದಿವಾನರು ಹೇಳಿರುವಂತೆ ಸೂಚಿತ ಸುಧಾರಣೆಗಳನ್ನು ಜನತೆಯು ಒಪ್ಪಿಕೊಂಡಿಲ್ಲವೆಂದೂ, ಅವು ಜನತೆಯಲ್ಲಿ ಅತೃಪ್ತಿಯನ್ನುಂಟುಮಾಡಿವೆಯೆಂದೂ ಕಾಂಗ್ರೆಸ್ ಅಧ್ಯಕ್ಷರು ಹೇಳಿದರು. ಸುಧಾರಣೆಗಳು ಅತೃಪ್ತಿ ಮತ್ತು ಪ್ರಗತಿ ವಿರೋಧವಾಗಿದ್ದರೂ ಮೈಸೂರು ಕಾಂಗ್ರೆಸ್ಸಿನವರು ಶಾಸನ ಸಭಾ ಪ್ರವೇಶದ ಕಾರ್ಯಕ್ರಮವನ್ನು ನಿರ್ಧರಿಸಿ ಚುನಾವಣೆಯಲ್ಲಿ ಭಾಗವಹಿಸಲು ಕಾಂಗ್ರೆಸ್ ಕಾರ್ಯ ಸಮಿತಿ ತೀರ್ಮಾನಿಸಿತು. ಈ ತೀರ್ಮಾನವು ತಮ್ಮ ಗುರಿ ಸಾಧನೆಯಲ್ಲಿ ಮತ್ತೊಂದು ಹೆಜ್ಜೆಯೇ ಹೊರತು, ಸುಧಾರಣೆಗಳನ್ನು ಒಪ್ಪಿಕೊಂಡಂತೆ ಅಲ್ಲವೆಂದು ಸಮಿತಿಯು ತನ್ನ ನಿರ್ಣಯದಲ್ಲಿ ಸ್ಪಷ್ಟಪಡಿಸಿತು.

ಮಹಾರಾಜರ ನಿಧನ

1940ರ ಆಗಸ್ಟ್ ಮಾಹೆಯಲ್ಲಿ ಶ್ರೀಮನ್ಮಹಾರಾಜ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರವರು ನಿಧನರಾದರು. ಇದರಿಂದ ಸಂಸ್ಥಾನದ ಕಾಂಗ್ರೆಸ್ ಸೆಪ್ಟಂಬರ್ 12ನೆ ದಿನವನ್ನು ದುಃಖಾಚರಣೆಯ ದಿನವಾಗಿ ಆಚರಿಸಿತು. ಜಯಚಾಮರಾಜ ಒಡೆಯರವರು ರಾಜ ಪದವಿಯನ್ನು ಅಲಂಕರಿಸಿದರು. ಅವರು ಸಿಂಹಾಸನವನ್ನೇರಿದ ಸಂದರ್ಭದಲ್ಲಿ ರಾಜಕೀಯ ಖೈದಿಗಳನ್ನೆಲ್ಲಾ ಬಿಡುಗಡೆಮಾಡಿ, ಪಟ್ಟಾಭಿಷೇಕ ಮಹೋತ್ಸವಕ್ಕೆ ಸರಕಾರವು, ಕಾಂಗ್ರೆಸ್ಸಿನ ಕೆಲವು ನಾಯಕರನ್ನು ಆಹ್ವಾನಿಸಿತು. ಕಾಂಗ್ರೆಸ್ ನೂತನ ಮಹಾರಾಜರಿಗೆ ಒಂದು ನಿರ್ಣಯದ ಮೂಲಕ ಅಭಿನಂದನೆಗಳನ್ನು ಅರ್ಪಿಸಿ, "ಶ್ರೀಮನ್ಮಹಾರಾಜರವರು ತಮ್ಮ ಕೃಪಾಶ್ರಯದಲ್ಲಿ ಜವಾಬ್ದಾರೀ ಸರಕಾರವನ್ನು ಸ್ಥಾಪಿಸಿ ತನ್ಮೂಲಕ ದೇಶದಾದ್ಯಂತವೂ ಶುಭ ಸಂತೋಷಗಳು, ಶಾಂತಿ ಅಭ್ಯುದಯಗಳು ನೆಲೆಗೊಳ್ಳುವಂತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಪ್ರಜಾವರ್ಗದವರು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾರೆ" ಎಂದು ಒಂದು ನಿರ್ಣಯದ ಮೂಲಕ ಕೋರಿತು. ಹೀಗೆ ಕೂಡಲೇ ಜವಾಬ್ದಾರೀ ಸರಕಾರವನ್ನು ಸ್ಥಾಪಿಸಬೇಕೆಂದು ಕಾಂಗ್ರೆಸ್ ಪಕ್ಷ ಕೇಳಿತು. ರಾಜ್ಯಾಂಗ ಸುಧಾರಣಾ ಸಮಿತಿಯ

ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯು ಜಯಚಾಮರಾಜ ಒಡೆಯರು ಹಾಗೂ ನೂತನ ದಿವಾನರಾದ ನ್ಯಾಪತಿ ಮಾಧವರಾಯರ ಪಾಲಿಗೆ ಬಂದಿತು.

ಕಾಂಗ್ರೆಸ್ ಬಗ್ಗೆ ಸರಕಾರದ ಧೋರಣೆ

ಕಾಂಗ್ರೆಸ್ಸಿನ ವಿರುದ್ಧ ಸರಕಾರ ತನ್ನ ನೀತಿಯನ್ನು ಮುಂದುವರಿಸಿತು. ಬೆಂಗಳೂರು ಜಿಲ್ಲಾ ನ್ಯಾಯಾಧೀಶರು ಒಂದು ಆಜ್ಞೆಯನ್ನು ಹೊರಡಿಸಿ ಸಿ. ಬಿ. ಮೊನ್ನಯ್ಯ ಮತ್ತು ಎಂ. ಎ. ಪರುಶುರಾಮ್‌ರವರನ್ನು ಗಡೀಪಾರ್ ಮಾಡಿತು. ಕಾಂಗ್ರೆಸ್ಸನ್ನು ತುಳಿಯಲು ಪ್ರಯತ್ನಗಳು ನಡೆದವು. ಪ್ರತಿಬಂಧಕಾಜ್ಞೆ ಮತ್ತು ಗಡೀಪಾರು ಆಜ್ಞೆಗಳು ಜಾರಿಯಲ್ಲಿಯೇ ಇದ್ದು ಕಾಂಗ್ರೆಸ್‌ನ ವಿರುದ್ಧದ ಕ್ರಮಗಳನ್ನು ಬದಲಾಯಿಸಲೇ ಇಲ್ಲ. ಕೆಲವು ಕಾಂಗ್ರೆಸ್ ನಾಯಕರುಗಳಿಗೆ ಅವರ ಸ್ವಂತ ಸ್ಥಳಗಳಿಗೂ ಹೋಗಕೂಡದೆಂದು ನಿರ್ಬಂಧಕಾಜ್ಞೆಗಳನ್ನು ಹೊರಡಿಸಿದರು. 1939ರ ಕಾನೂನು ಭಂಗ ಚಳುವಳಿಯ ಸಂದರ್ಭದಲ್ಲಿ ಟಿ. ಸಿದ್ದಲಿಂಗಯ್ಯನವರಿಗೆ 200ರೂಗಳ ದಂಡ ವಿಧಿಸಿದ್ದು, ಅದನ್ನು ದೊಡ್ಡ ಬಳ್ಳಾಪುರದಲ್ಲಿ 1940ರ ಮೇ 20ರಂದು ಜಾರಿಗೆ ತಂದು ಒಂದು, ಮರದ ಬೀರುವನ್ನೂ ಮತ್ತು 69 ಲಾ ಪುಸ್ತಕಗಳನ್ನೂ ಹರಾಜು ಹಾಕಲು ನ್ಯಾಯಾಧೀಶರು ಆಜ್ಞೆ ಮಾಡಿದರು.

ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದುದರಿಂದ ವಕೀಲರನೇಕರ ಸನ್ನದುಗಳನ್ನು ಹೈಕೋರ್ಟ್ ವಜಾಮಾಡಿ, ಸಂಸ್ಥಾನದಲ್ಲಿ ವಕೀಲ ವೃತ್ತಿಯನ್ನು ನಡೆಸಲಾಗದೆಂದು ತಿಳಿಸಿದರು. ಚಿನ್ನದ ಗಣಿ ಪ್ರದೇಶದಲ್ಲಿ ದಸ್ತಗಿರಿಯಾದ ಹೆಚ್. ಸಿ ದಾಸಪ್ಪ, ಕೆ. ಟಿ. ಭಾಷ್ಯಂ, ಕೆ. ಪಟ್ಟಾಭಿರಾಮನ್, ಎಂ. ಗೋವಿಂದ ರೆಡ್ಡಿ, ಎಸ್. ರಂಗರಾಮಯ್ಯ, ಟಿ. ರಾಮಾಚಾರ್‌ರವರುಗಳೆಲ್ಲ ವಕೀಲವೃತ್ತಿಯನ್ನು ನಡೆಸಕೂಡದೆಂದು ತಿಳಿಸಿ, ಎಸ್. ನಿಜಲಿಂಗಪ್ಪನವರ ಹೆಸರನ್ನು ಹೈಕೋರ್ಟ್ ವಕೀಲರ ಪಟ್ಟಿಯಿಂದ ತೆಗೆದು ಹಾಕಿದರು. ದಾಸಪ್ಪನವರ ವಿಷಯವಾಗಿ ಮುಖ್ಯ ನ್ಯಾಯಾಧೀಶರು ಮಾಡಿದ ಟೀಕೆಯನ್ನು ಎಲ್ಲರೂ ಪ್ರತಿಭಟಿಸಿದರು. 1940ರ ಜುಲೈ 13ರ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿಯವರು ಕೂಡ ನ್ಯಾಯಾಧೀಶರ ತೀರ್ಪಿನ

ಬಗ್ಗೆ ತಮ್ಮ ಅನುತಾಪ ವ್ಯಕ್ತಪಡಿಸಿದರು. ನ್ಯಾಯಾಧೀಶರ ಅನುಚಿತ ಟೀಕೆಗಳನ್ನು ಪ್ರತಿಭಟಿಸಲು ಕಾರ್ಯಸಮಿತಿಯ ಕೋರಿಕೆಯಂತೆ ಸಂಸ್ಥಾನಾದ್ಯಂತ 1940ರ ಆಗಷ್ಟ್ ಒಂದನೇ ದಿನವನ್ನು 'ಪ್ರತಿಭಟನಾದಿನ' ವನ್ನಾಗಿ ಆಚರಿಸಿ ಸಾರ್ವಜನಿಕ ಸಭೆ ನಡೆಸಿ ಪ್ರತಿಭಟಿಸಿದರು.

ಪೌರಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಭಾಗವಹಿಸಲು ಕಾಂಗ್ರೆಸ್ ತೀರ್ಮಾನಿಸಿತು. ಚುನಾವಣಾ ಪ್ರಚಾರ ಕಾರ್ಯವನ್ನು ಸಂಸ್ಥಾನದಲ್ಲಿ ಆರಂಭಿಸಲು, ಆಂಧ್ರನಾಯಕರಾದ ಬಿ. ಗೋಪಾಲರೆಡ್ಡಿ ಮತ್ತು ಎ. ಕಾಳೇಶ್ವರರಾವ್ 1940ರ ಆಕ್ಟೋಬರ್ ಕೊನೆಯಲ್ಲಿ ಸಂಸ್ಥಾನಕ್ಕೆ ಬಂದರು. ಅವರನ್ನು ಸಂಸ್ಥಾನದ ಕಾಂಗ್ರೆಸ್ ನಾಯಕರಾದ ಟಿ. ಸಿದ್ಧಲಿಂಗಯ್ಯ, ಕೆ. ಸಿ. ರೆಡ್ಡಿ, ಕೆ. ಹನುಮಂತಯ್ಯ ಮತ್ತಿತರರು ಸ್ವಾಗತಿಸಿದರು. ಮೈಸೂರು ನಗರದ ಸುಬ್ಬರಾಯನ ಕೆರೆಯಲ್ಲಿ ಅವರು ಭಾಷಣ ಮಾಡಿ ಕಾಂಗ್ರೆಸ್ ಉಮೇದುವಾರರಿಗೆ ಮತ ನೀಡಲು ಕೋರಿದರು. ಅವರು ಬೆಂಗಳೂರು, ಕೋಲಾರಗಳಲ್ಲಿ ಭಾಷಣಮಾಡುವ ಕಾರ್ಯಕ್ರಮವಿದ್ದಿತು. ಆದರೆ ಅಲ್ಲಿಯ ಜಿಲ್ಲಾ ನ್ಯಾಯಾಧೀಶರು ನಿಷೇಧಾಜ್ಞೆಗಳನ್ನು ಜಾರಿಮಾಡಿದುದರಿಂದ ಆಂಧ್ರ ನಾಯಕರಿಬ್ಬರೂ ತಮ್ಮ ಕಾರ್ಯಕ್ರಮಗಳನ್ನು ರದ್ದು ಮಾಡಿ ಮದ್ರಾಸಿಗೆ ಹೋದರು.

1940 ರ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ವಿಶ್ವ ವಿದ್ಯಾನಿಲಯ ಸಂಘದವರು 'ಭಾರತ ಮತ್ತು ಯುದ್ಧ' ಎಂಬ ವಿಷಯದ ಮೇಲೆ ಭಾಷಣ ಮಾಡಲು, ಮದ್ರಾಸಿನ ಕಾಂಗ್ರೆಸ್ ನಾಯಕ ಎಸ್. ಸತ್ಯಮೂರ್ತಿಯವರನ್ನು ಆಹ್ವಾನಿಸಿದ್ದರು. ಇದಕ್ಕೆ ಅಧಿಕಾರಿಗಳು ಅವಕಾಶ ಕೊಡಲಿಲ್ಲ. ಅದನ್ನು ವಿರೋಧಿಸಿ ಸಂಘದ ಅಧಿಕಾರಿಗಳೆಲ್ಲ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ತಮ್ಮ ವಿರೋಧ ವ್ಯಕ್ತಪಡಿಸಿದರು. ಮೆರವಣಿಗೆಗಳನ್ನು ಮತ್ತು ಪ್ರಚಾರವನ್ನು ಬಹಿಷ್ಕರಿಸಿ ನಿಷೇಧಾಜ್ಞೆಗಳನ್ನು ಕೃಷ್ಣರಾಜನಗರ, ಅರಸೀಕೆರೆ, ಕೃಷ್ಣರಾಜಪೇಟೆ, ನೆಲಮಂಗಲ, ಯಲಹಂಕ ಮತ್ತು ಬಂಗಾರಪೇಟೆಗಳಲ್ಲಿ ಜಾರಿಮಾಡಿದರು. ಇದರಿಂದ ಕಾಂಗ್ರೆಸ್ ಪ್ರಚಾರ ಕಾರ್ಯ ಸರಿಯಾಗಿ ನಡೆಯಲು ತೊಂದರೆಯಾಯಿತು. ಆದರೂ ಪೌರಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರು ಬಹುಸಂಖ್ಯಾತರಾಗಿ

ಜಯಶೀಲರಾದರು. ಹೀಗೆ ಜಿಲ್ಲಾ ಬೋರ್ಡು ಹಾಗೂ ಪೌರಸಭೆಗಳ ಚುನಾವಣೆಗಳಿಂದ ಕಾಂಗ್ರೆಸ್ಸಿಗೆ ಜನ ಬೆಂಬಲವಿರುವುದು ವ್ಯಕ್ತವಾಯಿತು. ಅದರಲ್ಲೂ ಮೈಸೂರು ಮತ್ತು ಬೆಂಗಳೂರು ನಗರ ಸಭೆಗಳ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪ್ರತಿಯೊಂದು ಸ್ಥಾನವನ್ನು ಕಾಂಗ್ರೆಸ್ ಪಡೆಯಿತು. ಕಾಂಗ್ರೆಸ್ಸಿಗೆ ದೊರೆತ ಈ ಅದ್ಭುತ ವಿಜಯವು ಅವರಲ್ಲಿ ಜನರಿಗಿರುವ ವಿಶ್ವಾಸವನ್ನು ಪ್ರತಿಬಿಂಬಿಸಿತು. ಪರಿಣಾಮವಾಗಿ ಕಾಂಗ್ರೆಸ್ಸಿನ ವಿಚಾರದಲ್ಲಿ ಸರಕಾರದ ವಿರೋಧವೂ ಹೆಚ್ಚಾಯಿತು. ಡಿಸೆಂಬರ್ ಕೊನೆಯಲ್ಲಿ ರಾಜಕುಮಾರಿ ಅಮೃತ್‌ಕೌರ್ ರವರು ಮೈಸೂರಿನಲ್ಲಿ ಕಾಂಗ್ರೆಸ್ ಕೆಲಸಗಾರರನ್ನು ಉದ್ದೇಶಿಸಿ ಭಾಷಣ ಮಾಡಿ ಗಾಂಧೀಜಿಯವರು ಮೈಸೂರು ಸಂಸ್ಥಾನ ರಾಜಕೀಯ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಗ್ರಂಥಾಲಯ.

ಸಾರ್ವಜನಿಕ ಚುನಾವಣೆಗಳು

ಹೊಸ ರಾಜ್ಯಾಂಗ ಸುಧಾರಣೆಗಳ ಪ್ರಕಾರ ನ್ಯಾಯ ವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳಿಗೆ 1940ರ ಸೆಪ್ಟಂಬರ್ ಮಾಹೆಯಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂದೂಡಿದ್ದರು. ಮುಂದೂಡಿದ್ದ ಕಾರ್ಯಕ್ರಮದಂತೆ 1941ರ ಫೆಬ್ರವರಿ 8 ರಂದು ಸಂಸ್ಥಾನದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದವು. ಚುನಾವಣೆಗಳಲ್ಲಿ ಭಾಗವಹಿಸಲು ತೀರ್ಮಾನಿಸಿ ಕಾಂಗ್ರೆಸ್ ತನ್ನ ಪ್ರಚಾರ ಕಾರ್ಯ ಆರಂಭಿಸಿತು. ಹಾಗೆಯೇ ಕಾಂಗ್ರೆಸ್ಸಿನ ಪ್ರಭಾವವನ್ನು ತಗ್ಗಿಸಲು ಸರಕಾರವು ಕೂಡ ಪ್ರಯತ್ನಿಸಿತು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಅದ್ಭುತ ವಿಜಯಗಳಿಸಿದುದರಿಂದ, ಕಾಂಗ್ರೆಸ್ಸಿನ ವಿಚಾರದಲ್ಲಿ ಸರಕಾರದ ವಿರೋಧವು ಹೆಚ್ಚಾಯಿತು.

ಶಾಸನ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದು ವಾರರಿಗೆ ಜಯ ಲಭಿಸದಂತೆ ಪ್ರಯತ್ನಿಸಿದರು. ಅಧಿಕಾರಿಗಳು ಪ್ರಮುಖ ಕಾಂಗ್ರೆಸ್ ನಾಯಕರ ಹೆಸರುಗಳನ್ನು ಬೇಕೆಂದೇ ಓಟರುಗಳ ಪಟ್ಟಿಯಿಂದ ತೆಗೆದುಹಾಕಿದ್ದರು. ಹಾಗೂ ಚುನಾವಣೆಗಳಲ್ಲಿ ಭಾಗವಹಿಸಲು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚುನಾವಣೆಗಿದ್ದ 298 ಸ್ಥಾನಗಳಲ್ಲಿ ಕಾಂಗ್ರೆಸ್ 232 ಸ್ಥಾನಗಳಿಗೂ, ನ್ಯಾಯ ವಿಧಾಯಕ ಸಭೆಯಲ್ಲಿದ್ದ 44 ಸ್ಥಾನಗಳಲ್ಲಿ 30ಕ್ಕೂ

ಉಮೇದುವಾರಿಕೆ ಪತ್ರಗಳನ್ನು ಸಲ್ಲಿಸಿದ್ದರು. ಉಮೇದುವಾರಿಕೆ ಪತ್ರಗಳನ್ನು ಪರಿಶೀಲಿಸುವಾಗ, ಪ್ರಜಾಪ್ರತಿನಿಧಿ ಸಭೆಯ 72 ಜನರ ಅರ್ಜಿಗಳನ್ನೂ, ನ್ಯಾಯ ವಿಧಾಯಕ ಸಭೆಯ 10 ಜನ ಉಮೇದುವಾರಿಕೆಯ ಪತ್ರಗಳನ್ನೂ, ಅಧಿಕಾರಿಗಳು ಕ್ಷುಲ್ಲಕ ಕಾರಣಗಳಿಗಾಗಿ ತಿರಸ್ಕರಿಸಿದರು. ಮಂಡ್ಯ ಮತ್ತು ಚಿತ್ರದುರ್ಗ ಜಿಲ್ಲೆಯ ಬಹುತೇಕ ಮಂದಿ ಕಾಂಗ್ರೆಸ್ಸಿಗರ ಅರ್ಜಿಗಳನ್ನೂ, ಕೋಲಾರ ಮತ್ತು ಚಿಕ್ಕಮಗಳೂರು (ಅಂದು ಕಡೂರು) ಜಿಲ್ಲೆಯ ಅರ್ಧದಷ್ಟು ಕಾಂಗ್ರೆಸ್ಸಿನ ಸದಸ್ಯರ ಅರ್ಜಿಗಳನ್ನೂ ಅಧಿಕಾರಿಗಳು ತಿರಸ್ಕರಿಸಿದರು. ಅದನ್ನು ಪುನರ್ವಿಮರ್ಶೆ ಮಾಡಬೇಕೆಂದು ಕೇಳಿ 60 ಜನ ಅರ್ಜಿಹಾಕಿದರು. ಅದಕ್ಕೆ ಉತ್ತರವಾಗಿ ಅಧಿಕಾರಿಗಳು ಪುನರ್ವಿಮರ್ಶೆಯನ್ನು ನ್ಯಾಯಾಲಯಗಳಲ್ಲಿ ಪರಿಹರಿಸಿಕೊಳ್ಳಿಯೆಂದು ತಿಳಿಸಿ ಬಿಟ್ಟರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಈ ವಿಚಾರವನ್ನು ದೀರ್ಘವಾಗಿ ಪರಿಶೀಲಿಸಿ, ಗಾಂಧೀಜಿಯವರೊಡನೆಯೂ ಸಮಾಲೋಚಿಸಿ, ತಿರಸ್ಕೃತರಾಗದೆ ಉಳಿದಿರುವ ಉಮೇದುವಾರರ ಪರ ತೀವ್ರವಾಗಿ ಚುನಾವಣಾ ಪ್ರಚಾರ ಕೈಗೊಂಡು, ಸರಕಾರದ ಧೋರಣೆಯಿಂದ ಜನತೆಗೆ ಉಂಟಾಗಿರುವ ಅನ್ಯಾಯಗಳನ್ನು ಪ್ರಚಾರದ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕೆಂದೂ, ಅನ್ಯಾಯಗಳ ಪಟ್ಟಿಮಾಡಿ ಅವುಗಳ ನಿವಾರಣೆಯನ್ನು ಕೋರಿ, ಮಹಾರಾಜರಿಗೆ ಬಿನ್ನವತ್ತಳೆ ಅರ್ಪಿಸಬೇಕೆಂದೂ ತೀರ್ಮಾನಿಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು, 1941 ರ ಜನವರಿ 26 ರಂದು ಮಹಾರಾಜರಿಗೆ ಒಂದು ಬಿನ್ನವತ್ತಳೆ ಅರ್ಪಿಸಿ, ಚುನಾವಣೆ ಸಂಬಂಧದಲ್ಲಿ ನಡೆಸಿರುವ ಅನ್ಯಾಯವನ್ನು ಸರಿಪಡಿಸಿ ಚುನಾವಣೆಯ ಪಾವಿತ್ರ್ಯಕ್ಕೆ ಚ್ಯುತಿ ಬಾರದಂತೆ ಮಾಡಬೇಕೆಂದು ಪ್ರಾರ್ಥಿಸಿತು. ಮೈಸೂರು ಸಂಸ್ಥಾನದಲ್ಲಿ ನಡೆದ ಈ ಅನ್ಯಾಯದ ಬಗ್ಗೆ ಗಾಂಧೀಜಿಯವರೂ ಕೂಡ ತಮ್ಮ ವಿಷಾದ ವ್ಯಕ್ತಪಡಿಸಿ, ಮಹಾರಾಜರಿಗೆ ಬಿನ್ನವತ್ತಳೆ ಅರ್ಪಿಸಿದುದನ್ನು ಅಭಿನಂದಿಸಿ, ಉಳಿದ ಕಾಂಗ್ರೆಸ್ ಉಮೇದುವಾರರ ಗೆಲುವಿಗಾಗಿ ಪ್ರಚಾರ ಕೆಲಸವನ್ನು ನಡೆಸಲು ಸೂಚಿಸಿದರು.

1941 ರ ಜನವರಿ ಹತ್ತರಿಂದ ಫೆಬ್ರವರಿ 8 ರ ವರೆಗೂ ಕಾಂಗ್ರೆಸ್ ನಡೆಸಿದ ಚುನಾವಣಾ ಪ್ರಚಾರ ಕಾರ್ಯದಲ್ಲಿ ಸರಕಾರ ಅನೇಕ ಅಡ್ಡಿ

ಆತಂಕಗಳನ್ನು ಒಡ್ಡಿತು. ಎಲ್ಲಾ ತಾಲ್ಲೂಕುಗಳಲ್ಲೂ ಕಾಂಗ್ರೆಸ್ ಚುನಾವಣಾ ಪ್ರಚಾರದ ವಿರುದ್ಧ ನಿಷೇಧಾಜ್ಞೆಗಳು ಜಾರಿಗೆ ತರಲ್ಪಟ್ಟವು. ಸಭೆಗಳನ್ನು ನಡೆಸಲು ಅಪ್ಪಣೆಗಾಗಿ ಕಾಂಗ್ರೆಸ್ಸಿನವರು ಸಲ್ಲಿಸಿದ್ದ ಅರ್ಜಿಗಳನ್ನು ಸರಕಾರ ನಿರಾಕರಿಸಿತು. ಸರಕಾರಿ ಅಧಿಕಾರಿಗಳು ಕಾಂಗ್ರೆಸ್ ಉಮೇದುವಾರರ ವಿರುದ್ಧ ಹಾಗೂ ಸ್ವತಂತ್ರ ಅಭ್ಯರ್ಥಿಗಳ ಪರ ಪ್ರಚಾರ ಮಾಡುತ್ತಿದ್ದುದನ್ನು ವಿರೋಧಿಸಿ ಕಾಂಗ್ರೆಸ್ಸಿನ ರುಮಾಲೆ ಚೆನ್ನಬಸವಯ್ಯನವರು 1941 ರ ಫೆಬ್ರವರಿ 4 ರಿಂದ 9 ರವರೆಗೆ ನಿರಶನ ಸತ್ಯಾಗ್ರಹ ನಡೆಸಿದರು. ಕಾಂಗ್ರೆಸ್ ಉಮೇದುವಾರರಿಗೆ ವಿರುದ್ಧವಾದ ಕಾರ್ಯವು ಎಲ್ಲಾ ಕಡೆಯಲ್ಲಿಯೂ ನಡೆಯಿತು.

ಸರಕಾರವು ಇಷ್ಟೆಲ್ಲಾ ತೊಂದರೆಗಳನ್ನು ಕೊಟ್ಟು, ಕಾಂಗ್ರೆಸ್ ನಿಲ್ಲಿಸಿದ್ದ 232 ಉಮೇದುವಾರಲ್ಲಿ, 72 ಜನರ ಚುನಾವಣೆ ಅರ್ಜಿಗಳು ತಿರಸ್ಕೃತವಾದವು. ಆದರೂ ಉಳಿದ 160 ಸ್ಥಾನಗಳಲ್ಲಿ 101 ಕಾಂಗ್ರೆಸ್ ಉಮೇದುವಾರರು ಚುನಾಯಿತರಾದರು. ನ್ಯಾಯವಿಧಾಯಕ ಸಭೆಯಲ್ಲಿ ಇದಕ್ಕಿಂತಲೂ ಅದ್ಭುತವಾದ ವಿಜಯವು ದೊರೆಯಿತು. ಒಟ್ಟು 30 ಉಮೇದುವಾರರು ನಿಂತಿದ್ದರು. ಅದರಲ್ಲಿ 10 ಜನರ ಅರ್ಜಿಗಳು ತಿರಸ್ಕೃತವಾದವು. ಉಳಿದ 20 ಸ್ಥಾನಗಳಲ್ಲಿ 16 ಕಾಂಗ್ರೆಸ್ಸಿನವರು ಚುನಾಯಿತರಾಗಿದ್ದರು. ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗಿದ್ದ "ಅಡ್ಡಿ ಆತಂಕಗಳನ್ನೂ, ತೊಂದರೆಗಳನ್ನೂ, ಇತರ ವಿಧವಾದ ಅನ್ಯಾಯಗಳನ್ನೂ ನೆನೆಸಿಕೊಂಡರೆ ಈಗ ಲಭಿಸಿರುವ ವಿಜಯೋತ್ಸವವು ಯಾರಿಗಾದರೂ ಹೆಮ್ಮೆಯನ್ನುಂಟುಮಾಡದೇ ಇರದು. ಅಂಕಿ ಅಂಶಗಳನ್ನು ನೋಡಿದರೆ ಮೈಸೂರು ಜನತೆಗೆ ಕಾಂಗ್ರೆಸ್ಸಿನ ವಿಷಯದಲ್ಲಿ ಬಹುಮಟ್ಟಿನ ಪ್ರೀತ್ಯಾದರಗಳಿವೆಯೆಂಬುದು ವ್ಯಕ್ತವಾಗುತ್ತದೆ. ಯಾರು ಏನೇ ಹೇಳಲಿ, ಯಾರು ಎಷ್ಟೇ ಟೀಕಿಸಲಿ, ಕಾಂಗ್ರೆಸ್ ಜನತೆಯ ಹೃದಯವನ್ನು ಸೂರೆಗೊಂಡಿದೆ. ಇದು ಈ ಚುನಾವಣೆಗಳಿಂದ ದೃಢಪಟ್ಟಿತು" ಎಂದು **ತಾಯಿನಾಡು** (17 ಫೆಬ್ರವರಿ 1941) ಪತ್ರಿಕೆಯ ಅಗ್ರಲೇಖನ ತಿಳಿಸಿತು. ಜವಾಬ್ದಾರೀ ಸರಕಾರವನ್ನು ಸ್ಥಾಪಿಸುವ ಏಕೈಕ ಉದ್ದೇಶದಿಂದ ಶಾಸಕಾಂಗದ ಕಾರ್ಯಗಳಲ್ಲಿ ಕಾಂಗ್ರೆಸ್ ಭಾಗವಹಿಸಿತು. ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಪ್ರಬಲ ವಿರೋಧ ಪಕ್ಷವಾಯಿತು.

1940-41ರಲ್ಲಿ ಕಾಂಗ್ರೆಸ್ ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ಜನರ ಆಸಕ್ತಿಯನ್ನು ಅವುಗಳಲ್ಲಿ ಮೂಡಿಸಲು ಪ್ರಯತ್ನಿಸಿತು. ಕಾಂಗ್ರೆಸ್ ನಾಯಕರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡು ರಚನಾತ್ಮಕ ಕಾರ್ಯಗಳ ಅಗತ್ಯ ಮತ್ತು ಪ್ರಯೋಜನಗಳನ್ನು ವಿವರಿಸಿದರು. ಇದಕ್ಕಾಗಿ ಗಾಂಧಿ ಜಯಂತಿ ಆಚರಣೆಯನ್ನು ಉಪಯೋಗಿಸಿಕೊಂಡು ಖಾದಿ ಭಾಂಡಾರಗಳನ್ನು ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ತೆರೆದರು. ಹೀಗೆ 1940ರ ಗಾಂಧಿ ಜಯಂತಿ ವಾರ ಅಂದರೆ ಅಕ್ಟೋಬರ್ 2ರಂದು ಕಾಂಗ್ರೆಸ್ ಅಧ್ಯಕ್ಷ ಕೆ. ಟಿ. ಭಾಷ್ಯಂರವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರದಲ್ಲಿ ಖಾದಿ ವಸ್ತ್ರಾಲಯದ ಪ್ರಾರಂಭೋತ್ಸವ ನೆರವೇರಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕಿನ ಪ್ರಮುಖ ಕಾಂಗ್ರೆಸ್ ನಾಯಕರಾದ ವೈ. ಎನ್. ನಂಜುಂಡಪ್ಪ, ಕೆ. ಚನ್ನಮಲ್ಲಶೆಟ್ಟಿ, ವೈ. ವಿ. ಶ್ರೀನಿವಾಸರಾವ್, ವೈ. ವಿ. ವೆಂಕಟಸುಬ್ಬಯ್ಯ, ಆರ್. ಬಿ. ಶಿವಪ್ಪ ಇವರೆಲ್ಲರೂ ಸೇರಿ ತಾಲ್ಲೂಕಿನ ಪ್ರಜೆಗಳ ಪರವಾಗಿ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನರ್ಪಿಸಿ ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ತಾಲ್ಲೂಕಿನ ಜನರ ಪಾತ್ರ ವಿವರಿಸಿದರು. ಎಲ್ಲಾ ರಾಷ್ಟ್ರೀಯ ಉದ್ಯಮಗಳಲ್ಲಿಯೂ ಆಸಕ್ತಿಯನ್ನು ವಹಿಸಿ ದೇಶಸೇವೆಯಲ್ಲಿ ಭಾಗಿಗಳಾಗಿದ್ದಾರೆಂದೂ, ಖಾದಿಯ ಮೂಲಮಂತ್ರೋಪದೇಶಕರಾದ ಮಹಾತ್ಮಗಾಂಧಿಯವರೇ ನಗರಕ್ಕೆ ಭೇಟಿ ನೀಡಿ ಖಾದಿತತ್ವದ ಉಪದೇಶವನ್ನು ಮಾಡಿ ರಚನಾತ್ಮಕ ಕ್ರಮದ ಮಹತ್ವವನ್ನು ಬೋಧಿಸಿದ್ದಾರೆಂದು ತಿಳಿಸಿದರು. ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಯ ನಂತರ, ಇನ್ನಿತರ ಕಡೆಗಳಂತೆ ಈ ತಾಲ್ಲೂಕಿನಲ್ಲಿಯೂ ನವ ಚೈತನ್ಯವು ತುಂಬಿದೆ ಎಂದರು. ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಈ ತಾಲ್ಲೂಕಿನ ಪ್ರಜೆಗಳು ಕಾಂಗ್ರೆಸ್ಸಿಗೆ ಕೊಟ್ಟ ಬೆಂಬಲವು ಜನರ ರಾಷ್ಟ್ರಪ್ರೇಮವನ್ನೂ ಸ್ವಾತಂತ್ರ್ಯಕಾಂಕ್ಷೆಯನ್ನೂ ಪ್ರತಿಬಿಂಬಿಸುತ್ತವೆ ಎಂದರು. ಪಟ್ಟಣದಲ್ಲಿ ನೂರಾರು ಜನ ಖಾದಿ ತೊಡಲಾರಂಭಿಸಿದರು ಹಾಗೂ ಕಾಂಗ್ರೆಸ್ ಧ್ಯೇಯಗಳು ಹೆಚ್ಚು ಪ್ರಚಾರವಾಗಿ ಅನೇಕ ಜನರು ಕಾಂಗ್ರೆಸ್ ಸೇರಿದರು. ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಆಗಿಂದಾಗ್ಗೆ ವಾರ್ಧಾಕ್ಕೆ ಹೋಗಿ ಗಾಂಧೀಜಿಯವರ ಸಲಹೆ ಪಡೆಯುತ್ತಿದ್ದರು.

ಮೈಸೂರು ಕಾಂಗ್ರೆಸ್ಸಿನ ನಾಲ್ಕನೆ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ನಾಲ್ಕನೆ ಮಹಾ ಅಧಿವೇಶನವು ಹರಿಹರದ ಬಳಿ ಇರುವ ಹರಳಾಪುರದ ಹತ್ತಿರವಲ್ಲಿ ನಿರ್ಮಿತವಾಗಿದ್ದ ವಿನೋಬ ನಗರದಲ್ಲಿ 1941ರ ಎಪ್ರಿಲ್ 7, 8 ಮತ್ತು 9 ರಂದು ಹೆಚ್. ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾರತ ಸ್ವಾತಂತ್ರ್ಯ ಗುರಿಯನ್ನು ಸಾಧಿಸಲು ಗಾಂಧೀಜಿಯವರು ಕೈಗೊಂಡ ವೈಯಕ್ತಿಕ ಸತ್ಯಾಗ್ರಹದಲ್ಲಿ ಪ್ರಪ್ರಥಮ ಸತ್ಯಾಗ್ರಹಿಯಾಗಿ ಗೌರವಕ್ಕೆ ಪಾತ್ರರಾದ ವಿನೋಬಾ ಭಾವೆಯವರ ಹೆಸರನ್ನು ಕಾಂಗ್ರೆಸ್ಸಿನ ಅಧಿವೇಶನದ ಸ್ಥಳಕ್ಕೆ ಇಟ್ಟರು. ಗಾಂಧೀಜಿಯವರ ಅಹಿಂಸಾ ತತ್ವ ಪ್ರತಿಪಾದಕರಲ್ಲಿ ಶ್ರೇಷ್ಠರಾದ ರಾಜೇಂದ್ರಪ್ರಸಾದರು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಎಸ್. ನಿಜಲಿಂಗಪ್ಪನವರು ಅಧಿವೇಶನಕ್ಕೆ ಸದಸ್ಯರುಗಳನ್ನೆಲ್ಲಾ ಸ್ವಾಗತಿಸುತ್ತಾ "ಜವಾಬ್ದಾರೀ ಸರ್ಕಾರ ಸ್ಥಾಪನೆಗಾಗಿ ನಾವು ನಡೆಸುತ್ತಿರುವ ನಿರಂತರ ಪ್ರಯತ್ನದಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರತಿ ಅಧಿವೇಶನವೂ ಒಂದೊಂದು ಗಣನೀಯವಾದ ಘಟ್ಟವಾಗಿರುವುದಲ್ಲದೆ, ನಮ್ಮ ಮುನ್ನಡೆಯ ಸ್ಪಷ್ಟವಾದ ಕುರುಹೂ ಆಗಿದೆ" ಎಂದರು.

ರಾಜ್ಯಾಂಗ ಸುಧಾರಣೆಗಳ ವಿಷಯದಲ್ಲಿ ಕಾಂಗ್ರೆಸ್ ಒಂದು ನಿರ್ಣಯದ ಮೂಲಕ ಆಕ್ಷೇಪಣೆಗಳನ್ನು ಪುನಃ ವ್ಯಕ್ತಪಡಿಸಿತು. "ಮೈಸೂರು ಕಾಂಗ್ರೆಸ್ ಚುನಾವಣೆಗಳಲ್ಲಿ ಭಾಗವಹಿಸಿ, ಶಾಸನ ಸಭೆಗಳನ್ನು ಪ್ರವೇಶಿಸಿರುವ ಉದ್ದೇಶವೆಂದರೆ, ಅಲ್ಲಿ ಜನತೆಗೆ ಸಾಧ್ಯವಾದಷ್ಟು ಉಪಯೋಗವನ್ನು ಸಾಧಿಸಿಕೊಡುವುದೂ, ಶ್ರೀಮನ್ಮಹಾರಾಜರ ಆಶ್ರಯದಲ್ಲಿ ಜವಾಬ್ದಾರೀ ಸರ್ಕಾರ ಸ್ಥಾಪನೆಯ ಸಾಧನೆ ಮಾರ್ಗದಲ್ಲಿ ಕಾಂಗ್ರೆಸ್ಸಿನ ಸ್ಥಾನವನ್ನು ಬಲಪಡಿಸಿಕೊಳ್ಳುವುದೂ ಆಗಿರುತ್ತದೆ. ಅಹಿಂಸಾ ತತ್ವಕ್ಕನುಸಾರವಾಗಿ ಜವಾಬ್ದಾರೀ ಸರ್ಕಾರ ಸ್ಥಾಪನೆ ಮಾಡಬೇಕಾದರೆ, ಶಕ್ತಿಯನ್ನು ತಳಹದಿಯಿಂದ ಬೆಳಸಬೇಕಾಗಿದೆಯೆಂಬುದನ್ನು ಈ ಅಧಿವೇಶನವು ಸ್ಪಷ್ಟಪಡಿಸಲಿಚ್ಛಿಸುತ್ತದೆ. ಜನಸಾಮಾನ್ಯರೊಡನೆ ನಿಕಟ ಸಂಬಂಧವನ್ನು ಬೆಳಸಿ, ಅವರ ನೈತಿಕ, ಸಾಮಾಜಿಕ, ಸಾಂಪತ್ತಿಕ ಹಾಗೂ ರಾಜಕೀಯ ಅಭಿವೃದ್ಧಿಯ ಕಡೆಗೆ ಗಮನಕೊಡದ ಹೊರತು ಇದು ಸಾಧ್ಯವಿಲ್ಲ. ಈ ಕಾರ್ಯವಾಗಬೇಕಾದರೆ ಸಾಧ್ಯವಾದಷ್ಟು

ರಚನಾತ್ಮಕ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಬೇಕಾಗಿದೆ" ಎಂದು ನಿರ್ಣಯದಲ್ಲಿ ಸೂಚಿಸಿದರು.

ಕಾಂಗ್ರೆಸ್ ಶಾಸಕರ ಸಮ್ಮೇಳನ

ರಾಜ್ಯಾಂಗ ಸುಧಾರಣೆಗಳ ಪ್ರಕಾರ ಪುನರ್ರಚಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ಚುನಾಯಿತರಾದ ಕಾಂಗ್ರೆಸ್ ಶಾಸಕರ ಸಮ್ಮೇಳನವು ಬೆಂಗಳೂರಿನಲ್ಲಿ 1941ರ ಮೇ ಮಾಹೆಯಲ್ಲಿ (4–5) ನಡೆಯಿತು. ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಗಾಧ ಬೆಂಬಲ ನೀಡಿ ಅವರು ಜಯಗಳಿಸಲು ಕಾರಣರಾದ ಜನತೆಯನ್ನು ಸಮ್ಮೇಳನ ಅಭಿನಂದಿಸಿತು. ಹಾಗೂ ಅವರು ಶಾಸನಸಭೆಗಳಲ್ಲಿ ಅನುಸರಿಸಬೇಕಾದ ಮಾರ್ಗಗಳ ಬಗ್ಗೆಯೂ ನಿರ್ಣಯಗಳಾದವು. ಹಾಗೂ ರಾಜಕೀಯ ಸುಧಾರಣೆಗಳ ಸಂಬಂಧವಾಗಿ ನಾಲ್ಕನೆಯ ಕಾಂಗ್ರೆಸ್ ಅಧಿವೇಶನದಲ್ಲಿ ತೀರ್ಮಾನಿಸಿದ್ದ ಕಾಂಗ್ರೆಸ್ಸಿನ ಧೋರಣೆಯನ್ನು ಸಮ್ಮೇಳನದಲ್ಲಿ ಶಾಸಕರ ಗಮನಕ್ಕೆ ತಂದಿತು. ಜನರಿಗೆ ಸಾಧ್ಯವಾದಷ್ಟು ಅನುಕೂಲಗಳನ್ನು ದೊರಕಿಸಿ ಕೊಡುವುದಕ್ಕಾಗಿಯೂ, ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಜವಾಬ್ದಾರೀ ಸರಕಾರ ಸ್ಥಾಪನೆಯ ಗುರಿಯನ್ನು ಮುಟ್ಟುವುದಕ್ಕಾಗಿ ಕಾಂಗ್ರೆಸ್ಸಿನ ಸ್ಥಾನವನ್ನು ಬಲಗೊಳಿಸುವುದಕ್ಕೂ ಶಾಸನಸಭೆಗಳಿಗೆ ಕಾಂಗ್ರೆಸ್ ಪ್ರವೇಶಿಸಿದೆ ಎಂದು ಸಮ್ಮೇಳನ ನಿರ್ಣಯಿಸಿತು. ಜವಾಬ್ದಾರೀ ಸರಕಾರ ಸ್ಥಾಪನೆಯು ಕಾಂಗ್ರೆಸ್ ಪಕ್ಷದ ಮುಖ್ಯಧ್ಯೇಯವೆಂದೂ, ಆ ಧ್ಯೇಯ ಸಾಧನೆಗೆ ಅಗತ್ಯವಾದ ಶಕ್ತಿಯನ್ನು ಪಕ್ಷಕ್ಕೆ ದೊರಕಿಸಿ ಕೊಡುವುದು ಎರಡು ಶಾಸನಸಭೆಗಳ ಕಾಂಗ್ರೆಸ್ ಪಕ್ಷಗಳ ಕರ್ತವ್ಯವೆಂದೂ, ಸಮ್ಮೇಳನದಲ್ಲಿ ಒತ್ತಿ ಹೇಳಲಾಯಿತು. ಶಾಸನ ಕೆಲಸದ ಜೊತೆಗೆ ಕಾಂಗ್ರೆಸ್ಸಿನ ಮುಖ್ಯ ಧ್ಯೇಯದ ವಿಚಾರದಲ್ಲಿಯೂ ಜನಾಭಿಪ್ರಾಯವನ್ನು ಬಲಪಡಿಸಿ, ಜನ ಬೆಂಬಲದ ಅಗತ್ಯವಿರುವುದರಿಂದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ, ಜನತೆಯ ಆಸಕ್ತಿ ಹೆಚ್ಚುವಂತೆ ಮಾಡಬೇಕೆಂದೂ ಶಾಸಕರಿಗೆ ತಿಳಿಸಲಾಯಿತು. ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಕೆ. ಚೆಂಗಲರಾಯರೆಡ್ಡಿಯವರೂ, ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಟಿ. ಮರಿಯಪ್ಪನವರೂ ಈ ಸಮ್ಮೇಳನದಲ್ಲಿಯೇ ಆರಿಸಲ್ಪಟ್ಟರು.

ನೂತನ ಸುಧಾರಣೆಗಳ ಜಾರಿ

ನೂತನ ಸುಧಾರಣೆಗಳ ಪ್ರಕಾರ ಮಹಾಚುನಾವಣೆಗಳು 1941 ರ ಫೆಬ್ರವರಿಯಲ್ಲಿ ನಡೆದವು. ಸ್ವಲ್ಪ ಕಾಲದ ನಂತರ ಮಂತ್ರಿಮಂಡಲ ರಚಿಸುವ ಕಾನೂನು ಭಾಗವು ಜಾರಿಗೆ ಬಂದಿತು. ನೂತನ ರಾಜ್ಯಾಡಳಿತ ಸರಕಾರದವರು ಸಾಧ್ಯವಾದಷ್ಟು ಮಟ್ಟಿಗೆ ಪ್ರಜಾ ಆಕಾಂಕ್ಷೆಗಳನ್ನು ಈಡೇರಿಸುವರೆಂದೂ, ಮತ್ತು ಸಂಸ್ಥಾನದ ಪ್ರಭಾವಯುತವೂ, ಬಲಯುತವೂ ಆದ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿಗೆ ಸ್ನೇಹ ಹಸ್ತವನ್ನು ನೀಡುವರೆಂದು ಆಶಿಸಲಾಗಿತ್ತು. ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವಾಗ ಸರಕಾರ ಅನುಸರಿಸಿದ ನೀತಿ ಆದರಲ್ಲೂ ಶಾಸನ ಸಭೆಗಳಿಗೆ ನಾಮಕರಣ, ಖಾಸಗಿ ಸಚಿವರ ಆಯ್ಕೆ, ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷರ ಆಯ್ಕೆ ವಿಚಾರಗಳಲ್ಲಿ, ಶ್ರೀಮನ್ಮಹಾರಾಜರ ವರಿಗಿತ್ತ ಸರಕಾರಿ ಸಲಹೆಗಳು ಪ್ರಜಾಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ಸುಧಾರಣೆಗಳಲ್ಲಿ ತಿರುಳಿಲ್ಲವೆಂದೂ, ಅಂಗೀಕಾರಾರ್ಹವಲ್ಲವೆಂದೂ, ರಾಜ್ಯಾಳಿತದಲ್ಲಿ ಪ್ರಜಾಪ್ರಭುತ್ವದ ಮತ್ತು ಜವಾಬ್ದಾರಿಕೆಯ ಲಕ್ಷಣಗಳನ್ನು ಸೇರಿಸುವ ಅಭಿಪ್ರಾಯ ಸರಕಾರಕ್ಕಿಲ್ಲವೆಂದೂ ಸ್ಪಷ್ಟವಾಯಿತೆಂದು ಒಂದು ನಿರ್ಣಯದಲ್ಲಿ ಕಾಂಗ್ರೆಸ್ ನಾಯಕರು ತಿಳಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ಹೇಳಿಕೆಯಲ್ಲಿ, ಸರಕಾರದವರು ಕಾಲಗತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದೂ, ಸಂಸ್ಥಾದಲ್ಲಿ ಪ್ರಭಾವಶಾಲಿಯಾಗಿದ್ದು, ಜನರ ಅನುರಾಗವನ್ನು ಗಳಿಸಿರುವ ಏಕಮಾತ್ರ ಸಂಸ್ಥೆ ಕಾಂಗ್ರೆಸ್ ನೀಡಿದ ಸಹಕಾರ ಹಸ್ತವನ್ನು ನಿರಾಕರಿಸಿ, ಯತ್ಕಿಂಚಿತ್ತಾದರೂ ಜನತೆಯ ಆಶೋತ್ತರಗಳನ್ನು ಈಡೇರಿಸಲು ಸರಕಾರ ಪ್ರಯತ್ನ ಮಾಡಲಿಲ್ಲವೆಂಬುದನ್ನು ಸ್ಪಷ್ಟಗೊಳಿಸಿತು. ಪ್ರಜೆಗಳ ನಾಗರಿಕ ಹಕ್ಕುಬಾಧ್ಯತೆಗಳ ಸಾಮಾನ್ಯ ವಿಚಾರದಲ್ಲೂ ಪ್ರವೇಶಿಸಿ, ಪ್ರತಿಬಂಧಕಾಜ್ಞೆ, ಗಡೀಪಾರುಹುಕುಂ, ನಿಷೇಧಾಜ್ಞೆಗಳನ್ನು ಜಾರಿಮಾಡುತ್ತ ಕೊನೆಗೆ ಕಾಂಗ್ರೆಸ್ ಅಧ್ಯಕ್ಷರು ಮೈಸೂರು ನಗರದ ಎಲ್ಲೆಯೊಳಕ್ಕೆ ಪ್ರವೇಶಿಸಬಾರದೆಂದು ಆಜ್ಞೆ ಮಾಡಿದುದು ಅಧಿಕಾರದ ಪರಮಾವಧಿಯನ್ನು ಮುಟ್ಟಿತು. ಪರಿಣಾಮವಾಗಿ 1941ರ ಜುಲೈನಲ್ಲಿ ಚಿಕ್ಕಬಳ್ಳಾಪುರದಲ್ಲಿ ಸೇರಿದ್ದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯವರು ಎಲ್ಲವನ್ನೂ ಸಮಾಲೋಚಿಸಿ, "ಈಗಿನ

ಸರ್ಕಾರದ ಆಡಳಿತ ಕ್ರಮದಲ್ಲಿ ಪ್ರಜಾವರ್ಗದವರಿಗೆ ವಿಶ್ವಾಸವಿಲ್ಲವೆಂದೂ ಈಗಿನ ಸರಕಾರದ ಪದ್ಧತಿಯು ಬದಲಾಗಿ ಜವಾಬ್ದಾರೀ ಸರ್ಕಾರದ ಸ್ಥಾಪನೆಯಾದಲ್ಲದೆ ಪ್ರಜಾವರ್ಗದವರಲ್ಲಿ ತೃಪ್ತಿಯಾಗಲಿ, ಶಾಂತಿಯಾಗಲಿ ನೆಲೆಗೊಳ್ಳಲಾರದೆಂದೂ....ಜವಾಬ್ದಾರೀ ಸರ್ಕಾರ ಸ್ಥಾಪನೆಗಾಗಿ ಇನ್ನೂ ಉಗ್ರವಾದ ಮತ್ತು ತೀವ್ರವಾದ ಚಳುವಳಿ ಆವಶ್ಯಕವೆಂದೂ" ಘೋಷಿಸಿದರು. ರಚನಾತ್ಮಕ ಕಾರ್ಯಕ್ರಮ ಹಾಗೂ ಪ್ರಚಾರಕೈಗೊಳ್ಳಬೇಕೆಂದೂ ತಿಳಿಸಿದರು.

ಸಂಸ್ಥಾನದಲ್ಲಿ ಕಾಂಗ್ರೆಸ್ ಪ್ರಭಾವವು ಹೆಚ್ಚಿದಂತೆಲ್ಲಾ ಸರಕಾರವು ಕಾಂಗ್ರೆಸ್ ಚಟುವಟಿಕೆಗಳ ಮೇಲೆ ಹೆಚ್ಚು ನಿರ್ಬಂಧಗಳನ್ನು ಹೇರಲಾರಂಭಿಸಿತು. ಸರಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕಾಂಗ್ರೆಸ್ ಅಧ್ಯಕ್ಷ ಸಿದ್ದಯ್ಯನವರು ರೈಲಿನಲ್ಲಿ ಮೈಸೂರು ನಗರವನ್ನು ಪ್ರವೇಶಿಸಲು ಪ್ರಯತ್ನಿಸಿದರು. ಆಗ ಅಧಿಕಾರಿಗಳು ಮೈಸೂರು ನಗರದಿಂದ 11 ಕಿಲೋಮೀಟರ್ ದೂರದಲ್ಲಿರುವ ಬೆಳಗೊಳದಲ್ಲಿ ಅವರನ್ನು ಬಂಧಿಸಿದರು. ಹೀಗೆ ಸರಕಾರದ ವಿರೋಧ ನೀತಿಯು ಮುಂದುವರಿಯಿತು.

ಹೇಮಾವತಿ ನದಿ ದಡದಲ್ಲಿರುವ ಹೊಳೆನರಸೀಪುರದಲ್ಲಿ 1941ರ ನವೆಂಬರ್ 22ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿತು. ಸ್ವಾಗತ ಸಮಿತಿ ಅಧ್ಯಕ್ಷ ಎಸ್. ಸಿ ಸೂರ್ಯನಾರಾಯಣ ಶೆಟ್ಟರು ಮೈಸೂರು ಸರಕಾರವು ಕಾಂಗ್ರೆಸ್ ಪಕ್ಷದೊಡನೆ ಸಹಕರಿಸಬೇಕೆಂದು ಕೋರಿದರು· ಸರಕಾರದವರು ಜನರ ಆಶೋತ್ತರಗಳನ್ನು ಮೂಲೆಗೊತ್ತಿ, ಕಾಂಗ್ರೆಸ್ಸಿನ ವಿಚಾರವಲ್ಲಿ ವಿರೋಧ ಮನೋಭಾವನೆಯನ್ನು ತೋರುತ್ತಲಿದ್ದರೂ ಕೂಡ, ಗಾಂಧೀಜಿಯವರ ಆಣತಿಯಂತೆ ಯುದ್ಧ ಸಮಯದಲ್ಲಿ ಜವಾಬ್ದಾರೀ ಸರಕಾರದ ಸ್ಥಾಪನೆಯನ್ನು ಹಿಂಬದಿಯಲ್ಲಿಟ್ಟು, ಸಂಘಟಿತ ಕಾರ್ಯದಿಂದ ಜನತೆಯಲ್ಲಿ ಹೊಸ ಜೀವನ ತತ್ವ ಅಂಕುರಿಸುವಂತೆ ಪ್ರಯತ್ನಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಸಿದ್ದಯ್ಯನವರು ತಿಳಿಸಿದರು. ಇದರಿಂದ ಆತ್ಮ ಸಂಯಮದ ಪರಮಾವಧಿಯನ್ನು ಮುಟ್ಟಿದಂತಾಗುತ್ತದೆಂದೂ ಗಾಂಧೀಜಿಯವರ ಅಹಿಂಸಾ ತತ್ವದ ಒಂದು ಪ್ರಯೋಗವನ್ನು ಆಚರಣೆಗೆ ತಂದಂತಾಗುತ್ತದೆಂದೂ ಅವರು ತಿಳಿಸಿದರು. ಕಾಂಗ್ರೆಸ್ ಅಧ್ಯಕ್ಷ ಸಿದ್ದಯ್ಯನವರು, ಕಾರ್ಯದರ್ಶಿ ಕೆ. ಪಟ್ಟಾಭಿರಾಮನ್‌ರವರು ನವೆಂಬರ್ 26, ಡಿಸೆಂಬರ್ 22,

ಜನವರಿ 2 ಮತ್ತು ಮಾರ್ಚಿ 23ರಂದು ದಿವಾನರನ್ನು ಭೇಟಿಮಾಡಿ ಪೌರರ ಹಕ್ಕುಗಳ ಸಂಬಂಧದ ಕಾಂಗ್ರೆಸ್ ನಿರ್ಣಯಗಳನ್ನು ಚರ್ಚಿಸಿದರು. ಚರ್ಚಿಸಲ್ಪಟ್ಟ ವಿಷಯಗಳಿಗೆ ತೃಪ್ತಿಕರವಾದ ಉತ್ತರ ಸರಕಾರದಿಂದ ಬರಲಿಲ್ಲ ಹಾಗೂ ಸರಕಾರದವರಿಗೆ ಪ್ರಜಾಭಿಪ್ರಾಯ ತಿಳಿದುಕೊಳ್ಳುವುದಾಗಲೀ ಜನತೆಯ ಸಹಕಾರ ಮತ್ತು ಸಹಾನುಭೂತಿಗಳನ್ನು ಪಡೆಯಬೇಕೆಂಬ ಮನೋಭಾವವಾಗಲೀ ಕಂಡುಬರಲಿಲ್ಲ.

ಎರಡನೆಯ ಮಹಾಯುದ್ಧ ಮತ್ತು ಅದರ ಪರಿಣಾಮ

1939ರ ಸೆಪ್ಟಂಬರ್ ಆದಿಯಲ್ಲಿ ಆರಂಭವಾಗಿದ್ದ ಎರಡನೆ ಮಹಾಯುದ್ಧವು ಅಲ್ಲೋಲಕಲ್ಲೋಲ ವನ್ನುಂಟುಮಾಡಿತು. ಯುದ್ಧದಲ್ಲಿ ಭಾಗವಹಿಸಲು, ಭಾರತೀಯರ ಅನುಮತಿ ಅಥವಾ ವಿಚಾರಣೆಯಿಲ್ಲದೆ, ಭಾರತವೂ ಕೂಡ ಎಳೆಯಲ್ಪಟ್ಟಿತು. ಇದರಿಂದ ಕುಪಿತಗೊಂಡ ರಾಷ್ಟ್ರೀಯ ಕಾಂಗ್ರೆಸ್ ಯುದ್ಧದ ಗುರಿಗಳೇನು? ಅವುಗಳನ್ನು ಭಾರತಕ್ಕೆ ಹೇಗೆ ಅನ್ವಯಿಸುವಿರಿ? ಸ್ಪಷ್ಟಪಡಿಸಿ ಎಂದು ಕೇಳಿತು. 1940ರಲ್ಲಿ ಗಾಂಧೀಜಿಯು ವೈಯಕ್ತಿಕ ಅಸಹಕಾರ ಚಳುವಳಿಯನ್ನು ಆರಂಭಿಸಿದರು. ಮೈಸೂರು ಸಂಸ್ಥಾನದಲ್ಲಿಯೂ ಅನೇಕ ಜನ ಕಾಂಗ್ರೆಸ್ಸಿನವರು ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಹೋದರು. 1941ರ ಡಿಸೆಂಬರ್ ಮೊದಲ ವಾರದ ಕೊನೆಯ ದಿನ ಪರ್ಲ್ ಹಾರ್ಬರ್ ನಾಶ ಮಾಡುವುದರ ಮೂಲಕ ಜಪಾನ್ ಎರಡನೇ ಮಹಾಯುದ್ಧದಲ್ಲಿ ಪ್ರವೇಶಿಸಿ, ಅಮೆರಿಕಾವೂ ಯುದ್ಧಕ್ಕೆ ಸೇರುವಂತೆ ಮಾಡಿತು. ಆರಂಭ ದಿನಗಳಲ್ಲಿ ಜಪಾನೀಯರು ಮಿಂಚಿನ ರೂಪದಲ್ಲಿ ವಿಜಯಗಳನ್ನು ಸಾಧಿಸಿ ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಗಳನ್ನು ವಶಪಡಿಸಿಕೊಂಡಾಗ ಯುದ್ಧದ ಪರಿಸ್ಥಿತಿಯು ಬಿಗಡಾಯಿಸಿತು. ಯುದ್ಧವು ಭಾರತದ ಹತ್ತಿರಕ್ಕೆ ಬಂದಿದ್ದರಿಂದ ಯುದ್ಧದಲ್ಲಿ ಜಯಗಳಿಸಬೇಕಾದರೆ ಭಾರತದ ಸಹಕಾರ ಮತ್ತು ಸಹಾಯ ಬೇಕೆಂದು ತಿಳಿದರು. ಪ್ರಪಂಚದ ಅನೇಕ ರಾಷ್ಟ್ರಗಳ ನಾಯಕರು ಅದರಲ್ಲೂ ಅಮೆರಿಕಾ ಅಧ್ಯಕ್ಷ ರೂಸ್‌ವೆಲ್ಟ್, ಚೀಣಾದೇಶದ ಪ್ರಮುಖ ನಾಯಕ ಚಿಯಾಂಗ್ ಕೈ ಶೇಖ್‌ರವರು ಭಾರತದೊಡನೆ ರಾಜಕೀಯ ಒಪ್ಪಂದ ಮಾಡಿಕೊಳ್ಳುವಂತೆ ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ಲರನ್ನು ಒತ್ತಾಯಿಸಿದರು.

1942ರ ಫೆಬ್ರವರಿ-ಮಾರ್ಚ್ ತಿಂಗಳುಗಳಲ್ಲಿ ಸಿಂಗಪೂರ ಮತ್ತು ರಂಗೂನ್ ನಗರಗಳ ಪತನದದಿಂದ ಯುದ್ಧ ಪರಿಸ್ಥಿತಿ ವಿಷಮ ಘಟ್ಟವನ್ನು ತಲುಪಿತು. ಹೆಚ್ಚು ವೇಳೆಯನ್ನು ಪಡೆಯಲು ಹಾಗೂ ಪ್ರಪಂಚದ ಇತರ ರಾಷ್ಟ್ರಗಳ ಮನವೊಲಿಸುವ ಉದ್ದೇಶದಿಂದ ಚರ್ಚಿಲ್ಲರು ಮಾರ್ಚಿಯಲ್ಲಿ ಸರ್ ಸ್ಟಾಪರ್ಡ್ ಕ್ರಿಪ್ಸ್‌ರವರ ನಿಯೋಗವನ್ನು ಭಾರತಕ್ಕೆ ಕಳಿಸಿಕೊಟ್ಟರು. ಕ್ರಿಪ್ಸ್ ಭಾರತದ ನಾಯಕರೊಡನೆ ಮಾತುಕತೆ ನಡೆಸಿ ಒಂದು ಯೋಜನೆಯನ್ನು ಮುಂದಿಟ್ಟರು. ಭಾರತವನ್ನು ಸಂಘರಾಜ್ಯವಾಗಲು ಅವಕಾಶ ಕಲ್ಪಿಸುವುದಾಗಿಯೂ ಪ್ರಾಂತ್ಯ ಹಾಗೂ ಸಂಸ್ಥಾನಗಳು ಸಂಘ ರಾಜ್ಯವನ್ನು ಸೇರಲು ಇಷ್ಟವಿಲ್ಲದಿದ್ದರೆ ಸ್ವತಂತ್ರವಾಗಿರಬಹುದೆಂದು ತಿಳಿಸಿ, ರಕ್ಷಣಾ ಇಲಾಖೆಯನ್ನು ಳಿದು ಇನ್ನಿತರ ಇಲಾಖೆಗಳನ್ನು ರಾಜಕೀಯ ಪಕ್ಷಗಳ ಚುನಾಯಿತ ಸದಸ್ಯರಿಗೆ ವಹಿಸಿಕೊಡುವುದಾಗಿಯೂ ತಿಳಿಸಿದರು. ತಕ್ಷಣವೇ ಯಾವ ಗಣನೀಯವಾದ ಬದಲಾವಣೆಗಳನ್ನು ಮಾಡದಿದ್ದರಿಂದಲೂ, ಭಾರತೀಯನೊಬ್ಬನನ್ನು ರಕ್ಷಣಾ ಸಚಿವರನ್ನಾಗಿ ನೇಮಿಸಲು ಒಪ್ಪದಿದ್ದುದರಿಂದಲೂ, ಶಾಸನಗಳ ಬದಲಾವಣೆಯಿಲ್ಲದೆ ಸಂಪ್ರದಾಯದಂತೆಯಾದರೂ ಅಂದಿನ ಕೇಂದ್ರ ಸರಕಾರವನ್ನು ರಾಷ್ಟ್ರೀಯ ಸರಕಾರವೆಂದು ಅಂಗೀಕರಿಸಲು ಒಪ್ಪದಿದ್ದುದರಿಂದಲೂ ಕ್ರಿಪ್ಸ್ ನಿಯೋಗವು ವಿಫಲಗೊಂಡಿತು. ಅದರ ಸೂಚನೆಗಳನ್ನು ಕಾಂಗ್ರೆಸ್ ತಿರಸ್ಕರಿಸಿತು. ಕ್ರಿಪ್ಸ್ ನಿಯೋಗದ ವೇಳೆಯಲ್ಲಿ, ಮೈಸೂರು ಕಾಂಗ್ರೆಸ್ ನಾಯಕರನೇಕರು ನವದಹಲಿಗೆ ಹೋಗಿ ಕ್ರಿಪ್ಸ್ ಜೊತೆ ಸಂಸ್ಥಾನಗಳ ಪ್ರಶ್ನೆಯನ್ನು ಚರ್ಚಿಸಲು ಯತ್ನಿಸಿದರು. ಆದರೆ ಅದು ಸಾಧ್ಯವಾಗದೆ ನಾಯಕರೆಲ್ಲ ವಿಫಲರಾಗಿ ನಿರಾಶೆಯಿಂದ ಸಂಸ್ಥಾನಕ್ಕೆ ಹಿಂದಿರುಗಿದರು.

ಕಾಂಗ್ರೆಸ್ಸಿನ ಐದನೇ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಐದನೇ ಅಧಿವೇಶನವು ಚನ್ನಪಟ್ಟಣದ ಹತ್ತಿರದ ನೆಹರೂನಗರವೆಂದು ಕರೆಯಲ್ಪಟ್ಟ ಸ್ಥಳದಲ್ಲಿ 1942ರ ಏಪ್ರಿಲ್ 12 ರಂದು ಆರಂಭವಾಯಿತು. ತಾಳಕೆರೆ ಸುಬ್ರಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಭಾಷಣ ಮಾಡುತ್ತ ಸುಬ್ರಮಣ್ಯಂರವರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಚಳುವಳಿಯು ರಾಷ್ಟ್ರ ಚಳುವಳಿಯ ಒಂದು ಭಾಗವೆಂದು ತಿಳಿಸಿದರು.

ಮಹಾರಾಜರು ಕಾಲ ಮಹಿಮೆಯನ್ನರಿತು ಕಾಲ ಸ್ಫೂರ್ತಿಗನುಗುಣವಾಗಿ ಬದಲಾಯಿಸಿಕೊಳ್ಳಬೇಕೆಂದು ಹೇಳಿದರು. ಯುದ್ಧದ ಕಾಲದಲ್ಲಿ ಕಾಂಗ್ರೆಸ್ ಸರಕಾರದೊಡನೆ ಸಹಕರಿಸಲು ತೀರ್ಮಾನಿಸಿ ಸತ್ಯಾಗ್ರಹವನ್ನಾರಂಭಿಸದೆ ಎಲ್ಲಾ ಸಮಸ್ಯೆಗಳನ್ನೂ ಶಾಸನಾನುರೂಪವಾಗಿ ಪರಿಹರಿಸಿಕೊಳ್ಳಲು ಯತ್ನಿಸಿತು. ಆದ್ದರಿಂದಲೇ 1941ರಲ್ಲಿ ಅಧ್ಯಕ್ಷರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದಿವಾನರನ್ನು ಭೇಟಿ ಮಾಡಿದ್ದರು. ಮೈಸೂರಿನ ಮಹಾರಾಜರು ಸಂದರ್ಭವನ್ನು ತಿಳಿದು ಸರಿಯಾಗಿ ವರ್ತಿಸಬೇಕೆಂದು ಅಧ್ಯಕ್ಷರು ಆಶಿಸಿದರು.

ಅಧಿವೇಶನವು ಒಂದು ನಿರ್ಣಯದ ಮೂಲಕ ನಿಷೇಧಾಜ್ಞೆಗಳನ್ನು ಟೀಕಿಸಿತು. ಕಾರ್ಮಿಕ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಮಿಕ ನಾಯಕರನ್ನೆಲ್ಲಾ ಬಿಡುಗಡೆ ಮಾಡಬೇಕೆಂದು ಕೇಳಿದರು. ಜನತೆಯ ಸಹಕಾರವನ್ನು ಪಡೆದಿರುವ ಸರಕಾರವನ್ನು ರಚಿಸಬೇಕೆಂದು ಮಹಾರಾಜರನ್ನು ಕೋರಿತು. ಇದುವರೆಗೂ ಸರಕಾರಕ್ಕೂ ಕಾಂಗ್ರೆಸ್ಸಿಗೂ ನಡೆದಿದ್ದ ಪತ್ರ ವ್ಯವಹಾರವನ್ನು ಬಹಿರಂಗಪಡಿಸಿದರು. ಕಾಂಗ್ರೆಸ್ ತನ್ನ ಪತ್ರಗಳಲ್ಲಿ, ಚುನಾವಣೆಗಳಲ್ಲಿ ಗ್ರಾಮಾಧಿಕಾರಿಗಳ ಪಾತ್ರ, ಗ್ರಾಮಗಳ ಮೇಲಿನ ಪುಂಡುಗಂದಾಯ, ಕಾಂಗ್ರೆಸ್ ಉಮೇದುವಾರರ ಅರ್ಜಿಗಳ ನಿರಾಕರಣೆ, ಆಡಳಿತದಲ್ಲಿ ಸಾರ್ವಜನಿಕರ ಪಾತ್ರ ಮುಂತಾದ ಸಮಸ್ಯೆಗಳನ್ನು ಸೂಚಿಸಿದ್ದರು. ಸರಕಾರವು ತನ್ನ ಉತ್ತರದಲ್ಲಿ ನಿಯಮಗಳಂತೆ ಗ್ರಾಮಾಧಿಕಾರಿಗಳು ಚುನಾವಣೆಗಳಲ್ಲಿ ಭಾಗವಹಿಸುವಂತಿಲ್ಲವೆಂದೂ, ಪುಂಡುಗಂದಾಯ ಹಿಂದಕ್ಕೆ ತೆಗೆದುಕೊಂಡಿದ್ದೇವೆಂದೂ, ಕಾಂಗ್ರೆಸ್ ಉಮೇದುವಾರರ ಸಮಸ್ಯೆಗಳನ್ನು ಪುನಃ ಪರಿಶೀಲಿಸುವುದಾಗಿಯೂ, ಸಾಧ್ಯವಾದ ಕಡೆಗಳಲ್ಲಿ ನಿಷೇಧಾಜ್ಞೆಗಳನ್ನು ಹಿಂದಕ್ಕೆ ಪಡೆದಿದ್ದೇವೆಂದೂ, ಶಾಸನ ಸಭೆಗಳನ್ನು ರದ್ದುಗೊಳಿಸಿ ಪುನಃ ಚುನಾವಣೆಗಳನ್ನು ನಡೆಸಲು ಸಾಧ್ಯವಿಲ್ಲವೆಂದೂ, ಖಾಸಗೀ ಸಚಿವರನ್ನು ನೇಮಿಸಿಕೊಳ್ಳುವ ಅಧಿಕಾರವು ಮಹಾರಾಜರಿಗೆ ಸೇರಿದ್ದೆಂದೂ ತಿಳಿಸಿತು.

‘ ಕ್ವಿಟ್ ಇಂಡಿಯಾ ’ ಅಥವಾ ‘ ಭಾರತ ಬಿಟ್ಟು ಹೊರಡಿ ’ ಚಳುವಳಿ

ಸ್ಟಾಫರ್ಡ್ ಕ್ರಿಪ್ಸ್ ನಿಯೋಗದ ಸಲಹೆಗಳು ಭಗ್ನವಾದ ಮೇಲೆ ಬ್ರಿಟಿಷರಿಗೆ ಭಾರತ ಸ್ವಾತಂತ್ರ್ಯದಲ್ಲಿರುವ ಅಶ್ರದ್ಧೆ ಸ್ಪಷ್ಟವಾಯಿತು. ಕಾಂಗ್ರೆ

ಸ್ಸಿನ ಸ್ನೇಹ ಸಹಕಾರಗಳಲ್ಲಿ ಬ್ರಿಟಿಷರಿಗಿದ್ದ ಅಸಡ್ಡೆ ತಿರಸ್ಕಾರವನ್ನು ನೋಡಿ, ಬ್ರಿಟಿಷ್ ನೀತಿಯಿಂದ ಕಾಂಗ್ರೆಸ್ ನಾಯಕರು ಕುಪಿತರಾದರು. ಗಾಂಧೀಜಿಯ ನಾಯಕತ್ವದಲ್ಲಿ 1942ರ ಜುಲೈ ಹದಿನಾಲ್ಕರಂದು ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು 'ಭಾರತ ಬಿಟ್ಟು ಹೊರಡಿ' ಎಂದು ಬ್ರಿಟಿಷರನ್ನು ಕೋರುವ ನಿರ್ಣಯ ಅಂಗೀಕರಿಸಿತು. ಈ ನಿರ್ಧಾರವನ್ನು ಆಗಷ್ಟ್ ಏಳು ಮತ್ತು ಎಂಟರಂದು ಮುಂಬೈನಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅನುಮೋದಿಸಿತು. 1942ರಲ್ಲಿ ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ನಡೆಸಿದ ಅಹಿಂಸೆಯ ಹೋರಾಟ ಮತ್ತು ಅಂತ್ಯ ಹೋರಾಟವೇ 'ಕ್ವಿಟ್ ಇಂಡಿಯಾ' ಅಥವಾ 'ಭಾರತವನ್ನು ಬಿಟ್ಟು ತೊಲಗಿ' ಎಂಬ ಚಳುವಳಿ. ಕಾಂಗ್ರೆಸ್ಸಿನ ಈ 'ಕ್ವಿಟ್ ಇಂಡಿಯಾ' ನಿರ್ಣಯದೊಂದಿಗೆ ದೇಶದಾದ್ಯಂತ 'ಮಾಡಿರಿ ಇಲ್ಲವೇ ಮಡಿಯಿರಿ'—'ಡು ಆರ್ ಡೈ'—ಘೋಷಣೆ ಮೊಳಗಿತು. ಈ ನಿರ್ಣಯವಾದ ಮರುದಿನ ಬೆಳಗಿನ ಜಾವದಲ್ಲಿಯೇ ಕಾಂಗ್ರೆಸ್ ಮುಖಂಡರನ್ನು ದೇಶದಾದ್ಯಂತ ಬಂಧಿಸಿದರು. ರಾಷ್ಟ್ರೀಯ ಕಾಂಗ್ರೆಸ್ ಈ ಘೋಷಣೆಯನ್ನು ಮಾಡಿದ ತಕ್ಷಣವೇ ಸರಕಾರವು ಮಿಂಚಿನಂತೆ ಮೇಲೆ ಬಿದ್ದು ನಿಷ್ಕಾರಣವಾದ ದಾಳಿ ನಡೆಸಿತು. ಇಡೀ ದೇಶದಲೆಲ್ಲಾ ಒಂದೇ ಸಲ ವ್ಯೂಹ ನೇದು ಜನ ನಾಯಕರನ್ನೆಲ್ಲಾ ಬಂಧಿಸಿ ವಿಚಾರಣೆಯಿಲ್ಲದೆ ಜೈಲಿಗೆ ಕಳಿಸಿದರು. ಇದರ ಫಲವಾಗಿ ಭಾರತದ ಜನರೆಲ್ಲ ರೋಷಗೊಂಡು ಪ್ರತಿಭಟಿಸಿದರು. ಹೀಗೆ ಪ್ರತಿಭಟಿಸುವಲ್ಲಿ ಸಾವಿರಾರು ಜನರು ತಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇವೆಂದು ತಿಳಿದು, ಮನೆ, ಮಠ ಮತ್ತು ಪ್ರಾಣಗಳನ್ನು ಅರ್ಪಿಸಿದರು. ಮೈಸೂರು ಸಂಸ್ಥಾನದಲ್ಲಿಯೂ ಸಾವಿರಾರು ಜನರು ಈ ಚಳುವಳಿಯಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯಕ್ಕಾಗಿ ಹೋರಾಡುವ ವಿಶಾಲ ಮನೋಭಾವದಿಂದ ಎಲ್ಲಾ ಕಷ್ಟಗಳನ್ನು ಅನುಭವಿಸಿ ತ್ಯಾಗಕ್ಕೂ ಸಿದ್ಧರಾಗಿದ್ದ, ಅವರ ಧೈರ್ಯ, ದೇಶಭಕ್ತಿ ಸ್ತುತ್ಯಾರ್ಹವಾದುದು. ಈ ಐತಿಹಾಸಿಕ ಅಧಿವೇಶನ ಮತ್ತು ನಿರ್ಧಾರಗಳಲ್ಲಿ ಭಾಗವಹಿಸಲು ಮುಂಬೈಗೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ನಾಯಕರನೇಕರು ಹೋಗಿದ್ದರು. ಮೈಸೂರಿನ ಕಾಂಗ್ರೆಸ್ ನಾಯಕರು ಮುಂಬೈ ಅಧಿವೇಶನದಿಂದ ಸಂಸ್ಥಾನಕ್ಕೆ ಹಿಂದಿರುಗಿದಾಗ ಸಂಸ್ಥಾನದ ಗಡಿಯಲ್ಲಿಯೇ ಅವರನ್ನೆಲ್ಲಾ ಬಂಧಿಸಿದರು.

ಮುಂಬೈನಲ್ಲಿ ನಡೆದ 1942 ಆಗಸ್ಟ್ ಕ್ರಾಂತಿಯ ಪ್ರಭಾವ ಇತರ ಕಡೆಗಳಿಗೆ ತಟ್ಟಿದಂತೆ ಮೈಸೂರು ಸಂಸ್ಥಾನಕ್ಕೂ ತಟ್ಟಿತು. ಇಲ್ಲಿಯೂ ಗದ್ದಲ ಚಳುವಳಿ ನಡೆಯಿತು. ಕಾರಣವಿಲ್ಲದೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬಂಧಿಸಿ, ಕಾಂಗ್ರೆಸ್ ಸಮಿತಿಗಳನ್ನು ಅಕ್ರಮವೆಂದು ಸಾರಿದರು. ರಾಷ್ಟ್ರೀಯ ಕಾಂಗ್ರೆಸ್ಸಿನ ತೀರ್ಮಾನವನ್ನು ಮೈಸೂರು ಕಾಂಗ್ರೆಸ್ ಪರಿಶೀಲಿಸುವ ಮೊದಲೇ, ಇದುವರೆಗೂ ಕಾಂಗ್ರೆಸ್ಸಿನೊಡನೆ ನಡೆದಿದ್ದ ಮಾತುಕತೆಗಳ ವಿರುದ್ಧವಾಗಿ, ಕಾಂಗ್ರೆಸ್ ಸದಸ್ಯರನ್ನೆಲ್ಲಾ ಬಂಧಿಸಿ ಸೆರೆಮನೆಗಳಿಗೆ ತಳ್ಳಿದರು. ಆದರಿಂದ ಸಂಸ್ಥಾನದಲ್ಲೆಲ್ಲಾ ಅಶಾಂತಿಯುಂಟಾಯಿತು. ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದರಿಂದ ಸಂಸ್ಥಾನದಲ್ಲೆಲ್ಲಾ ಪ್ರತಿಭಟನಾ ಸಭೆಗಳೂ, ಮೆರವಣಿಗೆಗಳೂ ನಡೆದವು. ಈ ಸಂಬಂಧದಲ್ಲಿ ದೇಶದಾದ್ಯಂತ ಸಾಕಷ್ಟು ಜನನಾಯಕರು ತಲೆತಪ್ಪಿಸಿಕೊಂಡು ವೇಷ ಮರೆಸಿಕೊಂಡು ಭೂಗತರಾದರು. ಗಾಂಧೀಜಿಯವರ ಕರೆಗೆ ಓಗೊಟ್ಟು ಸಂಸ್ಥಾನದಲ್ಲೆಲ್ಲಾ ಸಾವಿರಾರು ಜನರು ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗಿ 'ಭಾರತದಿಂದ ತೊಲಗಿ' ಎಂಬ ಕೂಗಿನೊಡನೆ ಹೊರಟರು. ಸರಕಾರವು ಕಾಂಗ್ರೆಸ್ ನಾಯಕರುಗಳನ್ನೆಲ್ಲಾ ದಸ್ತ್ರಗಿರಿ ಮಾಡಿದ್ದರಿಂದ ಜನರು ತಾವೇ ' ಮಾಡು ಅಥವಾ ಮಡಿ ' ಘೋಷಣೆಯೊಡನೆ ನಾಯಕರಿಲ್ಲದೆ ಭಾವಾವೇಶದಲ್ಲಿ ತಮಗೆ ತೋರಿದಂತೆ ಆಚರಿಸಿದರು. ರಾಷ್ಟ್ರೀಯ ನಾಯಕರ ಕರೆಯಂತೆ ಮೈಸೂರು ಸಂಸ್ಥಾನದ ರೈಲ್ವೆಯವರು ಮುಷ್ಕರ ಹೂಡಿದರು. ಕೆಲವು ಗ್ರಾಮಗಳಲ್ಲಿ ಪಟೇಲರು ಮತ್ತು ಶ್ಯಾನುಭೋಗರು ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟರು.

ಮೈಸೂರು ಸಂಸ್ಥಾನದಲ್ಲಿಯೂ ಅನೇಕ ನಾಯಕರು ಭೂಗತರಾಗಿ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದ್ದರು. ಉಳಿದ ಕಾಂಗ್ರೆಸ್‌ನವರು ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸುವುದು ರಾಷ್ಟ್ರಧ್ವಜ ಹಾರಿಸುವುದು, ಯುವಕರು ಶಾಲಾ ಕಾಲೇಜುಗಳನ್ನು ಬಿಟ್ಟು ಚಳುವಳಿಗೆ ಸೇರುವಂತೆ ಮಾಡುವುದು, ಈಚಲು ಮರ ಕಡಿಯುವುದು, ಹೆಂಡದಂಗಡಿ ಮತ್ತು ವಿದೇಶಿ ಬಟ್ಟೆಯಂಗಡಿ ಮುಂದೆ ಪಿಕೆಟಿಂಗ್ ಮಾಡುವುದು ಮುಂತಾದ ಕೆಲಸಗಳಲ್ಲಿ ಸತ್ಯಾಗ್ರಹಿಗಳು ತೊಡಗಿದರು. ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟವು. ವಿದ್ಯಾರ್ಥಿಗಳು

ತಂತಿ ಕತ್ತರಿಸುವುದು, ರೈಲು ಗಾಡಿಗಳನ್ನು ನಿಲ್ಲಿಸುವುದು, ಅಂಚೆ ಸಾಗಣೆಯಲ್ಲಿ ತೊಂದರೆಯುಂಟು ಮಾಡುವುದು ಮುಂತಾದ ಕೆಲಸಗಳಲ್ಲಿ ತೊಡಗಿದರು. ಸಾವಿರಾರು ಜನರನ್ನು ಸರಕಾರವು ಬಂಧಿಸಿ, ಜೈಲುಗಳಲ್ಲಿಯೂ ಸ್ಥಳವಿಲ್ಲದೆ ಹೋಗಲು ಬಂಧಿಸಿದ ಕಾಂಗ್ರೆಸ್ ಸದಸ್ಯರು ಹಾಗೂ ವಿದ್ಯಾರ್ಥಿಗಳನ್ನೂ 20-30 ಮೈಲಿ ದೂರ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ನಿರ್ಜನ ಪ್ರದೇಶಗಳಲ್ಲಿಯೂ, ಕಾಡುಗಳಲ್ಲಿಯೂ ಬಿಟ್ಟು ಬರುತ್ತಿದ್ದರು. ಸರಕಾರವು ದಿಗ್ಭ್ರಮೆಗೊಂಡು ನಿರ್ವೀರ್ಯವಾಯಿತು. ಈ ಚಳುವಳಿಯಲ್ಲಿ ಸುಮಾರು 25000 ಜನರನ್ನು ಬಂಧಿಸಿದರು. ಸರಕಾರವು ವಿವಿಧ ಭಾಗಗಳಲ್ಲಿ ಕೈಗೊಂಡ ಗೋಲೀಬಾರ್‌ನಲ್ಲಿ 156 ಜನ ಮಡಿದರು, 800 ಜನ ಗಾಯಗೊಂಡರು. ಬೆಂಗಳೂರು ನಗರದಲ್ಲಿ ಗಲಾಟೆ ಬಹಳ ಗಂಭೀರವಾಗಿದ್ದು, ಗುಂಪುಗಳನ್ನು ಚದುರಿಸಲು ಕಾಲ್ದಳ ಮತ್ತು ಅಶ್ವದಳಗಳನ್ನು ಉಪಯೋಗಿಸಿದರು.

ಮೈಸೂರು ಸಂಸ್ಥಾನದಲೆಲ್ಲಾ ಪ್ರಬಲವಾಗಿದ್ದ 'ಭಾರತವನ್ನು ಬಿಟ್ಟು ಹೊರಡಿ' ಚಳುವಳಿಯ ಸಂಬಂಧದಲ್ಲಿ, ದಾವಣಗೆರೆ, ಶ್ರವಣಬೆಳಗೊಳ ಹಾಗೂ ಈಸೂರುಗಳಲ್ಲಿ ಮರೆಯಲಾಗದಂತಹ ಘಟನೆಗಳು ನಡೆದವು. ಚಿತ್ರದುರ್ಗ ಜಿಲ್ಲೆ ದಾವಣಗೆರೆ ನಗರದಲ್ಲಿ ಚಳುವಳಿಯು ಉಗ್ರರೂಪ ತಾಳಿದಾಗ ಪರಿಸ್ಥಿತಿಯನ್ನು ಎದುರಿಸಲು ಸೈನಿಕರ ಸಹಾಯದಿಂದ ಪೋಲೀಸರು ಜನರ ಗುಂಪಿನ ಮೇಲೆ ಗುಂಡು ಹಾರಿಸಿದರು. ಗುಂಡು ಹಾರಿಸಿದಾಗ ಲಿಂಗಪ್ಪ, ನಾಗಪ್ಪ ಮತ್ತು ವಿರೂಪಾಕ್ಷಪ್ಪ ಎಂಬ ತರುಣರು ಮಡಿದರು ಮತ್ತು ಅನೇಕ ಜನ ಗಾಯಗೊಂಡರು. ಹೀಗೆಯೇ ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಸಂತೆಯ ದಿನ ಜನರು ಕೈಗೊಂಡಿದ್ದ ಶಾಂತಿಯುತ ಪಿಕೆಟಿಂಗ್‌ನ್ನು ಅಧಿಕಾರಿಗಳು ಸಹಿಸದೆ ಗುಂಡು ಹಾರಿಸಿದಾಗ ಅನೇಕರಿಗೆ ಗಾಯಗಳಾದವು.

ಈಸೂರು ದುರಂತ

'ಭಾರತವನ್ನು ಬಿಟ್ಟು ತೊಲಗಿ' ಎಂಬ ಚಳುವಳಿ ಮೈಸೂರಿನಲ್ಲಿ ಉಗ್ರ ರೀತಿಯಲ್ಲಿ ನಡೆದದ್ದಕ್ಕೆ ಸಾಕ್ಷಿಯಾಗಿ ಇತಿಹಾಸ ಪ್ರಸಿದ್ಧವಾಗಿರುವುದು ಈಸೂರು ಘಟನೆ. ಇಲ್ಲಿ ನಡೆದ ಘಟನೆ ಮತ್ತು ಸರಕಾರದ ದೌರ್ಜನ್ಯಗಳನ್ನೆಲ್ಲಾ

ನೋಡಿದವರು ಅದು 'ಮೈಸೂರು ಜಲಿಯನ್ ವಾಲಾಬಾಗ್' ಎಂದು ಕರೆದಿದ್ದಾರೆ. ಈಸೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿದೆ. ಇತರೆಡೆಗಳಲ್ಲಿ ನಡೆದಂತೆ ಸ್ವಾತಂತ್ರ್ಯ ಹೋರಾಟದ ಚಳುವಳಿಯು ಅಲ್ಲಿಯೂ ನಡೆದು 'ಭಾರತವನ್ನು ಬಿಟ್ಟು ತೊಲಗಿ' ಎಂಬ ಚಳುವಳಿಯು ಬಿರುಸಾಗಿ ಉಗ್ರರೂಪ ತಳೆಯಿತು. 1942ರ ಆಗಸ್ಟ್ ಒಂಬತ್ತು ಭಾರತ ಇತಿಹಾಸದಲ್ಲಿ ಮರೆಯಲಾಗದ ದಿನ. 'ಕ್ವಿಟ್ ಇಂಡಿಯಾ', 'ಚಲೇಜಾವ್', 'ಭಾರತ ಬಿಟ್ಟು ತೊಲಗಿರಿ' ಈ ಘೋಷಣೆಗಳು ರೂಪಗೊಂಡ ದಿನ ಅದು. ಗಾಂಧೀಜಿಯವರ ಬಿಚ್ಚುನುಡಿ 'ಮಾಡು ಇಲ್ಲವೆ ಮಡಿ' ಇವು ಈಸೂರಿನ ಮೇಲೆ ಪ್ರಭಾವ ಬೀರಿದವು. ಸಂಸ್ಥಾನದ ಕಾಂಗ್ರೆಸ್ ನಾಯಕರು ಗ್ರಾಮಗಳನ್ನು ಹೋರಾಟಕ್ಕೆ ತಯಾರು ಮಾಡಿ ಎಂದು ಕರೆ ನೀಡಿದರು. ಈ ಕರೆಯನ್ನು ಈಸೂರಿನ ಕಾಂಗ್ರೆಸ್ ನಾಯಕರು ತಮ್ಮ ಗ್ರಾಮದಲ್ಲಿ ಪ್ರಚಾರ ಮಾಡಿದರು. ಜನರಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಬಹಳ ಜಾಗೃತವಾಯಿತು. ಈಸೂರು ಇಡೀ ಗ್ರಾಮವೇ ಈ ಚಳುವಳಿಯಲ್ಲಿ ಭಾಗವಹಿಸಿ, ಜನರೆಲ್ಲ ಬಂಧವಿಮೋಚನೆಗಾಗಿ ತಮ್ಮ ಕೈಲಾದ ಸೇವೆ ಸಲ್ಲಿಸಲು ಪ್ರತಿಜ್ಞೆ ಸ್ವೀಕರಿಸಿದರು. ಗ್ರಾಮದ ಯುವಕರೆಲ್ಲರೂ ಗಾಂಧೀ ಟೋಪಿ ಹಾಕಿಕೊಂಡು ರಾಷ್ಟ್ರಧ್ವಜ ಹಿಡಿದು ಸಭೆಗಳನ್ನು ನಡೆಸುತ್ತಿದ್ದರು. ಪ್ರತಿದಿನ ಪ್ರಭಾತ್ ಫೇರಿಯ ನಂತರ ತಂತಿ ಕತ್ತರಿಸುವುದು, ಮೋರಿ ಸೇತುವೆ ಕೆಡಹುವುದು, ಶಾಲೆ ಮತ್ತು ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು ಇವುಗಳನ್ನು ಮಾಡಲಾರಂಭಿಸಿದರು.

ಉತ್ಸಾಹದಿಂದ ಗ್ರಾಮಸ್ಥರೆಲ್ಲರೂ ಸೇರಿ ಒಂದು ಸ್ವರಾಜ್ಯ ಸರಕಾರ ಸ್ಥಾಪಿಸಿ, 'ಬೇಜವಾಬ್ದಾರಿ ಸರ್ಕಾರದವರು ಯಾರು ಬರಕೂಡದು. ಬಂದರೆ ....." ಎಂಬ ಒಂದು ಬೋರ್ಡ್ ಬರೆದು ಊರಿನ ಹೆಬ್ಬಾಗಿಲಿನಲ್ಲಿ ತೂಗು ಹಾಕಿದರು. ಅದೇ ದಿನ ಪಟೇಲ್ ಮತ್ತು ಶಾನುಭೋಗರ ದಫ್ತರ ಕಿತ್ತುಕೊಂಡು ಅವರಿಬ್ಬರನ್ನೂ ಸಂಜೆಯವರೆಗೆ ಒಂಟಿ ಕಾಲ ಮೇಲೆ ನಿಲ್ಲುವ ಶಿಕ್ಷೆ ವಿಧಿಸಿದರು. ನಮ್ರತೆಯಿಂದ ನಡೆದುಕೊಳ್ಳುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟ ನಂತರವೇ ಅವರನ್ನು ಸಾಯಂಕಾಲ ಬಿಡುಗಡೆ ಮಾಡಿದರು. ಸುದ್ದಿ ತಿಳಿದ ತಕ್ಷಣ ಅಧಿಕಾರಿಗಳು ಪೋಲೀಸ್ ಸಿಬ್ಬಂದಿಯೊಡನೆ ಗ್ರಾಮಕ್ಕೆ ಬಂದು ಹೆಬ್ಬಾಗಿಲಲ್ಲಿ ನೇತು ಹಾಕಿದ್ದ ಬೋರ್ಡನ್ನು ಕಿತ್ತು ಹಾಕಿ, ವೀರಭದ್ರ ದೇವಸ್ಥಾನದಲ್ಲಿ

ಏರಿಸಿದ್ದ ತ್ರಿವರ್ಣ ಧ್ವಜವನ್ನು ಕೆಡವಿದರು. ಅದನ್ನು ಸ್ವಯಂಸೇವಕರು ವಿರೋಧಿಸಲು ಅವರಿಗೆ ಲಾಠಿಗಳಿಂದ ಹೊಡೆದರು. ಗ್ರಾಮದವರಿಗೆಲ್ಲಾ ಸುದ್ದಿ ತಿಳಿದು, ಹಿರಿಯವರೆಲ್ಲಾ ಸ್ವಾತಂತ್ರ್ಯ ಪ್ರೇಮದಿಂದ ಜಯಕಾರ ಮಾಡುತ್ತಾ ಬರುವುದನ್ನು ನೋಡಿ ಅಧಿಕಾರಿಗಳು ಕುಪಿತರಾಗಿ ಗುಂಡು ಹಾರಿಸಿದರು. ಜನರಿಗೂ ಅಧಿಕಾರಿಳಿಗೂ ಸಮರವೇ ನಡೆಯಿತು. ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ತಹಸಿಲ್ದಾರರಿಬ್ಬರೂ ಗಲಭೆಯಲ್ಲಿ ಮಡಿದರು. ಅನೇಕರು ಗಾಯಗೊಂಡರು. ಮಾರನೇ ದಿನ ಜಿಲ್ಲಾಧಿಕಾರಿಗಳು ಹೆಚ್ಚಿನ ಪೊಲೀಸ್ ಸಿಬ್ಬಂದಿ ಹಾಗೂ ಸೈನ್ಯದೊಡನೆ ಈಸೂರು ಗ್ರಾಮಕ್ಕೆ ಬಂದರು. ಗ್ರಾಮದ ಜನರೆಲ್ಲ ಭಯಭೀತರಾಗಿ ಸಿಕ್ಕಿದ ಕಡೆ ಓಡಿ ಹೋದರು. ಕೋಪಗೊಂಡಿದ್ದ ಅಧಿಕಾರಿಗಳು ಸಿಕ್ಕಿದ ಜನರಿಗೆಲ್ಲಾ ಹಿಂಸೆ ಕೊಟ್ಟು, ಸಿಕ್ಕಿದ್ದನ್ನು ದೋಚಿ, ಸಿಕ್ಕಿದವರನ್ನು ದಸ್ತಗಿರಿಮಾಡಿ, ಈಸೂರಿನ ಜನರಿಗೆ ಯಾರು ಆಶ್ರಯ ಕೊಡದಂತೆ ಮಾಡಿ, ಆಶ್ರಯ ಕೊಟ್ಟವರಿಗೆ ಹಿಂಸೆ ಕೊಟ್ಟರು. ಗ್ರಾಮದ 41 ಜನರ ಮೇಲೆ ಕೋರ್ಟಿನಲ್ಲಿ ಕೇಸು ಮಾಡಿ ಮೊಕದ್ದಮೆ ಹೂಡಿದರು. ವಿಶೇಷ ನ್ಯಾಯಾಧೀಶರು ತನಿಖೆ ನಡೆಸಿ ಹನ್ನೊಂದು ಜನರಿಗೆ ಮರಣ ದಂಡನೆ ವಿಧಿಸಿ. ಹದಿಮೂರು ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ 1942ರ ಡಿಸೆಂಬರ್ ಹನ್ನೆರಡರಂದು ತೀರ್ಪಿತ್ತರು. ಹೈಕೋರ್ಟಿಗೆ ಅಪೀಲು ಮಾಡಿದ ನಂತರವೂ ಗುರಪ್ಪ, ಮಲ್ಲಪ್ಪ. ಸೂರ್ಯನಾರಾಯಣಾಚಾರ್, ಹಾಲಪ್ಪ ಮತ್ತು ಶಂಕರಪ್ಪ, ಇವರಿಗೆ ಮರಣದಂಡನೆ ಖಾಯಂ ಆಗಿ ಅವರನ್ನು 1943ರ ಮಾರ್ಚಿ 8, 9 ಮತ್ತು 10ರಂದು ಬೆಂಗಳೂರು ನಗರದ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಆ ಮೂರು ದಿನಗಳೂ ಇಡೀ ಸಂಸ್ಥಾನದ ಉಳಿದ ಸತ್ಯಾಗ್ರಹಿಗಳೆಲ್ಲರೂ ಉಪವಾಸ ಪ್ರಾರ್ಥನೆಗಳನ್ನು ಮಾಡಿ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು. ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಹಾಲಮ್ಮ, ಪಾರ್ವತಮ್ಮ, ರುದ್ರಮ್ಮ ರೆಂಬ ಮೂವರು ಮಹಿಳೆಯರನ್ನೂ ಹಾಗೂ ಲಿಂಗಪ್ಪ, ದುರ್ಗೋಜಿ, ಗುರುಶಾಂತಪ್ಪ ಮುಂತಾದ ಎಂಟು ಜನ ವಯಸ್ಕರನ್ನು 1946ರ ಅಕ್ಟೋಬರ್ 21 ರಂದು ಬಿಡುಗಡೆ ಮಾಡಿದರು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಇತಿಹಾಸದಲ್ಲಿ ಈಸೂರಿನಲ್ಲಿ ನಡೆದ ಹೋರಾಟವು ಒಂದು ಉಜ್ವಲ ಅಧ್ಯಾಯವಾಗಿದೆ.

ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ವಿಜಯ

'ಭಾರತವನ್ನು ಬಿಟ್ಟು ಹೊರಡಿ' ಎಂಬ ಚಳುವಳಿಯ ನಂತರ ಪರಿಸ್ಥಿತಿ ಸ್ಥಗಿತಗೊಂಡಿತು. ಹೆಚ್ಚು ಜನ ಕಾಂಗ್ರೆಸ್ ನಾಯಕರು ಜೈಲಿನಲ್ಲಿದ್ದು 1943ರ ಕೊನೆಯ ಹೊತ್ತಿಗೆ ಯೂರೋಪಿನ ಯುದ್ಧದ ಪರಿಸ್ಥಿತಿಯೂ ಕೂಡ ಮಿತ್ರ ರಾಷ್ಟ್ರಗಳ ಗೆಲುವಿನ ಹಾದಿಯ ಕಡೆ ತಿರುಗಿತು. ನ್ಯಾಯವಿಧಾಯಕ ಸಭೆಯ ಕೆಲವು ಸದಸ್ಯರು ಸರಕಾರದೊಡನೆ ಶಾಂತಿಯ ಮಾತು ಕಥೆಗಳನ್ನು ಆರಂಭಿಸಿದರು. ಆರಂಭದಲ್ಲಿ ಸರಕಾರವೂ ಕೂಡ ಉತ್ಸಾಹದಿಂದ ಕೂಡಿದ್ದರೂ, ಒಪ್ಪಂದದ ಮಾತುಕತೆಗಳು ಫಲಪ್ರದವಾಗಲಿಲ್ಲ.

ಜೈಲಿನಲ್ಲಿದ್ದ ಕಾಂಗ್ರೆಸ್ ನಾಯಕರುಗಳನ್ನೆಲ್ಲಾ ಮೈಸೂರು ಸರಕಾರವು 1943 ಮತ್ತು 1944ರಲ್ಲಿ ಬಿಡುಗಡೆಮಾಡಿತು. ಈ ಮಧ್ಯೆ 1944ರಲ್ಲಿ ಪೌರಸಭೆಗಳ ಚುನಾವಣೆಗಳು ನಡೆದವು. ಅನೇಕ ಕಡೆ ಕಾಂಗ್ರೆಸ್ ತನ್ನ ಧ್ಯೇಯಗಳನ್ನು ಜನರ ಮುಂದಿಟ್ಟು ಚುನಾವಣೆಗಳಲ್ಲಿ ಭಾಗವಹಿಸಿತು. ಮುಖ್ಯವಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿಯೂ, ಅರಸೀಕೆರೆ, ಅಜ್ಜಂಪುರ, ತೀರ್ಥಹಳ್ಳಿ ಮುಂತಾದ ಪಟ್ಟಣಗಳಲ್ಲಿಯೂ ಕಾಂಗ್ರೆಸ್ಸಿಗೆ ಹೆಚ್ಚು ಸ್ಥಾನಗಳು ದೊರೆತವು. 1945ರ ಆರಂಭದಲ್ಲಿ ನ್ಯಾಯ ವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳಿಗೂ ಚುನಾವಣೆಗಳು ನಡೆದವು. ಕಾಂಗ್ರೆಸ್ಸಿನ ಪ್ರಭಾವವನ್ನೂ ಜನತೆಗೆ ಕಾಂಗ್ರೆಸ್ ನಲ್ಲಿರುವ ವಿಶ್ವಾಸವನ್ನೂ ತೋರಿಸಲು ಚುನಾವಣೆಗಳಲ್ಲಿ ಕಾಂಗ್ರೆಸ್ ಭಾಗವಹಿಸಿತು. ಎಂದಿನಂತೆ ಕಾಂಗ್ರೆಸ್ಸಿನ ಪ್ರಚಾರ ಕಾರ್ಯಗಳಿಗೂ, ಕಾಂಗ್ರೆಸ್ಸಿನ ಉಮೇದುವಾರರಿಗೂ ಸರಕಾರವೂ, ಅಧಿಕಾರಿಗಳೂ ಅನೇಕ ಅಡಚಣೆಗಳನ್ನೊಡ್ಡಿದರು. ನ್ಯಾಯವಿಧಾಯಕ ಸಭೆಗೆ 26 ಉಮೇದುವಾರರು ಸ್ಪರ್ಧಿಸಿ, 18 ಜನ ಜಯಗಳಿಸಿದರು. ಹಾಗೆಯೇ ಪ್ರಜಾಪ್ರತಿನಿಧಿಸಭೆಗೆ ಒಟ್ಟು 202 ಉಮೇದುವಾರರು ಸ್ಪರ್ಧಿಸಿ, ಅವರಲ್ಲಿ 125 ಜನ ಜಯಗಳಿಸಿದರು. ನಂತರ ನಡೆದ ಉಪಚುನಾವಣೆಗಳಲ್ಲಿಯೂ ಕೂಡ, ನ್ಯಾಯವಿಧಾಯಕಸಭೆಯಲ್ಲಿ ಇಬ್ಬರೂ, ಪ್ರಜಾಪ್ರತಿನಿಧಿಸಭೆಯಲ್ಲಿ ಐವರೂ ಜಯಗಳಿಸಿ, ಕಾಂಗ್ರೆಸ್ಸಿನ ಸಂಖ್ಯೆ ಕ್ರಮವಾಗಿ 20ಕ್ಕೂ, 130ಕ್ಕೂ ಏರಿತು. ಹೀಗೆ ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿಸಭೆಗಳೆರಡರಲ್ಲೂ ಕಾಂಗ್ರೆಸ್ ಬಹು ಮತ ಪಡೆದು ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿತು. ಎರಡು ಸಭೆಗಳ ಕಾಂಗ್ರೆಸ್ ಸದಸ್ಯರೂ

ಒಟ್ಟಿಗೆ ಸಭೆ ಸೇರಿ ಮಾರ್ಚ್ ಹದಿನೆಂಟರಂದು, ಪ್ರಜಾಪ್ರತಿನಿಧಿಸಭೆಯಲ್ಲಿನ ಕಾಂಗ್ರೆಸ್ ಪಕ್ಷದ ನಾಯಕರನ್ನಾಗಿ ಕೆಂಗಲ್ ಹನುಮಂತಯ್ಯನವರನ್ನೂ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಕೆ. ಸಿ. ರೆಡ್ಡಿಯವರನ್ನೂ ಚುನಾಯಿಸಿದರು.

ಕಾಂಗ್ರೆಸ್ಸಿನ ವಿಶೇಷ ಅಧಿವೇಶನ

1942ರ ನಂತರ ಅಂದರೆ ಮೂರು ವರ್ಷಗಳ ಕಾಲ ಮೈಸೂರು ಕಾಂಗ್ರೆಸ್ಸಿನ ಸಾಮಾನ್ಯ ಅಧಿವೇಶನವು ಸೇರಿರಲಿಲ್ಲ. ಯೂರೋಪಿನಲ್ಲಿ ಎರಡನೇ ಯುದ್ಧವು ಮುಗಿಯುತ್ತಾ ಬಂದು ಪರಿಸ್ಥಿತಿ ಪ್ರಪಂಚದಲ್ಲೆಲ್ಲಾ ಶಾಂತ ಸ್ವಭಾವ ಪಡೆಯುವುದರಲ್ಲಿತ್ತು. ಈ ವೇಳೆಯಲ್ಲಿಯೇ ಕಾಂಗ್ರೆಸ್ ಕೆಲಸಗಾರರೆಲ್ಲರೂ ಕೂಡ ಒಂದು ಕಡೆ ಸೇರಿ ಬದಲಾದ ಪರಿಸ್ಥಿತಿಯಲ್ಲಿ ಸಮಸ್ಯೆಗಳನ್ನು ಪರಿಗಣಿಸಲು ಯೋಚಿಸಿದರು. ಅದಕ್ಕಾಗಿ ಒಂದು ವಿಶೇಷ ಅಧಿವೇಶನವನ್ನು ಸೇರಿಸಲು ತೀರ್ಮಾನಿಸಿ, ಸಿದ್ಧವನಹಳ್ಳಿ ನಿಜಲಿಂಗಪ್ಪನವರನ್ನು ಅಧ್ಯಕ್ಷರನ್ನಾಗಿ ಆರಿಸಿದರು.

ಮೈಸೂರು ಕಾಂಗ್ರೆಸ್ಸಿನ ಪ್ರಪ್ರಥಮ ವಿಶೇಷ ಅಧಿವೇಶನವನ್ನು ಮೈಸೂರು ನಗರದಲ್ಲಿ ಮೇ ತಿಂಗಳಲ್ಲಿ ನಡೆಸಲು ತೀರ್ಮಾನಿಸಿದರು. ನಗರ ಕಾಂಗ್ರೆಸ್ ಕೆಲಸಗಾರರು ಎಲ್ಲಾ ಏರ್ಪಾಡುಗಳನ್ನು ಮಾಡಲು ಆರಂಭಿಸಿದರು. ರಾಜಧಾನಿಯ ಮುಖ್ಯ ರಸ್ತೆಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಗೆ ಸಿದ್ಧತೆ ಮಾಡಿಕೊಂಡರು. ಈ ಮಧ್ಯೆ ಅಧ್ಯಕ್ಷರ ಮೆರವಣಿಗೆ ನಡೆಯಲು ಏರ್ಪಡಿಸಿದ್ದ ಹಿಂದಿನ ದಿನ ಸರಕಾರವು ಒಂದು ಆಜ್ಞೆ ಹೊರಡಿಸಿ, ಮೆರವಣಿಗೆಗಳನ್ನಾಗಲೀ, ಸಭೆಗಳನ್ನಾಗಲೀ ನಡೆಸಬಾರದೆಂದು ತೀರ್ಮಾನಿಸಿದರು. ಸರಕಾರದ ಪ್ರತಿಬಂಧಕಾಜ್ಞೆಯನ್ನು ಪ್ರತಿಭಟಿಸಲು ಹೆಚ್ಚು ಜನ ಕಾಂಗ್ರೆಸ್ ಸದಸ್ಯರು ಇಚ್ಛಿಸಿದರೂ ಕೂಡ, ಕಾಂಗ್ರೆಸ್ ನಾಯಕರು ಸಭೆ ಸೇರಬೇಕಾಗಿದ್ದು ಅವಶ್ಯಕವೆಂದರಿತು ಪ್ರತಿಭಟಿಸುವ ಬದಲು ಬೇರೆ ಕಡೆ ಅಧಿವೇಶನ ನಡೆಸಲು ತೀರ್ಮಾನಿಸಿದರು. ನಂತರ ಈ ವಿಶೇಷ ಅಧಿವೇಶನವನ್ನು ತುಮಕೂರಿನಲ್ಲಿ ಜೂನ್ 16 ಮತ್ತು 17ರಲ್ಲಿ ನಡೆಸಲು ತೀರ್ಮಾನವಾಯಿತು.

ಜೂನ್‌ನಲ್ಲಿ ಮೈಸೂರು ಕಾಂಗ್ರೆಸ್ಸಿನ ವಿಶೇಷ ಅಧಿವೇಶನವು ತುಮಕೂರಿನಲ್ಲಿ ನಡೆಯಿತು. ಬಹಿರಂಗ ಅಧಿವೇಶನವು ಪುರಭವನದ ಹತ್ತಿರದ ಒಂದು ಮೈದಾನದಲ್ಲಿ ನಡೆಯಿತು. ಅಧಿವೇಶನದ ಹೆಬ್ಬಾಗಿಲಿಗೆ 'ಮಹದೇವ ದ್ವಾರ' ಎಂದು ಹೆಸರಿಟ್ಟರು. ಸಂಸ್ಥಾನದ ಪ್ರಬಲ ರಾಜಕೀಯ ಸಂಸ್ಥೆಯಾದ ಮೈಸೂರು ಕಾಂಗ್ರೆಸ್ ಗೌರವದ ಒಪ್ಪಂದಕ್ಕೆ ಸಿದ್ಧವಾಗಿದ್ದು ತನ್ನ ಸೇವಾ ಸಿದ್ಧತೆಯನ್ನು ತಿಳಿಸಿದರೂ, ಸರಕಾರ ಅದಕ್ಕೆ ಸಿದ್ಧವಾಗಿಲ್ಲವೆಂದು ಸ್ವಾಗತ ಸಮಿತಿಯ ಅಧ್ಯಕ್ಷ ಮಾಲಿ ಮರಿಯಪ್ಪನವರು ತಮ್ಮ ಸ್ವಾಗತ ಭಾಷಣದಲ್ಲಿ ತಿಳಿಸಿದರು. ಮುಂದುವರಿದು "ಮೈಸೂರು ಕಾಂಗ್ರೆಸ್ಸಿನ ರಾಜಕೀಯ ಗುರಿ ಕ್ಷಿಪ್ರದಲ್ಲಿಯೇ ಸಫಲವಾಗುತ್ತದೆಂಬ ಶುಭ ಸೂಚನೆಗಳಿಗೂ ಕಡಿಮೆಯಿಲ್ಲ. ನಮ್ಮ ಸಮಾಲೋಚನೆ ತೀರ್ಮಾನಗಳು ಅನುಷ್ಠಾನ ನಿಧಾನದಿಂದಾಗ್ಯೂ ಫಲದಲ್ಲಿ ನಿಸ್ಸಂದೇಹವಾದಂಥವುಗಳಾದರೆ, ನಾವು ಕೃತಾರ್ಥರಾದೆವೆಂದು ಪರಿಗಣಿಸಬಹುದು" ಎಂದು ಹೇಳಿದರು.

ಸರಕಾರದ ನೀತಿಯಿಂದ ಉದ್ಭವವಾಗಿದ್ದ ಕಠಿಣ ಪರಿಸ್ಥಿತಿಯಲ್ಲಿಯೂ ಅಶಾಂತಿಗೆ ಅವಕಾಶ ಕೊಡಬಾರದೆಂಬ ವಿಶಾಲ ಮನೋಭಾವನೆಯಿಂದ ಮೈಸೂರು ಕಾಂಗ್ರೆಸ್ 'ಸಹಕಾರದ ಹಾದಿ ತುಳಿದು ತನ್ನ ಸೇವಾ ಸಿದ್ಧತೆಯನ್ನು ತಿಳಿಸಿತು'. ಆದರೆ ಸರಕಾರವು ಮಾತ್ರ ಕಣ್ಣುಮುಚ್ಚಾಲೆಯಾಟವನ್ನೇ ಆಡುತ್ತಾ, ಕಾಂಗ್ರೆಸ್ ಅಧ್ಯಕ್ಷರು ದಿವಾನರನ್ನು 1944 ಡಿಸೆಂಬರ್ ಆರಂಭದಲ್ಲಿ ಭೇಟಿಮಾಡಿದಾಗ, 'ಎಲ್ಲಾ ಸುಗಮವಾಗಿ, ಸೌಹಾರ್ದವಾಗಿ ಪರಿಣಮಿಸೀತೆಂದು ನಿರೀಕ್ಷಿಸಿದ್ದು ವ್ಯರ್ಥವಾಯಿತು' ಎಂದು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಸರಕಾರದ ನೀತಿಯನ್ನು ಟೀಕಿಸುತ್ತಾ ತಿಳಿಸಿದರು. ಮುಂದುವರಿದು ಮೈಸೂರು ಸರಕಾರದ ನೀತಿಯನ್ನು ಹೀಗೆ ವಿವರಿಸಿದರು. "ಸರಕಾರವನ್ನು ಪರಿವರ್ತಿಸಿ ಪ್ರಜಾಸೇವೆಗೆ ನಿಶ್ಚಿತ ಸಾಧನವಾಗಿ ಮಾಡುವ ಪ್ರಯತ್ನದಲ್ಲಿ ಕಾಂಗ್ರೆಸ್ ಮುಂದುವರಿಯಬೇಕು. 'ಪೇಚಿನಲ್ಲಿ ಸಿಕ್ಕಾಗ ಸ್ನೇಹ; ಹೊಳೆದಾಟಿದ ಮೇಲೆ ಬೇರೆತರ'—ಹೀಗೆ ಸರಕಾರ ನಡೆದುಕೊಳ್ಳುತ್ತಿದೆ. ಅನಿವಾರ್ಯವಾದಾಗ ಸಂಧಾನ ಮಾಡುವುದು, ಕೊಂಚ ಮೋಡ ಚದುರಿದರೆ ಮುಷ್ಟಿ ತೋರುವುದು, ಹಿಂದಿನ ಸಂಧಾನ ಸುಳ್ಳು ಎನ್ನುವುದು, ಇದು ಸರಕಾರದ ಪದ್ಧತಿ" ಎಂದು ಹೇಳಿದರು.

ಪ್ರಜೆಗಳ ರಾಜಕೀಯ ಆಕಾಂಕ್ಷೆಯಲ್ಲಿ ಸರಕಾರಕ್ಕೆ ಸಹಾನುಭೂತಿಯಿಲ್ಲ. ಬದಲು ಸರಕಾರ ಪ್ರಜೆಗಳ ಎಲ್ಲಾ ಚಟುವಟಿಕೆಗಳನ್ನು ಅನುಮಾನದಿಂದಲೇ ನೋಡುತ್ತಿದೆ. ಕಾಂಗ್ರೆಸ್ಸಿನ ಧ್ಯೇಯ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರೀ ಸರಕಾರ. ಆದರೂ ಸರಕಾರ ಕಾಂಗ್ರೆಸ್ಸನ್ನು ತುಳಿದು ಜಗಳಕ್ಕೆ ಕರೆಯಿತು. ಆದರೆ ಸರಕಾರದ ವಿರೋಧವೇ ಕಾಂಗ್ರೆಸ್ ಸಂಸ್ಥೆಗೆ ಪುಷ್ಟಿಕೊಟ್ಟಿದೆಯೆಂದು ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ಚಳುವಳಿಯ ಫಲವಾಗಿ ಸುಧಾರಣೆಗಳನ್ನು ಕೊಡ ಬೇಕಾಯಿತು. ಆದರೆ ಅದರಿಂದ ಯಾರಿಗೂ ತೃಪ್ತಿಯುಂಟಾಗಲಿಲ್ಲ. ಸುಧಾ ರಣೆ ಬಂದೂ ಬಾರದಂತೆ ಆಗಿದೆ. ಜಾಗ್ರತೆ ಶಾಸನವನ್ನು ವಿಸ್ತರಿಸಿ ಪ್ರಜಾ ಮೋಹಕರವಾಗಿ ಮಾಡದಿದ್ದರೆ ಜನ ಸಹಿಸಲಾರರೆಂದು ಅಧ್ಯಕ್ಷರು ಹೇಳಿದರು. ಜಾಗ್ರತೆ ಜವಾಬ್ದಾರೀ ಸರಕಾರ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಸಮಿತಿಗಳ ಮೇಲಿನ ನಿಷೇಧಾಜ್ಞೆಯನ್ನು ತೆಗೆಯಬೇಕೆಂದೂ ಒಂದು ನಿರ್ಣಯದಲ್ಲಿ ಕಾಂಗ್ರೆಸ್ ಕೋರಿತು. ಮತ್ತೊಂದು ನಿರ್ಣಯದಲ್ಲಿ 1942ರ ಆಗಸ್ಟ್ ಕ್ರಾಂತಿಯಲ್ಲಿ ಸಂಸ್ಥಾನದ ಜನರ ಪಾತ್ರವನ್ನು ಅಭಿನಂದಿಸಿ, ಶ್ರವಣಬೆಳಗೊಳ ಗಲಭೆ ಸಂದರ್ಭದಲ್ಲಿ ಸೆರೆ ಹಿಡಿಯಲ್ಪಟ್ಟ ಕಾಂಗ್ರೆಸ್ ಕೆಲಸಗಾರರನ್ನೆಲ್ಲಾ ಬಿಡುಗಡೆ ಮಾಡಲು ಕೋರಿತು.

ಮಹಾರಾಜರಿಗೆ ಪ್ರಾರ್ಥನಾ ಪತ್ರಿಕೆ ಸಲ್ಲಿಕೆ

1945ರ ಜುಲೈನಲ್ಲಿ ಇಂಗ್ಲೆಂಡಿನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಲೇಬರ್ ಪಕ್ಷವು ಬಹು ಹೆಚ್ಚಿನ ಬಹುಮತ ಗಳಿಸಿ ಕ್ಲಿಮೆಂಟ್ ಅಟ್ಲೀಯವರ ನಾಯಕತ್ವದಲ್ಲಿ ಹೊಸ ಸರಕಾರ ರಚಿಸುದದನ್ನು ಕಾಂಗ್ರೆಸ್‌ನವರು ಸ್ವಾಗತಿ ಸಿದರು. ಬ್ರಿಟಿಷ್ ಪ್ರಧಾನಿಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಎಸ್. ನಿಜ ಲಿಂಗಪ್ಪನವರು, ಒಂದು ಕೇಬಲ್ ಕಳಿಸಿ ಸಂಸ್ಥಾನಗಳಲ್ಲಿ ಜವಾಬ್ದಾರೀ ಸರಕಾರ ಸ್ಥಾಪಿಸಲು ರಾಜರುಗಳಿಗೆ ಸೂಚನೆ ಕೊಡಬೇಕೆಂದು ಕೋರಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕಾಂಗ್ರೆಸ್ಸಿನೊಳಕ್ಕೆ ರೈತರನ್ನು ತರುವ ಉದ್ದೇಶದಿಂದ ಸಂಸ್ಥಾನದಾದ್ಯಂತ ರೈತರ ಸಮ್ಮೇಳನಗಳನ್ನು ನಡೆಸಲು ತೀರ್ಮಾನಿಸಿತು.

ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು 1945ರ ನವೆಂಬರ್ ನಲ್ಲಿ ಪಾಂಡವಪುರದಲ್ಲಿ ಸಭೆ ಸೇರಿತು. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದು

ಮೈಸೂರಿನ ಸಂಸ್ಥಾನದ ರಾಜಕೀಯ ಸಿಂಹಾವಲೋಕನ ಮಾಡಿ ಜವಾಬ್ದಾರೀ ಸರಕಾರ ಸ್ಥಾಪನೆಯೊಂದೇ ಮಾರ್ಗವೆಂದು ಸಾರಿದರು. 1946ರ ಜೂನ್ 6 ರಂದು ಪ್ರಜಾಪ್ರತಿನಿಧಿ ಸಭೆಯ 202 ಜನ ಸದಸ್ಯರು ಮಹಾರಾಜರಿಗೆ ಒಂದು ಪ್ರಾರ್ಥನಾ ಪತ್ರವನ್ನು ಬರೆದು ಜವಾಬ್ದಾರೀ ಸರಕಾರ ಸ್ಥಾಪಿಸ ಬೇಕೆಂದು ಕೇಳಿಕೊಂಡರು. ಈ ಪ್ರಾರ್ಥನಾ ಪತ್ರವನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಕೆಂಗಲ್ ಹನುಮಂತಯ್ಯನವರು ಸಲ್ಲಿಸಿ ತಕ್ಷಣವೇ ಸಂಸ್ಥಾನದಲ್ಲಿ ಜವಾಬ್ದಾರೀ ಸರಕಾರ ಸ್ಥಾಪಿಸಬೇಕೆಂದೂ, ಭಾರತದ ರಾಜ್ಯಾಂಗ ಸಭೆಗೆ ಸಂಸ್ಥಾನದ ಪ್ರತಿನಿಧಿಗಳನ್ನು ಚುನಾವಣೆ ಮಾಡಬೇಕೆಂದೂ ಕೋರಿದರು. ಪ್ರಜಾಪ್ರತಿನಿಧಿ ಸಭೆಯ 311 ಜನ ಸದಸ್ಯರಲ್ಲಿ 202 ಜನ ಸದಸ್ಯರು ಪ್ರಾರ್ಥನಾ ಪತ್ರಕ್ಕೆ ಸಹಿ ಹಾಕಿದರು.

ನೂತನ ದಿವಾನರ ನೇಮಕ

ಜುಲೈ ಹದಿನೈದರಂದು ಅರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ಮೈಸೂರು ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟ ಸರಕಾರಿ ಆಜ್ಞೆ ಹೊರ ಡಿಸಲಾಯಿತು. ತಕ್ಷಣವೇ ಕಾಂಗ್ರೆಸ್ ವಲಯಗಳು ತಮ್ಮ ವಿರೋಧವನ್ನು ವ್ಯಕ್ತಪಡಿಸಿದವು. ಕೆ. ಹನುಮಂತಯ್ಯ, ಭೂಪಾಳಂ ಚಂದ್ರಶೇಖರಯ್ಯ ನವರು ಅರ್ಕಾಟ್ ರಾಮಸ್ವಾಮಿ ಮೊದಲಿಯಾರರ ನೇಮಕವನ್ನು ಟೀಕಿಸಿ ಒಂದು ಹೇಳಿಕೆ ಕೊಟ್ಟರು. ಅದರಲ್ಲಿ ಕಾಂಗ್ರೆಸ್ ಸಲ್ಲಿಸಿದ ಪ್ರಾರ್ಥನಾ ಪತ್ರವನ್ನು ಸೂಚಿಸಿ, ಅದು ಮೈಸೂರು ಸಂಸ್ಥಾನದ ಸಾರ್ವಜನಿಕಾಭಿಪ್ರಾಯ ವನ್ನು ವ್ಯಕ್ತಪಡಿಸುತ್ತದೆಂದು ತಿಳಿಸಿದರು. ತಮ್ಮ ರಾಜಕೀಯ ಆಕಾಂಕ್ಷೆ ಗಳು ತೃಪ್ತಿಗೊಳ್ಳುವ ಕಾಲ ಬಂದಿದೆಯೆಂದು ಯಾವಾಗ ಜನತೆ ತಿಳಿದಿದ್ದರೋ ಆ ವೇಳೆಯಲ್ಲಿಯೇ ಅದಕ್ಕೆ ಬದಲಾಗಿ ಅದರ ವಿರುದ್ಧವಾದ ಅರ್ಕಾಟರ ನೇಮಕವು ಸಾರ್ವಜನಿಕಾಭಿಪ್ರಾಯ ಕಡೆಗಣಿಸುವ ಪ್ರಯತ್ನವಾಗಿದೆಯೆಂದು ತಿಳಿಸಿದರು. ಸಾರ್ವಜನಿಕಾಭಿಪ್ರಾಯ ಕಡೆಗಣಿಸುವ ಸರಕಾರದ ಪ್ರಯತ್ನ ಗಳೆಲ್ಲ ವಿಫಲವಾಗುತ್ತವೆಂದೂ, ಜನತೆಯ ಅಭಿಪ್ರಾಯಗಳೇ ಪ್ರಬಲವಾಗುತ್ತ ವೆಂಬುದನ್ನು ಮಹಾರಾಜರ ಸಲಹೆಗಾರರು ಅರಿಯಬೇಕೆಂದೂ ಹೇಳಿದರು. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರೂ ಒಂದು ಹೇಳಿಕೆಯನ್ನು ನೀಡಿ ಅರ್ಕಾಟರ ನೇಮಕವನ್ನು ಖಂಡಿಸಿದರು. ಬೆಂಗಳೂರು ನಗರದ

ವಿದ್ಯಾರ್ಥಿಗಳೆಲ್ಲ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಸಭೆ ಸೇರಿ ಆರ್ಕಾಟರ ನೇಮಕವನ್ನು ವಿರೋಧಿಸಿದರು. ಕಾಂಗ್ರೆಸ್ ಕಾರ್ಯಸಮಿತಿಯು ವಿರೋಧ ವನ್ನು ವ್ಯಕ್ತಪಡಿಸಿತು. ಹೀಗೆ ವಿರೋಧದ ಮಧ್ಯೆ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಆಗಸ್ಟ್ 8ರಂದು ಮೈಸೂರು ಸಂಸ್ಥಾನದ ದಿವಾನರಾಗಿ ಅಧಿಕಾರ ಸ್ವೀಕರಿಸಿದರು.

ಕಾಂಗ್ರೆಸ್ಸಿನ ಆರನೇ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಆರನೇ ಅಧಿವೇಶನವು ಕೆ. ಚಂಗಲರಾಯರೆಡ್ಡಿ ಯವರ ಅಧ್ಯಕ್ಷತೆಯಲ್ಲಿ 1946ರ ನವೆಂಬರ್ ಎರಡರಂದು ಬೆಂಗಳೂರು ನಗರದ ಸುಭಾಸ್‌ನಗರದಲ್ಲಿ ನಡೆಯಿತು. ಸಂಸ್ಥಾನದ ಪ್ರಜೆಗಳ ನ್ಯಾಯ ವಾದ ಬೇಡಿಕೆಗಳ ಬಗ್ಗೆ ಮಹಾರಾಜರು ಮತ್ತು ಅಧಿಕಾರಿಗಳಿಗಿರುವ ಔದಾಸೀನ್ಯವನ್ನು ಕಾಂಗ್ರೆಸ್ ಅಧ್ಯಕ್ಷ ಚೆಂಗಲರಾಯರೆಡ್ಡಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಖಂಡಿಸಿದರು. "ನಮ್ಮ ಧ್ಯೇಯ ಫಲಿಸುವವರೆಗೆ ಶಾಸನಸಭೆಗಳಲ್ಲಿ ಆಯಕಟ್ಟು ಸ್ಥಾನಗಳನ್ನು ನಾವು ಆಕ್ರಮಿಸಿಕೊಂಡು ಸಭೆಗಳ ಮುಖಾಂತರವಾಗಿಯೂ ನಮ್ಮ ಹೋರಾಟವನ್ನು ಮುಂದು ವರಿಸುವುದು ಸೂಕ್ತವಾದ ಮಾರ್ಗ. ಚಳುವಳಿ ಉಗ್ರವಾಗಬೇಕು. ನಮ್ಮ ಧ್ಯೇಯಸಾಧನೆಗಾಗಿ ಅಹಿಂಸೆಯ ಅಡಿಗಲ್ಲಿನ ಮೇಲೆ ಎಲ್ಲ ವಿಧವಾದ ತ್ಯಾಗ, ಸಂಕಟಗಳಿಗೆ ನಾವು ಸಿದ್ಧರಾಗ ಬೇಕು" ಎಂದು ಅಧ್ಯಕ್ಷರು ತಿಳಿಸಿದರು. ಮುಂದುವರಿದು, ಅವರು "ಭಾರತದಲ್ಲಿ ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆಗಳನ್ನು ಮೈಸೂರು ಪ್ರಜೆಗಳು ಲಕ್ಷ್ಯಕ್ಕೆ ತೆಗೆದುಕೊಳ್ಳ ಬೇಕು. ಸ್ವತಂತ್ರ ಭಾರತದಲ್ಲಿ ಮೈಸೂರು ಸ್ವತಂತ್ರವಾಗಲು ಶ್ರಮಿಸ ಬೇಕು! ಸಾವುನೋವುಗಳನ್ನು ಸಹಿಸಬೇಕು! ಬಲಿದಾನಕ್ಕೆ ಸಿದ್ಧ ರಾಗಬೇಕು" ಎಂದು ಘೋಷಿಸಿದರು. ಸಂಸ್ಥಾನದ ಮಂತ್ರಿ ಮಂಡಲವು ಬೇಜವಾಬ್ದಾರೀಯಿಂದ ಕೂಡಿದ್ದು ಪ್ರಜೆಗಳಿಗೆ ಅದರಲ್ಲಿ ನಂಬಿಕೆಯಿಲ್ಲವೆಂದೂ ಅದನ್ನು ಕೊನೆಗಾಣಿಸಲು ಸತ್ಯಾಗ್ರಹ ಚಳುವಳಿ ಅವಶ್ಯಕವೆಂದೂ, ಅಧಿವೇಶನ ಒಂದು ನಿರ್ಣಯದಲ್ಲಿ ಸೂಚಿಸಿತು. ನವೆಂಬರ್ 8ರಂದು ಮೈಸೂರು ಕಾಂಗ್ರೆಸ್ ವರಿಷ್ಠರ ಸಭೆಯೊಂದು ನಡೆದು ಜನತೆಯನ್ನು ಸತ್ಯಾಗ್ರಹಕ್ಕೆ

ಸಿದ್ಧಗೊಳಿಸಲು, ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಕಾಂಗ್ರೆಸ್ ಅಧ್ಯಕ್ಷರು ಪ್ರವಾಸ ಮಾಡಬೇಕೆಂದು ತೀರ್ಮಾನವಾಯಿತು. ಮುಂದಿನ ಮೂರು ತಿಂಗಳ ಕಾಲ ಅಧ್ಯಕ್ಷರು ಸಂಸ್ಥಾನದಲ್ಲೆಲ್ಲಾ ಪ್ರವಾಸಮಾಡಿ ಸುಮಾರು 130 ಗ್ರಾಮ ಗಳಿಗೆ ಭೇಟಿ ನೀಡಿದರು. ಹೋದ ಕಡೆಗಳಲ್ಲೆಲ್ಲಾ ಅವರನ್ನು ಜನರು ಸಂಭ್ರಮದಿಂದಲೂ ಉತ್ಸಾಹದಿಂದಲೂ ಸ್ವಾಗತಿಸಿ ಕಾಂಗ್ರೆಸ್ಸಿನಲ್ಲಿರುವ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು. ಕೆಲವು ಕಡೆ ಪುರಸಭೆಗಳೂ ಮತ್ತೆ ಕೆಲವು ಕಡೆ ಜಿಲ್ಲಾ ಬೋರ್ಡುಗಳೂ ಅಧ್ಯಕ್ಷರಿಗೆ ಮನವಿಗಳನ್ನು ಅರ್ಪಿಸಿ ಕಾಂಗ್ರೆಸ್ಸಿನಲ್ಲಿ ತಮಗಿರುವ ವಿಶ್ವಾಸವನ್ನು ತೋರಿಸಿದವು. ಅಧ್ಯಕ್ಷರ ಪ್ರವಾಸದ ಪ್ರಯುಕ್ತ ಹೆಚ್ಚು ಹೆಚ್ಚು ಜನರು ಕಾಂಗ್ರೆಸ್ ಸೇರಿದರು. ಜೊತೆಗೆ ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಲು ಸಿದ್ಧರಾದರು.

ಈ ಮಧ್ಯೆ ಪರಿಸ್ಥಿತಿ ಉಲ್ಬಣಗೊಂಡು, ಕೋಮುವಾರು ದ್ವೇಷದಿಂದ ಗಲಾಟೆಯಾಗಿ ಚನ್ನಪಟ್ಟಣ ಮತ್ತು ಕೋಲಾರ ಚಿನ್ನದ ಗಣಿ ಪ್ರದೇಶಗಳಲ್ಲಿ ಅಧಿಕಾರಿಗಳು ಗುಂಡುಹಾರಿಸಿದರು. ಪರಿಣಾಮವಾಗಿ ಕ್ರಮವಾಗಿ 3 ಮತ್ತು 6 ಜನರು ಮಡಿದರು. ಸಂಸ್ಥಾನದಾದ್ಯಂತ ಸಭೆ ಮತ್ತು ಮೆರವಣಿಗೆಗಳ ವಿರುದ್ಧ ನಿಷೇಧಾಜ್ಞೆಗಳು ಜಾರಿಮಾಡಲ್ಪಟ್ಟವು. ಕಾಂಗ್ರೆಸ್ ನಾಯಕರಲ್ಲಿ ಒಬ್ಬರಾದ ಕೆ. ಹನುಮಂತಯ್ಯನವರನ್ನು ರಾಜದ್ರೋಹದ ಆಪಾದನೆಯ ಮೇಲೆ ದಸ್ತಗಿರಿ ಮಾಡಿದರು. ಹೀಗೆ ಸರಕಾರ ನಿಷೇಧಾಜ್ಞೆಗಳನ್ನು ಜಾರಿಗೆ ತಂದು, ದಬ್ಬಾಳಿಕೆ ಆರಂಭಿಸಿತು. ಸರಕಾರದ ನೀತಿಯನ್ನು ಚರ್ಚಿಸಿ ಮುಂದಿನ ಕಾರ್ಯಕ್ರಮವನ್ನು ರೂಪಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜನವರಿ 1–2 ರಂದು ಸಭೆ ಸೇರಿತು. ಎಲ್ಲಾ ಪ್ರಶ್ನೆಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿ, ಸರಕಾರದ ನೀತಿಯ ಬಗ್ಗೆ ಮಹಾರಾಜರವರಿಗೆ ಒಂದು ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಿತು.

ಮಹಾರಾಜರ ಘೋಷಣೆ

1947ರ ಜನವರಿ ಎಂಟರಂದು ಮಹಾರಾಜರವರು ಒಂದು ಘೋಷಣೆ ಹೊರಡಿಸಿ, ರಾಜಕೀಯ ಪಕ್ಷಗಳೊಡನೆ ಚರ್ಚಿಸಿ, ಪರಿಸ್ಥಿತಿ ವಿಮರ್ಶೆ ಮಾಡಿ ಪರಿವರ್ತನೆಯಾಗುತ್ತಿರುವ ಭಾರತದ ರಾಜ್ಯಾಂಗದಲ್ಲಿ ಮೈಸೂರು ಹೇಗೆ

ವರ್ತಿಸಬೇಕೆಂಬ ವಿಚಾರವಾಗಿ ಸೂಕ್ತ ಸಲಹೆಗಳನ್ನು ಮಾಡಲು ದಿವಾನರಿಗೆ ಸೂಚಿಸಿದ್ದೇನೆಂದು ಹೇಳಿದರು. ಜವಾಬ್ದಾರೀ ಸರಕಾರವನ್ನು ಸ್ಥಾಪಿಸುವು ದೊಂದೇ ಜನರನ್ನು ತೃಪ್ತಿಪಡಿಸುವ ಸಾಧನವೆಂದು ಒಂದು ಮನವಿಯಲ್ಲಿ ಕಾಂಗ್ರೆಸ್ ಸಂಸ್ಥೆಯು ರಾಜರಿಗೆ ತಿಳಿಸಿ, ಸಾರ್ವಜನಿಕ ನಾಯಕರನ್ನೊಳ ಗೊಂಡ ತಾತ್ಕಾಲಿಕ ಸರಕಾರ ಸ್ಥಾಪಿಸಲು ಕಾರ್ಯಕಾರಿ ಸಮಿತಿ ಕೋರಿತು.

1947ರ ಮಾರ್ಚಿ ಕೊನೆ ವಾರದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯ ಅಧಿವೇಶನವು ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ಸಭೆ ಸೇರಿತು. ಇತ್ತೀಚಿನ ಘಟನೆಗಳನ್ನು ವಿಮರ್ಶಿಸಿ, ಮಹಾರಾಜರಿಗೆ ಸಲ್ಲಿಸಿದ್ದ ಮನವಿ ಪತ್ರಕ್ಕೆ ಸಮರ್ಪಕ ಉತ್ತರ ದೊರೆಯಲಿಲ್ಲವೆಂದು ಹೇಳಿ, ಮಹಾರಾಜರ ಘೋಷಣೆಯನ್ನು ಪರೀಕ್ಷಿಸಿ ಅದು ರಾಜ್ಯಾಂಗ ಸುಧಾರಣೆಗಳ ಅಂತಿಮ ಗುರಿಯನ್ನಾಗಲೀ, ತಾತ್ಕಾಲಿಕ ಸರಕಾರ ಸ್ಥಾಪಿಸುವ ಬಗ್ಗೆಯಾಗಲೀ ಏನೂ ತಿಳಿಸಿಲ್ಲವೆಂದೂ, ಕಾಲ ಮಿತಿಯ ಬಗ್ಗೆ ಸ್ಪಷ್ಟವಾಗಿಲ್ಲವೆಂದೂ ತಿಳಿಸಿತು. ಈ ಸಂದರ್ಭದಲ್ಲಿ ಶೀಘ್ರದಲ್ಲಿ ತಾತ್ಕಾಲಿಕ ಸರಕಾರವನ್ನು ರಚಿಸಿ, ರಾಜ್ಯಾಂಗ ಸುಧಾರಣೆಗಳ ಗುರಿಯನ್ನು ಸ್ಪಷ್ಟವಾಗಿ ಘೋಷಿಸುವುದೊಂದೇ ಮಾರ್ಗವೆಂದು ಹೇಳಿತು. ರಾಜ್ಯಾಂಗ ರಚನೆಯನ್ನು ರಾಜ್ಯಾಂಗ ಸಭೆಗೆ ವಹಿಸಬೇಕೆಂದು ಹೇಳಿ, ನೂತನ ರಾಜ್ಯಾಂಗ ರಚನೆಯಾಗುವವರೆಗೆ ತಾತ್ಕಾಲಿಕ ಸರಕಾರ ರಚಿಸಬೇಕೆಂದೂ ತಿಳಿಸಿತು. ಕಾಂಗ್ರೆಸ್ಸಿನ ಕೋರಿಕೆ ಗಳನ್ನು ಸರಕಾರ ಒಪ್ಪದಿದ್ದರೆ, ಸಂಸ್ಥಾನದಲ್ಲಿ ಸತ್ಯಾಗ್ರಹ ಚಳುವಳಿಯನ್ನು ಮೇ ಒಂದರಿಂದ ಆರಂಭಿಸಲು ತೀರ್ಮಾನಿಸಿ ಹತ್ತು ಅಂಶಗಳ ಯೋಜನೆ ಯೊಂದರ ಕರಡು ತಯಾರಿಸಿತು.

ಭಾರತ ಸ್ವಾತಂತ್ರ್ಯದ ಬಗ್ಗೆ ಬ್ರಿಟಿಷ್ ಪ್ರಧಾನಿ ಅಟ್ಲೀಯವರ ಘೋಷಣೆ

ಈ ಮಧ್ಯೆ ಬ್ರಿಟಿಷ್ ಪ್ರಧಾನಿ ಕ್ಲಿಮೆಂಟ್ ಅಟ್ಲೀಯವರು ಬ್ರಿಟಿಷರು ಆಡಳಿತಾಧಿಕಾರವನ್ನು ಭಾರತೀಯರಿಗೆ ವಹಿಸಿ ಭಾರತದಿಂದ ತೆರಳುವುದಾಗಿ, 1947ರ ಫೆಬ್ರವರಿ 20 ರಂದು ಘೋಷಿಸಿ, ನೂತನ ನೀತಿಯನ್ನು ಹಾಗೂ ಬದಲಾವಣೆಗಳನ್ನು ಹೊಸ ವೈಸ್ರಾಯಿ ಲಾರ್ಡ್ ಮೌಂಟಬ್ಯಾಟನ್ನರು ಜಾರಿಗೆ ತರುವುದಾಗಿಯೂ ತಿಳಿಸಿದರು. ಭಾರತೀಯರೆಲ್ಲರೂ ಇದನ್ನು

ಸಂತೋಷದಿಂದ ಸ್ವಾಗತಿಸಿದರು. ಮೈಸೂರು ಕಾಂಗ್ರೆಸ್ ನಾಯಕರೂ ಕೂಡ ಅಟ್ಲೀಯವರ ಘೋಷಣೆಯನ್ನು ಸ್ವಾಗತಿಸಿದರು. ಈಗಲಾದರೂ ಮಹಾರಾಜರು ಕಾಲಸ್ಫೂರ್ತಿಯಂತೆ ವರ್ತಿಸಿ ಬದಲಾವಣೆಗಳನ್ನು ಜಾರಿಗೆ ತರುತ್ತಾರೆಂದು ಕಾಂಗ್ರೆಸ್ ನಾಯಕರು ಆಶಿಸಿದರು. ಇನ್ನಿತರ ಕೆಲವು ಸಂಸ್ಥಾನಗಳೂ ಕೂಡ ಭಾರತದ ರಾಜ್ಯಾಂಗ ರಚನಾ ಸಭೆಗೆ ಸದಸ್ಯರನ್ನು ಕಳುಹಿಸಿರುವಾಗ ಮೈಸೂರು ಸಂಸ್ಥಾನ ಕಳಿಸದಿದ್ದುದಕ್ಕೆ ಕಾಂಗ್ರೆಸ್ ತನ್ನ ವ್ಯಸನವನ್ನು ವ್ಯಕ್ತಪಡಿಸಿತು. ಈ ಮೊದಲೇ ತೀರ್ಮಾನಿಸಿದ್ದಂತೆ ಸತ್ಯಾಗ್ರಹ ಚಳುವಳಿಯನ್ನು ಮೇ ಒಂದರಂದು ಆರಂಭಿಸಲು ತೀರ್ಮಾನಿಸಿ ಸಾರ್ವಜನಿಕರ ಸಹಕಾರವನ್ನು ಕೋರಿತು.

ದಿವಾನರೊಡನೆ ಅಧ್ಯಕ್ಷರ ಚರ್ಚೆ

ಕಾಂಗ್ರೆಸ್ ಅಧ್ಯಕ್ಷ ಕೆ. ಚೆಂಗಲರಾಯ ರೆಡ್ಡಿಯವರಿಗೂ, ದಿವಾನರಿಗೂ ಏಪ್ರಿಲ್ ಕೊನೆಯ ವಾರದಲ್ಲಿ ಮೈಸೂರು ರಾಜಕೀಯ ಬೆಳವಣಿಗೆಗಳ ಮೇಲೆ ಮಾತುಕತೆ ನಡೆಯಿತು. ದಿವಾನರು ಮೇ ತಿಂಗಳಲ್ಲಿ ನವದೆಹಲಿಗೆ ಹೋಗುವುದರಲ್ಲಿದ್ದರು. ಕಾಂಗ್ರೆಸ್ ಮೇ ಒಂದರಿಂದ ಆರಂಭಿಸಬೇಕಾಗಿದ್ದ ಚಳುವಳಿಯನ್ನು ಮುಂದಕ್ಕೆ ಹಾಕಿತು. ರಾಜ್ಯಾಂಗ ಸಭೆಯ ಆರಂಭದ ವಿಷಯದಲ್ಲಿ ದಿವಾನರ ಅಭಿಪ್ರಾಯವು ಅನುಕೂಲಕರವಾಗಿರಲಿಲ್ಲ. ಮೈಸೂರು ಸಂಸ್ಥಾನವೂ ಭಾರತದ ರಾಜ್ಯಾಂಗ ಸಭೆ ಸೇರುವುದೆಂದು ಜೂನ್ 17ರಂದು ದಿವಾನರು ಘೋಷಿಸಿದರು. ಕಾಂಗ್ರೆಸ್ ಕಾರ್ಯ ಸಮಿತಿಯು ತಾತ್ಕಾಲಿಕ ಸರಕಾರ ರಚನೆಗೆ ಒತ್ತಾಯ ಮಾಡಿತು. ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆಗಳ ಜಂಟಿ ಅಧಿವೇಶನವು ಜುಲೈ ಆರಂಭದಲ್ಲಿ ನಡೆಯಿತು. ಭಾರತದ ರಾಜ್ಯಾಂಗ ಸಭೆಗೆ ಸಂಸ್ಥಾನದಿಂದ ಕಳುಹಿಸಬೇಕಾಗಿದ್ದ ಸದಸ್ಯರ ಆಯ್ಕೆಗಾಗಿ ಚುನಾವಣೆಗಳು ನಡೆದು ಹೆಚ್. ಆರ್. ಗುರುವಾರೆಡ್ಡಿ, ಕೆ. ಚೆಂಗಲರಾಯರೆಡ್ಡಿಯವರು ಪ್ರಜಾಪ್ರತಿನಿಧಿಸಭೆಯಿಂದಲೂ, ಹಿ. ಎಚ್. ಚಂದ್ರಶೇಖರಯ್ಯ ಮತ್ತು ಎಸ್. ವಿ. ಕೃಷ್ಣಮೂರ್ತಿರಾಯರು ನ್ಯಾಯವಿಧಾಯಕಸಭೆಯಿಂದಲೂ ಚುನಾಯಿತರಾದರು.

ಕ್ವಿಟ್ ಇಂಡಿಯಾ ಚಳುವಳಿ ಆರಂಭವಾದ ದಿನ 1942ರ ಅಗಸ್ಟ್ 9 ಭಾರತದ ಇತಿಹಾಸದಲ್ಲಿ ಒಂದು ಮುಖ್ಯ ದಿನವಾಗಿದೆ. ಹಾಗೆಯೇ ಮೈಸೂರು

ಸಂಸ್ಥಾನದ ಇತಿಹಾಸದಲ್ಲಿ 1947ರ ಆಗಸ್ಟ್ 9 ಒಂದು ಮುಖ್ಯ ದಿನವಾಗಿದೆ. ಅಂದು ಮೈಸೂರು ನಗರದ ಟೌನ್‌ಹಾಲಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ಸಭೆ ಸೇರಿ ಸತ್ಯಾಗ್ರಹ ಚಳುವಳಿಯನ್ನು ಸೆಪ್ಟಂಬರ್ ಒಂದರಿಂದ ಆರಂಭಿಸುವ ಮುಖ್ಯ ತೀರ್ಮಾನ ಕೈಗೊಂಡಿತು. ಅಧ್ಯಕ್ಷ ಭಾಷಣ ಮಾಡುತ್ತಾ, ಕೆ. ಸಿ. ರೆಡ್ಡಿಯವರು ' ಕಾದು ನೋಡಿದ್ದು ಆಯಿತು. ಇನ್ನು ಉಳಿದಿರುವುದೊಂದೇ ಮಾರ್ಗ. ಅದು ಸತ್ಯಾಗ್ರಹ ' ಎಂದು ಘೋಷಿಸಿದರು. ಅಧ್ಯಕ್ಷರ ಈ ಘೋಷಣೆ ಮೈಸೂರು ಕಾಂಗ್ರೆಸ್ ನಡೆಸಿದ ' ಮೈಸೂರು ಚಲೋ ' ಕೊನೆಯ ಸತ್ಯಾಗ್ರಹ ಚಳುವಳಿಗೆ ನಾಂದಿಯಾಯಿತು.

ಭಾರತ ಒಕ್ಕೂಟಕ್ಕೆ ಮೈಸೂರಿನ ಸೇರ್ಪಡೆ ಮತ್ತು ಭಾರತ ಸ್ವಾತಂತ್ರ್ಯ ದಿನಾಚರಣೆ

ಭಾರತದ ಅಂಗವಾಗಿರಲು ಸರಕಾರ ನಿರ್ಧರಿಸಿದೆಯೆಂದು ದಿವಾನರು ಪ್ರಕಟಿಸಿದರು. ಆಗಸ್ಟ್ ಹತ್ತರಂದು ಮೈಸೂರು ಸಂಸ್ಥಾನವು ಭಾರತ ಒಕ್ಕೂಟಕ್ಕೆ ಸೇರುವ ಇನ್‌ಸ್ಟ್ರುಮೆಂಟ್ ಆಫ್ ಅಕ್ಸೆಷನ್‌ಗೆ ಸಹಿ ಹಾಕಿತು. ದಿವಾನರು ಈ ತೀರ್ಮಾನವನ್ನು ಕಾಂಗ್ರೆಸ್ ಸಮಿತಿಯ ಸಭೆ ನಡೆದ ದಿನವೇ ಬೇಕೆಂದೇ ಪ್ರಕಟಿಸಿ ಕಾಂಗ್ರೆಸ್ಸಿನ ನಿರ್ಧಾರ ಬದಲಿಸಲು ಯತ್ನಿಸಿದರು. ಈ ತೀರ್ಮಾನವನ್ನು ಕಾಂಗ್ರೆಸ್ ಸ್ವಾಗತಿಸಿತು. ಆದರೂ ತನ್ನ ಗುರಿ ಸಾಧನೆಗಾಗಿ ಕೊನೆಯ ಹೋರಾಟವನ್ನು ಸೆಪ್ಟೆಂಬರ್ ಒಂದರಿಂದ ಆರಂಭಿಸುವ ನಿರ್ಧಾರವನ್ನು ಅದು ಬದಲಿಸಲಿಲ್ಲ. ಈ ಮಧ್ಯೆ ಸುಧಾರಣಾ ಸಲಹಾ ಸಮಿತಿಯನ್ನು ರಚಿಸಿ ಅದರಲ್ಲಿ ಕಾಂಗ್ರೆಸ್ಸಿಗೆ ನಾಲ್ಕು ಸ್ಥಾನಗಳನ್ನು ಕೊಟ್ಟರು. ಇದರಿಂದ ಕಾಂಗ್ರೆಸ್ ಅತೃಪ್ತಿಗೊಂಡು ಸಲಹಾ ಸಮಿತಿಯ ಕಾರ್ಯಕ್ರಮಗಳನ್ನು ಬಹಿಷ್ಕರಿಸಲು ತೀರ್ಮಾನಿಸಿತು.

1947ರ ಆಗಸ್ಟ್ ಹದಿನೈದರಂದು ಆಡಳಿತಾಧಿಕಾರವನ್ನು ಭಾರತೀಯರಿಗೆ ವಹಿಸಿ, ಬ್ರಿಟಿಷರು ಭಾರತದಿಂದ ತೆರಳಿದರು ಮತ್ತು ಭಾರತವು ಅಂದು ಸ್ವತಂತ್ರ ರಾಷ್ಟ್ರವಾಯಿತು. ಆದುದರಿಂದಲೇ ಆಧುನಿಕ ಭಾರತ ಇತಿಹಾಸದಲ್ಲಿ ಆಗಸ್ಟ್ 15 ಒಂದು ಸುವರ್ಣ ದಿನವಾಗಿದೆ. ಆ ದಿನ ಇಡೀ ದೇಶದಲ್ಲೆಲ್ಲಾ

ತ್ರಿವರ್ಣ ಧ್ವಜ ಹಾರಿಸಿ, ರಾಷ್ಟ್ರಗೀತೆ ಜನಗಣಗಮನ ಹಾಡಿ, ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ರಾಷ್ಟ್ರದ ಐಕ್ಯತೆ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಲು ಜನರೆಲ್ಲರೂ ಪ್ರತಿಜ್ಞೆ ಕೈಗೊಂಡರು. ರಾಷ್ಟ್ರದ ಇತರ ಕಡೆಗಳಂತೆಯೇ ಮೈಸೂರು ಸಂಸ್ಥಾನದಾದ್ಯಂತ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಿದರು. ಆದರೆ ಸಂಸ್ಥಾನದ ಸರಕಾರವು ಮಾತ್ರ ತ್ರಿವರ್ಣ ಧ್ವಜ ಹಾರಿಸದೆ, ಸ್ವಾತಂತ್ರ್ಯದ ಸಮಾರಂಭಗಳಲ್ಲಿ ಭಾಗ ವಹಿಸಲಿಲ್ಲ. ಭಾರತದ ಅಂಗವಾಗಿರಲು ಒಪ್ಪಿದ್ದರೂ ಕೂಡ, ಸ್ವಾತಂತ್ರ್ಯ ದಿನವನ್ನು ಉತ್ಸಾಹದಿಂದ ಆಚರಿಸಿ ತ್ರಿವರ್ಣ ರಾಷ್ಟ್ರೀಯ ಧ್ವಜ ಹಾರಿಸಲು ಸರಕಾರ ಯತ್ನಿಸಲಿಲ್ಲ. ಇದರಿಂದ ಸಂಸ್ಥಾನದ ಜನತೆಯು ಬಹಳ ಬೇಸರಗೊಂಡಿತು. ಆದರೆ ಮೈಸೂರು ಕಾಂಗ್ರೆಸ್ ಮತ್ತು ಇತರ ಸಂಘ ಸಂಸ್ಥೆಗಳು ಉತ್ಸಾಹದಿಂದಲೂ, ವಿಜೃಂಭಣೆಯಿಂದಲೂ ಈ ದಿನವನ್ನು ಆಚರಿಸಿ, ತ್ರಿವರ್ಣ ಧ್ವಜವನ್ನು ಹಾರಿಸಿ ಪ್ರತಿಜ್ಞೆ ಕೈಗೊಂಡರು.

ಮೈಸೂರು ಚಲೋ ಚಳುವಳಿ

ತಮ್ಮ ಸಂಸ್ಥಾನದಲ್ಲಿಯೇ ತಮ್ಮ ಗುರಿ ಸಾಧನೆಯಾಗಲಿಲ್ಲವೆಂದು ಮೈಸೂರು ಕಾಂಗ್ರೆಸ್ ಬಹಳ ವ್ಯಸನ ಮತ್ತು ಕಾತುರದಿಂದ ಕೂಡಿದ್ದಿತು. ಸಂಸ್ಥಾನದಲ್ಲಿ ತಮ್ಮ ಗುರಿ ಜವಾಬ್ದಾರೀ ಸರಕಾರ ಸ್ಥಾಪನೆಯನ್ನು ಸಾಧಿಸಲು ಕಾಂಗ್ರೆಸ್ ಕಾರ್ಯ ಸಮಿತಿಯು ಅರಮನೆಯ ಮುಂದೆ ಸತ್ಯಾಗ್ರಹ ನಡೆಸಲು ತೀರ್ಮಾನಿಸಿತು. ಇದಕ್ಕಾಗಿ 'ಮೈಸೂರು ಚಲೋ' ಚಳುವಳಿಯನ್ನು ಆರಂಭಿಸಲು ತೀರ್ಮಾನಿಸಿ ಹತ್ತು ಅಂಶಗಳ ಕಾರ್ಯಕ್ರಮವನ್ನು ಹೊರಡಿಸಿ ಸೆಪ್ಟಂಬರ್ 1ರಿಂದ ಚಳುವಳಿಯನ್ನು ಆರಂಭಿಸಲು ತೀರ್ಮಾನಿಸಿತು. ಈ ಸ್ವಾತಂತ್ರ್ಯ ಸಮಾರಂಭವನ್ನು ಉಪಯೋಗಿಸಿಕೊಂಡು, ಮೈಸೂರು ಕಾಂಗ್ರೆಸ್ ನಾಯಕರು, ಸತ್ಯಾಗ್ರಹ ಕಾರ್ಯಕ್ರಮವನ್ನು ಜನರಲ್ಲಿ ಪ್ರಚಾರ ಮಾಡಿದರು. ಅರಮನೆಯ ಮುಂದೆ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಕಾಂಗ್ರೆಸ್ ನಾಯಕರುಗಳು ತಾವು ಆರಂಭಿಸಲು ತೀರ್ಮಾನಿಸಿದ್ದ ಸತ್ಯಾಗ್ರಹಕ್ಕೆ ಜನತೆಯ ಬೆಂಬಲ ಗಳಿಸಲು, ಸಂಸ್ಥಾನದಾದ್ಯಂತ ಒಂಬತ್ತು ಜಿಲ್ಲೆಗಳಲ್ಲಿಯೂ ಆಗಸ್ಟ್ 21ರಿಂದ 10 ದಿನಗಳ ಕಾಲ ಪ್ರವಾಸ ಮಾಡಿದರು.

ಪ್ರವಾಸ ಕೈಗೊಳ್ಳುವ ಮೊದಲು ಕಾಂಗ್ರೆಸ್ ಒಂದು ಪ್ರಕಟಣೆಯನ್ನು ಹೊರಡಿಸಿ ಪ್ರವಾಸದ ವೇಳೆಯಲ್ಲಿ ಕಾಂಗ್ರೆಸ್ಸಿನ ಧ್ಯೇಯ, ಸರಕಾರದ ಧೋರಣೆಗಳನ್ನು ವಿವರಿಸಿ, ಜನರು ಕಾಂಗ್ರೆಸ್ಸಿನ ಕಡೆ ಸೇರುವಂತೆ ಮಾಡಿದರು. ನಾಯಕರೆಲ್ಲರೂ ಪ್ರವಾಸ ಕೈಗೊಳ್ಳುವ ಮೊದಲೇ ಕಾರ್ಯಕಾರಿ ಸಮಿತಿ ಸಭೆ ಸೇರಿ, ಸತ್ಯಾಗ್ರಹ ಘೋಷಣೆ ಮಾಡಿ ಕಾಂಗ್ರೆಸ್ಸಿನ ರಚನಾ ವ್ಯವಸ್ಥೆಯನ್ನು ರದ್ದುಗೊಳಿಸಿ, ಅಧ್ಯಕ್ಷ ಕೆ. ಚಂಗಲರಾಯರೆಡ್ಡಿಯವರನ್ನು ಸೆಪ್ಟಂಬರ್ 1ರಿಂದ ಸರ್ವಾಧಿಕಾರಿಯನ್ನಾಗಿ ನೇಮಿಸಿತು. ಸೆಪ್ಟಂಬರ್ 1ರಿಂದ ಸತ್ಯಾಗ್ರಹವನ್ನಾರಂಭಿಸಿ, ಸಾರ್ವಜನಿಕ ಸಭೆಗಳನ್ನು ನಡೆಸಬೇಕು, ಸತ್ಯಾಗ್ರಹದ ಉದ್ದೇಶವನ್ನು ತಿಳಿಸಿ, ಜವಾಬ್ದಾರೀ ಸರಕಾರ ಸ್ಥಾಪನೆ ಮಾಡಬೇಕೆಂಬ ಘೋಷಣೆ ಕೂಗಬೇಕು ಎಂದು ತೀರ್ಮಾನಿಸಿದರು. ಕಾಂಗ್ರೆಸ್ ಪಕ್ಷ ಸತ್ಯಾಗ್ರಹಕ್ಕೆ ಸಿದ್ಧತೆ ಮಾಡುತ್ತಾ ಇದ್ದಂತೆಯೇ ಸರಕಾರವೂ ಕೂಡ ಕಾಂಗ್ರೆಸ್ಸಿನ ಸತ್ಯಾಗ್ರಹ ಚಳುವಳಿಯನ್ನು ತುಳಿಯಲು ಸಿದ್ಧತೆ ಮಾಡಿಕೊಂಡಿತು. ಜಿಲ್ಲಾಧಿಕಾರಿಗಳು ಮತ್ತು ನಗರ ನ್ಯಾಯಾಧೀಶರುಗಳಿಗೆ ಪರಿಸ್ಥಿತಿಗೆ ತಕ್ಕಂತೆ ತೀರ್ಮಾನ ಕೈಗೊಳ್ಳಲು ವಿಶೇಷ ಅಧಿಕಾರವನ್ನು ಕೊಟ್ಟಿತು.

ಸಂಧಾನ ಯತ್ನ

ಈ ಮಧ್ಯೆ ಸರಕಾರಕ್ಕೂ, ಕಾಂಗ್ರೆಸ್ ಸಂಸ್ಥೆಗೂ ಒಂದು ಒಪ್ಪಂದ ಏರ್ಪಡಿಸುವ ಉದ್ದೇಶದಿಂದ ಬೆಂಗಳೂರಿನ ವಾಣಿಜ್ಯ ಸಂಘ ಸಮಿತಿಯು ಪ್ರಯತ್ನಿಸಿತು. ಈ ಸಂಘದ ಪರವಾಗಿ ಪಾಮುಡಿ ಸುಬ್ಬರಾಮಶೆಟ್ಟರು ಜವಾಬ್ದಾರೀ ಸರಕಾರವನ್ನು ಕೂಡಲೇ ಸ್ಥಾಪಿಸಬೇಕೆಂದು ಸರಕಾರವನ್ನು ಕೋರಿದರು. ಹಾಗೂ ಕಾಂಗ್ರೆಸ್ ತನ್ನ ಚಳುವಳಿಯನ್ನು ಮುಂದೂಡಲು ಸಲಹೆ ನೀಡಿದರು. ಈ ಸಮಿತಿಯವರು ಮಹಾರಾಜರನ್ನು ಭೇಟಿ ಮಾಡಲು ಪ್ರಯತ್ನಿಸಿದರು. ಅದಕ್ಕೆ ಅವರು ಒಪ್ಪಲಿಲ್ಲ. ಆದ್ದರಿಂದ ಸಂಧಾನ ಪ್ರಯತ್ನಗಳನ್ನು ಅವರು ಕೈಬಿಟ್ಟರು.

ಮೈಸೂರು ಕಾಂಗ್ರೆಸ್ ಆರಂಭಿಸಲು ನಿರ್ಧರಿಸಿದ್ದ 'ಮೈಸೂರು ಚಲೋ' ಸತ್ಯಾಗ್ರಹಕ್ಕೆ, ವಿದ್ಯಾರ್ಥಿಗಳೂ, ಯುವಕರೂ ಬೆಂಬಲ ನೀಡಿ ಸತ್ಯಾಗ್ರಹದಲ್ಲಿ

ಭಾಗವಹಿಸಿದರು. ಸಂಸ್ಥಾನದ ಕಮ್ಯುನಿಸ್ಟ್ ಪಕ್ಷವು ಪೂರ್ಣ ಬೆಂಬಲ ವಿತ್ತು, ಕಾರ್ಮಿಕ ಸಂಘ ಸಂಸ್ಥೆಗಳ ಬೆಂಬಲ ಈ ಸತ್ಯಾಗ್ರಹಕ್ಕೆ ದೊರೆಯಲು ಅವಕಾಶವಾಯಿತು. ವಿದ್ಯಾರ್ಥಿ ಕಾಂಗ್ರೆಸ್ ಕೂಡ ತನ್ನ ಬೆಂಬಲ ಕೊಟ್ಟಿತು. ಸಂಸ್ಥಾನವ ಕಾಂಗ್ರೆಸ್ಸಿನ ಚಳುವಳಿಯನ್ನು ಸ್ವಾಗತಿಸಿ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಅಧ್ಯಕ್ಷ ಕೆ. ಕಾಮರಾಜ್, ಮುಂಬಯಿ ನಗರ ಕಾಂಗ್ರೆಸ್ ಅಧ್ಯಕ್ಷ ಎಸ್. ಕೆ. ಪಾಟೀಲರು ಬೆಂಬಲ ನೀಡಿದರು. ಕರ್ನಾಟಕ ಪ್ರಾಂತ್ಯ ಭಾಗಗಳಿಂದಲೂ, ಕೇರಳದಿಂದಲೂ ಸತ್ಯಾಗ್ರಹಿಗಳ ತಂಡಗಳು ಮೈಸೂರು ಸಂಸ್ಥಾನಕ್ಕೆ ಧಾವಿಸಿದವು. ಹೀಗೆ ಎಲ್ಲಾ ಕಡೆ ಗಳಿಂದಲೂ ಚಳುವಳಿಗೆ ಸಹಾಯ ಹಾಗೂ ಸಹಕಾರ ದೊರಕಿತು.

ಸತ್ಯಾಗ್ರಹ ಚಳುವಳಿಯನ್ನು ಹತ್ತಿಕ್ಕುವ ಉದ್ದೇಶದಿಂದ, ಅಕ್ಟೋಬರ್ ತಿಂಗಳ ಹೊತ್ತಿಗೆ ರಾಜ್ಯಾಂಗ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ದಿವಾನರು ಒಂದು ಹೇಳಿಕೆ ನೀಡಿದರು. ಆದರೆ ಕಾಂಗ್ರೆಸ್ ಧೃಡಮನಸ್ಸಿನಿಂದ ತನ್ನ ಸಿದ್ಧತೆಗಳನ್ನು ಮುಂದುವರಿಸಿತು. ಚಳುವಳಿಯನ್ನು ತುಳಿಯುವ ಉದ್ದೇಶದಿಂದ ದಿವಾನರು ಆಗಸ್ಟ್ 31ರಂದು ಸರಕಾರದ ಪ್ರಕಟಣೆಯೊಂದನ್ನು ಹೊರಡಿಸಿ ಕೆಲವು ಸುಧಾರಣೆಗಳನ್ನು ಪ್ರಚಾರ ಮಾಡಿದರು. ಆದರೆ ಈ ಸುಧಾರಣೆಗಳು ಕಾಂಗ್ರೆಸ್ಸಿನ ಪ್ರಮುಖ ಬೇಡಿಕೆಯಾದ ಜವಾಬ್ದಾರೀ ಸರಕಾರ ವನ್ನು ಕೊಡದ ಕಾರಣ ಅವನ್ನು ಜನತೆ ತಿರಸ್ಕರಿಸಿತು.

ಚಳುವಳಿಯನ್ನು ತೀವ್ರಗೊಳಿಸಬೇಕೆಂದು ಕೆಲವು ಕಾಂಗ್ರೆಸ್ಸಿನವರು ಒಂದು ಪ್ರತ್ಯೇಕ ಒಳಗುಂಪನ್ನು (Ginger Group) ಮಾಡಿಕೊಂಡರು. ಈ ಪ್ರಗತಿ ಗುಂಪಿನವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪೌರವಾಣಿಯೆಂಬ ವಾರಪತ್ರಿಕೆಯನ್ನು ಆರಂಭಿಸಿದರು. ಚಳುವಳಿ ಹತ್ತಿರ ವಾದಂತೆ ಅದು ದಿನ ಪತ್ರಿಕೆಯಾಗಿ ಬದಲಾವಣೆಗೊಂಡಿತು. “ಕಾಂಗ್ರೆಸ್ ಚಳುವಳಿಗೇ ಮೀಸಲಾದ ಪತ್ರಿಕೆಯಾದ್ದರಿಂದ ತೀಕ್ಷ್ಣವಾದ ಲೇಖನಗಳಿಗೂ ಹುರಿದುಂಬಿಸುವ ಘಟನೆಗಳಿಗೂ, ಖಂಡ ತುಂಡವಾದ ಅಗ್ರ ಲೇಖನಗಳಿಗೂ ಪೌರವಾಣಿ ಹೆಸರಾಯಿತು.” ಟಿ. ಟಿ. ಶರ್ಮರು ಅದರಲ್ಲಿ ಲೇಖನಗಳನ್ನು ಬರೆದು ಸಂಸ್ಥಾನದ ಆಡಳಿತ ವೈಖರಿ, ಸರಕಾರದ ನಿರಂಕುಶತೆ, ಜನತೆಯ ಕೋರಿಕೆಗಳು, ಕ್ರಾಂತಿಯ ಸಿದ್ಧತೆಗಳನ್ನು ತಿಳಿಸಿದರು. ಜನತೆಯಲ್ಲಿ

ಚೇತನ ಮತ್ತು ಆವೇಶವನ್ನು ತುಂಬಲು ಅನುಕೂಲವಾಯಿತು. ಸರಕಾರದ ವಕ್ರ ದೃಷ್ಟಿ ಪತ್ರಿಕೆಯಮೇಲೆ ಬಿದ್ದು ಅವಕ್ಕೆ ಬಹಳ ತೊಂದರೆ ಕೊಟ್ಟರು.

ಅರಮನೆ ಸತ್ಯಾಗ್ರಹ

ಕಾಂಗ್ರೆಸ್ಸಿನ ಬೇಡಿಕೆಗಳನ್ನು ಸರಕಾರವು ಒಪ್ಪಿಕೊಳ್ಳದಿದ್ದುದರಿಂದ ಈ ಮೊದಲೇ ನಿರ್ಧರಿಸಿದ್ದಂತೆ, ಕಾಂಗ್ರೆಸ್ ಸೆಪ್ಟಂಬರ್ 1 ರಿಂದ ತನ್ನ ಮುಖ್ಯ ಗುರಿಗಳನ್ನು ಸಾಧಿಸಿಕೊಳ್ಳಲು ಸತ್ಯಾಗ್ರಹವನ್ನು ಆರಂಭಿಸಿತು. ಸೆಪ್ಟೆಂಬರ್ 1ರಂದು ಎಲ್ಲಾ ಕಡೆಗಳಲ್ಲಿಯೂ ಉತ್ಸಾಹ ಉಕ್ಕುತ್ತಿತ್ತು. ಕಾರ್ಮಿಕರೆಲ್ಲರೂ ಹರತಾಳದಲ್ಲಿ ಭಾಗವಹಿಸಿದರು. ಅಂದು ಬೆಳಿಗ್ಗೆಯೇ ಬೆಂಗಳೂರಿನ ಸುಭಾಷ್ ನಗರದಲ್ಲಿ ನಾಯಕರ ಭಾಷಣ ಕೇಳಲು ಜನರು ಎಲ್ಲಾ ಕಡೆಗಳಿಂದಲೂ ಬಂದು ಸೇರಿದರು. ಕಾಂಗ್ರೆಸ್ ಅಧ್ಯಕ್ಷ ಕೆ. ಸಿ. ರೆಡ್ಡಿಯವರು ಅಂದು ಬೆಳಿಗ್ಗೆ ರಾಷ್ಟ್ರಧ್ವಜಾರೋಹಣ ಮಾಡಿ ಸತ್ಯಾಗ್ರಹ ಮಾಡಲೇಬೇಕಾದ ಸಂದರ್ಭವನ್ನು ವಿವರಿಸಿದರು. ಅಲ್ಲಿಂದ ಮುಂದೆ ಎಲ್ಲರೂ ನಗರದ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಹೊರಟು ಸರಕಾರದ ಕೇಂದ್ರವಾದ ಅಠಾರಾ ಕಛೇರಿಯನ್ನು ಸುತ್ತುಹಾಕಿ ನಂತರ ಚದುರಿದರು.

ಅದೇ ದಿನ ಸಂಜೆ ಜಿಲ್ಲಾಧಿಕಾರಿಗಳ ಆಫೀಸಿನ ಎದುರಿಗಿರುವ ಬನಪ್ಪಾ ಪಾರ್ಕಿನಲ್ಲಿ ಒಂದು ಸಭೆ ನಡೆಯಿತು, ಸರ್ವಾಧಿಕಾರಿ ಕೆ. ಸಿ. ರೆಡ್ಡಿಯವರು 'ಮೈಸೂರು ಚಲೋ' ಘೋಷಿಸಿ ಮೈಸೂರು ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಲು 4ನೇ ತಾರೀಖಿನಿಂದ ಜಾಥಾಗಳು ಹೊರಡುವುದನ್ನು ತಿಳಿಸಿದರು. ಜವಾಬ್ದಾರೀ ಸರಕಾರ ಕೂಡಲೇ ಆರಂಭಿಸಲೂ, ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾ ಸಭೆ ರಚಿಸಲೂ, ರಾಜ್ಯಾಂಗ ರಚನೆಯ ತನಕ ತಾತ್ಕಾಲಿಕ ಸರಕಾರವೇರ್ಪಡಿಸಲೂ, ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂದೂ ತಮ್ಮ ನಾಲ್ಕು ಬೇಡಿಕೆಗಳನ್ನು ವಿವರಿಸಿದರು. ಈ ಸಭೆಯನ್ನುಉದ್ದೇಶಿಸಿ ಟಿ. ಸಿದ್ಧಲಿಂಗಯ್ಯನವರೂ ಮಾತನಾಡಿ ಮಹಾರಾಜರನ್ನು ಮಧ್ಯವರ್ತಿಗಳಿಂದ ಬಿಡುಗಡೆ ಮಾಡುವುದೇ 'ಮೈಸೂರು ಚಲೋ' ಚಳುವಳಿಯ ಗುರಿ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕೆ. ಟಿ ಭಾಷ್ಯಂರವರು "ನಾವು ಧರ್ಮಯುದ್ಧ ಆರಂಭಿಸಲು ಇಲ್ಲಿ ಸೇರಿದ್ದೇವೆ. ನಾವು ಮಾಡಬೇಕು ಅಥವಾ

ಮುಡಿಯಬೇಕು" ಎಂದು ಘೋಷಿಸಿದರು. ಇದೇ ರೀತಿ ಮೈಸೂರು ನಗರದ ಸುಬ್ಬರಾಯನ ಕೆರೆಯಲ್ಲಿಯೂ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಇನ್ನಿತರ ನಗರ ಮತ್ತು ಪಟ್ಟಣ ಕೇಂದ್ರಗಳಲ್ಲಿಯೂ ಸಭೆಗಳು ನಡೆದು ಅರಮನೆಯ ಸತ್ಯಾಗ್ರಹದಲ್ಲಿ ಪಾಲುಗೊಳ್ಳಲು ಸಿದ್ಧರಾಗಿ 'ಮೈಸೂರು ಚಲೋ' ಚಳುವಳಿ ಆರಂಭಿಸಲು ಉತ್ಸುಕರಾದರು. ಬೆಂಗಳೂರು, ಮೈಸೂರು ನಗರಗಳಲ್ಲಿಯೂ ಇನ್ನಿತರ ಕೇಂದ್ರಗಳಲ್ಲಿಯೂ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗದೆ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಹೋಗಿ ಸಂಜೆ ನಡೆದ ಸಭೆಗಳಲ್ಲಿ ಉತ್ಸಾಹದಿಂಧ ಭಾಗವಹಿಸಿದರು. ವ್ಯಾಪಾರಗಾರರು ಅಂಗಡಿಗಳನ್ನು ತೆರೆಯದೆ ಹರತಾಳ ಆಚರಿಸಿದರು. ಬೆಂಗಳೂರು ಜಿಲ್ಲೆಯ ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಆನೇಕಲ್, ಮಾಗಡಿ, ಚನ್ನಪಟ್ಟಣ, ಕೆಂಗೇರಿ, ಯಲಹಂಕ ಹಾಗೂ ಮಂಡ್ಯ, ತುಮಕೂರು ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಹಾಸನ, ಕಡೂರು ಮುಂತಾದ ಪ್ರದೇಶಗಳಲ್ಲಿಯೂ ಹರತಾಳ ಆಚರಿಸಿದರು. ಶಾಲಾ ಕಾಲೇಜು ವಿದ್ಯಾರ್ಥಿಗಳು ಕಾಲೇಜಿಗೆ ಹೋಗದೆ ಸತ್ಯಾಗ್ರಹದಲ್ಲಿ ಭಾಗವಹಿಸಿದರು. 'ಚಲೋ ಮೈಸೂರು' ಕೂಗು ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಗುಡುಗಿತು. ಸತ್ಯಾಗ್ರಹವು ಇಡೀ ಸಂಸ್ಥಾನದಲೆಲ್ಲಾ ಹರಡಿ, ವಿವಿಧ ಭಾಗಗಳಲ್ಲಿ ವಿವಿಧ ರೂಪ ಪಡೆಯಿತು. ಇದೇ ಕೊನೆಯ ಸತ್ಯಾಗ್ರಹ ಚಳುವಳಿಯೆಂದು ಅದರಲ್ಲಿ ಭಾಗವಹಿಸಲು ಉತ್ಸಾಹದಿಂದ ಮುಂದೆ ಬಂದರು. ಸಾವಿರಾರು ಜನರು ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಗ್ರಂಥಾಲಯ.

ಚಳುವಳಿ ಪ್ರಾರಂಭ ಮತ್ತು ಬಂಧನಗಳು.

'ಮೈಸೂರು ಚಲೋ' ಚಳುವಳಿಗೆ ಸಿದ್ಧತೆಗಳನ್ನು ಮಾಡಿಕೊಂಡು ಸೆಪ್ಟಂಬರ್ 4ರ ಬೆಳಿಗ್ಗೆ ಮೈಸೂರಿಗೆ ಹೊರಡಲಿದ್ದವರು ಪ್ರಥಮ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಮತ್ತು ಇತರ ಪ್ರಮುಖ ಕಾಂಗ್ರೆಸ್ ನಾಯಕರು. ಸತ್ಯಾಗ್ರಹ ಚಳುವಳಿಯನ್ನು ದಮನಮಾಡುವ ಉದ್ದೇಶದಿಂದ, ಸರಕಾರದ ಅಧಿಕಾರಿಗಳು ಸೆಪ್ಟಂಬರ್ 3ರ ರಾತ್ರಿಯೇ ಕಾಂಗ್ರೆಸ್ ನಾಯಕರನ್ನೆಲ್ಲಾ ಸಂಸ್ಥಾನದಲ್ಲೆಲ್ಲಾ

ಬಂಧಿಸಿದರು. ಜೊತೆಗೆ ಜಿಲ್ಲಾ ನ್ಯಾಯಾಧೀಶರು ಪೊಲೀಸ್ ಕಾನೂನಿನ 39 ಮತ್ತು 45ರ ನಿಬಂಧನೆಯಂತೆ, ನಿಷೇಧಾಜ್ಞೆಗಳನ್ನು ಜಾರಿಗೆ ತಂದರು. ಕಾಂಗ್ರೆಸ್ ಮತ್ತು ಕಾರ್ಮಿಕ ನಾಯಕರು ಮತ್ತು ಕಮ್ಯೂನಿಷ್ಟರನ್ನು ಬಂಧಿಸಿದ ಸುದ್ಧಿಯು ನಗರದಲ್ಲೆಲ್ಲಾ ಹರಡಿ, ವಿದ್ಯಾರ್ಥಿಗಳು ಹಾಗೂ ಕಾರ್ಮಿಕರೂ ಮೆರವಣಿಗೆಗಳನ್ನು ಕೊಂಡೊಯ್ದು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಾಯಂಕಾಲ ಕಾರ್ಮಿಕರ ಮತ್ತು ವಿದ್ಯಾರ್ಥಿಗಳ ಗುಂಪೊಂದು ಕೇಂದ್ರ ಪೊಲೀಸ್ ಠಾಣೆಗೆ ನುಗ್ಗಲು ಪ್ರಯತ್ನಿಸಿತು. ಅದನ್ನು ತಡೆಯಲು ಪೊಲೀಸರು ಗುಂಡು ಹಾರಿಸಿದರು. ಅದರಿಂದ ಸ್ಥಳದಲ್ಲಿಯೇ ಇಬ್ಬರು ಮೃತಪಟ್ಟು ಅನೇಕರು ಗಾಯಗೊಂಡರು. ಗಾಯಗೊಂಡವರಲ್ಲಿ ಮತ್ತಿಬ್ಬರು ಆಸ್ಪತ್ರೆಯಲ್ಲಿಮಡಿದರು. ಎಲ್ಲಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೂ ತರಗತಿಗಳಿಗೆ ಹೋಗದೆ ಸತ್ಯಾಗ್ರಹದಲ್ಲಿ ಭಾಗವಹಿಸಿದರು ಮತ್ತು ಗಿರಣಿಗಳ ಅನೇಕ ಕಾರ್ಮಿಕರು ಕೆಲಸಕ್ಕೆ ಹೋಗಲಿಲ್ಲ. ಜಿಲ್ಲಾ ಕೇಂದ್ರಗಳಲ್ಲಿಯೂ ಹೆಚ್ಚು ಮಂದಿ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗಲಿಲ್ಲ. ತುಮಕೂರು, ಗುಬ್ಬಿ, ಕುಣಿಗಲ್, ಮಧುಗಿರಿ ಮತ್ತು ತಿಪಟೂರುಗಳಲ್ಲಿ ಕಾಂಗ್ರೆಸ್ ಚಳುವಳಿಯಲ್ಲಿ ಸಹಾನುಭೂತಿಯಿಂದ ಕೂಡಿದ್ದ ವಿಧ್ಯಾರ್ಥಿಗಳು ಮತ್ತಿತರರು ಹೆಂಡದಂಗಡಿಗಳನ್ನು ಮುಚ್ಚಿಸಿ ಸರಕಾರಿ ಕಾರ್ಯಾಲಯಗಳ ಮುಂದೆ ಪಿಕೆಟಿಂಗ್ ಮಾಡಿ, ರೈಲಿನಲ್ಲಿ ಟಿಕೆಟ್ ರಹಿತ ಪ್ರಯಾಣ ಮಾಡಲು ಉಪಕ್ರಮಿಸಿದರು. ಕೋಲಾರ ಜಿಲ್ಲೆ ಮುಳಬಾಗಿಲು ಮತ್ತು ಮಾಲೂರುಗಳಲ್ಲಿ ಸಾರ್ವಜನಿಕ ಸಭೆಗಳು ನಡೆದವು.

ಸೆಪ್ಟಂಬರ್ 5 ರಂದೂ ಕೂಡ ಬೆಂಗಳೂರಿನಿಂದ ಬಸವನಗುಡಿ ಪ್ರದೇಶದ ರಸ್ತೆಗಳಲ್ಲಿ ಪ್ರತಿಬಂಧಕಗಳನ್ನು ಹಾಕಿದ್ದರು. ಅವುಗಳನ್ನು ಪೋಲೀಸರು ತೆಗೆಯುತ್ತಿದ್ದಾಗ, ಗುಂಪಿನ ಜನರು ಕಲ್ಲು ಹೊಡೆದರು. ಪೋಲೀಸರು ಗುಂಪನ್ನು ಚದುರಿಸಲು ಗುಂಡು ಹಾರಿಸಿದಾಗ ಅನೇಕರು ಗಾಯಗೊಂಡರು. ಗಾಯಗೊಂಡವರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಮಡಿದನು. ಕಂಟೋನ್‌ಮೆಂಟ್ ಕಡೆಯಿಂದಲೂ ಸತ್ಯಾಗ್ರಹಿಗಳ ಜಾತಾಗಳು ಮೈಸೂರು ಕಡೆಗೆ ಹೊರಟವು. ಅವುಗಳ ನಾಯಕರುಗಳನ್ನೆಲ್ಲಾ ಪೋಲಿಸರು ಬಂಧಿಸಿದರು.

ಸೆಪ್ಟಂಬರ್ 6ರಂದು ಸುಮಾರು 2 ಸಾವಿರ ಜನರು ಕಲ್ಲು ಮತ್ತು ಇಟ್ಟಿಗೆಗ ಳೊಡನೆ ಮಲ್ಲೇಶ್ವರಂ ಪೊಲೀಸ್ ಸ್ಟೇಷರ್ನಗೆ ಮುತ್ತಿಗೆ ಹಾಕಿದರು. ಪೋಲೀಸರು ಕುಪಿತಗೊಂಡು ಗುಂಡು ಹಾರಿಸಿದಾಗ ಇಬ್ಬರು ಮಡಿದರು. ಅನೇಕ ದಿನಗಳವರೆಗೆ ಬೆಂಗಳೂರು ನಗರದ ರಸ್ತೆಗಳಲ್ಲಿ ಸತ್ಯಾಗ್ರಹಿಗಳು ಸಂಚಾರಕ್ಕೆ ಅಡ್ಡಿಮಾಡುತ್ತಿದ್ದರು, ಟೆಲಿಫೋನ್ ತಂತಿಗಳನ್ನು ಕತ್ತರಿಸಲು ಆರಂಭಿಸಿ, ರೈಲ್ವೆ ಸೇತುವೆ ನಾಶಗೊಳಿಸುವ ಪ್ರಯತ್ನ ಮಾಡುತ್ತಿದ್ದರು. ಆದರೆ ಅದು ಪೋಲೀಸರ ಬರುವಿಕೆಯಿಂದ ತಪ್ಪಿಸಲ್ಪಟ್ಟಿತು. ಕಂಟೋನ್ಮೆಂಟ್ ಪ್ರದೇಶದಿಂದ ಸೆಪ್ಟಂಬರ್ 13ರವರೆಗೂ ಸತ್ಯಾಗ್ರಹಿಗಳ ಜಾತಾಗಳು ಹೊರಟವು. ಪೊಲೀಸರು ಗುಂಡು ಹಾರಿಸಿದುದರ ಪರಿಣಾಮವಾಗಿ ಇಬ್ಬರು ಮಡಿದರು. ಮತ್ತು 13 ಜನ ಗಾಯಗೊಂಡರು ಮತ್ತು 5 ಜನ ಆಸ್ಪತ್ರೆಯಲ್ಲಿ ಮಡಿದರು.

ಚನ್ನಪಟ್ಟಣ, ಕಾನಕಾನಹಳ್ಳಿ, ಪಾಂಡವಪುರ, ಕೃಷ್ಣರಾಜನಗರ ತಾಲ್ಲೂಕುಗಳಿಂದ ಮೈಸೂರಿಗೆ ಹೋಗುತ್ತಿದ್ದ ಸತ್ಯಾಗ್ರಹಿಗಳ ಗುಂಪುಗಳನ್ನು ಪೋಲೀಸರು ಚದುರಿಸಿ ನಾಯಕರನ್ನು ಬಂಧಿಸಿವರು. ಸಂಸ್ಥಾನದ ರೈಲ್ವೆ ಕೆಲಸಗಾರರೂ ಕೂಡ ಸೆಪ್ಟಂಬರ್ 6ರಂದು ಸತ್ಯಾಗ್ರಹ ಚಳುವಳಿ ಸೇರಿದರು. ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ, ಮೈಸೂರು ಚಲೋ ಚಳುವಳಿಯ ಬಗ್ಗೆ ಕಾರ್ಮಿಕರ ಕರ್ತವ್ಯದ ಬಗ್ಗೆ ನಾಯಕರು ವಿವರಿಸಿ, ಚಳುವಳಿಗೆ ಸಹಾಯ ಮಾಡಲು ಕೋರಿದರು. ಹೆಚ್. ಸಿ. ದಾಸಪ್ಪನವರ ಬಂಧನವನ್ನು ವಿರೋಧಿಸಿ ಮಂಡ್ಯದ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಕೆಲಸಕ್ಕೆ ಹೋಗದೆ ಹರತಾಳ ಆಚರಿಸಿದರು. ಪಾಂಡವಪುರದಲ್ಲಿ ಗುಂಪೊಂದರ ಮೇಲೆ ಪೊಲೀಸರು ಗುಂಡು ಹಾರಿಸಿದುದರಿಂದ ಸ್ಥಳದಲ್ಲಿಯೇ ಒಬ್ಬರು ಮಡಿದರು. ಮೈಸೂರು ನಗರದಲ್ಲಿಯೂ, ಅರಮನೆ ಕಡೆಗೆ ಮೆರವಣಿಗೆಯಲ್ಲಿ ಹೋಗುತ್ತಿದ್ದ ಸತ್ಯಾಗ್ರಹಿಗಳ ಗುಂಪನ್ನು ಪೋಲೀಸರು ಲಾಠಿ ಛಾರ್ಜುಮಾಡಿ ಚದುರಿಸಿದರು. ಸಾಯಂಕಾಲ ಅರಮನೆಯ ಹತ್ತಿರ ಸೇರಿದ್ದ ಜನರ ಗುಂಪನ್ನು ಪೋಲೀಸರು ಚದುರಿಸಿದರು. ಆದರೆ ಗುಂಪಿನ ಕೆಲವರು ಲೈಟುಗಳನ್ನು ನಾಶಮಾಡಿ, ಅಂಗಡಿಗಳ ಮೇಲೆ ಮುತ್ತಿಗೆ ಹಾಕಿದರು. ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು.

ಮೈಸೂರು ನಗರದಲ್ಲಿ ಗೋಲೀಬಾರು ಮತ್ತು ನಗರಗಳಲ್ಲಿ ಕರ್ಫ್ಯೂ ಆಜ್ಞೆಗಳ ಜಾರಿ

ಕಾಂಗ್ರೆಸ್ ನಾಯಕರುಗಳನ್ನು ಬಂಧಿಸಿದುದರಿಂದ ಮೈಸೂರು ನಗರದಲ್ಲಿ ಸಂದಿಗ್ಧ ಪರಿಸ್ಥಿತಿಯಿತ್ತು. ಕೆಲವು ಕಾರ್ಮಿಕರು ಮೆರವಣಿಗೆಯಲ್ಲಿ ಹೋಗಲು ಪ್ರಯತ್ನಿಸಿದರು. ಪೋಲೀಸರು ಅವರನ್ನು ಚದುರಿಸಿದರು. ಮಹಾರಾಜ ಕಾಲೇಜು ಮುಂದೆ 5ನೇ ತಾ|| ಬೆಳಿಗ್ಗೆ ಜಿಲ್ಲಾ ನ್ಯಾಯಾಧೀಶರ ಆಜ್ಞೆಯ ವಿರುದ್ಧ ಒಂದು ಸಭೆ ನಡೆಯಿತು. ಪೋಲೀಸರು ಹೇಳಿದರೂ ಸಭೆಯು ಚದುರದೆ ಹೋಗಲು ಲಾಠಿ ಛಾರ್ಜು ಮಾಡಿದರು. ಅಲ್ಲಿಂದ ಚದುರಿದ ವಿದ್ಯಾರ್ಥಿಗಳು ನೂರಡಿ ರಸ್ತೆಯ (ಈಗ ಚಾಮರಾಜ ರಸ್ತೆ) ಐದು ಲೈಟುಗಳ ಸರ್ಕಲ್ ಹತ್ತಿರ ಗುಂಪು ಕೂಡಿದರು. ಪೋಲೀಸ್ ಮತ್ತು ಸೈನ್ಯ ಪಡೆಗಳು ವೈಸ್ರಾಯಿ ರಸ್ತೆ (ಈಗ ಝಾನ್ಸಿಲಕ್ಷ್ಮೀಬಾಯಿ ರಸ್ತೆ) ಯಲ್ಲಿಗೆ ಬಂದವು. ಒಬ್ಬ ಪೋಲೀಸ್ ಪೇದೆಯು ಒಂಟಿಯಾಗಿ ಹಾರ್ಡಿವಿಕ್ ಹೈಸ್ಕೂಲಿನ ಹತ್ತಿರ ವಿದ್ಯಾರ್ಥಿ ಗುಂಪಿಗೆ ಸಿಕ್ಕಿಬಿದ್ದ. ಅವನನ್ನು ವಿದ್ಯಾರ್ಥಿಗಳು ಹಿಡಿದು ರೇಗಿಸಿ ಗೇಲಿ ಮಾಡಿದರು. ಈ ಸುದ್ದಿ ತಿಳಿದ ತಕ್ಷಣ ಸೈನ್ಯ ಮತ್ತು ಪೋಲೀಸರು ಅಲ್ಲಿಗೆ ಬಂದರು. ಅಷ್ಟರಲ್ಲಿ 5 ಲಾಂದ್ರುಗಳ ಸರ್ಕಲ್ ಹತ್ತಿರದ ಎಲ್ಲಾ ರಸ್ತೆಗಳ ಕಡೆಗಳಲ್ಲಿಯೂ ವಿದ್ಯಾರ್ಥಿಗಳು ಗುಂಪು ಕೂಡಿ ಪೋಲೀಸರಿಗೆ ಕಲ್ಲು ತೂರಲಾರಂಭಿಸಿದರು. ಪೋಲೀಸರು ಕುಪಿತಗೊಂಡು ಗುಂಡುಹಾರಿಸಿದರು. ಪರಿಣಾಮವಾಗಿ ಹಾರ್ಡಿವಿಕ್ ಹೈಸ್ಕೂಲಿನ ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಮಡಿದು ಅನೇಕರಿಗೆ ಗಾಯಗಳಾದವು. ಆದುದರಿಂದಲೇ ಆ ಸ್ಥಳಕ್ಕೆ ರಾಮಸ್ವಾಮಿ ಸರ್ಕಲ್ ಎಂದು ಹೆಸರಿಟ್ಟಿದ್ದಾರೆ. ಸರಕಾರ ಮೈಸೂರು ನಗರದಲೆಲ್ಲಾ ಕರ್ಫ್ಯೂ ಅಜ್ಞೆ ವಿಧಿಸಿತು. ಮೈಸೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಹೆಂಡದಂಗಡಿಗಳ ಮುಂದೆ ಹಾಗೂ ಸರಕಾರಿ ಕಛೇರಿಗಳ ಮುಂದೆ ಶಾಂತಿಯುತವಾಗಿ ಪಿಕೆಟಿಂಗ್ ಮಾಡಿದರು. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಚಳುವಳಿಯು ಮುಂದುವರಿಯಿತು.

ಶಿವಮೊಗ್ಗ ಜಿಲ್ಲೆಯಲ್ಲಿ ಸತ್ಯಾಗ್ರಹ ಚಳುವಳಿಯು ಗಂಧದಮರ ಕಡಿಯುವ ರೂಪ ಪಡೆಯಿತು. ಚಿತ್ರದುರ್ಗದಲ್ಲಿ ಬಳ್ಳಾರಿ ಸಿದ್ದಮ್ಮ ಮತ್ತಿತರರ

ನೇತೃತ್ವದಲ್ಲಿ ಒಂದು ದೊಡ್ಡ ಗುಂಪು ಸೆಪ್ಟಂಬರ್ 11 ಮತ್ತು 13ರಂದು ರಾಷ್ಟ್ರೀಯ ಧ್ವಜ ಹಾರಿಸಲು ಪ್ರಯತ್ನಿಸಿದರು. ಅಧಿಕಾರಿಗಳು ನಾಯಕರನ್ನು ಬಂಧಿಸಿದರು. ಕೋಲಾರ ನಗರದಲ್ಲಿ 10ರಂದು ದಿವಾನರ ಪ್ರತಿಮೆಯನ್ನು ತೆಗೆದುಕೊಂಡು ಹೋಗಿ ಸ್ಮಶಾನದಲ್ಲಿ ಸುಟ್ಟರು. 12ನೇ ತಾ|| ಶಿಡ್ಲಘಟ್ಟದಲ್ಲಿ ತಾಲ್ಲೂಕು ಕಛೇರಿಯ ಹತ್ತಿರ ಸಭೆ ನಡೆಸಿದರು. ಅವರನ್ನು ಚದುರಿಸಲು ಪ್ರಯತ್ನಿಸಿದಾಗ ಜನರು ಪೋಲೀಸರ ಕಡೆಗೆ ಕಲ್ಲು ತೂರಿದರು. ಅಧಿಕಾರಿಗಳು ಗುಂಡುಹಾರಿಸಿದರು. ಪರಿಣಾಮವಾಗಿ ಒಬ್ಬರು ಮಡಿದು 3 ಜನರಿಗೆ ಗಾಯಗಳಾದವು.

ಬೆಂಗಳೂರು ನಗರದಲ್ಲಿ 14ರಂದು ಕರ್ಫ್ಯೂ ಜಾರಿಗೆ ತಂದರು. 19ರಂದು ಜನರ ಗುಂಪೊಂದು ಜಿಲ್ಲಾ ಕಛೇರಿಯ ಮುಂದೆ ಸೇರಿ ಕಛೇರಿಯ ಮೇಲೆ ಧ್ವಜ ಹಾರಿಸಿದರು. ಸುಮಾರು 160 ಜನ ಯುವಕರ ಜಾತದ ನಾಯಕತ್ವ ವಹಿಸಿಕೊಂಡು ಮೈಸೂರಿಗೆ ಹೋಗಲು ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷ ರವೀಂದ್ರವರ್ಮರವರು 14 ಜನ ವಿದ್ಯಾರ್ಥಿಗಳೊಡನೆ ರೈಲಿನಲ್ಲಿ ಬೆಂಗಳೂರಿಗೆ ಬರುತ್ತಿದ್ದರು. ಅವರನ್ನು ಬೆಂಗಳೂರು ಈಸ್ಟ್‌ಸ್ಟೇಷನ್‌ನಲ್ಲಿ ಬಂಧಿಸಿದರು. ಉಳಿದವರನ್ನು ಚದುರಿಸಿದರು.

ಮೂರನೇ ಸರ್ವಾಧಿಕಾರಿ ಎಸ್. ನಿಜಲಿಂಗಪ್ಪನವರು ಮಡಿಕೇರಿಯಿಂದ ಮೈಸೂರು ನಗರಕ್ಕೆ ಬಂದಾಗ ಅವರನ್ನು 13ನೇ ತಾರೀಖು ಮೈಸೂರಿನಲ್ಲಿ ಬಂಧಿಸಿದರು. ಪಡುವಾರಹಳ್ಳಿ, ಹುಣಸೂರು, ಕೃಷ್ಣರಾಜನಗರ, ಟಿ. ನರಸೀಪುರಗಳಿಂದ ಮೈಸೂರು ನಗರದ ಕಡೆಗೆ ಧಾವಿಸಿದ ಸತ್ಯಾಗ್ರಹಿಗಳ ತಂಡಗಳನ್ನು ಅಧಿಕಾರಿಗಳು ಬಂಧಿಸಿದರು. ತುಮಕೂರಿನಲ್ಲಿ ಸುಮಾರು 1000 ಜನರಿದ್ದ ಗುಂಪಿನ ಮೇಲೆ 14ರಂದು ಅಧಿಕಾರಿಗಳು ಗುಂಡುಹಾರಿಸಿದರು. ಅದರಿಂದ ಇಬ್ಬರು ಮಡಿದು 8 ಜನ ಗಾಯಗೊಂಡರು.

ಚಿತ್ರದುರ್ಗ ಜಿಲ್ಲೆಯಲ್ಲಿ ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದು ಮತ್ತು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಅವುಗಳನ್ನು ಸುಡುವುದಕ್ಕೆ ಪ್ರಯತ್ನಿಸಿದರು. ರಾಷ್ಟ್ರಧ್ವಜವನ್ನು ತಾಲ್ಲೂಕು ಕಛೇರಿ ಮತ್ತು ಪೋಲೀಸ್‌ಸ್ಟೇಷನ್‌ಗಳ ಮೇಲೆ ಹಾರಿಸಲಾರಂಭಿಸಿದರು. ಸರಕಾರಿ ಅಧಿಕಾರಿಗಳ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿ ತೆರಿಗೆ ಕೊಡಲು ನಿರಾಕರಿಸಿದರು.

ಸತ್ಯಾಗ್ರಹ ಚಳುವಳಿಯು ಚಿತ್ರದುರ್ಗ, ದಾವಣಗೆರೆ ಮತ್ತು ಹರಿಹರಗಳಲ್ಲಿ ಬಹಳ ಜೋರಾಗಿಯೇ ನಡೆಯಿತು.

ಸತ್ಯಾಗ್ರಹ ಶಿಬಿರಗಳು

ಮೈಸೂರು ಸರಕಾರವು ಸತ್ಯಾಗ್ರಹ ಚಳುವಳಿಯನ್ನು ದಮನ ಮಾಡಲು ಅನೇಕ ನಾಯಕರನ್ನು ದಸ್ತಗಿರಿ ಮಾಡಿ, ಪ್ರತಿಬಂಧಕಾಜ್ಞೆಗಳನ್ನು ಜಾರಿಗೆ ತಂದು, ವೃತ್ತಪತ್ರಿಕೆಗಳ ಮೇಲೂ ಪ್ರತಿಬಂಧಕಗಳನ್ನು ಹೇರಿದರು. ಇದನ್ನು ವಿರೋಧಿಸಿ ಸೆಪ್ಟಂಬರ್ 2ರಿಂದ 29ರವರೆಗೂ ಪತ್ರಿಕೆಗಳು ತಮ್ಮ ಪ್ರಕಟಣೆ ಯನ್ನು ನಿಲ್ಲಿಸಿದವು. ಸರಕಾರವು ನಿಷೇಧಾಜ್ಞೆಯನ್ನು ಹಿಂದಕ್ಕೆ ಪಡೆದ ನಂತರವೇ ಅವು ತಮ್ಮ ಪತ್ರಿಕಾ ಪ್ರಕಟಣೆಯನ್ನು ಪುನಃ ಆರಂಭಿಸಿದವು. ಸತ್ಯಾಗ್ರಹ ಕಾಲದಲ್ಲಿ ವೃತ್ತ ಪತ್ರಿಕೆಗಳ ಪ್ರಕಟಣೆಗೆ ಸರಕಾರ ನಿರ್ಬಂಧಕಾಜ್ಞೆ ಗಳನ್ನು ಹಾಕಿದುದರಿಂದ, ಮೈಸೂರು ಸಂಸ್ಥಾನದ ಹೆಚ್. ಎಸ್. ದೊರೆ ಸ್ವಾಮಿ, ರುಮಾಲೆ ಚನ್ನಬಸವಯ್ಯ ಮುಂತಾದ ಕೆಲವು ನಾಯಕರುಗಳು ಪಕ್ಕದ ಗಡಿ ಪ್ರದೇಶ ಹಿಂದೂಪುರಕ್ಕೆ ಹೋಗಿ ಅಲ್ಲಿಯೇ ನೆಲಸಿದ್ದು, ಅಲ್ಲಿಯ ಕೆಲವರ ಸಹಕಾರದಿಂದ ಒಂದು ಸತ್ಯಾಗ್ರಹ ಶಿಬಿರವನ್ನು ತೆರೆದು ಅಲ್ಲಿಂದ ಸಂಸ್ಥಾನದ ಸತ್ಯಾಗ್ರಹ ಬೆಳವಣಿಗೆಗಳನ್ನು 'ಪೌರವಾಣಿ' ಯಲ್ಲಿ ಪ್ರಕಟಿಸಿ ಸಾರ್ವಜನಿಕರಿಗೆ ಚಳುವಳಿಯ ವಿಷಯ ತಿಳಿಸುತ್ತಿದ್ದರು. ಎಸ್. ಎನ್. ಗುಪ್ತಾರವರು (ಕಟಿಕಾ ಅಡ್ವರ್ಟೈಸಿಂಗ್) ಮದ್ರಾಸಿನಲ್ಲಿ ಒಂದುಶಿಬಿರವನ್ನು ಏರ್ಪಡಿಸಿ ಗುಟ್ಟಾದ ವಿಷಯಗಳನ್ನು ನಾಯಕರಿಗೆ ತಿಳಿಸುವ ಕೆಲಸ ಮಾಡಿ ದರು. ತುಮಕೂರಿನ ಆರ್. ಎಸ್. ಆರಾಧ್ಯರು ಹುಬ್ಬಳ್ಳಿಯಲ್ಲಿ ಒಂದು ಶಿಬಿರವನ್ನೇರ್ಪಡಿಸಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ಸಿನ ಸಹಕಾರದಿಂದ, ಸಂಸ್ಥಾನದ ಗಡಿ ಪ್ರದೇಶ ದಾವಣಗೆರೆ, ಹರಿಹರಗಳಲ್ಲಿ ನಡೆದ ಚಳುವಳಿ ಗಳನ್ನು ನಿರ್ದೇಶಿದರು.

ಹಾಸನ ಜಿಲ್ಲೆಯಲ್ಲಿಯೂ ಸತ್ಯಾಗ್ರಹವು ಪ್ರಬಲವಾಗಿದ್ದು, ಸತ್ಯಾಗ್ರಹಿ ಗಳು ಹಾಸನ ಜಿಲ್ಲಾ ಕಛೇರಿ ಯ ಮೇಲೂ, ಅರಸೀಕೆರೆ ಮತ್ತು ಸಕಲೇಶ್ವರಗಳ ಲ್ಲಿನ ತಾಲ್ಲೂಕು ಕಛೇರಿಗಳ ಮೇಲೂ ಧ್ವಜಗಳನ್ನು ಹಾರಿಸಿದರು.

ಸೆಪ್ಟಂಬರ್ ಕೊನೆವಾರದಲ್ಲಿ ಬೆಂಗಳೂರಿನ ನ್ಯೂ ಪಬ್ಲಿಕ್ ಕಛೇರಿಗಳಲ್ಲಿ ಮತ್ತು ಜಿಲ್ಲಾ ಕಛೇರಿಗಳ ಮತ್ತು ಕೋರ್ಟುಗಳ ಮುಂದೆ ಶಾಂತಿಯುತ ವಾಗಿ ವಿದ್ಯಾರ್ಥಿನಿಯರ ಗುಂಪುಗಳು ಪಿಕೆಟಿಂಗ್ ಮಾಡಿದವು. 22 ರಂದು ಬಿನ್ನಿಮಿಲ್ಲಿನ ಸುಮಾರು 3000 ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟಾಗ ಪೋಲೀಸರು ಅವರನ್ನು ಚದುರಿಸಲು ಗುಂಡು ಹಾರಿಸಿದರು. ಆಗ ಒಬ್ಬನು ಮೃತಪಟ್ಟನು. ಚನ್ನಪಟ್ಟಣ, ಪಾಂಡವಪುರ, ದೊಡ್ಡಬಳ್ಳಾಪುರ, ಆನೇಕಲ್, ಹೊಸಕೋಟೆ ಮತ್ತು ಕಾನಕಾನಹಳ್ಳಿಗಳಲ್ಲಿ ತಾಲ್ಲೂಕು ಕಛೇರಿಗಳು ಮತ್ತು ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು.

ಹೀಗೆ 'ಮೈಸೂರು ಚಲೋ' ಹಾಗೂ ಅರಮನೆಯ ಮುಂದೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಂಸ್ಥಾನದ ವಿವಿಧ ಭಾಗಗಳಿಂದ ಜನರು ಗುಂಪು ಗುಂಪುಗಳಾಗಿ ರಾಜಧಾನಿ ಮೈಸೂರಿಗೆ ಧಾವಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಸತ್ಯಾಗ್ರಹವು, ಧ್ವಜಸತ್ಯಾಗ್ರಹ, ಮೆರವಣಿಗೆಗಳು, ಪಿಕೆಟಿಂಗ್ ಮುಂತಾದ ರೂಪಗಳನ್ನು ಪಡೆಯಿತು. ಸತ್ಯಾಗ್ರಹದಲ್ಲಿ ಮಹಿಳೆಯರೂ, ವಿದ್ಯಾರ್ಥಿನಿಯರೂ ಭಾಗವಹಿಸಿದ್ದು ಒಂದು ವಿಶೇಷವಾಗಿತ್ತು. ಅಕ್ಕಪಕ್ಕದ ಪ್ರಾಂತ್ಯ ಪ್ರದೇಶಗಳಿಂದಲೂ ಅನೇಕ ಜನರು ಸಂಸ್ಥಾನಕ್ಕೆ ಬಂದು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರು. ಕೆ.ಜಿ.ಎಫ್. ನಲ್ಲಿಯೂ ಸೇರಿದಂತೆ ಅನೇಕ ಕಡೆಗಳಲ್ಲಿ ಕಾರ್ಮಿಕರು ತಮ್ಮ ಕೆಲಸವನ್ನು ನಿಲ್ಲಿಸಿ ಮುಷ್ಕರ ಹೂಡಿದರು.

'ಸ್ವತಂತ್ರ ಮೈಸೂರು ರೇಡಿಯೋ' ವೊಂದು ಪ್ರಜಾವಾಣಿ ನಾಮಕರಣದಿಂದ ಸೆಪ್ಟಂಬರ್ 23ರಿಂದ 41 ಮೀಟರುಗಳಲ್ಲಿ ಮಧ್ಯಾನ್ಹ 1-45 ಗಂಟೆಗೆ ಸ್ಪಷ್ಟವಾಗಿ ಕೇಳುತ್ತಿತ್ತು. ಜನರು ಚಳುವಳಿಯನ್ನು ನಿಲ್ಲಿಸದೆ ಮುಂದುವರಿಸಬೇಕೆಂದು ಕರೆ ನೀಡುತ್ತಿತ್ತು. ಅದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಆರಂಭವಾಗುತ್ತಿದೆಯೆಂಬ ಅನುಮಾನ ಅಧಿಕಾರಿಗಳಿಗೆ ಬಂದರೂ, ಧೃಡವಾಗಿ ಅದು ಎಲ್ಲಿಂದ ಬರುತ್ತಿದೆಯೆಂದು ತಿಳಿಯಲಿಲ್ಲ. ಕಮಲಾದೇವಿಯು ನಾಲ್ಕನೇ ಸರ್ವಾಧಿಕಾರಿ ಎಂದು ಘೋಷಿಸಿಕೊಂಡು ಕರ್ನಾಟಕ ಪ್ರದೇಶದಿಂದ ಸಂಸ್ಥಾನದ ಸತ್ಯಾಗ್ರಹ ಚಟುವಟಿಕೆಗಳಿಗೆ ಉತ್ತೇಜನವಿತ್ತರು.

ಸರಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ

ಸತ್ಯಾಗ್ರಹಿಗಳೆಲ್ಲರೂ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಅರಮನೆಯ ಮುಂದೆ ಸತ್ಯಾಗ್ರಹ ಆರಂಭಿಸುವ ಉದ್ದೇಶದಿಂದ ಅಲ್ಲಿಗೆ ಹೋದರು. ಅರಮನೆಯು ಮಿಲಿಟರಿ ಮತ್ತು ಪೋಲೀಸ್ ಪಡೆಗಳಿಂದ ಸುತ್ತುವರಿದು ರಕ್ಷಿಸಲ್ಪಟ್ಟಿತು. ಹೀಗೆ ಅರಮನೆಯ ಮುಂದೆ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಲು ಎಲ್ಲಾ ಕಡೆಗಳಿಂದಲೂ ರಾಜಧಾನಿಗೆ ಧಾವಿಸುತ್ತಿದ್ದ ಸತ್ಯಾಗ್ರಹಿಗಳನ್ನು ಸರಕಾರವು ದಸ್ತಗಿರಿ ಮಾಡಿ ಜೈಲಿಗೆ ಕಳಿಸುತ್ತಿತ್ತು. ಜೈಲುಗಳೆಲ್ಲವೂ ತುಂಬಿಹೋಗಲು, ಸತ್ಯಾಗ್ರಹಿಗಳನ್ನೆಲ್ಲಾ ದಸ್ತಗಿರಿ ಮಾಡಿ ದೂರದ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬಿಡುಗಡೆ ಮಾಡುತ್ತಿದ್ದರು. ಸೆಪ್ಟಂಬರ್ 14ರಂದು ತುಮಕೂರು ಮತ್ತು ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿ ಗಲಭೆಗಳುಂಟಾದುದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಪೋಲೀಸರು ಗುಂಡುಹಾರಿಸಿದರು. ಸಂಸ್ಥಾನದ ರೈಲ್ವೆ ಸಿಬ್ಬಂದಿಯವರು ಹಾಗೂ ಪೋಲೀಸ್ ಇಲಾಖೆಯ ಕಾನ್‌ಸ್ಟೇಬಲ್‌ರವರೂ ತಮ್ಮ ಕೆಲಸ ನಿಲ್ಲಿಸಿ ಮುಷ್ಕರ ಆರಂಭಿಸಿದರು. ಸಂಸ್ಥಾನದಲೆಲ್ಲಾ ಸಾರ್ವಜನಿಕ ಚಳುವಳಿಗಳು ಆರಂಭವಾದುವು. ಹೊಸದುರ್ಗದ ತಾಲ್ಲೂಕು ಕಛೇರಿಯ ಮುಂದೆ ಸುಮಾರು 5 ಸಾವಿರ ಜನ ಸೇರಿ ರಾಷ್ಟ್ರಧ್ವಜ ಹಾರಿಸಲು ಪ್ರಯತ್ನಿಸಿದರು. ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು. ಪರಿಣಾಮವಾಗಿ 5 ಜನ ಮಡಿದು 7 ಜನ ಗಾಯಗೊಂಡರು. ಅಕ್ಟೋಬರ್ ಮೊದಲ ವಾರದಲ್ಲಿ ಅಧಿಕಾರಿಗಳ ಕಣ್ಣು ತಪ್ಪಿಸಿ, ನಿರ್ಬಂಧಕಾಜ್ಞೆಗಳನ್ನು ಉಲ್ಲಂಘಿಸಿ, ಸತ್ಯಾಗ್ರಹಿಗಳು ಸಂಸ್ಥಾನದ ಅನೇಕ ಪ್ರದೇಶಗಳಲ್ಲಿ ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ರಾಷ್ಟ್ರಧ್ವಜ ಹಾರಿಸಿದರು.

ಸೆಪ್ಟಂಬರ್ 24ರಂದು ಮಹಾರಾಜರು ಒಂದು ಘೋಷಣೆಯನ್ನು ಹೊರಡಿಸಿ ರಾಜ್ಯಕ್ಕೆ ಇನ್ನೂ ಕೆಲವು ಸುಧಾರಣೆಗಳನ್ನು ಜಾರಿಗೆ ತರುವುದಾಗಿ ತಿಳಿಸಿದರು. ಮಂತ್ರಿಮಂಡಲವೊಂದು ಶಾಸಕಾಂಗಕ್ಕೆ ಜವಾಬ್ದಾರಿಯಿಂದ ಕೂಡಿದ್ದು, ಜವಾಬ್ದಾರೀ ಸರಕಾರದ ರೂಪ ಪಡೆಯುತ್ತದೆಂದು ತಿಳಿಸಿ ಬದಲಾವಣೆಗಳೆಲ್ಲವೂ 1948ರ ಜುಲೈ 1ರಿಂದ ಜಾರಿಗೆ ಬರುತ್ತವೆಂದು ತಿಳಿಸಿದರು. ಆದರೆ ತಾತ್ಕಾಲಿಕ ಸರಕಾರದ ರಚನೆಯ ವಿಷಯವಾಗಲೀ ರಾಜಕೀಯ

ಖೈದಿಗಳನ್ನು ಬಿಡುಗಡೆ ಮಾಡುವುದನ್ನಾಗಲೀ ಘೋಷಣೆಯಲ್ಲಿ ಕಾಣಿಸಿರಲಿಲ್ಲ. ಪ್ರಗತಿಯ ಕೆಲವು ಲಕ್ಷಣಗಳನ್ನು ಹೊಂದಿದ್ದರೂ ಕೂಡ ಸೂಚಿತ ರಾಜ್ಯಾಂಗ ಪದ್ಧತಿಯು ಆಧುನಿಕ ಭಾವನೆಯಲ್ಲಿ ಜವಾಬ್ದಾರೀ ಸರಕಾರ ಕೊಡುತ್ತದೆಂದು ಹೇಳಲಾಗುವುದಿಲ್ಲವೆಂದು ಮದ್ರಾಸಿನ **ಹಿಂದು** ಪತ್ರಿಕೆ ತಿಳಿಸಿತು.

ಹಿಂದೂಪುರದಲ್ಲಿ ಮೈಸೂರು ಸತ್ಯಾಗ್ರಹ ಸಮಿತಿಯು ಮಹಾರಾಜರ ಘೋಷಣೆಯನ್ನು ವಿಮರ್ಶಿಸಿ "ಮೈಸೂರು ಕಾಂಗ್ರೆಸ್ ಅನೇಕ ವರ್ಷಗಳಿಂದ ಕೇಳುತ್ತಲಿರುವ ಜವಾಬ್ದಾರೀ ಸರಕಾರದ ಒಂದಂಶವನ್ನೂ ಸಹ ಕೊಡದೆ ಮುಖ್ಯವಾದ ಕೆಲವು ಅಂಶಗಳನ್ನೂ ಮತ್ತು ಪರಮಾಧಿಕಾರವನ್ನೂ ರಾಜನೇ ಮೀಸಲಾಗಿ ಉಳಿಸಿಕೊಂಡಿರುವುದರಿಂದ" ಈ ಘೋಷಣೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲವೆಂದು "ಮೈಸೂರು ಜನತೆಯ ನಂಬಿಕೆ ವಿಶ್ವಾಸಗಳನ್ನು ಕಳೆದುಕೊಂಡಿರುವ ಹಾಲಿ ದಬ್ಬಾಳಿಕೆ ನಡೆಸುತ್ತಿರುವ ಸರ್ಕಾರವನ್ನು ಕಿತ್ತೊಗೆದು ಅದರ ಬದಲು ತಕ್ಷಣ ಪ್ರಜೆಗಳ ಬೆಂಬಲ ಪಡೆದ ಒಂದು ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಬೇಕು" ಎಂದು ನಿರ್ಣಯಿಸಿತು. ಹೀಗೆ ಸತ್ಯಾಗ್ರಹ ಚಳುವಳಿಯು ಸಂಸ್ಥಾನದಲೆಲ್ಲಾ ಬಹಳ ಬಿರುಸಿನಿಂದ ನಡೆಯಿತು. ಈ ಮಧ್ಯೆ ಅಕ್ಟೋಬರ್ 2ರಂದು ಸರಕಾರವು ಒಂದು ಆಜ್ಞೆ ಹೊರಡಿಸಿ ಮೈಸೂರು ಧ್ವಜದ ಜೊತೆಯಲ್ಲಿಯೇ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂದು ತಿಳಿಸಿದರು.

ಜವಾಬ್ದಾರೀ ಸರಕಾರ ಸ್ಥಾಪನೆ

ಒಂದೇ ಸಮನೆ ಅರಮನೆ ಸತ್ಯಾಗ್ರಹವು ಬಿರುಸಾಗಿ ಮುಂದುವರಿಯಿತು. ಈ ಚಳುವಳಿ ಬೃಹದ್ರೂಪ ತಾಳಿ, ಸರಕಾರ ತನ್ನ ತಂತ್ರಗಳನ್ನೆಲ್ಲಾ ಉಪಯೋಗಿಸಿದರೂ ವಿಫಲವಾಗಿ ಕಕ್ಕಾಬಿಕ್ಕಿಯಾಯಿತು. ಕಾರ್ಖಾನೆಯ ಕೂಲಿಗಾರರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಕಡೆಗೆ ಪೋಲೀಸಿನವರ ಮುಷ್ಕರವೂ ನಡೆದಾಗ, ಬೇರೆ ಮಾರ್ಗವಿಲ್ಲದೆ ಸರಕಾರ ಒಂದು ಒಪ್ಪಂದವನ್ನು ಮಾಡಿಕೊಂಡು ಸತ್ಯಾಗ್ರಹಿಗಳನ್ನೆಲ್ಲಾ ಬಿಡುಗಡೆ ಮಾಡಿತು. ಪ್ರಬಲವಾಗಿ 42 ದಿನಗಳ ಈ ಸತ್ಯಾಗ್ರಹವು ನಡೆದ ಮೇಲೆ ಯಾವ ಮಾರ್ಗವೂ ತೋರದೆ

ಸರಕಾರವು ಕಾಂಗ್ರೆಸ್ ಪಕ್ಷದೊಡನೆ ಒಂದು ಒಪ್ಪಂದಕ್ಕೆ ಬಂದಿತ ಜವಾಬ್ದಾರೀ ಸರಕಾರ ಸ್ಥಾಪಿಸುವುದಕ್ಕೆ ದಿವಾನರೂ ಮಹಾರಾಜರ ಸೂಚನೆ ನೀಡಿದರು. ಅಕ್ಟೋಬರ್ 6ರಂದು ಮೈಸೂರು ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸದಸ್ಯರನ್ನೆಲ್ಲಾ ಬಿಡುಗಡೆ ಮಾಡಲು ಸರಕಾ ತೀರ್ಮಾನಿಸಿತು. ಪ್ರಮುಖ ಕಾಂಗ್ರೆಸ್ ನಾಯಕರುಗಳನ್ನೆಲ್ಲಾ ಅಕ್ಟೋ ಬರ್ 7ರಂದು ಬಿಡುಗಡೆ ಮಾಡಿದರು. ಮೈಸೂರು ಸಂಸ್ಥಾನದ ರೈಲ್ ಕೆಲಸಗಾರರೆಲ್ಲರೂ ಅಕ್ಟೋಬರ್ 8ರಂದು ಕೆಲಸಕ್ಕೆ ಹಿಂತಿರುಗಿದರು. 9ರಂದ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಕೆ. ಸಿ. ರೆಡ್ಡಿಯವರು ಅಂದು ದಿವಾನರಾಗಿದ್ದ ರಾಮಸ್ವಾಮಿ ಮೊದಲಿಯಾರ್‌ರವರೊಡನೆ ಮಾತುಕತೆ ನಡೆಸಿದರು. ಫಲವಾ ಹನ್ನೊಂದರಂದು ಸರಕಾರಕ್ಕೂ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಒಂದು ಒಪ್ಪಂ ವಾಯಿತು. ಹನ್ನೆರಡರಂದು ಕಾಂಗ್ರೆಸ್ ಅಧ್ಯಕ್ಷ ಕೆ. ಸಿ. ರೆಡ್ಡಿಯವರ ಕಾಂಗ್ರೆಸ್ಸಿನ ಇತರ ಪ್ರಮುಖ 6 ಜನ ನಾಯಕರೊಡನೆ ಮಹಾರಾಜರನ್ನು ಭೇಟಿ ಮಾಡಿದರು. ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರನ್ನು ಮಹಾರಾಜರು ಸ್ವಾಗತಿಸಿ, ಸಂಸ್ಥಾನದ ಆಡಳಿತ ವ್ಯವಸ್ಥೆ ಯಲ್ಲಿ ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ತಿಳಿಸಿದರು ಕಾಂಗ್ರೆಸ್ ಸತ್ಯಾಗ್ರಹನ್ನು ನಿಲ್ಲಿಸಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಂದವನ್ನು ಸ್ವಾಗತಿಸಿ ಮುಂದಿನ ರಚನಾತ್ಮಕ ಕೆಲಸಗಳಿಗೆ ಜನತೆಯ ಸಹಕಾರವನ್ನು ಬಯಸಿತು.

ಅಕ್ಟೋಬರ್ ಹದಿಮೂರರಂದು ಸರಕಾರವು ರಾಜ್ಯಾಂಗ ಸುಧಾರಣೆ ಗಳನ್ನು ಘೋಷಿಸಿತು. ಕಾಂಗ್ರೆಸ್ಸಿನ ನಾಯಕ ಮುಖ್ಯಮಂತ್ರಿಯಾಗಿರುವ ದಾಗಿಯೂ, ದಿವಾನರು ಸದ್ಯದಲ್ಲಿ ಸ್ವಲ್ಪಕಾಲ ಮುಂದುವರಿಯುವರೆಂದೂ ತೀರ್ಮಾನವಾಯಿತು. ಮಂತ್ರಿಮಂಡಲ ರಚನೆಯಲ್ಲಿ ಬಹುಮತ ಪಡೆದಿರುವ ಕಾಂಗ್ರೆಸ್ ಪಕ್ಷದಿಂದ 6 ಜನರನ್ನೂ, ಇನ್ನಿತರ ಪಕ್ಷಗಳಿಂದ ಮೂರು ಜನರನ್ನೂ ತೆಗೆದುಕೊಳ್ಳುವುದೆಂದೂ ತೀರ್ಮಾನವಾಯಿತು. ಮಂತ್ರಿಮಂಡ ಲವು ರಾಜ್ಯಾಂಗ ರಚನಾ ಸಭೆ ಸೇರಿಸಲು ಕ್ರಮಕೈಗೊಳ್ಳಬೇಕೆಂದೂ ಅದು 1948ರ ಜುಲೈ ಕೊನೆಯ ಹೊತ್ತಿಗೆ ಸಂಸ್ಥಾನಕ್ಕೆ ಒಂದು ರಾಜ್ಯಾಂಗವನ್ನು ಸಿದ್ಧಪಡಿಸಬೇಕೆಂದೂ ತೀರ್ಮಾನವಾಯಿತು. ಸರಕಾರವು ಸತ್ಯಾಗ್ರಹ

ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದ ರಾಜಕೀಯ ಖೈದಿಗಳನ್ನೆಲ್ಲಾ ಬಿಡುಗಡೆ ಮಾಡಿತು. ಈ ಸಂದರ್ಭದಲ್ಲಿ ಸರದಾರ್ ವಲ್ಲಭಭಾಯಿ ಪಟೇಲರು ಮೈಸೂರು ಕಾಂಗ್ರೆಸ್ಸಿಗೆ ಯಶಸ್ಸು ಕೋರಿ ಒಂದು ಸಂದೇಶವನ್ನು ಕಳಿಸಿದರು. ಅಕ್ಟೋಬರ್ 17ರಂದು ಬಿರ್ಲಾಭವನದಲ್ಲಿ ಸಂಜೆ ವೇಳೆಯಲ್ಲಿ ನಡೆಯುತ್ತಿದ್ದ ಪ್ರಾರ್ಥನಾ ಸಭೆಯಲ್ಲಿ ಮೈಸೂರಿನ ಬೆಳವಣಿಗೆಗಳನ್ನು ತಿಳಿದು ಮಹಾರಾಜರನ್ನು ಹಾಗೂ ಮೈಸೂರು ಕಾಂಗ್ರೆಸ್ ನಾಯಕರನ್ನೂ ಗಾಂಧೀಜಿಯು ಅಭಿನಂದಿಸಿದರು.

ಮೈಸೂರು ಸಂಸ್ಥಾನದ ಜನ ಜೀವನದಲ್ಲಿ ಶತಮಾನಗಳಿಂದಲೂ ವಿಜಯದಶಮಿ ದಿನವು ಪುಣ್ಯ ದಿನವೆಂದು ಪರಿಗಣಿಸಲ್ಪಟ್ಟಿದೆ. ಭಾರತ ಇತಿಹಾಸದಲ್ಲಿ ಗಣನೀಯ ವರ್ಷವಾದ 1947ರ ಅಕ್ಟೋಬರ್ 24ರ ವಿಜಯ ದಶಮಿಯಂದು ಪ್ರಜಾ ನಾಯಕರುಗಳಿಂದ ಕೂಡಿದ ಹೊಸ ಮಂತ್ರಿಮಂಡಲವು ಕೆ. ಚೆಂಗಲರಾಯರೆಡ್ಡಿಯವರ ಮುಖ್ಯಮಂತ್ರಿತ್ವದಲ್ಲಿ ಅಧಿಕಾರ ವಹಿಸಿಕೊಂಡು ಜವಾಬ್ದಾರೀ ಸರಕಾರ ಸ್ಥಾಪನೆಯ ಕಹಳೆಯೂದಿತು. ಅಂದು ಮೈಸೂರು ರಾಜಕೀಯ ಇತಿಹಾಸದಲ್ಲಿ ಪರ್ವಕಾಲವು ಕೊನೆಗಂಡು ನವಯುಗವೊಂದು ಆರಂಭವಾಯಿತು.

ಪರಿಸಮಾಪ್ತಿ

ಹೀಗೆ ಮೈಸೂರು ಸಂಸ್ಥಾನದಲ್ಲಿ, ಪ್ರಜಾಪ್ರಭುತ್ವ ಪದ್ಧತಿಗಳಿಗನುಗುಣವಾದ ಕೆಲವು ಸಂಸ್ಥೆಗಳಿದ್ದವು. ಇನ್ನಿತರ ಸಂಸ್ಥಾನಗಳಿಗಿಂತ ಮೊದಲೇ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಪ್ರಜ್ಞೆಯು ಬೆಳೆದು ಆಡಳಿತದ ಮೇಲೆ ಪ್ರಭಾವ ಬೀರಿತು. ರಾಜಕೀಯ ಪಕ್ಷಗಳು ಉದ್ಭವಿಸಿದವು. ಬಸವಯ್ಯನವರು ಆರಂಬಿಸಿದ ಪ್ರಪ್ರಥಮ ರಾಜಕೀಯ ಪಕ್ಷ ಪ್ರಜಾಮಿತ್ರಮಂಡಳಿಯು ಹಿಂದುಳಿದವರ ಏಳಿಗೆಗಾಗಿ ಚಳುವಳಿ ಆರಂಬಿಸಿ, ಜನಸಾಮಾನ್ಯರಲ್ಲಿ ತಮ್ಮ ಹಕ್ಕುಗಳ ಮೇಲೆ ಪ್ರಜ್ಞೆ ಮೂಡಿಸಿತು. ಕಾಂಗ್ರೆಸ್ ಆರಂಭದಲ್ಲಿ ರಾಷ್ಟ್ರೀಯ ಸಂಸ್ಥೆಯ ವಿಧಾಯಕ ಕಾರ್ಯವನ್ನು ನಡೆಸಿಕೊಂಡು ಬರುತ್ತಿತ್ತು. ಅನೇಕ ಕಾಂಗ್ರೆಸ್ ಸದಸ್ಯರುಗಳು ಆಂಗ್ಲ ಭಾರತದ ಇತರ ಭಾಗಗಳಿಗೆ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರು.

ಹಿಂದುಳಿದವರ ಸಮ್ಮೇಳನವೊಂದು 1929ರಲ್ಲಿ ಮೈಸೂರಿನಲ್ಲಿ ನ
ಸಂಸ್ಥಾನದಲ್ಲಿ ಜವಾಬ್ದಾರೀ ಸರಕಾರ ಸ್ಥಾಪನೆಯಾಗಬೇಕೆಂದು ಕೋ
ಅದೇ ವರ್ಷ ಆರಂಭವಾದ ಮೈಸೂರು ಸಂಸ್ಥಾನ ಕಾಂಗ್ರೆಸ್ ಸಂಸ್ಥೆ
ಕೂಡ ಜವಾಬ್ದಾರೀ ಸರಕಾರದ ಸ್ಥಾಪನೆಯಾಗಬೇಕೆಂದಿತು. ಎಲ್ಲಾ
ಗಳಲ್ಲಿಯೂ ಪ್ರಜಾಪ್ರಭುತ್ವವು ನಾಶವಾಗುತ್ತಿರುವ ಸಮಯದಲ್ಲಿ ಸಂ
ದಲ್ಲಿ ಜವಾಬ್ದಾರೀ ಸರಕಾರ ಸ್ಥಾಪನೆಯ ಕೋರಿಕೆಯು ಅಂದಿನ ದಿವಾ
ಆಶ್ಚರ್ಯವನ್ನುಂಟುಮಾಡಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ಅಪ್ಪಣೆ ಪ
ಸಂಸ್ಥಾನದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಭಾ
ಸಲು ತೀರ್ಮಾನಿಸಿ ಪ್ರಚಾರ ಕಾರ್ಯ ಕೈಗೊಂಡಿತು. ಕಾಂಗ್ರೆ
ಪ್ರಭಾವವು ಬೆಳೆಯುವುದನ್ನು ಮೊಳಕೆಯಲ್ಲಿಯೇ ಚಿವುಟುವ ಪ್ರಯತ್ನ
ಕಾಂಗ್ರೆಸ್ ಸಂಸ್ಥೆಯು ಏರ್ಪಡಿಸಿದ್ದ ಸಭೆಗಳಲ್ಲಿ ಪ್ರಮುಖ ನಾಯ
ಭಾಷಣ ಮಾಡದಂತೆ, ಹಾಗೂ ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಹ
ದಂತೆ ಸರಕಾರವು ಪ್ರತಿಬಂಧಕಾಜ್ಞೆಗಳನ್ನು ಹಾಕಿತು. ಆದರೂ ಕಾಂ
ನಾಯಕರು ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ, ಸಭೆಗಳನ್ನು ನಡೆಸಿ
ಮತ್ತು ಕ್ರಮವಾಗಿ ಕಾಂಗ್ರೆಸ್ಸಿನ ಪ್ರಭಾವವು ವೃದ್ಧಿಗೊಂಡಿತು.

'ಮೈಸೂರು ಕಾಂಗ್ರೆಸ್' ಶಿವಪುರದಲ್ಲಿ 1938ರಲ್ಲಿ ತನ್ನ ಪ್ರ
ಸಮ್ಮೇಳನ ನಡೆಸಿತು. ಅಲ್ಲಿ ಸರಕಾರದ ನಿಷೇಧಾಜ್ಞೆಗಳನ್ನು ಉಲ್ಲಂ
ಧ್ವಜ ಸತ್ಯಾಗ್ರಹ ಆರಂಭಿಸಿತು. ಪಟೇಲ್ - ಮಿರ್ಜಾ ಒಪ್ಪಂದ
ಕಾಂಗ್ರೆಸ್ಸಿನ ಕೆಲವು ಮುಖ್ಯ ಕೋರಿಕೆಗಳು ಅಂಗೀಕರಿಸಲ್ಪಟ್ಟವು.
ಸರಕಾರ ಒಪ್ಪಂದದಂತೆ ನಡೆಯಲಿಲ್ಲ ಪರಿಣಾಮವಾಗಿ ಕಾಂ
1939ರಲ್ಲಿ ಬೃಹತ್ ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಿತು. ಗಾಂ
ಯವರ ಸಲಹೆಯಂತೆ, ಸತ್ಯಾಗ್ರಹವನ್ನು ನಿಲ್ಲಿಸಿ, ಪ್ರಜಾಪ್ರತಿನಿಧ
ಮತ್ತು ನ್ಯಾಯವಿಧಾಯಕಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಭಾಗವ
ಕಾಂಗ್ರೆಸ್ ಉಮೇದುವಾರರು ಅದ್ಭುತ ವಿಜಯ ಗಳಿಸಿದರು.

'ಕ್ವಿಟ್ ಇಂಡಿಯಾ' ಚಳುವಳಿಯ ವೇಳೆಯಲ್ಲಿ ಕಾಂಗ್ರೆಸ್ ನಾಯ
ನ್ನೆಲ್ಲಾ ಅಧಿಕಾರಿಗಳು ಜೈಲಿಗೆ ಕಳಿಸಿದರು. ಯುದ್ಧ ಮುಗಿದ ನಂ
ರಾಷ್ಟ್ರದಲ್ಲಿ ಸ್ವಾತಂತ್ರ್ಯಬರುವ ಸೂಚನೆಗಳು ಕಂಡುಬಂದು, ಕೇಂದ್ರ

ತಾತ್ಕಾಲಿಕ ಸರಕಾರ ರಚನೆಯಾದ ನಂತರವೂ, ಮೈಸೂರಿನಲ್ಲಿ ಅಧಿಕಾರಿಗಳು ತಮ್ಮ ನೀತಿಯನ್ನು ಬದಲಾಯಿಸಲಿಲ್ಲ, ಪರಿಣಾಮವಾಗಿ ಕಾಂಗ್ರೆಸ್ ಪುನಃ ಸತ್ಯಾಗ್ರಹ ಆರಂಭಿಸಲು ತೀರ್ಮಾನಿಸಿತು.

ಫಲವಾಗಿ 1947ರ ಸೆಪ್ಟಂಬರ್ ಒಂದರಿಂದ 'ಮೈಸೂರು ಚಲೋ' ಎಂಬ ಕೊನೆಯ ಚಳುವಳಿಯನ್ನು ಸಂಸ್ಥಾನದ ಕಾಂಗ್ರೆಸ್ ಆರಂಭಿಸಿತು. 42 ದಿನಗಳ ಸತತ ಯಶಸ್ವಿ ಚಳುವಳಿಯ ನಂತರ, ಬೇರೆದಾರಿ ಕಾಣದೆ ಅಧಿಕಾರಿಗಳು ಒಪ್ಪಂದ ಮಾಡಿಕೊಂಡರು. ಜವಾಬ್ದಾರೀ ಸರಕಾರದ ಸ್ಥಾಪನೆಯಾಯಿತು.

ಹೀಗೆ ಮೈಸೂರು ಸಂಸ್ಥಾನದಲ್ಲಿ, ಸ್ವಾತಂತ್ರ್ಯ ಚಳುವಳಿಯು 1938ರ ನಂತರ ಬಹಳ ಬಿರುಸಾಗಿ ನಡೆಯಿತು. ಸರಕಾರದ ಧೋರಣೆಯಿಂದಲೇ ಅದು ಪ್ರಬಲವಾಯಿತು. ಅಧಿಕಾರಿಗಳು ಕೊನೆಯವರಿಗೂ ಕಾಂಗ್ರೆಸ್ಸಿನ ಬೇಡಿಕೆಗಳಿಗೆ ಗಮನಕೊಡದೆ, ತಿರಸ್ಕಾರ ಭಾವದಿಂದ ಕೂಡಿದ್ದರಿಂದ ಚಳುವಳಿಯು ತೀವ್ರ ರೂಪ ಪಡೆದ ನಂತರವೇ ಅದರ ಕೋರಿಕೆಗಳನ್ನು ಈಡೇರಿಸಲೇಬೇಕಾಯಿತು. ಕೊನೆಯಲ್ಲಿ ಜನತೆಯ ಚಳುವಳಿಯು ಜಯಪ್ರದವಾಗಿ ಕೊನೆಗೊಂಡು 1947ರ ಅಕ್ಟೋಬರ್ 24, ವಿಜಯದಶಮಿಯದಿನದಂದು ಜನತಾ ಸರಕಾರ ಆಡಳಿತ ಆರಂಭಿಸಿತು. ಅಂದು ಸಂಸ್ಥಾನದ ಇತಿಹಾಸದಲ್ಲಿ, ಒಂದು ಯುಗ ಕೊನೆಗಂಡು, ಮತ್ತೊಂದು ಹೊಸಯುಗವು ಆರಂಭವಾಯಿತು.

ಗ್ರಂಥಋಣ

1. ಡಿ. ವಿ. ಗುಂಡಪ್ಪ—ಜ್ಞಾಪಕ ಚಿತ್ರಶಾಲೆ (ಸಂಪುಟ 4), ಮೈಸೂರಿನ ದಿವಾನರುಗಳು (ಸ್ವಾತಂತ್ರ್ಯ ಪೂರ್ವದ ಆರು ದಶಕಗಳು.)
2. ಹೆಚ್. ಕೆ. ವೀರಣ್ಣಗೌಡ—ಬದುಕು - ಮೆಲುಕು
3. ಎಂ. ಎನ್. ಜೋಯಿಸ್ (ಸಂಪಾದಕ)—ಕರ್ಮಯೋಗಿ (ತಗಡೂರ ರಾಮಚಂದ್ರರಾಯರ ಆತ್ಮಕಥನ ಮತ್ತು ಅಭಿನಂದನ ಗ್ರಂಥ.)
4. ಮಾಲಿ ಮುದ್ದಣ್ಣ (ಸಂಪಾದಕ)—ಮಾಲಿ ಮರಿಯಪ್ಪ.
5. ಬಿ. ಎನ್. ಗುಪ್ತಾರವರ ಆತ್ಮಚರಿತ್ರೆ—(ಜನಪ್ರಗತಿಯಲ್ಲಿ ಪ್ರಕಟ ವಾದ ಕೆಲವು ಭಾಗಗಳು.)
6. ಟಿ. ಟಿ. ಶರ್ಮ—ಜಗನ್ಮೋಹನ ಭವನದಿಂದ ವಿದುರಾಶ್ವತ್ಥಕ್ಕೆ (ಬೆಂಗಳೂರು, 1938.)
7. ಮೈಸೂರು ಕಾಂಗ್ರೆಸ್ ಪಕ್ಷದ ಪ್ರಕಟಣೆಗಳು—(1938 ರಿಂದ 1946 ರವರೆಗೆ.)
8. ಹೆಚ್. ಎಸ್. ದೊರೆಸ್ವಾಮಿ—ಹೋರಾಟದ ದಿಟ್ಟ ಹೆಜ್ಜೆಗಳು (ಬೆಂಗಳೂರು 1972.)
9. A ... Dewans of Mysore to the ... tative Assembly, 1913- ... angalore, 1938)

... eoples Conference Bulle...

AKSHARA GRANTHALAYA
ACC.NO. 028252

11.

12.

13.

954.87
ವರ್ಗೀಕರಣ ಸಂಖ್ಯೆ ......V.E.E..........
....
ಲೇಖಕ ......ವೀರಣ್ಣ..................